ಬುಧವಾರ, ಅಕ್ಟೋಬರ್ 13, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ದೇವಿಗೆ ಸಮರ್ಪಣೆ

ಆಂಧ್ರಪ್ರದೇಶದ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರು ನವರಾತ್ರಿ ನಿಮಿತ್ತ ಮಂಗಳವಾರ ವಿಜಯವಾಡದ ಶ್ರೀ ದುರ್ಗಾ ಮಲ್ಲೇಶ್ವರಿ ಸ್ವಾಮಿ ದೇವಸ್ಥಾನಕ್ಕೆ ರೇಷ್ಮೆಸೀರೆ, ಅರಿಶಿನ–ಕುಂಕುಮ ಸಮರ್ಪಿಸಿದರು







ಬಾಳೆಹೊನ್ನೂರು– ಕಳಸ ರಾಜ್ಯ ಹೆದ್ದಾರಿಯ ಮಹಲ್‌ಗೋಡು ಬಳಿ ಮೋರಿ ಕೊಚ್ಚಿ ಹೋಗಿದ್ದು, ವಾಹನ ಸಂಚಾರ ಸ್ಥಗಿತಗೊಂಡಿದೆ (ಎಡ ಚಿತ್ರ), ತುಮಕೂರು ತಾಲ್ಲೂಕು ದೇವರಾಯನದುರ್ಗ ಬೆಟ್ಟದಲ್ಲಿ ರಸ್ತೆಗೆ ಬಂಡೆ ಉರುಳಿರುವುದು

ಕರಾವಳಿ, ಮಲೆನಾಡಿನಲ್ಲಿ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರಾವಳಿ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮಂಗಳವಾರ ಧಾರಾಕಾರ ಮಳೆ ಸುರಿದಿದೆ. ಕರಾವಳಿ ಜಿಲ್ಲೆಗಳಲ್ಲಿ ಮಳೆ ಬಿರುಸುಗೊಂಡಿದೆ. ಬುಧವಾರವೂ ಮುಂದುವರಿಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಾಸರಿ 3.4 ಸೆಂ.ಮೀ. ಮಳೆಯಾಗಿದೆ. ನೇತ್ರಾವತಿ ಹಾಗೂ ಮುಂಡಾಜೆ ಬಳಿ ಮೃತ್ಯುಂಜಯ ನದಿಯ ನೀರಿನ ಹರಿವು ಹೆಚ್ಚಾಗಿದೆ. 24 ಗಂಟೆಗಳಲ್ಲಿ ಜಿಲ್ಲೆಯ ಎರಡು ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಬೆಳ್ತಂಗಡಿ ತಾಲ್ಲೂಕಿನಲ್ಲಿ 4.8 ಸೆಂ.ಮೀ, ಮಂಗಳೂರು ತಾಲ್ಲೂಕಿನಲ್ಲಿ 4.2 ಸೆಂ.ಮೀ. ಮಳೆ ದಾಖಲಾಗಿದೆ.

ಉಡುಪಿ ಜಿಲ್ಲೆಯಲ್ಲೂ ಧಾರಾಕಾರ ಮಳೆಯಾಗಿದ್ದು, ಕಾರ್ಕಳ ತಾಲ್ಲೂಕಿನ ಕಸಬಾದಲ್ಲಿ ಒಂದು ಮನೆಗೆ ಭಾಗಶಃ ಹಾನಿಯಾಗಿದೆ. ಕಾಪು ತಾಲ್ಲೂಕಿನಲ್ಲಿ 3.8, ಉಡುಪಿ ತಾಲ್ಲೂಕಿನಲ್ಲಿ 2.1, ಬ್ರಹ್ಮಾವರ, ಬೈಂದೂರು ತಾಲ್ಲೂಕಿನಲ್ಲಿ ತಲಾ 2.7 ಸೆಂ.ಮೀ. ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಕಳಸ–ಬಾಳೆಹೊನ್ನೂರು ಮಾರ್ಗದಲ್ಲಿ ಸಂಚಾರಕ್ಕೆ ತೊಡಕಾಗಿದೆ. ಖಾಂಡ್ಯ ಹೋಬಳಿಯ ಬಿದಿರೆ ಗ್ರಾಮದಲ್ಲಿ ಮನೆಯೊಂದರ ಚಾವಣಿ ಕುಸಿದಿದೆ. ಕೊಪ್ಪ, ಎನ್‌.ಆರ್‌. ಪುರ, ಬೀರೂರು ಭಾಗದಲ್ಲಿ ಉತ್ತಮ ಮಳೆಯಾಗಿದೆ. ಜಿಲ್ಲೆಯಲ್ಲಿ ಕೊಟ್ಟಿಗೆಹಾರ, ಕಳಸ, ಮೂಡಿಗೆರೆ ಭಾಗದಲ್ಲಿ ಸಾಧಾರಣವಾಗಿ ಸುರಿದಿದೆ. ಹೊಸಕೆರೆ– 6, ಬಿಳ್ಳೂರು– 5.4, ಜಾವಳಿ– 4.8, ಕೆರೆಕಟ್ಟೆ– 3.8 ಸೆಂ.ಮೀ ಮಳೆಯಾಗಿದೆ.

ಮೈಸೂರು ಭಾಗದಲ್ಲೂ ಧಾರಾಕಾರ ಮಳೆ (ಮೈಸೂರು ವರದಿ): ಕೊಡಗು, ಮಂಡ್ಯ ಮತ್ತು ಹಾಸನ ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದೆ. ಕೊಡಗಿನ ಮಡಿಕೇರಿ, ತಲಕಾವೇರಿ ಹಾಗೂ ಭಾಗಮಂಡಲದಲ್ಲಿ ಮಂಗಳವಾರ ಮಧ್ಯಾಹ್ನದಿಂದ ನಿರಂತರ ಮಳೆಯಾಗುತ್ತಿದೆ.

ಮಂಡ್ಯ ಜಿಲ್ಲೆ ನಾಗಮಂಗಲದ ಬೆಳ್ಳೂರು ಹೋಬಳಿಯ ನೆಲ್ಲಿಗೆರೆ, ಬೆಳ್ಳೂರು ಪಟ್ಟಣ, ನಾಗತೀಹಳ್ಳಿ, ಕದಬಹಳ್ಳಿ, ಬೆಳ್ಳೂರು ಕ್ರಾಸ್‌, ಬಿ.ಜಿ. ನಗರ ಸೇರಿದಂತೆ ವಿವಿಧೆಡೆ ಭಾರಿ ಮಳೆಯಾಗಿದೆ. ಬೆಳ್ಳೂರು ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ವಿದ್ಯುತ್‌ ವ್ಯತ್ಯಯ ಕಂಡುಬಂತು.

ಹಾಸನ ಜಿಲ್ಲೆ ಅರಸೀಕೆರೆ, ಹಿರೀಸಾವೆ, ನುಗ್ಗೇಹಳ್ಳಿಯಲ್ಲಿ ಧಾರಾಕಾರ, ಹೆತ್ತೂರು, ಶ್ರವಣಬೆಳಗೊಳ, ಚನ್ನರಾಯಪಟ್ಟಣದಲ್ಲಿ ಸಾಧಾರಣ ಮಳೆಯಾಗಿದೆ. ಕೊಣನೂರು ಹೋಬಳಿ ಕಾಳೇನಹಳ್ಳಿಯಲ್ಲಿ ತೋಟಗಳಿಗೆ ನೀರು ನುಗ್ಗಿ ವೀಳ್ಯದೆಲೆ ಬಳ್ಳಿ, ಬಾಳೆ ಬೆಳೆಗೆ ಹಾನಿಯಾಗಿದೆ.

20ಕ್ಕೂ ಹೆಚ್ಚು ಮನೆಗಳಿಗೆ ಹಾನಿ (ದಾವಣಗೆರೆ ವರದಿ): ಜಿಲ್ಲೆಯಲ್ಲಿ ಮಂಗಳವಾರ ಸಂಜೆ ಉತ್ತಮ ಮಳೆ ಸುರಿದಿದೆ. ಗುಡುಗು, ಸಿಡಿಲು ಸಹಿತ ಬಿರುಸಿನ ಮಳೆ ಬಂದಿದೆ. ಶಿವಮೊಗ್ಗ ಜಿಲ್ಲೆಯ ಸಾಗರ, ಕೋಣಂದೂರು, ಆನವಟ್ಟಿಯಲ್ಲಿ ಸಂಜೆ ವೇಳೆಗೆ ಉತ್ತಮ ಮಳೆಯಾಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಹೊಸದುರ್ಗ ತಾಲ್ಲೂಕಿನ ಕೆಲವೆಡೆ ಮಳೆಯಾಗಿದೆ. ಪಾಪೇನಹಳ್ಳಿ ಬಳಿ ಸುಮಾರು ₹ 2 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿದ್ದ ಬ್ರಿಡ್ಜ್‌ ಕಂ ಬ್ಯಾರೇಜ್‌, ಮಳೆನೀರ ರಭಸಕ್ಕೆ ಕೊರಕಲು ಬಿದ್ದಿದೆ.

ಹಿರಿಯೂರು ತಾಲ್ಲೂಕಿನಲ್ಲಿ ರಾತ್ರಿ ಬಿರುಮಳೆಯಾಗಿದೆ. ಚಳ್ಳಕೆರೆ ನಗರದಲ್ಲಿ 8 ಮಾಳಿಗೆ ಮನೆಗಳು ಪೂರ್ಣ ಪ್ರಮಾಣದಲ್ಲಿ ಕುಸಿದುಬಿದ್ದಿವೆ. ತಾಲ್ಲೂಕಿನಾದ್ಯಂತ 20ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ.

ವಿದ್ಯುತ್ ತಗುಲಿ ಪೇಂಟರ್ ಸಾವು

ಬೆಂಗಳೂರು: ನಗರದಲ್ಲಿ ಸೋಮವಾರ ಇಡೀ ರಾತ್ರಿ ಮಳೆ ಸುರಿದಿದೆ. ಕೆ.ಪಿ.ಅಗ್ರಹಾರ ಬಡಾವಣೆಯಲ್ಲಿ ಮನೆಗೆ ನುಗ್ಗಿದ್ದ ನೀರು ತೆರವು ವೇಳೆ ವಿದ್ಯುತ್ ತಗುಲಿ, ಪೇಂಟರ್ ವೆಂಕಟೇಶ್ (56) ಮೃತಪಟ್ಟಿದ್ದಾರೆ.

‘ವೆಂಕಟೇಶ್ ಮತ್ತು ಟೈಲರಿಂಗ್ ಕೆಲಸ ಮಾಡುವ ಪತ್ನಿ ವಾಸವಿದ್ದರು. ಇಬ್ಬರೂ ಕೆಲಸಕ್ಕೆ ಹೋದರೆ, ರಾತ್ರಿಯೇ ಮರಳುತ್ತಿದ್ದರು. ಸೋಮವಾರ ರಾತ್ರಿ ಮಳೆ ನೀರು ಮನೆಗೂ ಆವರಿಸಿತ್ತು. ದಂಪತಿ ರಾತ್ರಿ ಮನೆಗೆ ಮರಳಿದಾಗ ವಿದ್ಯುತ್ ಇರಲಿಲ್ಲ. ಮೊಬೈಲ್ ದೀಪದ ಬೆಳಕಿನಲ್ಲಿ ನೀರು ತೆರವು ಮಾಡಲಾರಂಭಿಸಿದ್ದರು.’

‘ಒಂದು ಹಂತದಲ್ಲಿ ವಿದ್ಯುತ್ ಸಂಪರ್ಕ ಬಂದಿದ್ದು, ವಿದ್ಯುತ್ ದೀಪ ಆನ್ ಮಾಡಲು ವೆಂಕಟೇಶ್ ಅವರು ಸ್ವಿಚ್ ಬೋರ್ಡ್‌ನ ಬಟನ್ ಒತ್ತಿದಾಗ ಅವಘಡ ಸಂಭವಿಸಿದೆ. ಪತ್ನಿ, ಸಹಾಯಕ್ಕಾಗಿ ಚೀರಾಡಿದ್ದರು. ಸ್ಥಳೀಯರು ಬರುವಷ್ಟರಲ್ಲಿ ವೆಂಕಟೇಶ್ ಮೃತಪಟ್ಟಿದ್ದರು’ ಎಂದೂ ಪೊಲೀಸರು ತಿಳಿಸಿದರು.

ರಸ್ತೆಗೆ ಉರುಳಿದ ಬಂಡೆ

ತುಮಕೂರು: ಜಿಲ್ಲೆಯಲ್ಲಿ ಕಳೆದ ಕೆಲವು ದಿನಗಳಿಂದ ಸತತವಾಗಿ ಮಳೆಯಾಗುತ್ತಿದ್ದು ಸೋಮವಾರ ರಾತ್ರಿಯೂ ಜೋರು ಮಳೆಯಾಗಿದ್ದು ದೇವರಾಯನದುರ್ಗದ ಬೆಟ್ಟದಲ್ಲಿ ರಸ್ತೆಗೆ ಎರಡು ಬೃಹತ್ ಬಂಡೆಗಳು ಉರುಳಿವೆ.

ಬೆಟ್ಟದ ಮೇಲಿನ ಚೆಕ್ ಪೋಸ್ಟ್ ಸಮೀಪ ಬಂಡೆಗಳು ಉರುಳಿದ್ದು, ದೇವರಾಯನದುರ್ಗದಲ್ಲಿರುವ ಯೋಗನರಸಿಂಹಸ್ವಾಮಿ ದೇವಸ್ಥಾನಕ್ಕೆ ತೆರಳುವ ರಸ್ತೆ ಬಂದ್ ಆಗಿತ್ತು.

ಪ್ರವಾಸಿಗರು, ಭಕ್ತರಿಗೆ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ. ದೇವಾಲಯದ ಅರ್ಚಕರಿಗೆ ಮಾತ್ರ ಬೆಟ್ಟಕ್ಕೆ ತೆರಳಲು ಅವಕಾಶ ಮಾಡಿಕೊಡಲಾಗಿತ್ತು.

ಕಾರ್ಯಾಚರಣೆ ಆರಂಭವಾಗಿದ್ದು, ಸಂಜೆ ವೇಳೆಗೆ ಬಹುತೇಕ ತೆರವು ಮಾಡಲಾಗಿತ್ತು. ಯಾವುದೇ ಅನಾಹುತ ಸಂಭವಿಸಿಲ್ಲ.

ಅ.15 ರವರೆಗೆ ಧಾರಾಕಾರ ಮಳೆ ಸಾಧ್ಯತೆ


ಬೆಂಗಳೂರು: ರಾಜ್ಯದಲ್ಲಿ ನೈರುತ್ಯ ಮುಂಗಾರು ತೀವ್ರಗೊಂಡಿರುವುದರಿಂದ ಅ.13 ರಿಂದ 15ರವರೆಗೆ ದಕ್ಷಿಣ ಒಳನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬಂಗಾಳ ಕೊಲ್ಲಿ ಮತ್ತು ಅರಬ್ಬಿ ಸಮುದ್ರದಲ್ಲಿ ಮೇಲ್ಮೈ ಸುಳಿ ಗಾಳಿ ಹಾಗೂ ವಾಯುಭಾರ ಕುಸಿತದ ಪರಿಣಾಮ ರಾಜ್ಯದಲ್ಲಿ ಮುಂದಿನ ಐದು ದಿನಗಳವರೆಗೆ ಗುಡುಗು, ಸಿಡಿಲು ಸಹಿತ ಹೆಚ್ಚು ಮಳೆಯಾಗುವ ಮುನ್ಸೂಚನೆ ಇದೆ.

ಎಲ್ಲೆಲ್ಲಿ ಅಲರ್ಟ್?: ಚಿಕ್ಕಮಗಳೂರು, ಹಾಸನ, ಕೊಡಗು, ಮಂಡ್ಯ, ಮೈಸೂರು, ಶಿವಮೊಗ್ಗ, ತುಮಕೂರು ಜಿಲ್ಲೆಗಳಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇರುವುದರಿಂದ ಇದೇ 15ರವರೆಗೆ ‘ಆರೆಂಜ್ ಅಲರ್ಟ್’ ಘೋಷಿಸಲಾಗಿದೆ.

ರಾಮನಗರ, ಕೋಲಾರ, ದಾವಣಗೆರೆ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಚಾಮರಾಜನಗರ, ಬಳ್ಳಾರಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಹಾವೇರಿ, ಗದಗ, ಧಾರವಾಡ, ಬೆಳಗಾವಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ.

ಮಳೆ ಎಲ್ಲಿ, ಎಷ್ಟು?: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಂಗಳವಾರ 18 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಶಿರಾ 12, ಮಧುಗಿರಿ 9, ನಿಪ್ಪಾಣಿ, ಹೊಸಕೋಟೆ, ಪಾವಗಡ 7, ಮದ್ದೂರು, ಶಿಡ್ಲಘಟ್ಟ 6, ಮಂಗಳೂರು, ಬೆಳ್ತಂಗಡಿ, ಗೌರಿಬಿದನೂರು, ಚನ್ನಪಟ್ಟಣ 5, ಹಾಸನ, ಮಳವಳ್ಳಿ 4, ಗೋಕರ್ಣ, ಕೆ.ಆರ್.ಪೇಟೆ, ಶ್ರೀರಂಗಪಟ್ಟಣ, ನೆಲಮಂಗಲ, ತೊಂಡೆಬಾವಿ, ಮಾಗಡಿ, ಕನಕಪುರ 3, ಹುಕ್ಕೇರಿ, ಚಾಮರಾಜನಗರ, ಕುಣಿಗಲ್ 2, ಪುತ್ತೂರು, ಕಾರ್ಕಳ, ಮಡಿಕೇರಿ, ಮಂಡ್ಯ, ಚಿಂತಾಮಣಿ, ತಿಪಟೂರು ಹಾಗೂ ರಾಮನಗರದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.



ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ ಮುಂಭಾಗದಲ್ಲಿ ನಿಂತಿದ್ದ ಮಳೆ ನೀರು

ವಿಮಾನ ನಿಲ್ದಾಣ ಟರ್ಮಿನಲ್ ಜಲಾವೃತ ಪ್ರಯಾಣಿಕರ ಸಂಚಾರಕ್ಕೆ ಟ್ರ್ಯಾಕ್ಟರ್ ಬಳಕೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತ ಸೋಮವಾರ ರಾತ್ರಿ ಭಾರಿ ಪ್ರಮಾಣದಲ್ಲಿ ಮಳೆ ಸುರಿದಿದ್ದು, ಟರ್ಮಿನಲ್‌ಗೆ ನೀರು ನುಗ್ಗಿ ಪ್ರಯಾಣಿಕರು ಮತ್ತು ವಾಹನ ಸವಾರರು ಪರದಾಡಿದರು.

ಮಳೆಯಿಂದ ವಿಮಾನ ಸೇವೆಯಲ್ಲೂ ವ್ಯತ್ಯಯವಾಯಿತು ಪ್ರಯಾಣಿಕರು ಹೊರ ಹೋಗಲು ಮತ್ತು ಒಳಬರಲು ಟ್ರ್ಯಾಕ್ಟರ್ ಅನ್ನು ಬಳಸಲಾಗಿದ್ದು, ಅದರ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಹವಾಮಾನ ವೈಪರೀತ್ಯದ ಕಾರಣ 11 ವಿಮಾನಗಳ ಹಾರಾಟ ವಿಳಂಬವಾಯಿತು. ಟರ್ಮಿನಲ್ ಮುಂಭಾಗದಲ್ಲಿ ಎರಡು ಅಡಿಗೂ ಅಧಿಕ ನೀರು ನಿಂತಿತ್ತು. ವಾಹನಗಳು ಕೆಲಕಾಲ ನಿಂತಲ್ಲೇ ನಿಂತು ಸಂಚಾರ ದಟ್ಟಣೆಯಾಗಿತ್ತು.

ಜಲಾವೃತ ರಸ್ತೆಗಳಲ್ಲಿ ವಾಹನ ಚಲಾಯಿಸಲು ಕ್ಯಾಬ್ ಚಾಲಕರು ಹಿಂದೇಟು ಹಾಕಿದರು. ಕರ್ಬ್ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆ ಉತ್ತಮವಾಗಿದೆ. ಆದರೆ, ಅಧಿಕ ಮಳೆಯಿಂದ ವ್ಯತ್ಯಯವಾಗಿದೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಕಾಂಗ್ರೆಸ್ ಶಾಸಕರು ಬಿಜೆಪಿ ಸೇರಲು ಜೆಡಿಎಸ್ ಕಾರಣ: ಶಾಸಕ ಯತೀಂದ್ರ

ಮಡಿಕೇರಿ: ‘ಮೈತ್ರಿ ಸರ್ಕಾರದ ಅವಧಿಯಲ್ಲಿ ಕಾಂಗ್ರೆಸ್ ಶಾಸಕರು, ಬಿಜೆಪಿ ಸೇರ್ಪಡೆಗೊಳ್ಳಲು ಜೆಡಿಎಸ್ ಪ್ರಮುಖ ಕಾರಣ’ ಎಂದು ಶಾಸಕ ಯತೀಂದ್ರ ಸಿದ್ದರಾಮಯ್ಯ ಇಲ್ಲಿ ಮಂಗಳವಾರ ಆರೋಪಿಸಿದರು.

‘ಕಾಂಗ್ರೆಸ್ ಹೆಚ್ಚಿನ ಸ್ಥಾನ ಗಳಿಸಿದ್ದರೂ ಎಚ್.ಡಿ.ಕುಮಾರಸ್ವಾಮಿ ಅವರನ್ನೇ ಮುಖ್ಯಮಂತ್ರಿ ಮಾಡಲಾಗಿತ್ತು. ಅವರು ಸಿ.ಎಂ ಆಗಿದ್ದ ವೇಳೆ ಯಾರ ಕೈಗೂ ಸಿಗುತ್ತಿರಲಿಲ್ಲ. ನನ್ನ ಕ್ಷೇತ್ರದ ಕೆಲಸಗಳೂ ಆಗುತ್ತಿರಲಿಲ್ಲ’ ಎಂದು ದೂರಿದರು.

‘ಕುಮಾರಸ್ವಾಮಿ ಅವರ ಬಗ್ಗೆಯೇ ಬೇಸತ್ತು ನಮ್ಮ ಶಾಸಕರು ಬಿಜೆಪಿ ಸೇರಿದರು. ಅವರ ನಡೆಯಲ್ಲಿ ಸಿದ್ದರಾಮಯ್ಯ ಅವರ ಪಾತ್ರವಿಲ್ಲ’ ಎಂದು ಪ್ರತಿಪಾದಿಸಿದರು.

‘ಕಾಂಗ್ರೆಸ್ ಸೇರಲು ಜಿ.ಟಿ. ದೇವೇಗೌಡ ನಿರ್ಧರಿಸಿದ್ದಾರೆ. ರಾಜಕೀಯದಲ್ಲಿ ಯಾರೂ ಶಾಶ್ವತ ಶತ್ರುಗಳು ಅಲ್ಲ. ಜಿ.ಟಿ.ದೇವೇಗೌಡ ಹಾಗೂ ನಮ್ಮ ತಂದೆ ಹಿಂದೆಯೂ ಒಟ್ಟಿಗಿದ್ದರು. ಅವರಿಬ್ಬರು ಒಳ್ಳೆಯ ಸ್ನೇಹಿತರು’ ಎಂದು ಹೇಳಿದರು.

ಹೆಲ್ಮೆಟ್ ಧರಿಸಿ ಸಂಬಂಧಿಕರ ಮನೆಯಲ್ಲಿ ಕಳವು: ಬಂಧನ



ಬೆಂಗಳೂರು: ಹೆಲ್ಮೆಟ್ ಧರಿಸಿ ಸಂಬಂಧಿಕರ ಮನೆಯಲ್ಲಿ ಕಳವು ಮಾಡಿದ್ದ ಆರೋಪದಡಿ ಶ್ರೀನಿವಾಸ್ ಎಂಬಾತನನ್ನು ವಿಜಯನಗರ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿ ಶ್ರೀನಿವಾಸ್, ಸಿವಿಲ್ ಗುತ್ತಿಗೆದಾರನಾಗಿದ್ದ. ಸೆ.30 ರಂದು ಸಂಬಂಧಿಕರ ಮನೆಯಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದ. ಪುರಾವೆ ಸಂಗ್ರಹಿಸಿ ಆತನನ್ನು ಬಂಧಿಸಲಾಗಿದ್ದು, ₹ 10 ಲಕ್ಷ ಮೌಲ್ಯದ 260 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸಂಬಂಧಿಕರ ಮನೆಗೆ ಆಗಾಗ ಹೋಗಿ ಬರುತ್ತಿದ್ದ ಆರೋಪಿ, ಚಿನ್ನಾಭರಣ ಹಾಗೂ ನಗದು ಇರುವುದನ್ನು ನೋಡಿದ್ದ. ಸಂಬಂಧಿಕರು ಬೆಳಿಗ್ಗೆ ಕೆಲಸಕ್ಕೆ ಹೋದರೆ ರಾತ್ರಿಯೇ ಮನೆಗೆ ಬರುವುದೆಂಬುದನ್ನು ತಿಳಿದಿದ್ದ. ಆರ್ಥಿಕವಾಗಿ ತೊಂದರೆಗೆ ಸಿಲುಕಿದ್ದ ಆತ, ಕಳ್ಳತನ ಮಾಡಿ ಹಣ ಸಂಪಾದಿಸಲು ಮುಂದಾಗಿದ್ದ’ ಎಂದೂ ತಿಳಿಸಿದರು.

ಹೂವಿನ ಕುಂಡದಲ್ಲಿದ್ದ ಕೀ: ‘ಆರೋಪಿಯ ಸಂಬಂಧಿ ಆಗಿರುವ ದೂರುದಾರ, ಕೆಲಸ ನಿಮಿತ್ತ ಹೊರಗಡೆ ಹೋಗಿದ್ದರು. ಅವರ ಪತ್ನಿ ಮಾತ್ರ ಮನೆಯಲ್ಲಿದ್ದರು. ಸಂಜೆ 4.15 ಗಂಟೆ ಸುಮಾರಿಗೆ ಪತ್ನಿ ಸಹ ಯೋಗ ತರಗತಿಗೆಂದು ಹೊರಗಡೆ ಹೋಗಿದ್ದರು. ಮನೆಯ ಬೀಗ ಹಾಕಿ, ಬಾಗಿಲು ಬಳಿ ಇದ್ದ ಹೂವಿನ ಕುಂಡದಲ್ಲಿ ಕೀ ಇರಿಸಿದ್ದರು’ ಎಂದು ಪೊಲೀಸರು ವಿವರಿಸಿದರು.

‘ಕುಂಡದಲ್ಲಿ ಕೀ ಇರುವುದನ್ನು ತಿಳಿದಿದ್ದ ಆರೋಪಿ, ಹೆಲ್ಮೆಟ್ ಧರಿಸಿಕೊಂಡು ಸಂಜೆ 4.30ರ ಸುಮಾರಿಗೆ ಮನೆ ಬಳಿ ಬಂದಿದ್ದ. ಬಾಗಿಲು ತೆರೆದು ಒಳ ನುಗ್ಗಿದ್ದ. ಮನೆಯಲ್ಲೆಲ್ಲ ಹುಡುಕಾಡಿ, ಚಿನ್ನಾಭರಣ ಕದ್ದು ಪರಾರಿಯಾಗಿದ್ದ’ ಎಂದೂ ಅವರು ಹೇಳಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	116.74	12,684	4,355
ಹಾರಂಗಿ	2,859	2,858.17	1,478	1,300
ಕಬಿನಿ	2,284	2,278.95	2,100	3,500
ಹೇಮಾವತಿ	2,922	2,911.69	2,261	4,613
ಲಿಂಗನಮಕ್ಕಿ	1,819	1,815.90	3,887	-
ಸೂಪಾ (ಮೀ)	564	557.10	4,397	2,166
ಮಾಣಿ	594.36	587.54	807	-
ತುಂಗಭದ್ರಾ	1,633	1,632.99	14,118	13,698
ಮಲಪ್ರಭಾ	2,079.50	2,079.50	3,704	3,704
ಘಟಪ್ರಭಾ	2,175	2,175	2,240	2,240
ಭದ್ರಾ	186	186	2,107	2,107
ಆಲಮಟ್ಟಿ (ಮೀ)	519.60	519.58	28,505	30,530
ನಾರಾಯಣಪುರ (ಮೀ)	492.25	492.22	14,000	14,000

* ನೆಲಮಟ್ಟದಿಂದ

ಸಿದ್ದರಾಮಯ್ಯ– ಬಿಎಸ್‌ವೈ ಭೇಟಿಯೇ ಐಟಿ ದಾಳಿಗೆ ಕಾರಣ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಮೈಸೂರು: ‘ಬಿ.ಎಸ್.ಯಡಿಯೂರಪ್ಪ ಹಾಗೂ ವಿಜಯೇಂದ್ರ ಆಪ್ತರ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ದಾಳಿ ನಡೆಸಲು ಯಡಿಯೂರಪ್ಪ-ಸಿದ್ದರಾಮಯ್ಯ ಭೇಟಿಯೇ ಕಾರಣ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

‘ಸಿದ್ದರಾಮಯ್ಯ ಅಧಿಕಾರಕ್ಕಾಗಿ ಯಡಿಯೂರಪ್ಪ ಅವರನ್ನು ಭೇಟಿಯಾಗಿದ್ದರು. ಆ ವಿಷಯ ಕೇಂದ್ರಕ್ಕೆ ತಿಳಿದು ಯಡಿಯೂರಪ್ಪ ಅವರನ್ನು ಕಪಿಮುಷ್ಠಿಯಲ್ಲಿಟ್ಟುಕೊಳ್ಳಲು ದಾಳಿ ನಡೆಸಲಾಗಿದೆ. ದಾಳಿಯ ಹಿಂದೆ ರಾಜಕೀಯದ ಉದ್ದೇಶ ಇರುವುದು ಸ್ಪಷ್ಟ’ ಎಂದು ನಗರದಲ್ಲಿ ಮಂಗಳವಾರ ಸುದ್ದಿಗಾರರಿಗೆ ಹೇಳಿದರು.

‘ಪುಟಗೋಸಿ ವಿರೋಧ ಪಕ್ಷದ ನಾಯಕ ಸ್ಥಾನಕ್ಕಾಗಿ ಸರ್ಕಾರವನ್ನೇ ತೆಗೆದ ಮಹಾನ್ ನಾಯಕ ಸಿದ್ದರಾಮಯ್ಯ. ಯಡಿಯೂರಪ್ಪ ಸರ್ಕಾರ ಬರಲು ಅವರೆಷ್ಟು ಕಾರಣ, ಅಧಿಕಾರಕ್ಕಾಗಿ ಎಷ್ಟು ಕುತಂತ್ರನಡೆಸುತ್ತಾರೆಎಂಬುದುಗೊತ್ತಿದೆ. ಅಧಿಕಾರಕ್ಕಾಗಿಅವರುಏನುಬೇಕಾದರೂ ಮಾಡಬಲ್ಲರು’ ಎಂದು ಹರಿಹಾಯ್ದರು.

‘ಸಿಂದಗಿ ಕ್ಷೇತ್ರದಲ್ಲಿ ಕಾಂಗ್ರೆಸ್ ಸದಾ 3ನೇ ಸ್ಥಾನದಲ್ಲೇ ಉಳಿದಿದ್ದು, ಬಿಜೆಪಿ, ಜೆಡಿಎಸ್ ನಡುವೆಯಷ್ಟೇ ನೇರ ಹಣಾಹಣಿ ಇದೆ. ಸಿದ್ದರಾಮಯ್ಯ ಅವರಿಗೆ ಪಾಠ ಕಲಿಸಲೆಂದೇ ಯೋಚಿಸಿ ಅಭ್ಯರ್ಥಿ ಆಯ್ಕೆ ಮಾಡಲಾಗಿದೆ. ನಮಗೆ ಸರಿ ಎನ್ನಿಸುವವರಿಗೆ ಟಿಕೆಟ್ ಕೊಡುತ್ತೇವೆ. ಸಿದ್ದರಾಮಯ್ಯ ಯಾವ ದೊಣ್ಣೆನಾಯಕ ಎಂದು ಅವರನ್ನು ಕೇಳಿ ಅಭ್ಯರ್ಥಿ ಹಾಕಬೇಕು’ ಎಂದು ಪ್ರಶ್ನಿಸಿದರು.

‘ಗ್ರಾಮವೊಂದರಲ್ಲಿ ಜೆಡಿಎಸ್ ಅಭ್ಯರ್ಥಿಗೆ ಊರಿನವರೇ ₹ 50 ಸಾವಿರ ದೇಣಿಗೆ ನೀಡಿ ಹರಸಿದ್ದಾರೆ. ಕಾಂಗ್ರೆಸ್‌ಗೆ ಅಭ್ಯರ್ಥಿ ಇಲ್ಲರುವುದರಿಂದ ನಮ್ಮ ಪಕ್ಷದ ಅಭ್ಯರ್ಥಿಯನ್ನು ಹೈಜಾಕ್ ಮಾಡಿದ್ದಾರೆ’ ಎಂದರು.

‘ನನ್ನ ವಿರುದ್ಧ ಮಾತನಾಡದಿದ್ದರೆ ಸಿದ್ದರಾಮಯ್ಯ ಅವರಿಗೆ ನಿದ್ದೆ ಬರುವುದಿಲ್ಲ. ಮಂಡ್ಯ ಲೋಕಸಭಾ ಚುನಾವಣೆಯಲ್ಲಿ ಸಿದ್ದರಾಮಯ್ಯ ಒಬ್ಬರೇ ನಿಖಿಲ್‌ನನ್ನು ಸೋಲಿಸಿದರು ಎಂದು ಹೇಳಿಲ್ಲ. ಕಾಂಗ್ರೆಸ್, ಬಿಜೆಪಿ, ರೈತಸಂಘ ಎಲ್ಲರೂ ಸೇರಿ ಚಕ್ರವ್ಯೂಹ ರಚಿಸಿ ಸೋಲಿಸಿದ್ದಾರೆ’ ಎಂದು ಟೀಕಿಸಿದರು.

ಎಚ್‌ಡಿಕೆಯಿಂದ ವಿಧಾನ ಮಂಡಲಕ್ಕೆ ಅಗೌರವ– ಉಗ್ರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ದರಾಮಯ್ಯ ಅವರ ವಿರುದ್ಧ ಎಚ್.ಡಿ. ಕುಮಾರಸ್ವಾಮಿ ಮಾತನಾಡುವ ಸಂದರ್ಭದಲ್ಲಿ ವಿರೋಧ ಪಕ್ಷದ ಸ್ಥಾನದ ಬಗ್ಗೆ ಬಳಸಿರುವ ಪದ ಪ್ರಯೋಗ, ಪ್ರಜಾತಂತ್ರ ವ್ಯವಸ್ಥೆಗೆ, ಸದನಕ್ಕೆ ತೋರುವ ಅಗೌರವ. ವಿಧಾನಸಭಾಧ್ಯಕ್ಷರಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದ್ಧತೆ ಇದ್ದರೆ, ವಿಧಾನಮಂಡಲಕ್ಕೆ ಆಗಿರುವ ಈ ಅಗೌರವಕ್ಕೆ ಸ್ವಯಂ ಪ್ರೇರಿತರಾಗಿ ಹಕ್ಕುಚ್ಯುತಿ ಜಾರಿಗೊಳಿಸುವ ನಂಬಿಕೆ ಇದೆ’ ಎಂದು ಕಾಂಗ್ರೆಸ್ ಮುಖಂಡ ವಿ.ಎಸ್. ಉಗ್ರಪ್ಪ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ಎಚ್.ಡಿ. ಕುಮಾರಸ್ವಾಮಿ ಅವರ ಇತ್ತೀಚಿನ ಕಾರ್ಯವೈಖರಿ ನೋಡಿದರೆ ಅವರು ಹತಾಶರಾಗಿರುವುದು ಕಾಣಬಹುದು. ವೈಯಕ್ತಿಕವಾಗಿ ಅವರ ಬಗ್ಗೆ ಇರುವ ಗೌರವ ಬೇರೆ. ಆದರೆ, ಅವರು ರಾಜಕಾರಣದಲ್ಲಿ ಹೋಗುತ್ತಿರುವ ಹಾದಿ ನೋಡಿದರೆ ಅವರು ಮನಬಂದಂತೆ ಮಾತನಾಡುತ್ತಿದ್ದಾರೆ’ ಎಂದರು.

‘ವಿರೋಧ ಪಕ್ಷದ ಸ್ಥಾನಕ್ಕಾಗಿ ನನ್ನ ಸರ್ಕಾರ ತೆಗೆದರು ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಅದಕ್ಕೆ ಕಾಂಗ್ರೆಸ್ ಕಾರಣ ಎಂದಿದ್ದಾರೆ. ಆ ಸ್ಥಾನ ಯಾವುದಕ್ಕೋ ಸಮಾನ. ಅದಕ್ಕೆ ಆಸೆ ಪಟ್ಟರು ಎಂದರೆ ವಿಧಾನ ಮಂಡಲಕ್ಕೆ ತೋರುವ ಅಗೌರವ’ ಎಂದು ಉಗ್ರಪ್ಪ ಅಭಿಪ್ರಾಯಪಟ್ಟರು.

‘ವಿಜಯೇಂದ್ರಗೆ ಸಚಿವ ಸ್ಥಾನದ ಬೇಡಿಕೆ ಇಟ್ಟಿಲ್ಲ’

ಶಿವಮೊಗ್ಗ: ‘ಸಹೋದರ ಬಿ.ವೈ. ವಿಜಯೇಂದ್ರ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಂಪುಟದಲ್ಲಿ ಸ್ಥಾನ ನೀಡುವಂತೆ ಬೇಡಿಕೆ ಇಟ್ಟಿಲ್ಲ’ ಎಂದು ಸಂಸದ ಬಿ.ವೈ. ರಾಘವೇಂದ್ರ ಹೇಳಿದರು.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ವಿಜಯೇಂದ್ರ ಸಂಘಟನೆಯ ಕೆಲಸ ಮಾಡುತ್ತಿದ್ದಾರೆ ನಾನು ರಾಷ್ಟ್ರ ರಾಜಕಾರಣದಲ್ಲೇ ಮುಂದುವರಿಯುವೆ. ರಾಜ್ಯ ರಾಜಕಾರಣಕ್ಕೆ ಬರುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಪಕ್ಷದ ವರಿಷ್ಠರು ಒಪ್ಪಿದರೆ ರಾಜ್ಯ ರಾಜಕಾರಣ ಪ್ರವೇಶಿಸುತ್ತೇನೆ’ ಎಂದು ಸೋಮವಾರವಷ್ಟೇ ಅವರು ಹೇಳಿಕೆ ನೀಡಿದ್ದರು.

ಕೇರಳದಾದ್ಯಂತ ಭಾರಿ ಮಳೆ ಇಬ್ಬರು ಮಕ್ಕಳು ಸೇರಿ 4 ಸಾವು

ಮಲಪ್ಪುರಂ (ಕೇರಳ): ಕೇರಳದ ವಿವಿಧ ಕಡೆಗಳಲ್ಲಿ ಸೋಮವಾರ ರಾತ್ರಿ ಧಾರಾಕಾರ ಮಳೆಯಾಗಿದೆ. ಮಳೆ ಸಂಬಂಧಿತ ಅವಘಡಗಳಲ್ಲಿ ಇಬ್ಬರು ಮಕ್ಕಳು ಸೇರಿದಂತೆ ನಾಲ್ವರು ಮೃತಪಟ್ಟಿದ್ದಾರೆ.

ಭಾರಿ ಮಳೆಯಿಂದಾಗಿ ವಿವಿಧೆಡೆ ಭೂಕುಸಿತವಾಗಿದೆ. ಪಾಲಕ್ಕಾಡ್‌ನ ವಿವಿಧೆಡೆ ವಾಹನ ಸಂಚಾರ ಅಸ್ತವ್ಯಸ್ತಗೊಂಡಿದೆ. ಮುಂಜಾಗ್ರತೆಯಾಗಿ ಒಂಭತ್ತು ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’ ಹಾಗೂ ವಿವಿಧ ಜಿಲ್ಲೆಗಳಲ್ಲಿ ಶನಿವಾರದವರೆಗೂ ‘ಆರೆಂಜ್ ಅಲರ್ಟ್’ ಘೋಷಿಸಲಾಗಿದೆ.

ಕೇರಳದ ಕಂದಾಯ ಸಚಿವ ಕೆ.ರಾಜನ್ ಅವರು, ಎನ್‌ಡಿಆರ್‌ಎಫ್‌ನ ಆರು ತಂಡಗಳು ಸೇರಿದಂತೆ ರಕ್ಷಣಾ ತಂಡಗಳನ್ನು ವಿವಿಧೆಡೆ ನಿಯೋಜಿಸಲಾಗಿದೆ ಎಂದು ತಿಳಿಸಿದ್ದಾರೆ.

‘ಸಾಮಾಜಿಕ, ಶೈಕ್ಷಣಿಕ ಜಾತಿವಾರು ಸಮೀಕ್ಷೆ ವಿರೋಧಿಸಿಲ್ಲ’

ಒಂದೇ ವೇದಿಕೆಯಲ್ಲಿ ಚರ್ಚೆಗೆ ಬರಲು ಸವಾಲು

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಸಾಮಾಜಿಕ ಮತ್ತು ಶೈಕ್ಷಣಿಕ ಜಾತಿವಾರು ಸಮೀಕ್ಷೆಯ ವರದಿಯನ್ನು ನಾನು ವಿರೋಧಿಸಿದ್ದೇನೆ ಎಂದು ಕೆಲವರು ಸುಳ್ಳು ಸುದ್ದಿ ಹಬ್ಬಿಸಿದ್ದಾರೆ. ಎಲ್ಲೋ ಕುಳಿತು ಹೇಳಿಕೆ ನೀಡುವ ಬದಲು ಒಂದೇ ವೇದಿಕೆಯಲ್ಲಿ ಚರ್ಚೆಗೆ ಬರಲಿ. ಆಗ ಯಾರು ವರದಿಯ ಪರವಾಗಿದ್ದಾರೆ, ವಿರೋಧವಾಗಿದ್ದಾರೆ ಎಂಬುದು ಅರ್ಥವಾಗುತ್ತದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು ಹಾಕಿದರು.

ಎಚ್.ಕಾಂತರಾಜು ನೇತೃತ್ವದ ಸಾಮಾಜಿಕ ಮತ್ತು ಶೈಕ್ಷಣಿಕ ಜಾತಿವಾರು ಸಮೀಕ್ಷೆಯ ವರದಿಯನ್ನು ಸರ್ಕಾರ ಒಪ್ಪಿಕೊಳ್ಳಬೇಕು ಎಂದು ಒತ್ತಾಯಿಸಲು ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟವು ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಪ್ರತಿಭಟನಾ ಸಮಾವೇಶದಲ್ಲಿ ಅವರು ಮಾತನಾಡಿದರು.

‘ನಾನು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಆಯೋಗವನ್ನು ರಚನೆ ಮಾಡಿದ್ದೆ. ಜೊತೆಗೆ ಆಯೋಗಕ್ಕೆ ₹170 ಕೋಟಿ ಬಿಡುಗಡೆ ಮಾಡಿದ್ದೆ. ಎರಡು ವರ್ಷಗಳವರೆಗೆ ನಡೆದ ಈ ಸಮೀಕ್ಷೆಯಲ್ಲಿ 1.60 ಲಕ್ಷ ಶಿಕ್ಷಕರು ಭಾಗವಹಿಸಿದ್ದರು. ಅಲ್ಲದೇ, ವರದಿ ಸಲ್ಲಿಸುವಂತೆ ಆಯೋಗವನ್ನು ರಚಿಸಿದ್ದು ನಾನೇ. ಅದನ್ನು ವಿರೋಧಿಸಲು ಹೇಗೆ ಸಾಧ್ಯ? ನನ್ನ ಅವಧಿ ಮುಗಿಯುವುದರೊಳಗಾಗಿ ವರದಿ ಇನ್ನೂ ಸಿದ್ಧವಾಗಿರಲಿಲ್ಲ. ಹೀಗಾಗಿ ವರದಿ ಅಂಗೀಕರಿಸುವ, ತಿರಸ್ಕರಿಸುವ ಪ್ರಶ್ನೆಯೇ ಎದುರಾಗುವುದಿಲ್ಲ’ ಎಂದರು.



ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟವು ಕಲಬುರಗಿಯಲ್ಲಿ ಮಂಗಳವಾರ ಆಯೋಜಿಸಿದ್ದ ಪ್ರತಿಭಟನಾ ಸಮಾವೇಶದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿದರು

‘ವರದಿಯನ್ನು ನಾನು ಹೇಳಿ ಬರೆಸಿದ್ದೇನೆ ಎಂದು ಎಚ್.ಡಿ. ಕುಮಾರಸ್ವಾಮಿ ಹೇಳುತ್ತಾರೆ. ಅವರು ಇಂತಹ ಬೇಜವಾಬ್ದಾರಿ ಹೇಳಿಕೆ ನೀಡಬಾರದು. ಸಮೀಕ್ಷೆಯಲ್ಲಿ ತೊಡಗಿಸಿಕೊಂಡಿದ್ದ 1.60 ಲಕ್ಷ ಶಿಕ್ಷಕರಿಗೆ ಹೀಗೇ ಬರೆಯಿರಿ ಎಂದು ಹೇಳಲು ಸಾಧ್ಯವಿದೆಯೇ. ಸುಳ್ಳು ಹೇಳುವುದಕ್ಕೂ ಒಂದು ಮಿತಿ ಬೇಡವೇ’ ಎಂದು ಪ್ರಶ್ನಿಸಿದರು.

‘ಈಶ್ವರಪ್ಪ ಒಬ್ಬ ಪೆದ್ದ’: ‘ವರದಿಯಲ್ಲಿ ಕಾರ್ಯದರ್ಶಿಯ ಸಹಿ ಇಲ್ಲ. ಉದ್ದೇಶಪೂರ್ವಕವಾಗಿ ನಾನು ವರದಿ ಅಂಗೀಕರಿಸಲಿಲ್ಲ ಎಂದು ಸಚಿವ ಕೆ.ಎಸ್. ಈಶ್ವರಪ್ಪ ಹೇಳುತ್ತಾರೆ. ಅವರ ನಾಲಿಗೆಗೂ, ಮಿದುಳಿಗೂ ಸಂಬಂಧವೇ ಇಲ್ಲದಂತೆ ಮಾತನಾಡುತ್ತಾರೆ. ಅದಕ್ಕೇ ನಾನು ಅವರನ್ನು ಪೆದ್ದ ಈಶ್ವರಪ್ಪ ಎಂದು ಕರೆಯುತ್ತೇನೆ’ ಎಂದು ವ್ಯಂಗ್ಯವಾಡಿದರು.

‘ವರದಿಯಲ್ಲಿ ಏನಿದೆ ಎಂಬುದು ನನಗೆ ಗೊತ್ತಿಲ್ಲ. ಅಲ್ಲದೇ, ಈ ವರದಿ ಯಾರ ವಿರುದ್ಧವೂ ಅಲ್ಲ, ಯಾರ ಪರವೂ ಅಲ್ಲ. ಜಾತಿವಾರು ಸಮೀಕ್ಷೆಯಿಂದ ಯಾರು ಎಷ್ಟು ಜನ ಇದ್ದಾರೆ ಎಂಬುದು ಗೊತ್ತಾಗುತ್ತದೆ. ಹಿಂದುಳಿದ ವರ್ಗದವರಿದ್ದರೆ ಅವರನ್ನು ಮುಖ್ಯ ವಾಹಿನಿಗೆ ತರಲು ಕಾರ್ಯಕ್ರಮ ರೂಪಿಸಬೇಕಾಗುತ್ತದೆ. ಅದಕ್ಕಾಗಿ ಈ ವರದಿ ತಯಾರಿಸಲು ಆಯೋಗವನ್ನು ರಚಿಸಿದ್ದೆ’ ಎಂದರು.

‘ಸದನದಲ್ಲಿ ಈ ಬಗ್ಗೆ ಪ್ರಶ್ನೆಯೇ ಎತ್ತಿಲ್ಲ ಎಂದು ಆರೋಪಿಸುತ್ತಿದ್ದಾರೆ. ಸದನ ಸರಿಯಾಗಿ ನಡೆದರಲ್ಲವೇ ಪ್ರಶ್ನೆ ಮಾಡುವುದು? ಮುಂಬರುವ ಡಿಸೆಂಬರ್‌ನಲ್ಲಿ ನಡೆಯುವ ಅಧಿವೇಶನದಲ್ಲಿ ನನ್ನ ಮೊದಲ ಪ್ರಶ್ನೆ ಇದೇ ಆಗಿರುತ್ತದೆ’ ಎಂದರು.

ಕುಡು ಒಕ್ಕಲಿಗ ಸಮುದಾಯ 3 ಎಗೆ ಸೇರಿಸಲು ಆಗ್ರಹ

ಬೆಂಗಳೂರು: ‘ರಾಜ್ಯದ 16 ಜಿಲ್ಲೆಗಳಲ್ಲಿರುವ ಕುಡು ಒಕ್ಕಲಿಗ ಸಮುದಾಯವನ್ನು ಜಾತಿ ಪಟ್ಟಿಯಲ್ಲಿ 3ಎ ವರ್ಗಕ್ಕೆ ಸೇರಿಸಬೇಕು’ ಎಂದು ಆಗ್ರಹಿಸಿ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಅವರಿಗೆ ರಾಜ್ಯ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ ಮನವಿ ಸಲ್ಲಿಸಿದೆ.

‘ಯಾದಗಿರಿ, ರಾಯಚೂರು, ಕಲಬುರಗಿ, ಬೀದರ್, ಬಳ್ಳಾರಿ, ಕೊಪ್ಪಳ, ಉತ್ತರ ಕನ್ನಡ, ಹಾವೇರಿ, ಗದಗ, ವಿಜಯಪುರ, ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಬಾಗಲಕೋಟೆ, ಚಿತ್ರದುರ್ಗ, ತುಮಕೂರು, ದಾವಣಗೆರೆ ಜಿಲ್ಲೆಗಳಲ್ಲಿ ಕುಡು ಒಕ್ಕಲಿಗ ಸಮುದಾಯದವರಿದ್ದಾರೆ. ತಲತಲಾಂತರಗಳಿಂದ ವ್ಯವಸಾಯವನ್ನು ಮೂಲ ಕಸುಬು ಆಗಿ ಮಾಡಿಕೊಂಡು ಬಂದಿರುವ ಈ ಸಮುದಾಯದ ಮಕ್ಕಳು ಉದ್ಯೋಗ ಮತ್ತು ಶಿಕ್ಷಣದಿಂದ ವಂಚಿತರಾಗಿದ್ದಾರೆ’ ಎಂದೂ ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಮನವಿ ಸಲ್ಲಿಸುವ ಸಂದರ್ಭದಲ್ಲಿ ಸಮಿತಿಯ ಪ್ರಧಾನ ಸಂಚಾಲಕ ಆಡಿಟರ್ ನಾಗರಾಜ್ ಯಲಚವಾಡಿ, ರಾಮೇಗೌಡ, ಎಂ.ಬಿ.ರಮೇಶ, ಉತ್ತರ ಕರ್ನಾಟಕ ಭಾಗದ ಕುಡು ಒಕ್ಕಲಿಗರ ಸಂಘಟನೆಯ ಪ್ರಮುಖರು ಇದ್ದರು.

‘ಮುಜರಾಯಿ ದೇವಳಗಳ ಸಿಬ್ಬಂದಿ ವೇತನ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಜರಾಯಿ ಅಧೀನದಲ್ಲಿರುವ ‘ಎ’ ಮತ್ತು ‘ಬಿ’ ದರ್ಜೆಯ ದೇವಸ್ಥಾನಗಳ ಅರ್ಚಕರು ಹಾಗೂ ನೌಕರರಿಗೆ ಅಕ್ಟೋಬರ್ 1ರಿಂದ ಅನ್ವಯವಾಗುವಂತೆ ಆರನೇ ವೇತನ ಆಯೋಗದ ಶಿಫಾರಸಿನ ಅನುಸಾರ ವೇತನ ಹೆಚ್ಚಳ ಮಾಡಲಾಗಿದೆ ಎಂದು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.



ಶಶಿಕಲಾ ಜೊಲ್ಲೆ

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಐದನೇ ವೇತನ ಆಯೋಗದ ಶಿಫಾರಸಿನಂತೆ ವೇತನ ಪಡೆಯುತ್ತಿರುವ ದೇವಾಲಯಗಳ ನೌಕರರಿಗೆ ವೇತನ ಹೆಚ್ಚಳ ಮಾಡಬೇಕೆಂಬ ಬೇಡಿಕೆ ಹಲವು ದಿನಗಳಿಂದ ಇತ್ತು. ಆಯಾ ದೇವಾಲಯದ ಒಟ್ಟು ಆದಾಯದಲ್ಲಿ ನೌಕರರ ವೇತನದ ಪಾಲು ಶೇಕಡ 35 ರಷ್ಟನ್ನು ಮೀರದಂತೆ ಈ ನೌಕರರಿಗೆ ಆರನೇ ವೇತನ ಆಯೋಗದ ಶಿಫಾರಸಿನಂತೆ ವೇತನ ಪರಿಷ್ಕರಣೆಗೆ ಆದೇಶ ಹೊರಡಿಸಲಾಗಿದೆ’ ಎಂದರು.

ಆಯಾ ದೇವಾಲಯಗಳ ಆದಾಯದಿಂದಲೇ ನೌಕರರ ವೇತನ ಪರಿಷ್ಕರಣೆಯ ವೆಚ್ಚವನ್ನೂ ಭರಿಸಲಾಗುವುದು. 1,034 ನೌಕರರಿಗೆ ವೇತನ ಹಚ್ಚಳವಾಗಲಿದ್ದು, ಇದಕ್ಕಾಗಿ ₹ 20 ಕೋಟಿ ವೆಚ್ಚವಾಗಲಿದೆ ಎಂದು ತಿಳಿಸಿದರು.

‘ಸಿ’ ದರ್ಜೆಯ ಎಲ್ಲ ದೇವಾಲಯಗಳಲ್ಲೂ ಕಾಯಂ ಅರ್ಚಕರು ಇಲ್ಲ. ಅಲ್ಲದೇ, ಈ ದೇವಾಲಯಗಳಲ್ಲಿ ಆದಾಯ ಕಡಿಮೆ ಇದೆ. ಆರ್ಥಿಕ ಪರಿಸ್ಥಿತಿಯನ್ನು ಆಧರಿಸಿ ವೇತನ ಹೆಚ್ಚಳಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

37,000 ಸಿಬ್ಬಂದಿಗೆ ವಿಮೆ: ಇಲಾಖೆಯ ವ್ಯಾಪ್ತಿಯಲ್ಲಿರುವ ಎಲ್ಲ ದೇವಾಲಯಗಳ ಅರ್ಚಕರು ಮತ್ತು ಸಿಬ್ಬಂದಿಗೆ ವಿಮಾ ಸೌಲಭ್ಯ ಒದಗಿಸಲಾಗುತ್ತಿದೆ. ಇದಕ್ಕಾಗಿ ಇಲಾಖೆ ವಾರ್ಷಿಕ ₹ 1.22 ಕೋಟಿ ವೆಚ್ಚ ಮಾಡಲಿದೆ ಎಂದರು.

ದೇವಸ್ಥಾನಗಳಿಗೆ ನೀಡುವ ತಸ್ತೀಕ್ ಮೊತ್ತದ ಬಾಬ್ತು ₹ 19 ಕೋಟಿ ಬಾಕಿ ಇದೆ. ಅದನ್ನು ಶೀಘ್ರದಲ್ಲಿ ಬಿಡುಗಡೆ ಮಾಡಲಾಗುವುದು ಎಂದು ಹೇಳಿದರು.

ಎಲ್ಲ ದೇವಸ್ಥಾನಗಳ ವಿವರ, ಸ್ಥಳ ಮಾಹಿತಿ, ಆಸ್ತಿ ವಿವರ, ಆನ್‌ಲೈನ್ ಮತ್ತು ಇ–ಸೇವೆಗಳ ವಿವರಗಳನ್ನು ಸಮಗ್ರ ದೇವಾಲಯ ನಿರ್ವಹಣಾ ವ್ಯವಸ್ಥೆ (ಐಟಿಎಂಎಸ್) ಅಡಿ ದಾಖಲಿಸುವ ಕೆಲಸ ನಡೆಯುತ್ತಿದೆ. ಈವರೆಗೆ ‘ಎ’ ದರ್ಜೆಯ 205 ಮತ್ತು ‘ಬಿ’ ದರ್ಜೆಯ 139 ದೇವಸ್ಥಾನಗಳ ಮಾಹಿತಿ ದಾಖಲಿಸಲಾಗಿದೆ ಎಂದರು.

ವಿಶೇಷ ಪೂಜೆ: ವಿಜಯದಶಮಿಯ ದಿನ (ಅ.15) ಇಲಾಖೆಯ ವ್ಯಾಪ್ತಿಯಲ್ಲಿರುವ ಎಲ್ಲ ದೇವಸ್ಥಾನಗಳಲ್ಲಿ ಜನರ ಒಳಿತಿಗಾಗಿ ವಿಶೇಷ ಪೂಜೆ ನೆರವೇರಿಸುವಂತೆ ಸುತ್ತೋಲೆ ಹೊರಡಿಸಲಾಗಿದೆ ಎಂದರು.

‘ವಸ್ತ್ರಸಂಹಿತೆ ಪ್ರಸ್ತಾವವಿಲ್ಲ’

‘ಮುಜರಾಯಿ ಇಲಾಖೆ ವ್ಯಾಪ್ತಿಯ ದೇವಸ್ಥಾನಗಳ ಪ್ರವೇಶಕ್ಕೆ ವಸ್ತ್ರಸಂಹಿತೆ ಜಾರಿಗೊಳಿಸುವ ಪ್ರಸ್ತಾವ ಇಲ್ಲ. ಧಾರ್ಮಿಕ ಪರಿಷತ್‌ನಲ್ಲಿ ಚರ್ಚೆಯಾಗಿದೆಯೇ ಎಂಬುದೂ ತಿಳಿದಿಲ್ಲ. ಈ ಕುರಿತು ಮಾಹಿತಿ ಪಡೆದು ಪರಿಶೀಲಿಸಲಾಗುವುದು’ ಎಂದು ಸಚಿವ ಶಶಿಕಲಾ ಜೊಲ್ಲೆ ತಿಳಿಸಿದರು.

ಚಿಕ್ಕಮಗಳೂರಿನ ಬಾಬಾ ಬುಡನ್ ಗಿರಿ ದತ್ತ ಪೀಠದಲ್ಲಿ ಮುಜಾವರ್ ನೇಮಕ ರದ್ದು ಮಾಡಿರುವ ಹೈಕೋರ್ಟ್ ಆದೇಶದ ಕುರಿತು ಸಂಪುಟ ಉಪ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಬುಧವಾರ, ಅಕ್ಟೋಬರ್ 13, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಂತಿಮ ನಮನ

ಲಖಿಂಪುರ ಖೇರಿ ಘಟನೆಯಲ್ಲಿ ಮೃತಪಟ್ಟ ರೈತರಿಗೆ ಅಂತಿಮ ನಮನ ಸಲ್ಲಿಸಲು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಂಗಳವಾರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಪಾಲ್ಗೊಂಡಿದ್ದರು.



ಉಗ್ರರ ಇರುವಿಕೆಯ ಖಚಿತ ಮಾಹಿತಿ: ಶೋಪಿಯಾನ್, ಫೇರಿಪೊರದಲ್ಲಿ ಕಾರ್ಯಾಚರಣೆ

ಎನ್‌ಕೌಂಟರ್: ಐವರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಶೋಪಿಯಾನ್ ಜಿಲ್ಲೆಯ ಎರಡು ಪ್ರತ್ಯೇಕ ಎನ್‌ಕೌಂಟರ್‌ಗಳಲ್ಲಿ ಐವರು ಉಗ್ರರನ್ನು ಭದ್ರತಾ ಪಡೆಗಳು ಮಂಗಳವಾರ ಹೊಡೆದುರುಳಿಸಿವೆ.

ಕಳೆದ 24 ಗಂಟೆಗಳಲ್ಲಿ ಶೋಪಿಯಾನ್ ಸಮೀಪದ ಗ್ರಾಮಗಳಲ್ಲಿ ಉಗ್ರರ ಇರುವಿಕೆ ಬಗ್ಗೆ ಖಚಿತ ಮಾಹಿತಿ ಆಧರಿಸಿ ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆ ನಡೆಸಲಾಯಿತು. ಹತ್ಯೆ ಮಾಡಲಾದ ಐವರ ಪೈಕಿ ಮುಖ್ತಾರ್ ಷಾ ಎಂಬ ಉಗ್ರನು ಶ್ರೀನಗರದ ಲಾಲ್ ಬಜಾರ್ ಪ್ರದೇಶದಲ್ಲಿ ವ್ಯಾಪಾರಿಯೊಬ್ಬರ ಹತ್ಯೆಯಲ್ಲಿ ಭಾಗಿಯಾಗಿದ್ದ ಎಂದು ತಿಳಿದುಬಂದಿದೆ.

ಟುಲ್ರಾನ್ ಎಂಬಲ್ಲಿ ಉಗ್ರರಿಗೆ ಶರಣಾಗಲು ಸಾಕಷ್ಟು ಅವಕಾಶಗಳನ್ನು ನೀಡಲಾಯಿತು. ಆದರೆ ಭದ್ರತಾ ಪಡೆಗಳನ್ನು ಗುರಿಯಾಗಿಸಿ ಅವರು ದಾಳಿ ನಡೆಸಿದ್ದರಿಂದ ಪ್ರತಿಯಾಗಿ ಗುಂಡು ಹಾರಿಸಬೇಕಾಯಿತು. ಎನ್‌ಕೌಂಟರ್‌ನಲ್ಲಿ ಮೂವರು ಭಯೋತ್ಪಾದಕರ ಹತ್ಯೆ ಮಾಡಲಾಯಿತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹತ್ಯೆಯಾದ ಉಗ್ರರನ್ನು ಶೋಪಿಯಾನ್‌ನ ರೇ ಕಪ್ರೆನ್ ನಿವಾಸಿ ಡ್ಯಾನಿಶ್ ಹುಸೇನ್ ದಾರ್, ಪಹ್ಲಿಪೋರಾದ ನಿವಾಸಿ ಯವರ್ ಹುಸೇನ್ ನಾಯ್ಕೂ ಮತ್ತು ಮಧ್ಯ ಕಾಶ್ಮೀರದ ಗಂದರ್‌ಬಾಲ್‌ನ ಸಿಂದಾಲ್ ಪ್ರದೇಶದ ನಿವಾಸಿ ಮುಕ್ತಾರ್ ಅಹ್ಮದ್ ಶಾ ಎಂದು ಗುರುತಿಸಲಾಗಿದೆ.

ಈ ಮೂವರು ಉಗ್ರರೂ ಲಷ್ಕರ್‌ನ ಒಂದು ಭಾಗ ಎಂದು ಪರಿಗಣಿಸಲಾಗಿರುವ 'ದಿ ರೆಸಿಸ್ಟೆನ್ಸ್ ಫ್ರಂಟ್' (ಟಿಆರ್‌ಎಫ್) ಜೊತೆ ಗುರುತಿಸಿಕೊಂಡಿದ್ದಾರೆ. ಪೊಲೀಸ್ ದಾಖಲೆಗಳ ಪ್ರಕಾರ, ಹತ್ಯೆಗೀಡಾದ ಭಯೋತ್ಪಾದಕರು ಭದ್ರತಾ ಸಂಸ್ಥೆಗಳ ಮೇಲಿನ ದಾಳಿ ಮತ್ತು ನಾಗರಿಕ ದೌರ್ಜನ್ಯ ಸೇರಿದಂತೆ ಹಲವಾರು ಭಯೋತ್ಪಾದಕ ಕೃತ್ಯಗಳಲ್ಲಿ ಭಾಗಿಯಾದ ಸಂಘಟನೆಗಳ ಭಾಗವಾಗಿದ್ದರು.

'ಶ್ರೀನಗರದ ಲಾಲ್ ಬಜಾರ್‌ನಲ್ಲಿ ಸ್ಥಳೀಯರಲ್ಲದ ವ್ಯಾಪಾರಿಗಳನ್ನು ಗುರಿಯಾಗಿಸಿ ನಡೆಸಿದ ಹತ್ಯೆಯಲ್ಲಿ ಮುಖ್ತಾರ್ ಷಾ ಭಾಗಿಯಾಗಿದ್ದ. ಹತ್ಯೆ ನಡೆಸಿ ಶೋಪಿಯಾನ್‌ಗೆ ಸ್ಥಳಾಂತರಗೊಂಡಿದ್ದ' ಎಂದು ಹೇಳಿದ್ದಾರೆ.

ಬಿಹಾರ ಮೂಲದ ವೀರೇಂದ್ರ ಪಾಸ್ವಾನ್ ಎಂಬ ಬೀದಿಬದಿ ವ್ಯಾಪಾರಿಯನ್ನು ಅಕ್ಟೋಬರ್ 5ರಂದು ಹತ್ಯೆ ಮಾಡಲಾಗಿತ್ತು

ಔಷಧ ಅಂಗಡಿ ಮಾಲೀಕ ಮಖನ್ ಲಾಲ್ ಬಿಂದ್ರೂ ಅವರನ್ನು ಹತ್ಯೆ ಮಾಡಿದ ತಕ್ಷಣವೇ ಪಾಸ್ವಾನ್ ಹತ್ಯೆಯಾಗಿತ್ತು. ಅದೇ ದಿನ ಸ್ಥಳೀಯ ಟ್ಯಾಕ್ಸಿ ಸಂಘದ ಅಧ್ಯಕ್ಷ ಮೊಹಮ್ಮದ್ ಶಫಿ ಲೋನ್ ಅವರನ್ನು ಕೊಲ್ಲಲಾಗಿತ್ತು.

ಈ ಮಧ್ಯೆ ಫೇರಿಪೊರದಲ್ಲಿ ಮಂಗಳವಾರ ಮುಂಜಾನೆ ಶೋಧ ಕಾರ್ಯಾಚರಣೆ ಆರಂಭಿಸಲಾಯಿತು. ಇಲ್ಲಿ ಅಡಗಿದ್ದ ಉಗ್ರರಿಗೂ ಶರಣಾಗಲು ಸಾಕಷ್ಟು ಸಮಯ ನೀಡಲಾಯಿತು ಎಂದು ವಕ್ತಾರರು ಹೇಳಿದ್ದಾರೆ. ಆದರೆ ಭದ್ರತಾ ಪಡೆಗಳನ್ನು ಗುರಿಯಾಗಿಸಿ ಉಗ್ರರು ದಾಳಿ ನಡೆಸಿದ್ದರಿಂದ ಎನ್‌ಕೌಂಟರ್ ಮಾಡಬೇಕಾಯಿತು. ಎನ್‌ಕೌಂಟರ್‌ನಲ್ಲಿ ಹತ್ಯೆಯಾದ ಇಬ್ಬರು ಉಗ್ರರ ಶವಗಳನ್ನು ಸ್ಥಳದಿಂದ ಹೊರತೆಗೆಯಲಾಗಿದೆ.

ಹತ್ಯೆಯಾದವರನ್ನು ರೇ ಕಪ್ರೆನ್ ನಿವಾಸಿ ಉಬೇದ್ ಅಹ್ಮದ್ ದಾರ್ ಹಾಗೂ ಬ್ರಾರಿಪೊರಾ ನಿವಾಸಿ ಖುಬೇದ್ ಅಹ್ಮದ್ ನೆಂಗ್ರೂ ಎಂದು ಗುರುತಿಸಲಾಗಿದೆ. ಈ ಇಬ್ಬರೂ ಸಹ ಎಲ್‌ಇಟಿ ಜೊತೆ ನಂಟು ಹೊಂದಿದ್ದು, ಹಲವು ಭಯೋತ್ಪಾದಕ ಕೃತ್ಯಗಳಲ್ಲಿ ಭಾಗಿಯಾಗಿದ್ದಾರೆ ಎಂದು ಪೊಲೀಸ್ ದಾಖಲೆಗಳಲ್ಲಿ ಇದೆ. ಹತ್ಯೆಯಾದ ಉಗ್ರರಿಂದ ಶಸ್ತ್ರಾಸ್ತ್ರ, ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ.



ಪೂಂಛ್‌ನ ಸುರಾನ್‌ಕೋಟೆ ಪ್ರದೇಶದಲ್ಲಿ ಭದ್ರತಾ ಪಡೆಗಳು ಮಂಗಳವಾರ ಕಾರ್ಯಾಚರಣೆ ನಡೆಸಿದವು–ಪಿಟಿಐ ಚಿತ್ರ

> ಶ್ರೀನಗರ ಮತ್ತು ಬಂಡಿಪೊರಾದಲ್ಲಿ ಗುರಿಯಾಗಿಸಿ ನಡೆಸಿದ್ದ ಎರಡು ದಾಳಿ ಪ್ರಕರಣಗಳು ಈ ಉಗ್ರರ ಹತ್ಯೆಯೊಂದಿಗೆ ತಾರ್ಕಿಕ ಅಂತ್ಯ ಕಂಡಿವೆ
> **ವಿಜಯ್ ಕುಮಾರ್,** ಕಾಶ್ಮೀರ ಐಜಿಪಿ

ಮೂರು ತಿಂಗಳಿಂದ ಬೀಡುಬಿಟ್ಟಿದ್ದ ಉಗ್ರರು

ಸೋಮವಾರ ಪೂಂಛ್ ಜಿಲ್ಲೆಯಲ್ಲಿ ಐವರು ಸೈನಿಕರನ್ನು ಹತ್ಯೆ ಮಾಡಿದ ಉಗ್ರರು ಈ ಪ್ರದೇಶದಲ್ಲಿ 2–3 ತಿಂಗಳಿನಿಂದ ವಾಸವಿದ್ದರು ಎಂದು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಮಂಗಳವಾರ ಹೇಳಿದ್ದಾರೆ.

ಜಮ್ಮುವಿನ ಅವಳಿ ಗಡಿ ಜಿಲ್ಲೆಗಳಾದ ರಜೌರಿ ಮತ್ತು ಪೂಂಛ್ ಅನ್ನು ಸಂಪರ್ಕಿಸುವ ಅರಣ್ಯ ಪ್ರದೇಶದಲ್ಲಿ ಭದ್ರತಾ ಪಡೆಗಳು ಭಾರಿ ಪ್ರಮಾಣದ ಶೋಧ ಕಾರ್ಯಾಚರಣೆ ನಡೆಸಿದವು. ಮತ್ತೊಂದು ಜಾಗದಲ್ಲಿ ಶೋಧ ತಂಡಕ್ಕೆ ಉಗ್ರರು ಕಾಣಿಸಿಕೊಂಡು ಮತ್ತೆ ನಾಪತ್ತೆಯಾದರು ಎಂದು ರಜೌರಿ, ಪೂಂಚ್ ವಲಯದ ಡಿಐಜಿ ವಿವೇಕ್ ಗುಪ್ತಾ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

ಪ್ರತಿಭಟನೆ: ಸೈನಿಕರ ಹತ್ಯೆ ಖಂಡಿಸಿ ಪೂಂಛ್ ಪಟ್ಟಣದಲ್ಲಿ ಯುವಕರ ಗುಂಪೊಂದು ಪಾಕಿಸ್ತಾನ ವಿರೋಧಿ ಘೋಷಣೆಗಳನ್ನು ಕೂಗಿತು. ಪ್ರತಿಭಟನೆಯಲ್ಲಿ ಭಾಗಿಯಾಗಿದ್ದವರ ಪೈಕಿ ಸಿಖ್ ಸಮುದಾಯಕ್ಕೆ ಸೇರಿದ ಯುವಕರು ಹೆಚ್ಚಾಗಿದ್ದರು.

'ಅಮಾಯಕ ನಾಗರಿಕರು ಮತ್ತು ನಮ್ಮ ಸೈನಿಕರನ್ನು ಕೊಲ್ಲುತ್ತಿರುವ ಭಯೋತ್ಪಾದಕರನ್ನು ದೇಶದೊಳಕ್ಕೆ ಕಳುಹಿಸುತ್ತಿರುವ ಪಾಕಿಸ್ತಾನಕ್ಕೆ ಸರ್ಕಾರ ಪಾಠ ಕಲಿಸಬೇಕಾದ ಸಮಯ ಬಂದಿದೆ' ಎಂದು ಕಮಲ್‌ಜೀತ್ ಸಿಂಗ್ ಎಂಬುವರು ಹೇಳಿದ್ದಾರೆ.

16 ಸ್ಥಳಗಳಲ್ಲಿ ಎನ್‌ಐಎ ದಾಳಿ

ಕಾಶ್ಮೀರದಲ್ಲಿ ತನ್ನ ದಾಳಿಗಳನ್ನು ಮುಂದುವರಿಸಿರುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ), ಮಂಗಳವಾರ ಕಣಿವೆಯ 16 ಸ್ಥಳಗಳಲ್ಲಿ ಶೋಧ ನಡೆಸಿತು. ದಿ ರೆಸಿಸ್ಟೆನ್ಸ್ ಫ್ರಂಟ್ (ಟಿಆರ್‌ಎಫ್) ಸೇರಿದಂತೆ ಉಗ್ರಗಾಮಿ ಸಂಘಟನೆಗಳಿಗಾಗಿ ಭೂಗತವಾಗಿ ಕೆಲಸ ಮಾಡುವವರಿಗೆ ಸಂಬಂಧಿಸಿ ಈ ದಾಳಿಗಳು ನಡೆದಿವೆ.

ಇತ್ತೀಚೆಗೆ ನಾಗರಿಕರ ಮೇಲೆ ದಾಳಿ ಮತ್ತು ಕಣಿವೆಯಲ್ಲಿನ ಇತರ ಭಯೋತ್ಪಾದನಾ ಚಟುವಟಿಕೆಗಳಲ್ಲಿ ಟಿಆರ್‌ಎಫ್‌ಗೆ ಭೂಗತವಾಗಿ ಸಹಾಯ ಮಾಡುತ್ತಿರುವವರನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ. ಎಲ್‌ಇಟಿ, ಜೆಇಎಂ, ಹಿಜ್ಬುಲ್ ಮುಜಾಹಿದೀನ್, ಅಲ್-ಬದರ್, ದಿ ರೆಸಿಸ್ಟೆನ್ಸ್ ಫ್ರಂಟ್ ಮೊದಲಾದ ಸಂಘಟನೆಗಳು ಈ ಪಟ್ಟಿಯಲ್ಲಿದ್ದವು.

ಅಕ್ಟೋಬರ್ 10ರಂದು ಜಮ್ಮು ಕಾಶ್ಮೀರದ ಏಳು ಸ್ಥಳಗಳಲ್ಲಿ ಶೋಧ ನಡೆಸಿತ್ತು. ಲಷ್ಕರ್ ಜತೆ ನಂಟಿರುವ ಟಿಆರ್‌ಎಫ್ ಸಂಘಟನೆಯ ಇಬ್ಬರು ಸದಸ್ಯರನ್ನು ಬಂಧಿಸಿತ್ತು. ಅಕ್ಟೋಬರ್ 3ರಂದು ಪೂಂಛ್ ಜಿಲ್ಲೆಯ ಅನೇಕ ಸ್ಥಳಗಳ ಮೇಲೆ ದಾಳಿ ಮಾಡಿತ್ತು.

ಬಿಂದ್ರೂ, ಶಿಕ್ಷಕರ ಹಂತಕರ ಗುರುತು ಪತ್ತೆ

ಕಾಶ್ಮೀರಿ ಪಂಡಿತ ಉದ್ಯಮಿ ಮಖನ್ ಲಾಲ್ ಬಿಂದ್ರೂ, ಶಾಲಾ ಪ್ರಾಂಶುಪಾಲ ಸತೀಂದರ್ ಕೌರ್ ಮತ್ತು ಶಿಕ್ಷಕ ದೀಪಕ್ ಚಂದ್ ಅವರ ಹತ್ಯೆಗಳ ಹಿಂದೆ ಮಂಗಳವಾರ ಹತ್ಯೆಯಾದ ಉಗ್ರರ ಗುಂಪು ಇತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಾಗರಿಕರ ಹತ್ಯೆಯ ಸೂತ್ರಧಾರ ಬಸಿತ್ ಅಹ್ಮದ ದಾರ್ ದಕ್ಷಿಣ ಕಾಶ್ಮೀರದ ಕುಲ್ಗಾಮ್ ನಿವಾಸಿ. 20 ವರ್ಷದ ಮೆಹ್ರಾನ್ ಶಲ್ಲಾ, ನವ ಕಡಲ್ ನಿವಾಸಿ ಯುವಕ ಮತ್ತು ಆದಿಲ್ಲಾ ಎಂಬ ಮೂವರು ಭಯೋತ್ಪಾದಕರು ಈ ತಂಡದ ಭಾಗವಾಗಿದ್ದರು. ದಾರ್ ರೂಪಿಸಿದ ಯೋಜನೆಯಂತೆ ಇವರು ನಗರದಲ್ಲಿ ನಾಗರಿಕರ ಮೇಲೆ ದಾಳಿ ಎಸಗಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಐಎಸ್‌ಐನಿಂದ ತರಬೇತಿ ಪಡೆದಿದ್ದ ಅಶ್ರಫ್

ಶಂಕಿತ ಪಾಕ್ ಉಗ್ರನ ಬಂಧನ

ಪ್ರಜಾವಾಣಿ ವಾರ್ತೆ

ನವದೆಹಲಿ: ಒಂದು ದಶಕದಿಂದ ದೆಹಲಿಯಲ್ಲಿ ನೆಲೆಸಿದ್ದ ಪಾಕಿಸ್ತಾನಿ ಶಂಕಿತ ಭಯೋತ್ಪಾದಕನನ್ನು ಪೂರ್ವ ದೆಹಲಿಯಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ. ಶಂಕಿತನು ರಾಷ್ಟ್ರ ರಾಜಧಾನಿಯಲ್ಲಿ ಹಬ್ಬದ ವೇಳೆ ವಿಧ್ವಂಸಕ ದಾಳಿ ನಡೆಸಲು ಯೋಜನೆ ರೂಪಿಸುತ್ತಿದ್ದ ಎಂದು ತಿಳಿಸಿದ್ದಾರೆ.

ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ನಿವಾಸಿ ಮೊಹ್ಮದ್ ಅಶ್ರಫ್ ಎಂಬಾತನನ್ನು ಲಕ್ಷ್ಮಿನಗರದ ರಮೇಶ್ ಪಾರ್ಕ್‌ನಲ್ಲಿ ಬಂಧಿಸಲಾಗಿದೆ. ಈ ವ್ಯಕ್ತಿಯು ಶಾಸ್ತ್ರಿ ನಗರದಲ್ಲಿ ಭಾರತೀಯ ಪ್ರಜೆ ಅಲಿ ಅಹ್ಮದ್ ನೂರಿ ಎಂಬುವರ ಹೆಸರಿನಲ್ಲಿ ವಾಸಿಸುತ್ತಿದ್ದ ಎಂದು ಪೊಲೀಸರು ಹೇಳಿದ್ದಾರೆ. ನಕಲಿ ದಾಖಲೆ ಸೃಷ್ಟಿಸಿ ಭಾರತೀಯ ಗುರುತಿನ ಚೀಟಿಗಳನ್ನು ಪಡೆದಿದ್ದ ಎಂದು ಆರೋಪಿಸಲಾಗಿದೆ.

ಬಂಧಿತನಿಂದ ಮದ್ದುಗುಂಡು, ಒಂದು ಎಕೆ-47 ರೈಫಲ್, ಒಂದು ಗ್ರೆನೇಡ್ ಮತ್ತು ಎರಡು ಅತ್ಯಾಧುನಿಕ ಪಿಸ್ತೂಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪೊಲೀಸ್ ಆಯುಕ್ತ ರಾಕೇಶ್ ಅಸ್ತಾನಾ ಅವರ ಮೇಲ್ವಿಚಾರಣೆಯಲ್ಲಿ ವಿಶೇಷ ಘಟಕವು ಈ ಕಾರ್ಯಾಚರಣೆ ನಡೆಸಿತ್ತು. ಆರೋಪಿಯ ವಿರುದ್ಧ ಕಾನೂನುಬಾಹಿರ ಚಟುವಟಿಕೆ (ತಡೆ) ಕಾಯ್ದೆ, ಸ್ಫೋಟಕ ಕಾಯ್ದೆ, ಶಸ್ತ್ರಾಸ್ತ್ರ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆಯ ಇತರ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಲಾಗಿದೆ.



ಶಂಕಿತ ಪಾಕಿಸ್ತಾನಿ ಭಯೋತ್ಪಾದಕನನ್ನು ದೆಹಲಿಯ ಪಟಿಯಾಲ ಹೌಸ್ ಕೋರ್ಟ್‌ಗೆ ಮಂಗಳವಾರ ಕರೆತರಲಾಯಿತು–ಪಿಟಿಐ ಚಿತ್ರ

ಅಶ್ರಫ್ ವಿವಿಧ ಹೆಸರುಗಳಲ್ಲಿ ಹತ್ತಾರು ನಕಲಿ ಗುರುತಿನ ಚೀಟಿಗಳನ್ನು ಮಾಡಿಸಿಕೊಂಡಿದ್ದಾನೆ. ಪಾಸ್‌ಪೋರ್ಟ್ ಸಹ ಮಾಡಿಸಿಕೊಂಡಿದ್ದು, ಅದನ್ನು ಬಳಸಿ ಥಾಯ್ಲೆಂಡ್ ಮತ್ತು ಸೌದಿ ಅರೇಬಿಯಾಕ್ಕೆ ಹೋಗಿ ಬಂದಿದ್ದಾನೆ. ತಾನೊಬ್ಬ 'ಪೀರ್ ಬಾಬಾ' (ವಿದ್ವಾಂಸ) ಎಂದು ಹೇಳಿಕೊಂಡಿದ್ದ ಅಶ್ರಫ್ ಗಾಜಿಯಾಬಾದ್‌ನ ವೈಶಾಲಿಯ ಮಹಿಳೆಯನ್ನು ಮದುವೆಯಾಗಿದ್ದ.

ಬಾಂಗ್ಲಾದೇಶದಿಂದ ಸಿಲಿಗುರಿ ಗಡಿ ಮುಖಾಂತರ ಅಶ್ರಫ್ ಭಾರತಕ್ಕೆ ಪ್ರವೇಶಿಸಿದ್ದಾನೆ. ಮೊದಲಿಗೆ ಅಜ್ಮೀರ್‌ಗೆ ತೆರಳಿ, ಅಲ್ಲಿನ ಸ್ಥಳೀಯ ಮಸೀದಿಯ ಮೌಲ್ವಿಯ ಸ್ನೇಹ ಸಂಪಾದಿಸಿದ್ದ. 2006ರಲ್ಲಿ ಮೌಲ್ವಿ ಜತೆ ದೆಹಲಿಗೆ ಭೇಟಿ ನೀಡಿದ್ದ. ಅಲ್ಲಿ ಮೌಲ್ವಿಯ ಸಂಬಂಧಿಕರ ವಿಶ್ವಾಸ ಗಳಿಸಿ, ಅವರ ಗುರುತಿನ ಚೀಟಿಗಳನ್ನು ಬಳಸಿಕೊಂಡಿದ್ದಾನೆ ಎಂದು ತಿಳಿದುಬಂದಿದೆ.

2004ರಲ್ಲಿ ಪಾಕಿಸ್ತಾನದ ನಾಸಿರ್ ಎಂಬಾತನಿಂದ ತರಬೇತಿ ಪಡೆದಿದ್ದ. ಭಾರತದಲ್ಲಿ ಗುಪ್ತವಾಗಿ ಕಾರ್ಯಾಚರಣೆ ನಡೆಸುವಂತೆ ಸೂಚನೆ ಪಡೆದಿದ್ದ. ದೇಶದಲ್ಲಿ ಹಬ್ಬಗಳ ವೇಳೆ ಐಎಸ್‌ಐ ಪರವಾಗಿ ವಿಧ್ವಂಸಕ ಕೃತ್ಯಗಳನ್ನು ಎಸಗಲು ನಿರ್ದೇಶನ ಪಡೆದಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

> ಸಾಲು ಹಬ್ಬಗಳ ಆರಂಭಕ್ಕೂ ಮುನ್ನ ವಿಶೇಷ ಘಟಕವು ಒಳ್ಳೆಯ ಬೇಟೆಯಾಡಿದೆ. ನಮ್ಮ ತಂಡವು ಒಂದು ದೊಡ್ಡ ಭಯೋತ್ಪಾದಕ ಸಂಚನ್ನು ವಿಫಲಗೊಳಿಸಿದೆ
> **ರಾಕೇಶ್ ಅಸ್ತಾನಾ,** ಪೊಲೀಸ್ ಆಯುಕ್ತ

ವಿಧ್ವಂಸಕ ಕೃತ್ಯಗಳಲ್ಲಿ ಭಾಗಿ

ಗುಪ್ತ ಘಟಕದ ಕಾರ್ಯಾಚರಣೆಯ (ಸ್ಲೀಪರ್ ಸೆಲ್) ಭಾಗವಾಗಿ ಕೆಲಸ ಮಾಡುತ್ತಿದ್ದ ಶಂಕಿತ ಉಗ್ರನು ದೇಶದ ಹಲವಾರು ಭಾಗಗಳಲ್ಲಿ ವಿಧ್ವಂಸಕ ಚಟುವಟಿಕೆಗಳನ್ನು ಆಯೋಜಿಸುತ್ತಿದ್ದ ಎಂದು ಡಿಸಿಪಿ (ವಿಶೇಷ ಘಟಕ) ಪ್ರಮೋದ್ ಕುಶ್ವಾಹ ತಿಳಿಸಿದ್ದಾರೆ. ಐಎಸ್‌ಐನಿಂದ ತರಬೇತಿ ಪಡೆದಿರುವ ಅಶ್ರಫ್, ಕಾಶ್ಮೀರ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ವಿಧ್ವಂಸಕ ಕೃತ್ಯದಲ್ಲಿ ಭಾಗಿಯಾಗಿದ್ದನ್ನು ಒಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಾಲಾ ಆಡಳಿತ ಮಂಡಳಿಗಳಿಂದ ಬಾಕಿ ವಸೂಲಿ

'ಶುಲ್ಕ: ಕಾಲಾವಕಾಶ ನೀಡಿಕೆ ಪರಿಶೀಲಿಸಿ'

ನವದೆಹಲಿ: 'ವಿದ್ಯಾರ್ಥಿಗಳ ಶುಲ್ಕ ಪಾವತಿ ಮಾಡಲು ಪೋಷಕರು ಕಾಲಾವಕಾಶ ಕೇಳಿದರೆ, ಸಹಾನುಭೂತಿಯಿಂದ ಅದನ್ನು ಪರಿಶೀಲಿಸಿ; ಬೇಡಿಕೆಯು ನ್ಯಾಯಯುತ ಅಸಿದರೆ ಹೆಚ್ಚಿನ ಸಮಯಾವಕಾಶ ನೀಡುವುದನ್ನು ಶಾಲೆಗಳು ಪರಿಗಣಿಸಬಹುದು' ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ. ಅದೇ ರೀತಿ, ಶುಲ್ಕ ಬಾಕಿ ಉಳಿಸಿಕೊಂಡಿರುವ ಪೋಷಕರಿಂದ ಶುಲ್ಕವನ್ನು ವಸೂಲಿ ಮಾಡಲು ಅಗತ್ಯ ಕ್ರಮವನ್ನೂ ತೆಗೆದುಕೊಳ್ಳಬಹುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

> ಶಾಲೆಗಳು ಬೇಡಿಕೆ ಇಡುತ್ತಿರುವ ಮೊತ್ತವು, ಕಾನೂನಿನ ಅಡಿ ಸೂಚಿತ ಮೊತ್ತಕ್ಕಿಂತ ಹೆಚ್ಚಾಗಿದ್ದರೆ ವಿದ್ಯಾರ್ಥಿಗಳ ಪೋಷಕರು ಸಂಬಂಧಿತ ಪ್ರಾಧಿಕಾರಗಳಿಗೆ ದೂರು ನೀಡಬಹುದು
> **ಸುಪ್ರೀಂ ಕೋರ್ಟ್**

ರಾಜಸ್ಥಾನದ ಪ್ರೋಗ್ರೆಸ್ಸಿವ್ ಸ್ಕೂಲ್ ಅಸೋಸಿಯೇಷನ್ ಮತ್ತು ರಾಜಸ್ಥಾನ ಸರ್ಕಾರದ ನಡುವಣ ಮೊಕದ್ದಮೆಗೆ ಸಂಬಂಧಿಸಿದಂತೆ ಮೇ 3ರಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು.

'ಶುಲ್ಕ ಪಾವತಿ ಮಾಡದ ವಿದ್ಯಾರ್ಥಿಗಳನ್ನು ಶಾಲೆಯಿಂದ ಕೈಬಿಡುವಂತಿಲ್ಲ. ವಿದ್ಯಾರ್ಥಿಗಳ ಫಲಿತಾಂಶವನ್ನು ತಡೆ ಹಿಡಿಯುವಂತಿಲ್ಲ' ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಆದರೆ ಶುಲ್ಕ ವಸೂಲಿ ಮಾಡುವ ಉದ್ದೇಶದಿಂದ ಯಾವುದೇ ಕ್ರಮ ತೆಗೆದುಕೊಳ್ಳುವುದನ್ನು ಸುಪ್ರೀಂ ಕೋರ್ಟ್ ನಿರ್ಬಂಧಿಸಿರಲಿಲ್ಲ. ಈ ಬಗ್ಗೆ ಸ್ಪಷ್ಟನೆ ಕೇಳಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ಎ.ಎಂ.ಖಾನ್‌ವಿಲ್ಕರ್ ಮತ್ತು ಸಿ.ಟಿ.ರವಿಕುಮಾರ್ ಅವರಿದ್ದ ಪೀಠವು ಈ ಆದೇಶ ನೀಡಿದೆ.

ರೈತ ಸಂಘಟನೆಗಳ ಕಾರ್ಯಕ್ರಮದಲ್ಲಿ ಭಾರಿ ಜನಸ್ತೋಮ: ಸರ್ಕಾರದ ವಿರುದ್ಧ ಆಕ್ರೋಶ

ಲಖಿಂಪುರ: ಮೃತ ರೈತರಿಗೆ ಅಂತಿಮ ನಮನ

ಲಖಿಂಪುರ-ಖೇರಿ (ಪಿಟಿಐ): ವಾಹನ ಹರಿದು ಮೃತಪಟ್ಟ ನಾಲ್ವರು ರೈತರು ಮತ್ತು ಒಬ್ಬ ಪತ್ರಕರ್ತನಿಗೆ ಅಂತಿಮ ನಮನ ಸಲ್ಲಿಸಲು ರೈತ ಸಂಘಟನೆಗಳು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರೂ ಇದ್ದರು.

ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಭಾರತೀಯ ಕಿಸಾನ್ ಯೂನಿಯನ್ ಮುಖಂಡರಾದ ರಾಕೇಶ್ ಟಿಕಾಯತ್, ದರ್ಶನ್ ಸಿಂಗ್ ಪಾಲ್, ಜೋಗಿಂದರ್ ಸಿಂಗ್ ಉಗ್ರಹಾನ್, ಧರ್ಮೇಂದ್ರ ಮಲಿಕ್, ಸ್ಥಳೀಯ ರೈತ ಸಂಘಟನೆಗಳ ಮುಖಂಡರು ಅಂತಿಮ ನಮನ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಉತ್ತರ ಪ್ರದೇಶ, ಉತ್ತರಾಖಂಡ, ಪಂಜಾಬ್, ಹರಿಯಾಣ ಮತ್ತು ದೇಶದ ಇತರ ಭಾಗಗಳಿಂದಲೂ ರೈತರು ಮತ್ತು ಇತರರು ಲಖಿಂಪುರ-ಖೇರಿಗೆ ಬಂದಿದ್ದರು.

ಪ್ರಿಯಾಂಕಾ ಮತ್ತು ಕಾಂಗ್ರೆಸ್‌ನ ಇತರ ಮುಖಂಡರು ಮಧ್ಯಾಹ್ನ ಒಂದು ಗಂಟೆಯ ಹೊತ್ತಿಗೆ ಸ್ಥಳಕ್ಕೆ ತಲುಪಿದರು. ಸಮಾಜವಾದಿ ಪಕ್ಷದ ಮುಖಂಡರಾದ ರಾಂಪಾಲ್ ಸಿಂಗ್ ಯಾದವ್. ಡಾ. ಆರ್.ಎ. ಉಸ್ಮಾನಿ ಸ್ಥಳಕ್ಕೆ ತಲುಪಿದ್ದರು. ಮೊದಲೇ ಘೋಷಿಸಿದ್ದಂತೆ ರಾಜಕೀಯ ಪಕ್ಷಗಳ ಮುಖಂಡರಿಗೆ ವೇದಿಕೆಯಲ್ಲಿ ಅವಕಾಶ ಕೊಟ್ಟಿಲ್ಲ.

ಆದರೆ, ಅಂತಿಮ ನಮನ ಕಾರ್ಯಕ್ರಮಕ್ಕೆ ಬಂದದ್ದಕ್ಕೆ ಮತ್ತು ಕೃಷಿ ಕಾಯ್ದೆಗಳ ವಿರುದ್ಧದ ಪ್ರತಿಭಟನೆಗೆ ಬೆಂಬಲ ಕೊಟ್ಟದ್ದಕ್ಕೆ ಪ್ರಿಯಾಂಕಾ ಅವರಿಗೆ ರೈತ ನಾಯಕರು ಕೃತಜ್ಞತೆ ಸಲ್ಲಿಸಿದರು.

ಮೃತ ರೈತರ ಕುಟುಂಬ ಸದಸ್ಯರು, ಪತ್ರಕರ್ತ ರಾಮನ್ ಕಶ್ಯಪ್ ಅವರ ಸಹೋದರ ಮತ್ತು ಮಗಳು ಮೃತರ ಫೋಟೊಗಳನ್ನು ಹಿಡಿದು ವೇದಿಕೆಯಲ್ಲಿ ಇದ್ದರು. ಕಾರ್ಯಕ್ರಮ ನಡೆದ ಸ್ಥಳದಲ್ಲಿ ಭಾರಿ ಭದ್ರತೆಯ ವ್ಯವಸ್ಥೆ ಮಾಡಲಾಗಿತ್ತು.

ಲಖನೌ ಪೊಲೀಸ್ ಆಯುಕ್ತ, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ, ಪೊಲೀಸ್ ಮಹಾ ನಿರೀಕ್ಷಕರು ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳು ತಿಕೋನಿಯಾದಲ್ಲಿಯೇ ಇದ್ದರು. ಪೊಲೀಸ್ ಮತ್ತು ಅರೆಸೇನಾ ಪಡೆಗಳನ್ನು ಭದ್ರತೆಗೆ ನಿಯೋಜಿಸಲಾಗಿತ್ತು.

ಕೇಂದ್ರ ಸಚಿವ ಅಜಯ್ ಮಿಶ್ರಾ ಮಗ ಆಶಿಶ್ ಮಿಶ್ರಾ ಅವರು ಚಲಾಯಿಸಿದ್ದರು ಎಂದು ಹೇಳಲಾದ ಕಾರು ಹರಿದು ನಾಲ್ವರು ಮತ್ತು ನಂತರದ ಹಿಂಸಾಚಾರದಲ್ಲಿ ನಾಲ್ವರು ಮೃತಪಟ್ಟ ಸ್ಥಳಕ್ಕೆ ಸಮೀಪದಲ್ಲಿಯೇ ಅಂತಿಮ ನಮನ ಕಾರ್ಯಕ್ರಮ ನಡೆಯಿತು. ಇದೇ ಮೂರರಂದು ಹಿಂಸಾಚಾರ ನಡೆದಿತ್ತು.

ಅಜಯ್ ಮಿಶ್ರಾ ಅವರನ್ನು ವಜಾ ಮಾಡದ ಕೇಂದ್ರ ಸರ್ಕಾರದ ವಿರುದ್ಧ ರೈತ ಮುಖಂಡರು ಹರಿಹಾಯ್ದರು. ಆರೋಪಿ ಆಶಿಶ್ ಮಿಶ್ರಾ ಅವರನ್ನು ಉತ್ತರ ಪ್ರದೇಶ ಸರ್ಕಾರವು ರಕ್ಷಿಸುತ್ತಿದೆ. ಘಟನೆ ಜರುಗಿ ಆರು ದಿನಗಳ ಬಳಿಕ ಅವರನ್ನು ಬಂಧಿಸಲಾಯಿತು ಎಂದು ರಾಕೇಶ್ ಟಿಕಾಯತ್ ಹೇಳಿದ್ದಾರೆ. ಸಚಿವರನ್ನು ವಜಾ ಮಾಡದಿದ್ದರೆ ದೇಶವ್ಯಾಪಿ ಚಳವಳಿ ನಡೆಸುವುದಾಗಿಯೂ ಅವರು ಎಚ್ಚರಿಕೆ ನೀಡಿದ್ದಾರೆ.



'ಅಂತಿಮ ನಮನ' ಕಾರ್ಯಕ್ರಮದಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು –ಎಎಫ್‌ಪಿ ಚಿತ್ರ

ಶರಣಾಗತಿ ಅರ್ಜಿ

ಆಶಿಶ್ ಮಿಶ್ರಾ ಸ್ನೇಹಿತ ಅಂಕಿತ್ ದಾಸ್, ಜಿಲ್ಲಾ ನ್ಯಾಯಾಲಯದಲ್ಲಿ ಮಂಗಳವಾರ ಶರಣಾಗತಿ ಅರ್ಜಿ ಸಲ್ಲಿಸಿದ್ದಾರೆ. ರೈತರ ಮೇಲೆ ಹರಿಸಿದ ವಾಹನದಲ್ಲಿ ಅಂಕಿತ್ ಕೂಡ ಇದ್ದುದಾಗಿ ಆರೋಪಿಸಲಾಗಿದ್ದು, ಘಟನೆ ನಡೆದ ದಿನದಿಂದ ನಾಪತ್ತೆಯಾಗಿದ್ದರು.

ಲಖಿಂಪುರ ಖೇರಿಯಲ್ಲಿನ ಜಿಲ್ಲಾ ಮುಖ್ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಶರಣಾಗತಿ ಅರ್ಜಿ ಸಲ್ಲಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ಪೊಲೀಸರಿಂದ ವರದಿ ಕೇಳಿದೆ ಎಂದು ಮೂಲಗಳು ತಿಳಿಸಿವೆ.

ರಾಷ್ಟ್ರಪತಿಗೆ ಇಂದು ಮೊರೆ

ನವದೆಹಲಿ: ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ನೇತೃತ್ವದಲ್ಲಿ ಪಕ್ಷದ ನಿಯೋಗವೊಂದು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಬುಧವಾರ ಭೇಟಿಯಾಗಿ, ಲಖಿಂಪುರ-ಖೇರಿ ಪ್ರಕರಣದಲ್ಲಿ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಿದೆ. ಪ್ರಕರಣದ ಆರೋಪಿ ಆಶಿಶ್ ಮಿಶ್ರಾ ತಂದೆ, ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್ ಮಿಶ್ರಾ ಅವರನ್ನು ವಜಾಗೊಳಿಸಲು ಆಗ್ರಹಿಸಲಿದೆ. ರಾಷ್ಟ್ರಪತಿ ಜತೆಗಿನ ಭೇಟಿ ಬೆಳಿಗ್ಗೆ 11.30ಕ್ಕೆ ನಡೆಯಲಿದೆ.

ಆಶಿಶ್ ಮಿಶ್ರಾ ವಿರುದ್ಧ ತನಿಖೆ ಶುರು

ಆಶಿಶ್ ಮಿಶ್ರಾ ಅವರನ್ನು ಲಖಿಂಪುರ-ಖೇರಿಯ ಅಪರಾಧ ತನಿಖಾ ವಿಭಾಗದ ಕಚೇರಿಗೆ ಕರೆದೊಯ್ದು ಮಂಗಳವಾರ ತನಿಖೆ ನಡೆಸಲಾಗಿದೆ. ಅವರನ್ನು ಮೂರು ದಿನ ಪೊಲೀಸ್ ವಶಕ್ಕೆ ಒಪ್ಪಿಸಿ ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಸೋಮವಾರ ಆದೇಶಿಸಿದ್ದರು. ಆಶಿಶ್ ಅವರಿಗೆ ಕಿರುಕುಳ ನೀಡಬಾರದು ಮತ್ತು ಅವರ ವಕೀಲರ ಸಮ್ಮುಖದಲ್ಲಿಯೇ ತನಿಖೆ ನಡೆಸಬೇಕು ಎಂದು ನ್ಯಾಯಾಧೀಶರು ಹೇಳಿದ್ದರು. ಆಶಿಶ್ ಅವರನ್ನು ಶನಿವಾರ ಬಂಧಿಸಲಾಗಿತ್ತು.

ತಮ್ಮ ತಂದೆ ಅಜಯ್ ಮಿಶ್ರಾ ಅವರು ಪ್ರತಿನಿಧಿಸುತ್ತಿರುವ ಖೇರಿ ಲೋಕಸಭಾ ಕ್ಷೇತ್ರದ ರಾಜಕೀಯ ಚಟುವಟಿಕೆಗಳ ಉಸ್ತುವಾರಿಯನ್ನು 35 ವರ್ಷದ ಆಶಿಶ್ ನೋಡಿಕೊಳ್ಳುತ್ತಿದ್ದರು. ಉತ್ತರ ಪ್ರದೇಶ ವಿಧಾನಸಭೆಗೆ ಕೆಲವೇ ತಿಂಗಳಲ್ಲಿ ನಡೆಯಲಿರುವ ಚುನಾವಣೆಯಲ್ಲಿ ನಿಘಾಸನ್ ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿ ಟಿಕೆಟ್ ಪಡೆಯಲು ಅವರು ಪ್ರಯತ್ನಿಸುತ್ತಿದ್ದರು.

ಇನ್ನೊಬ್ಬ ಆರೋಪಿ ಸೆರೆ

ಪ್ರಕರಣಕ್ಕೆ ಸಂಬಂಧಿಸಿ ಶೇಖರ್ ಭಾರ್ತಿ ಎಂಬ ಇನ್ನೊಬ್ಬ ಆರೋಪಿಯನ್ನು ಬಂಧಿಸಲಾಗಿದೆ. ಈ ಆರೋಪಿಯನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಅವರನ್ನು 14 ದಿನ ಪೊಲೀಸ್ ವಶಕ್ಕೆ ಒಪ್ಪಿಸುವಂತೆ ಕೋರಲಾಗಿದೆ. ಈ ಅರ್ಜಿಯ ವಿಚಾರಣೆ ಬುಧವಾರ ನಡೆಯಲಿದೆ ಎಂದು ತನಿಖಾಧಿಕಾರಿ ಎಸ್.ಪಿ. ಯಾದವ್ ತಿಳಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆಯು ನಾಲ್ಕಕ್ಕೆ ಏರಿದೆ.



ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಮಂಗಳವಾರ ಉತ್ತರಪ್ರದೇಶದ ಕಾನ್ಪುರದಲ್ಲಿ 'ಸಮಾಜವಾದಿ ವಿಜಯ್ ರಥಯಾತ್ರೆ'ಗೆ ಚಾಲನೆ ನೀಡಿದರು.

ರಥಯಾತ್ರೆ ಆರಂಭಿಸಿದ ಅಖಿಲೇಶ್

ಕಾನ್ಪುರ/ಮಥುರಾ (ಪಿಟಿಐ): ವಿಧಾನಸಭೆಯ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ 'ಮಿಷನ್ 2022' ಗುರಿ ಸಾಧನೆಗಾಗಿ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಇಲ್ಲಿ 'ರಥಯಾತ್ರೆ' ಆರಂಭಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ವಿರುದ್ಧ ಕಟು ವಾಗ್ದಾಳಿ ನಡೆಸಿದ ಅವರು, ಬಿಜೆಪಿ ಈಗಾಗಲೇ 'ರೈತರನ್ನು ಹತ್ತಿಕ್ಕಿದೆ'.ಮರಳಿಅಧಿಕಾರಕ್ಕೆಬಂದರೆ'ಸಂವಿಧಾನವನ್ನೂ ಹತ್ತಿಕ್ಕಲಿದೆ' ಎಂದರು.

ಉತ್ತರ ಪ್ರದೇಶದ ಕಾನ್ಪುರದಿಂದ ಅಖಿಲೇಶ್ ಯಾದವ್ ಆರಂಭಿಸಿದ 'ಸಮಾಜವಾದಿ ವಿಜಯ್ ರಥಯಾತ್ರೆ'ಯು 403 ವಿಧಾನಸಭೆ ಕ್ಷೇತ್ರಗಳಲ್ಲಿಯೂ ಚುನಾವಣೆಯ ಪೂರ್ವದಲ್ಲಿ ಸಂಚರಿಸಲಿದೆ.

ಯಾತ್ರೆಗೆ ಚಾಲನೆ ನೀಡುವ ಮುನ್ನ ಅಖಿಲೇಶ್ ತಮ್ಮ ತಂದೆ ಮುಲಾಯಂ ಸಿಂಗ್ ಆಶೀರ್ವಾದ ಪಡೆದರು. ನೋಟು ರದ್ದತಿ ಸಂದರ್ಭದಲ್ಲಿ ಬ್ಯಾಂಕ್‌ನ ಹೊರಗೆ ತಾಯಿ ಸಾಲಿನಲ್ಲಿ ನಿಂತಿದ್ದಾಗ ಜನಿಸಿದ್ದ ಬಾಲಕಿ 'ಖಜಾಂಚಿ'ಯು ಯಾತ್ರೆಗೆ ಚಾಲನೆ ನೀಡಿದಳು. ಮರ್ಸಿಡಿಸ್ ಬಸ್‌ಗೆ ರಥದ ಸ್ವರೂಪವನ್ನು ನೀಡಲಾಗಿದೆ.

ಯಾತ್ರೆಯು ಕಾನ್ಪುರ, ಕಾನ್ಪುರ ದೆಹತ್, ಹಮಿರ್‌ಪುರ, ಜಲೌನ್‌ಗೆ ಮೊದಲ ಹಂತದಲ್ಲಿ ತೆರಳಲಿದ್ದು, ಬಿಜೆಪಿ ಸರ್ಕಾರದ ಭ್ರಷ್ಟಾಚಾರ ಮತ್ತು ಹತ್ತಿಕ್ಕುವ ನೀತಿಗಳ ವಿರುದ್ಧ ಜಾಗೃತಿ ಮೂಡಿಸುವ ಉದ್ದೇಶವನ್ನು ಹೊಂದಿದೆ.

ಇನ್ನೊಂದೆಡೆ, ಅಖಿಲೇಶ್ ಯಾದವ್ ಅವರ ಚಿಕ್ಕಪ್ಪ, ಪ್ರಗತಿಶೀಲ ಸಮಾಜವಾದಿ ಪಕ್ಷದ ಮುಖ್ಯಸ್ಥ ಶಿವಪಾಲ್ ಯಾದವ್ ಅವರು, ಮಥುರಾದಿಂದ ಸಾಮಾಜಿಕ ಪರಿವರ್ತನಾ ಯಾತ್ರೆಯನ್ನು ಸೋಮವಾರ ಆರಂಭಿಸಿದ್ದಾರೆ.

ದೇಶಿಯ ವಿಮಾನಯಾನ ಸೇವೆ 18ರಿಂದ ನಿರ್ಬಂಧದ ತೆರವು

ನವದೆಹಲಿ (ಪಿಟಿಐ): ಸಾಮರ್ಥ್ಯದ ನಿರ್ಬಂಧ ಇಲ್ಲದೆಯೇ ದೇಶೀಯ ವಿಮಾನಯಾನ ಸಂಸ್ಥೆಗಳು ಅಕ್ಟೋಬರ್ 18ರಿಂದ ಸೇವೆಯನ್ನು ಆರಂಭಿಸಬಹುದಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ದೇಶೀಯ ವಿಮಾನಗಳ ಸಂಚಾರ ಸ್ಥಿತಿಗತಿ ಮತ್ತು ಪ್ರಯಾಣಿಕರ ಬೇಡಿಕೆಯನ್ನು ಪರಿಗಣಿಸಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯವು ಮಂಗಳವಾರ ಪ್ರಕಟಿಸಿದೆ.

ಅಕ್ಟೋಬರ್ 9ರಂದು ವಿವಿಧ ವಿಮಾನಯಾನ ಸಂಸ್ಥೆಗಳು 2,340 ವಿಮಾನಗಳ ಸಂಚಾರ ನಡೆಸಿದ್ದು, ಇದು ಅವುಗಳ ಒಟ್ಟು ಸಾಮರ್ಥ್ಯದ ಶೇ 71.5ರಷ್ಟಾಗಿತ್ತು.

ಶಸ್ತ್ರಾಸ್ತ್ರ ಸಾಗಣೆಗೆ ಡ್ರೋನ್ ಬಳಕೆ:ಎಲ್‌ಇಟಿ ಸದಸ್ಯನ ಬಂಧನ

ಜಮ್ಮು (ಪಿಟಿಐ): ಅಂತರರಾಷ್ಟ್ರೀಯ ಗಡಿಗೆ ಹೊಂದಿಕೊಂಡಿರುವ ಗ್ರಾಮದಲ್ಲಿ, ಡ್ರೋನ್ ಅನ್ನು ಬಳಸಿ ಶಸ್ತ್ರಾಸ್ತ್ರಗಳನ್ನು ಸಾಗಣೆ ಮಾಡಿದ್ದ ಪ್ರಕರಣದ ಸಂಬಂಧ ಲಷ್ಕರ್ ಎ ತೊಯ್ಬಾ (ಎಲ್‌ಇಟಿ) ಸಂಘಟನೆಯ ಸದಸ್ಯನೊಬ್ಬನನ್ನು ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತನನ್ನು ದಕ್ಷಿಣ ಕಾಶ್ಮೀರದ ಅನಂತ್‌ನಾಗ್ ಜಿಲ್ಲೆಯ ವೆರಿನಾಗ್‌ನ ನಿವಾಸಿ ಇರ್ಫಾನ್ ಅಹ್ಮದ್ ಭಟ್ ಎಂದು ಗುರುತಿಸಲಾಗಿದೆ. ಅಂತರರಾಷ್ಟ್ರೀಯ ಗಡಿಗೆ 6 ಕಿ.ಮೀ. ದೂರದಲ್ಲಿರುವ ಸೌಂಜನಾ ಗ್ರಾಮದ ವ್ಯಾಪ್ತಿಯಲ್ಲಿ ಅಕ್ಟೋಬರ್ 2ರಂದು ಶಸ್ತ್ರಾಸ್ತ್ರಗಳನ್ನು ವಶಕ್ಕೆ ಪಡೆಯಲಾಗಿತ್ತು ಎಂದು ಎಡಿಜಿಪಿ ಮುಖೇಶ್ ಸಿಂಗ್ ತಿಳಿಸಿದರು.

ಎ.ಕೆ ಅಸಾಲ್ಟ್ ರೈಫಲ್, ಮೂರು ಮ್ಯಾಗಜಿನ್‌ಗಳು, 30 ಗುಂಡುಗಳು, ಸೂಕ್ಷ್ಮ ದರ್ಶಕವನ್ನು ಸ್ಥಳದಿಂದ ಜಪ್ತಿ ಮಾಡಲಾಗಿತ್ತು. ಅಲ್ಲದೆ ಐಪಿಸಿ, ಶಸ್ತ್ರಾಸ್ತ್ರ ನಿಯಂತ್ರಣ ಕಾಯ್ದೆ, ಕಾನೂನುಬಾಹಿರ ಚಟುವಟಿಕೆ ನಿಯಂತ್ರಣ ಕಾಯ್ದೆಯ ವಿವಿಧ ಸೆಕ್ಷನ್‌ಗಳಡಿ ಪ್ರಕರಣವನ್ನು ದಾಖಲಿಸಲಾಗಿತ್ತು.

ಪಾಕಿಸ್ತಾನ ಗಡಿ ಭಾಗದಿಂದ ಡ್ರೋನ್ ಅನ್ನು ಬಳಸಿ ನಡೆಸುತ್ತಿರುವ ಚಟುವಟಿಕೆಗಳು ಇತ್ತೀಚಿನ ದಿನಗಳಲ್ಲಿ ಗಣನೀಯವಾಗಿ ಏರಿವೆ. ಈ ಬೆಳವಣಿಗೆಯು ಭದ್ರತಾ ಪಡೆಗಳಿಗೆ ತೀವ್ರ ರೀತಿಯಲ್ಲಿ ಸವಾಲು ಒಡ್ಡಿದೆ.

ಉಲ್ಲಂಘನೆ ಹೆಸರಿನಲ್ಲಿ ದೇಶದ ವರ್ಚಸ್ಸಿಗೆ ಧಕ್ಕೆ: ಆಕ್ಷೇಪ

ಮಾನವ ಹಕ್ಕು: ಆಯ್ದ ವ್ಯಾಖ್ಯಾನಕ್ಕೆ ಅತೃಪ್ತಿ

ನವದೆಹಲಿ (ಪಿಟಿಐ): ಮಾನವ ಹಕ್ಕುಗಳ ಬಗ್ಗೆ ತಮ್ಮದೇ ಆದ 'ಆಯ್ದ ವ್ಯಾಖ್ಯಾನ' ಮಾಡುವವರ ಬಗ್ಗೆ ಕಿಡಿ ಕಾರಿರುವ ಪ್ರಧಾನಿ ನರೇಂದ್ರ ಮೋದಿ, ಮಾನವ ಹಕ್ಕುಗಳ ಉಲ್ಲಂಘನೆಯನ್ನು ರಾಜಕೀಯ ಲಾಭ-ನಷ್ಟದ ಲೆಕ್ಕಾಚಾರದಿಂದ ನೋಡುವುದು ಮಾನವ ಹಕ್ಕುಗಳಿಗಷ್ಟೇ ಅಲ್ಲ ಪ್ರಜಾಪ್ರಭುತ್ವಕ್ಕೂ ಅಪಾಯಕಾರಿ ಎಂದಿದ್ದಾರೆ.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ (ಎನ್‌ಎಚ್‌ಆರ್‌ಸಿ) 28ನೇ ಸಂಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಮಂಗಳವಾರ ಮಾತನಾಡಿದರು.

ಘಟನೆಗಳು ಒಂದೇ ತೆರನಾಗಿ ಇದ್ದರೂ, ತಮ್ಮ ಹಿತಾಸಕ್ತಿಯ ಕಡೆಗೇ ಗಮನ ಇರುವ ಕೆಲವರು ಮಾನವ ಹಕ್ಕುಗಳನ್ನು ಭಿನ್ನವಾಗಿಯೇ ನೋಡುತ್ತಾರೆ. ಮಾನವ ಹಕ್ಕುಗಳ ಉಲ್ಲಂಘನೆ ಹೆಸರಿನಲ್ಲಿ ಕೆಲವರು ದೇಶದ ವರ್ಚಸ್ಸಿಗೂ ಧಕ್ಕೆ ತರುತ್ತಿದ್ದು, ಅಂಥವರ ಬಗ್ಗೆ ಜನರು ಎಚ್ಚರದಿಂದ ಇರಬೇಕು ಎಂದು ಮೋದಿ ಹೇಳಿದರು.

ಯಾವುದೇ ವ್ಯಕ್ತಿ ಅಥವಾ ಸಂಘಟನೆಯ ಹೆಸರನ್ನು ಅವರು ಉಲ್ಲೇಖಿಸಲಿಲ್ಲ.

ಅಡುಗೆ ಅನಿಲ, ಶೌಚಾಲಯ ಸೌಲಭ್ಯ, ವಿದ್ಯುತ್, ಬಡವರ ಮನೆಗಳಿಗೆ ವಿದ್ಯುತ್ ಸೌಕರ್ಯ ಒದಗಿಸುವ ಮೂಲಕ, ತಮ್ಮ ಸರ್ಕಾರವು ಜನರಿಗೆ ಅವರ ಹಕ್ಕುಗಳ ಬಗ್ಗೆ ಅರಿವು ಮೂಡಿಸಿದೆ ಎಂದು ಮೋದಿ ಹೇಳಿದರು.

ತ್ರಿವಳಿ ತಲಾಖ್ ವಿರುದ್ಧದ ಕಾನೂನು ಮಾಡುವ ಮೂಲಕ, ತಮ್ಮ ಸರ್ಕಾರವು ಮುಸ್ಲಿಂ ಮಹಿಳೆಯರಿಗೆ ಹೊಸ ಹಕ್ಕುಗಳನ್ನು ನೀಡಿದೆ ಎಂದರು. 26 ವಾರಗಳ ಮಾತೃತ್ವ ರಜೆ, ಅತ್ಯಾಚಾರ ಪ್ರಕರಣದಲ್ಲಿ ಕಠಿಣ ಶಿಕ್ಷೆಯ ಕಾಯ್ದೆ ರೂಪಿಸುವುದರೊಂದಿಗೆ ಮಹಿಳಾ ಸಬಲೀಕರಣಕ್ಕಾಗಿ ತಮ್ಮ ಸರ್ಕಾರದ ಕೊಡುಗೆಗಳನ್ನು ವಿವರಿಸಿದರು.

ಎನ್‌ಎಚ್‌ಆರ್‌ಸಿ ಅಧ್ಯಕ್ಷ, ನಿವೃತ್ತ ನ್ಯಾಯಮೂರ್ತಿ ಅರುಣ್ ಕುಮಾರ್ ಮಿಶ್ರಾ ಮಾತನಾಡಿ, 'ರಾಜಕೀಯ ಹಿಂಸೆ ಹಾಗೂ ಭಯೋತ್ಪಾದನೆಯನ್ನು ಸಮಾಜ ಸೇವಾ ಸಂಘಟನೆಗಳು ಹಾಗೂ ಮಾನವ ಹಕ್ಕುಗಳ ಹೋರಾಟಗಾರರು ಬಲವಾಗಿ ಖಂಡಿಸಬೇಕು. ಈ ವಿಷಯಗಳ ಬಗೆಗಿನ ಉದಾಸೀನತೆಯು ಮೂಲಭೂತವಾದಕ್ಕೆ ದಾರಿ ಮಾಡಿಕೊಡುತ್ತದೆ. ಹಾಗೂ ಇತಿಹಾಸ ನಮ್ಮನ್ನು ಎಂದಿಗೂ ಕ್ಷಮಿಸದು' ಎಂದು ಎಚ್ಚರಿಸಿದರು.

ದೇಶದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿರುವುದಾಗಿ ಹೊರಗಿನ ಶಕ್ತಿಗಳು ಸುಳ್ಳು ಆಪಾದನೆ ಮಾಡುವುದು ಸಾಮಾನ್ಯವಾಗಿದ್ದು, ಇದನ್ನು ವಿರೋಧಿಸಬೇಕು ಎಂದರು.

'ಜಮ್ಮು ಮತ್ತು ಕಾಶ್ಮೀರದಲ್ಲಿ ಹಾಗೂ ದೇಶದ ಈಶಾನ್ಯ ಭಾಗದಲ್ಲಿ ಶಾಂತಿ ಸ್ಥಾಪನೆಗಾಗಿ ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ದಣಿಯವರಿದ ಪ್ರಯತ್ನ ನಡೆಸಿದ್ದಾರೆ. ಹೊಸ ಯುಗ ಆರಂಭಿಸಿದ್ದಾರೆ' ಎಂದು ಶ್ಲಾಘಿಸಿದರು.


ಭಾರತವು ಜಾಗತಿಕವಾಗಿ ಬಲಾಢ್ಯ ರಾಷ್ಟ್ರವಾಗಿ, ಹೊಸ ಶಕ್ತಿಯಾಗಿ ಹೊಮ್ಮಿದ್ದು, ಇದರ ಹೆಗ್ಗಳಿಕೆ ದೇಶದ ಜನರಿಗೆ, ಸಂವಿಧಾನ ವ್ಯವಸ್ಥೆಗೆ ಹಾಗೂ ನಾಯಕತ್ವಕ್ಕೆ ಸಲ್ಲಬೇಕು ಎಂದರು.

ಕಾರ್ಯಕ್ರಮದಲ್ಲಿ ಗೃಹ ಸಚಿವ ಅಮಿತ್ ಶಾ ಉಪಸ್ಥಿತರಿದ್ದರು.

ಸಂಕ್ಷಿಪ್ತ ಸುದ್ದಿ

ಪ್ರಧಾನಿ ಸಲಹೆಗಾರರಾಗಿ ಅಮಿತ್ ಖರೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಸಲಹೆಗಾರರಾಗಿ ನಿವೃತ್ತ ಐಎಎಸ್ ಅಧಿಕಾರಿ ಅಮಿತ್ ಖರೆ ನೇಮಕಗೊಂಡಿದ್ದಾರೆ. ಜಾರ್ಖಂಡ್ ಕೇಡರ್‌ನ 1985ರ ಬ್ಯಾಚಿನ ಐಎಎಸ್ ಅಧಿಕಾರಿಯಾಗಿದ್ದ ಅಮಿತ್ ಖರೆ ಕೇಂದ್ರದ ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿಯಾಗಿ, ಇದೇ ವರ್ಷದ ಸೆಪ್ಟೆಂಬರ್ 30ರಂದು ನಿವೃತ್ತರಾಗಿದ್ದರು.



ಎಸ್‌ವಿಬಿಸಿ ಭಕ್ತಿ ವಾಹಿನಿ ಆರಂಭ

ಹೈದರಾಬಾದ್: ಶ್ರೀ ವೆಂಕಟೇಶ್ವರ ಭಕ್ತಿ ವಾಹಿನಿಯ ಕನ್ನಡ ಪ್ರಸಾರ ಮಂಗಳವಾರ ಆರಂಭವಾಯಿತು. ಇದರ ಹಿಂದಿ ಆವೃತ್ತಿಗೂ ಚಾಲನೆ ನೀಡಲಾಯಿತು. ತಿರುಮಲ ತಿರುಪತಿ ದೇವಸ್ಥಾನ ಈಗಾಗಲೇ ತೆಲುಗು, ತಮಿಳುಭಾಷೆಯಲ್ಲಿ ಎಸ್‌ವಿಬಿಸಿ ಚಾನಲ್ ಹೊಂದಿದೆ.

ಆಂಧ್ರಪ್ರದೇಶ ಮುಖ್ಯಮಂತ್ರಿ ಜಗನ್‌ಮೋಹನ್ ರೆಡ್ಡಿ ಅವರು ಕನ್ನಡ ಸೇರಿದಂತೆ ಎರಡು ನೂತನ ಚಾನಲ್‌ಗಳಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿ ಮಠದ ಸುಭುದೇಂದ್ರ ತೀರ್ಥ ಸ್ವಾಮೀಜಿ ಅವರು ಇದ್ದರು.

ಕನ್ನಡ ಚಾನಲ್‌ಗಾಗಿ ಮಾಜಿ ಶಾಸಕ ಟಿ.ಎ.ಶರವಣ ಅವರು ₹ 12 ಲಕ್ಷ ಮೌಲ್ಯದ ಕ್ಯಾಮೆರಾವನ್ನು ಕೊಡುಗೆ ನೀಡಿದ್ದಾರೆ. ಅಲ್ಲದೆ, ಅನಾಮಿಕ ಭಕ್ತರೊಬ್ಬರು ₹ 10 ಲಕ್ಷ ಅನ್ನು ಚಾನಲ್ ನಿರ್ವಹಣೆಗಾಗಿ ನೆರವು ನೀಡಿದ್ದಾರೆ.

'ಕಲಾಪಗಳಿಗೆ ಅಡ್ಡಿಪಡಿಸಲು ಅವಕಾಶವಿಲ್ಲ'

ನವದೆಹಲಿ (ಪಿಟಿಐ): 'ವಕೀಲರ ಸಂಘಗಳು ಕರೆಕೊಡುವ ಮುಷ್ಕರ ಅಥವಾ ಬಹಿಷ್ಕಾರದಿಂದಾಗಿ ವಕೀಲರು ನ್ಯಾಯಾಲಯಕ್ಕೆ ಹಾಜರಾಗಲು ನಿರಾಕರಿಸುವುದು ವೃತ್ತಿಪರತೆ ಅಲ್ಲ ಮತ್ತು ಇದೊಂದು ಅಸಹಜ ನಡವಳಿಕೆ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ವಕೀಲರು ನ್ಯಾಯಾಲಯದ ಅಧಿಕಾರಿಯಾಗಿದ್ದಾರೆ. ಸಮಾಜದಲ್ಲಿ ವಿಶೇಷ ಸ್ಥಾನಮಾನವನ್ನೂ ಹೊಂದಿದ್ದಾರೆ. ವಕೀಲರಿಗೆ ನ್ಯಾಯಾಲಯದ ವಿಚಾರಣೆಗೆ ಅಡ್ಡಿಪಡಿಸಲು ಮತ್ತು ತಮ್ಮ ಕಕ್ಷಿದಾರರ ಹಿತಾಸಕ್ತಿಯನ್ನು ಬಲಿಕೊಡಲು ಅವಕಾಶವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ರಾಜಸ್ಥಾನ ಹೈಕೋರ್ಟ್‌ನಲ್ಲಿ ವಕೀಲರು ಇದೇ ವರ್ಷದ ಸೆಪ್ಟೆಂಬರ್ 27 ರಂದು ಮುಷ್ಕರ ಹೂಡಿದ ಪ್ರಕರಣ ಆಲಿಸುವಾಗ ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಎ.ಎಸ್. ಬೋಪಣ್ಣ ಅವರಿರುವ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಜೈಪುರದಲ್ಲಿ ರಾಜಸ್ಥಾನದ ಹೈಕೋರ್ಟ್‌ನ ವಕೀಲರ ಸಂಘಕ್ಕೆ ಬಿಸಿಐ ನೋಟಿಸ್ ನೀಡಿದೆ ಎಂದು ಸುಪ್ರೀಂ ಕೋರ್ಟ್ ಬಾರ್ ಕೌನ್ಸಿಲ್ ಆಫ್ ಇಂಡಿಯಾ ಅಧ್ಯಕ್ಷ ಮನನ್ ಕುಮಾರ್ ಮಿಶ್ರಾ ಸಲ್ಲಿಸಿರುವ ಅರ್ಜಿಯನ್ನು ಪೀಠ ಆಲಿಸಿತು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

ಚಂದ್ರನ ಮೇಲೆ ಮಾನವರಿಗೆ ಇಂಟರ್‌ನೆಟ್ ಸೌಲಭ್ಯವನ್ನು ನೀಡುವುದು ಹೇಗೆ ಎಂದು ಯೋಚಿಸಿದ ಸ್ಟ್ಯಾನ್ ವಿಜ್ಞಾನಿಗಳು, 2013ರಲ್ಲಿ ಪ್ರಾಯೋಗಿಕವಾಗಿ ಎಲ್‌ಎಲ್‌ಸಿಡಿಯನ್ನು ಮಾಡಿದರು.



ಆಳ-ಅಗಲ
ಗಡಿಕೇಶ್ವಾರ: ಭೂಕಂಪನದ ಗಡಿಬಿಡಿ

₹750 ಕೋಟಿ ಅಘೋಷಿತ ಆದಾಯ ಪತ್ತೆ 3A

ರಾಜ್ಯದಲ್ಲಿ ವಿದ್ಯುತ್ ಕಡಿತ ಇಲ್ಲ: ಸಿ.ಎಂ 4

ಸೆನ್ಸೆಕ್ಸ್	ನಿಫ್ಟಿ	₹/$
60,284 ▲	17,991 ▲	75.52 ▼

ತರಕಾರಿ, ಆಹಾರ ಧಾನ್ಯ, ಅಡುಗೆ ಅನಿಲ ವೆಚ್ಚ ಗಗನಕ್ಕೆ

ಅಡುಗೆ ಮನೆಗೆ ಬೆಲೆ ಏರಿಕೆ ಬಿಸಿ

• ಎಸ್.ರವಿಪ್ರಕಾಶ್

ಬೆಂಗಳೂರು: ಪ್ರತಿ ತಿಂಗಳ ಕೊನೆಯಲ್ಲಿ ಮನೆಯಲ್ಲಿ ಆಹಾರ ಧಾನ್ಯಗಳ ಡಬ್ಬಿ ಖಾಲಿ ಖಾಲಿ. ಬಾಡಿದ, ಮುರುಟಿದ ತರಕಾರಿಗಳನ್ನು ಇಟ್ಟುಕೊಂಡೇ 'ಜಿಪುಣ'ತನದಿಂದ ಅಡುಗೆ ಬೇಯಿಸಬೇಕು. ಗ್ಯಾಸ್ ಸ್ಟೌ ಉರಿಸುವಾಗಲೂ ಯೋಚಿಸಬೇಕು. ಜೇಬೂ ಖಾಲಿ ಎಂಬ ಸ್ಥಿತಿಗೆ ಬಡ–ಮಧ್ಯಮ ವರ್ಗ ತಲುಪಿದೆ. ಅಡುಗೆ ಮನೆಗೆ ಬೆಲೆ ಏರಿಕೆಯ 'ಬೆಂಕಿ' ಬಿದ್ದಿದೆ!

ಕೋವಿಡ್ ಎರಡನೇ ಅಲೆಯ ಅಬ್ಬರ ಕಡಿಮೆ ಆಗಿದ್ದರೂ, ಅಗತ್ಯ ವಸ್ತುಗಳ ಬೆಲೆ ಏರಿಕೆ ಸೃಷ್ಟಿಸಿರುವ ತಲ್ಲಣದಿಂದ ಮನೆ– ಮನೆಗಳಲ್ಲಿ ದೈನಂದಿನ ಖರ್ಚು– ವೆಚ್ಚ ದುಬಾರಿಯಾಗಿದೆ. ತರಕಾರಿ, ದಿನಸಿ, ಅಡುಗೆ ಅನಿಲ, ಪೆಟ್ರೋಲ್/ ಡೀಸೆಲ್, ಖಾದ್ಯ ತೈಲಗಳ ಬೆಲೆ ಏರಿಕೆ ಗ್ರಾಹಕರ ಜೇಬು ಸುಡಲಾರಂಭಿಸಿದೆ. ಒಂದು ಕಡೆ ಮನೆ ಒಡೆಯನ ಆದಾಯ ಕುಸಿದಿದ್ದರೆ, ಇನ್ನೊಂದೆಡೆ ಖರ್ಚು ವಿಪರೀತ ಏರಿಕೆಯಾಗಿದೆ.

ಅಡುಗೆ ಅನಿಲ ಮತ್ತು ಪೆಟ್ರೋಲ್ ಬೆಲೆ ರಾಕೆಟ್‌ನಂತೆ ಗಗನಮುಖಿಯಾ–ಗಿದ್ದರೆ, ಕಳೆದ ಒಂದು ತಿಂಗಳಿಂದ ಸುರಿಯುತ್ತಿರುವ ಮಳೆಯಿಂದ


ಪ್ರಜಾವಾಣಿ ವಿಶೇಷ

> ಎಲ್ಲ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಕುಟುಂಬದ ತಿಂಗಳ ಬಜೆಟ್ ಕೂಡಾ ಏರಿಕೆ ಆಗಿದೆ. ಆದರೆ ಲಾಕ್‌ಡೌನ್‌ನಿಂದ ಮನೆಯವರ ವೇತನಕ್ಕೆ ಕತ್ತರಿ ಬಿದ್ದಿದೆ
>
> **ವಿದ್ಯಾ ಶ್ರೀನಿವಾಸ್**
> ಗೃಹಿಣಿ

ರಾಜ್ಯದಲ್ಲಿ ಬಹಳ ಕಡೆ ತರಕಾರಿ ಬೆಳೆಗಳು ನಾಶವಾಗಿವೆ. ಇದರಿಂದ ತರಕಾರಿ ಬೆಲೆಯಲ್ಲಿ ಭಾರಿ ಏರಿಕೆಯಾಗಿದೆ. ಟೊಮೆಟೊ ₹ 80, ಆಲೂಗಡ್ಡೆ ₹ 70, ಈರುಳ್ಳಿ ₹ 50, ನುಗ್ಗೆಕಾಯಿ ₹ 100ರಿಂದ ₹ 130, ಕ್ಯಾರೆಟ್ ₹ 80, ಬೀನ್ಸ್ ₹ 70 (ಪ್ರತಿ ಕಿ.ಲೋಗೆ) ಹೀಗೆ ಲಂಗು ಲಗಾಮು ಇಲ್ಲದೆ ಏರುತ್ತಿವೆ.

ಪೆಟ್ರೋಲ್ ದರ (ಪ್ರತಿ ಲೀಟರ್‌ಗೆ) ರಾಜ್ಯದ ಬೇರೆ ಬೇರೆ ನಗರಗಳಲ್ಲಿ ಭಿನ್ನವಾಗಿದ್ದು, ₹106 ರಿಂದ ₹110 ರವರೆಗಿದೆ. ಡೀಸೆಲ್ ದರ ₹ 100ರ ಗಡಿ ದಾಟಿದೆ. 14.2 ಕೆ.ಜಿ ಅಡುಗೆ ಅನಿಲದ ಸಿಲಿಂಡರ್ ಬೆಲೆ ₹ 900ರಿಂದ ಸಾವಿರದತ್ತ ದಾಪುಗಾಲಿಡುತ್ತಿದೆ. ಖಾದ್ಯ ತೈಲದ ಬೆಲೆ ಕೂಡಾ ಪ್ರತಿ ಲೀಟರ್‌ಗೆ ₹150 ರಿಂದ ₹200 ರ ಆಸುಪಾಸಿನಲ್ಲಿದೆ.

ಸಣ್ಣ ಕುಟುಂಬದ ಬಜೆಟ್



* ಎರಡು ಸಿಲಿಂಡರ್
** ನಾಲ್ಕು ಜನರದ್ದು
*** ಮೆಟ್ರೊ + ಪೆಟ್ರೋಲ್ + ಪಾರ್ಕಿಂಗ್
**** ವೈದ್ಯಕೀಯ + ಹೆಚ್ಚುವರಿ ಇತರೆ ಖರ್ಚುಗಳು
\+ ಕೇಬಲ್ ಪ್ಯಾಕೇಜ್

- ಎಲ್‌ಐಸಿ: ₹3,800 / ಪ್ರತಿ 3ಂಗಳು
- ಶಾಲಾ ಶುಲ್ಕ: ₹10,000 (3ಂಗಳಿಗೆ – ಇಬ್ಬರು ಮಕ್ಕಳು 9 ಮತ್ತು 4ನೇ ತರಗತಿ)

ಒಟ್ಟು ₹**39,500**

(ಇದು ಐವರು ಸದಸ್ಯರ ಒಂದು ಕುಟುಂಬಕ್ಕೆ ಬೆಂಗಳೂರು ನಗರದಲ್ಲಿ ಮನೆ ಬಾಡಿಗೆ ಬಿಟ್ಟು ಆಗುವ ಸರಾಸರಿ (₹39,500) ಖರ್ಚು. ಮನೆ ಬಾಡಿಗೆ ಸಿಂಗಲ್ ಬೆಡ್ ರೂಮ್ ₹8,000 ರಿಂದ ₹10,000, ಎರಡು ಬೆಡ್ ರೂಮ್ ಮನೆ ₹12,000 ದಿಂದ ₹20,000 ಇದೆ. ಆದರೆ, ಕುಟುಂಬ– ಕುಟುಂಬಗಳ ಮಧ್ಯೆ ಖರ್ಚು– ವೆಚ್ಚಗಳ ಪ್ರಮಾಣವೂ ವ್ಯತ್ಯಾಸವಾಗುತ್ತದೆ. ಒಟ್ಟಾರೆ ಎಲ್ಲ ಕುಟುಂಬಗಳ ಖರ್ಚು ವೆಚ್ಚ ಅಧಿಕವಾಗಿದೆ)

ಇವೆಲ್ಲದರ ಪರಿಣಾಮ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ತಿಂಗಳ 'ಬಜೆಟ್' ಏರುಪೇರಾಗಿದೆ. ದುಡಿಮೆ ಮಾಡುವವನ ಆದಾಯ ಕಡಿಮೆ ಆಗಿದ್ದು, ಖರ್ಚು ಮಾತ್ರ ತಿಂಗಳಿಂದ ತಿಂಗಳಿಗೆ ಹೆಚ್ಚುತ್ತಲೇ ಇದೆ.

5ನೇ ಪುಟ ನೋಡಿ

ಭೂಕಂಪನ: ಕಲಬುರಗಿ ಜಿಲ್ಲೆಯ 25ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಆತಂಕ

ಗ್ರಾಮ ತೊರೆಯುತ್ತಿರುವ ಜನ

• ಜಗನ್ನಾಥ ಶೇರಿಕಾರ

ಚಿಂಚೋಳಿ (ಕಲಬುರಗಿ ಜಿಲ್ಲೆ): ಚಿಂಚೋಳಿ ತಾಲ್ಲೂಕಿನ ವಿವಿಧೆಡೆ ಮಂಗಳವಾರ ಬೆಳಿಗ್ಗೆ ಮತ್ತೆ ಎರಡು ಬಾರಿ ಭೂಕಂಪನವಾಗಿದ್ದು, ಭಯಭೀ–ತರಾಗಿರುವ ಜನರು ಗ್ರಾಮಗಳನ್ನು ತೊರೆಯುತ್ತಿದ್ದಾರೆ.

ಚಿಂಚೋಳಿ, ಕಾಳಗಿ, ಸೇಡಂ ಹಾಗೂ ಕಮಲಾಪುರ ತಾಲ್ಲೂಕುಗಳ 25ಕ್ಕೂ ಹೆಚ್ಚು ಹಳ್ಳಿಗಳಲ್ಲಿ ವಾರದಲ್ಲಿ ಏಳು ಬಾರಿ ಭೂಮಿ ಕಂಪಿಸಿದೆ. ಸೋಮವಾರ ರಾತ್ರಿಯೂ ಭೂಕಂಪನವಾಗಿದ್ದರಿಂದ ಈ ಗ್ರಾಮಗಳ ಜನರು ಭಯಭೀತರಾಗಿ, ರಾತ್ರಿ ರಸ್ತೆಯಲ್ಲೇ ಮಲಗಿದ್ದರು. ಮನೆಗಳ ಒಳಹೋಗಲೂ ಹೆದರುತ್ತಿರುವ ಕೆಲವರು ರಸ್ತೆಯಲ್ಲಿಯೇ ಒಲೆಹೂಡಿ ಅಡುಗೆ ಮಾಡುತ್ತಿದ್ದಾರೆ. ಜಾನುವಾರುಗಳನ್ನು ಮನೆ ಹೊರಗೇ ಕಟ್ಟಿದ್ದಾರೆ. ನವರಾತ್ರಿ ಅಂಗವಾಗಿ ಘಟಸ್ಥಾಪನೆ ಮಾಡಿದ ಮನೆಗಳಲ್ಲೂ ಈಗ ಕತ್ತಲು ಆವರಿಸಿದೆ.

ಕಲಬುರಗಿಯಿಂದ ಸುಮಾರು 75 ಕಿ.ಮೀ. ದೂರದಲ್ಲಿರುವ ಗಡಿಕೇಶ್ವಾರ ಗ್ರಾಮದಲ್ಲಿ ಮಂಗಳವಾರ ಬೆಳಿಗ್ಗೆ 8.07ಕ್ಕೆ ಹಾಗೂ ಬೆಳಿಗ್ಗೆ 8.18ಕ್ಕೆ ಭೂಮಿ ಅಲುಗಾಡಿದ್ದು ಜನರ ಅನುಭವಕ್ಕೆ ಬಂತು. ರಿಕ್ಟರ್ ಮಾಪಕದಲ್ಲಿ ಕ್ರಮವಾಗಿ 3.5 ಹಾಗೂ 2.8ರಷ್ಟು ತೀವ್ರತೆ ದಾಖಲಾಗಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತುಗಳ ಉಸ್ತುವಾರಿ ಕೋಶದ ಶರಣಶಿರಸಗಿ ಕೇಂದ್ರವು ಖಚಿತಪಡಿಸಿದೆ.



ಭೂಕಂಪನವಾಗುತ್ತಿರುವ ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಗಡಿಕೇಶ್ವಾರ ಗ್ರಾಮದಲ್ಲಿ ಮಂಗಳವಾರ, ಪುಟ್ಟ ಮಗುವನ್ನು ಮನೆಯ ಹೊರಗಿನ ಕಟ್ಟೆ ಮೇಲೆ ಮಲಗಿಸಿದ್ದು ಕಂಡುಬಂತು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

5ನೇ ಪುಟ ನೋಡಿ
ಸಂಪಾದಕೀಯ 8

ಚಿನಕುರಳಿ

ಪ್ರಕಾಶ್ ಶೆಟ್ಟಿ



23, 24ರಂದು 'ಪರ್ವ' ನಾಟಕ

ಮೈಸೂರು: ರಂಗಾಯಣದ ರಂಗಪ್ರಯೋಗ, ಎಸ್.ಎಲ್. ಭೈರಪ್ಪ ಅವರ ಕಾದಂಬರಿ ಆಧರಿತ 'ಪರ್ವ' ನಾಟಕದ ರಾಷ್ಟ್ರೀಯ ರಂಗ ಸಂಚಾರ ಇದೇ 23ರಿಂದ ಆರಂಭವಾಗಲಿದ್ದು, ಅಂದು ಹಾಗೂ 24 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನಗೊಳ್ಳಲಿದೆ. ಇದು ಮೈಸೂರಿನಿಂದ ಹೊರಗೆ ನಡೆಯುತ್ತಿರುವ 'ಪರ್ವ'ದ ಮೊದಲ ಪ್ರದರ್ಶನವಾಗಿದೆ. ನಿತ್ಯ ಬೆಳಿಗ್ಗೆ 10ಕ್ಕೆ ನಾಟಕ ಆರಂಭವಾಗಲಿದ್ದು, ನಾಟಕವನ್ನು ರಂಗಕರ್ಮಿ ಪ್ರಕಾಶ್ ಬೆಳವಾಡಿ ನಿರ್ದೇಶಿಸಿದ್ದಾರೆ. ರಾಜ್ಯದಲ್ಲಿ ಒಟ್ಟು 50 ಪ್ರದರ್ಶನ ಹಾಗೂ ಇತರ ಐದು ರಾಜ್ಯಗಳಲ್ಲಿ 10 ಪ್ರದರ್ಶನ ಆಯೋಜಿಸಲು ರಂಗಾಯಣ ಮುಂದಾಗಿದೆ.

ಮೋಡ ಕವಿದ ವಾತಾವರಣದಲ್ಲಿ 'ವರುಣ' ಅಬ್ಬರ • ಜಿಟಿ ಜಿಟಿ ಮಳೆಯಲ್ಲೇ ಜನರ ಸಂಚಾರ

ಮನೆಯೊಳಗೂ ನೀರು, ಹೊಳೆಯಾದವು ರಸ್ತೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೆಲ ದಿನಗಳಿಂದ ಉತ್ತಮ ಮಳೆಯಾಗುತ್ತಿದ್ದು, ಬಿಡುವು ಕೊಡುತ್ತಲೇ 'ವರುಣ' ಅಬ್ಬರಿಸಿ ಸುರಿಯುತ್ತಿದ್ದಾನೆ. ಸೋಮವಾರ ರಾತ್ರಿ ನಿರಂತರವಾಗಿ ಸುರಿದಿದ್ದ ಮಳೆ, ಮಂಗಳವಾರವೂ ಜೋರಾಗಿತ್ತು.

ಮೋಡ ಕವಿದ ವಾತಾವರಣ ಮುಂದುವರಿದಿದ್ದು, ಮಂಗಳವಾರ ಬೆಳಿಗ್ಗೆ ಮಾತ್ರ ಕೊಂಚ ಬಿಸಿಲು ಕಾಣಿಸಿಕೊಂಡಿತ್ತು. ಸಮಯ ಕಳೆದಂತೆ ಮೋಡಗಳು ಮುಸುಕಿ ಜಿಟಿ ಜಿಟಿ ಮಳೆ ಆರಂಭವಾಯಿತು. ನಂತರ ಮಳೆ ಪ್ರಮಾಣ ಹೆಚ್ಚಾಯಿತು.

ಮಧ್ಯಾಹ್ನದಿಂದ ಸಂಜೆಯವರೆಗೂ ಸುರಿದ ಮಳೆ, ರಾತ್ರಿ ಸ್ವಲ್ಪ ಬಿಡುವು ನೀಡಿತ್ತು. ತಡರಾತ್ರಿ ಪುನಃ ಜಿಟಿ ಜಿಟಿ ಮಳೆ ಇತ್ತು.

ಬನಶಂಕರಿ, ಕೆಂಗೇರಿ, ರಾಜರಾಜೇಶ್ವರಿ ನಗರ, ನಾಯಂಡಹಳ್ಳಿ, ದೀಪಾಂಜಲಿನಗರ, ಗಿರಿನಗರ, ಹನುಮಂತನಗರ, ಬಸವನಗುಡಿ, ಚಾಮರಾಜಪೇಟೆ, ವಿಜಯನಗರ, ರಾಜಾಜಿನಗರ, ಬಸವೇಶ್ವರನಗರ, ಯಶವಂತಪುರ, ಪೀಣ್ಯ, ದಾಸರಹಳ್ಳಿ, ಹೆಬ್ಬಾಳ, ಆರ್.ಟಿ.ನಗರ, ಸಂಜಯನಗರ, ಜೆ.ಸಿ.ನಗರ, ವಸಂತನಗರ, ಶಿವಾಜಿನಗರ, ಎಂ.ಜಿ. ರಸ್ತೆ, ಅಶೋಕನಗರ, ಕೋರಮಂಗಲ, ಮಡಿವಾಳ, ಎಚ್‌ಎಸ್‌ಆರ್ ಬಡಾವಣೆ, ಎಲೆಕ್ಟ್ರಾನಿಕ್ ಸಿಟಿ ಹಾಗೂ ಸುತ್ತಮುತ್ತ ಮಳೆ ಅಬ್ಬರ ಹೆಚ್ಚಿತ್ತು.

ಮೆಜೆಸ್ಟಿಕ್, ಶೇಷಾದ್ರಿಪುರ, ಸಂಪಂಗಿರಾಮನಗರ, ಇಂದಿರಾನಗರ, ಹಲಸೂರು, ವಿಲ್ಸನ್ ಗಾರ್ಡನ್, ಶಾಂತಿನಗರ, ವೈಟ್‌ಫೀಲ್ಡ್, ಬೆಳ್ಳಂದೂರು, ಈಜಿಪುರ, ಕೆ.ಆರ್. ಪುರ, ನಾಗವಾರ, ವಿದ್ಯಾರಣ್ಯಪುರ, ಯಲಹಂಕ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಮಳೆ ಜೋರಾಗಿತ್ತು.

ಹೊಳೆಯಂತೆ ಹರಿದ ನೀರು: ಬಳ್ಳಾರಿ ರಸ್ತೆ, ಮೈಸೂರು ರಸ್ತೆ, ತುಮಕೂರು ರಸ್ತೆ, ಕನಕಪುರ ರಸ್ತೆ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು. ನಗರದ ಪ್ರಮುಖ ರಸ್ತೆ ಹಾಗೂ ಒಳ ರಸ್ತೆಯಲ್ಲೂ ನೀರಿನ ಹರಿಯುವಿಕೆ ಹೆಚ್ಚಿತ್ತು.



ಮೈಸೂರು ರಸ್ತೆಯ ಮೈಲಸಂದ್ರ ಬಳಿ ರಾಜಕಾಲುವೆ ಕಾಮಗಾರಿ ಸ್ಥಗಿತಗೊಂಡಿರುವ ದೃಶ್ಯ. – ಪ್ರಜಾವಾಣಿ ಚಿತ್ರಗಳು

'ನಿಲ್ದಾಣದ ನೀರು ತೆರವಿಗೆ ನಸುಕಿನವರೆಗೆ ಕಾರ್ಯಾಚರಣೆ'

ನಗರದ ಹೊರವಲಯದಲ್ಲಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಜೋರು ಮಳೆ ಆಗಿದೆ. ಸೋಮವಾರ ರಾತ್ರಿ ಮಳೆಯಿಂದ ಸಂಗ್ರಹವಾಗಿದ್ದ ನೀರು ನಿಲ್ದಾಣ ಬಳಿಯೇ ಧಾರಾಕಾರವಾಗಿ ಹರಿಯಿತು. ಟರ್ಮಿನಲ್ ಹಾಗೂ ಎದುರಿನ ರಸ್ತೆಯಲ್ಲಿ ನೀರು ಹರಿಯುವಿಕೆ ಹೆಚ್ಚಿತ್ತು. ಕಾರು, ಬಸ್‌ಗಳು ಸಂಚರಿಸಲು ಸಹ ಸಾಧ್ಯವಾಗಿರಲಿಲ್ಲ. ಹೀಗಾಗಿ, ಪ್ರಯಾಣಿಕರನ್ನು ಟ್ರ್ಯಾಕರ್ ಮೂಲಕ ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲಾಗಿತ್ತು.

ಈ ಬಗ್ಗೆ ಮಾತನಾಡಿರುವ ನಿಲ್ದಾಣದ ಅಧಿಕಾರಿ ಸಿ. ಶ್ರೀನಿವಾಸ್, 'ನಿಲ್ದಾಣದಲ್ಲಿ ಉತ್ತಮ ಒಳ ಚರಂಡಿ ವ್ಯವಸ್ಥೆ ಇದ್ದು, ಇದುವರೆಗೂ ಇಷ್ಟು ಪ್ರಮಾಣದಲ್ಲಿ ನೀರು ಹರಿದಿರಲಿಲ್ಲ. ಸೋಮವಾರ ಅತೀ ಹೆಚ್ಚು ಮಳೆ ಸುರಿದಿದ್ದರಿಂದ ಈ ಸ್ಥಿತಿ ನಿರ್ಮಾಣವಾಯಿತು' ಎಂದಿದ್ದಾರೆ.

'ಟರ್ಮಿನಲ್ ಬಹುತೇಕ ಭಾಗ ಹಾಗೂ ಎದುರಿನ ರಸ್ತೆಯಲ್ಲಿ ನೀರು ನಿಂತಿತ್ತು. ಟರ್ಮಿನಲ್‌ನಿಂದ ಹೊರಗೆ ಹೋಗಲು ಹಾಗೂ ಒಳಗೆ ಬರಲು ಪ್ರಯಾಣಿಕರಿಗೆ ತೊಂದರೆ ಆಗಿತ್ತು. ತುರ್ತು ಸೇವೆ ಸಿಬ್ಬಂದಿ, ಮಂಗಳವಾರ ನಸುಕಿನವರೆಗೂ ಕಾರ್ಯಾಚರಣೆ ನಡೆಸಿ ನೀರು ತೆರವು ಮಾಡಿದರು' ಎಂದೂ ತಿಳಿದಿದ್ದಾರೆ.

'ಮಳೆ ಹೆಚ್ಚಿದ್ದರಿಂದ ಮುಂಜಾಗ್ರತಾ ಕ್ರಮವಾಗಿ 20 ವಿಮಾನಗಳ ಹಾರಾಟದಲ್ಲಿ ವ್ಯತ್ಯಯ ಉಂಟಾಯಿತು. ನೀರು ತೆರವಾದ ನಂತರವೇ ವಿಮಾನಗಳ ಹಾರಾಟ ಯಥಾಸ್ಥಿತಿಗೆ ಬಂತು' ಎಂದೂ ಹೇಳಿದ್ದಾರೆ.

ನಿರಂತರವಾಗಿ ಸುರಿದ ಮಳೆಯಿಂದಾಗಿ ಕಾಲುವೆಗಳು ತುಂಬಿ ಹರಿದವು. ಹೆಚ್ಚಾದ ನೀರು, ರಸ್ತೆಯಲ್ಲೇ ಎರಡು ಅಡಿಯಿಂದ ನಾಲ್ಕು ಅಡಿಯಷ್ಟು ಹರಿಯಿತು. ಅದೇ ನೀರಿನಲ್ಲಿ ಚಾಲಕರು, ವಾಹನ ಚಲಾಯಿಸಿಕೊಂಡು ಹೋದರು. ಕೆಲ ದ್ವಿಚಕ್ರ ವಾಹನಗಳು ಮಾರ್ಗಮಧ್ಯೆಯೇ ಕೆಟ್ಟು ನೀರಿನಲ್ಲಿ ನಿಂತಿದ್ದವು. ಅವುಗಳನ್ನು ದಡ ತಲುಪಿಸಲು ಸವಾರರು ಹರಸಾಹಸಪಟ್ಟರು.

ನಗರದ ಬಹುತೇಕ ಕಡೆ ಸ್ಮಾರ್ಟ್ ಸಿಟಿ ಯೋಜನೆ ಹಾಗೂ ರಾಜಕಾಲುವೆ ಕಾಮಗಾರಿ ನಡೆಯುತ್ತಿದೆ. ಅಲ್ಲಲ್ಲ ಗುಂಡಿಯಲ್ಲಿ ನೀರು ನಿಂತುಕೊಂಡಿತ್ತು. ರಾಜಕಾಲುವೆ ಕಾಮಗಾರಿ ಸ್ಥಳದಲ್ಲಿ ನೀರು ಧಾರಾಕಾರವಾಗಿ ಹರಿಯಿತು.

ಉರುಳಿಬಿದ್ದ ಮರಗಳು: ಮಳೆ ಸುರಿಯುವ ವೇಳೆಯಲ್ಲಿ ಗಾಳಿಯೂ ಜೋರಾಗಿತ್ತು. ನಗರದ ಮೂರು ಕಡೆ ಮರಗಳು ನೆಲಕ್ಕುರುಳಿದ್ದು, ಒಂದು ಕಡೆ ಮರದ ದೊಡ್ಡ ಕೊಂಬೆ ಬಿದ್ದಿತ್ತು.

'ಐಡಿಯಲ್ ಹೋಮ್ ಬಡಾವಣೆ, ಮಹಾಲಕ್ಷ್ಮಿ ಬಡಾವಣೆಯ 5ನೇ ಅಡ್ಡರಸ್ತೆ ಹಾಗೂ ಕೋರಮಂಗಲದ 60 ಅಡಿ ರಸ್ತೆಯಲ್ಲಿ ತಲಾ ಒಂದೊಂದು ಮರ ಉರುಳಿಬಿದ್ದಿದ್ದವು. ವಾಹನಗಳ ಸಂಚಾರಕ್ಕೆ ತೊಂದರೆಯಾಗಿ, ದಟ್ಟಣೆ ಉಂಟಾಗಿತ್ತು. ದೂರು ಬರುತ್ತಿದ್ದಂತೆ ಬಿಬಿಎಂಪಿ ಅರಣ್ಯ ವಿಭಾಗದ ಸಿಬ್ಬಂದಿ, ಸ್ಥಳಕ್ಕೆ ಹೋಗಿ ಮರಗಳನ್ನು ತೆರವು ಮಾಡಿದ್ದಾರೆ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

'ಯಶವಂತಪುರದ ಗೋವರ್ಧನ್ ಚಿತ್ರಮಂದಿರ ಬಳಿ ಮರದ ದೊಡ್ಡ ಕೊಂಬೆಯೊಂದು ಬಿದ್ದಿತ್ತು. ಅದನ್ನೂ ತೆರವು ಮಾಡಲಾಗಿದೆ' ಎಂದೂ ತಿಳಿಸಿದರು.

ಮನೆಗೆ ನುಗ್ಗಿದ್ದ ನೀರು: ಕೊತ್ತನೂರು ಹಾಗೂ ಸುತ್ತಮುತ್ತ ಪ್ರದೇಶಗಳ ಶೆಡ್ ಮನೆಗಳಿಗೆ ನೀರು ನುಗ್ಗಿ ಅಪಾರ ಪ್ರಮಾಣದಲ್ಲಿ ಹಾನಿ ಆಗಿದೆ.


ಎಲೆಕ್ಟ್ರಾನಿಕ್ ಉತ್ಪನ್ನಗಳು ಹಾಗೂ ಪೀಠೋಪಕರಣಗಳು ನೀರಿನಲ್ಲೇ ಮುಳುಗಿದ್ದವು. ಮಂಗಳವಾರ ಬೆಳಿಗ್ಗೆ ನಿವಾಸಿಗಳು, ನೀರು ಹೊರಹಾಕುವುದರಲ್ಲಿ ನಿರತರಾಗಿದ್ದು ಕಂಡುಬಂತು.

ಬೆಂಗಳೂರಿನಲ್ಲಿ ಸುರಿದ ಮಳೆ ಪ್ರಮಾಣ

(ಅ. 11ರ ರಾತ್ರಿ 8 ಗಂಟೆಯಿಂದ ಅ. 12ರ ಬೆಳಿಗ್ಗೆ 8 ಗಂಟೆಯವರೆಗೆ)

ಕಡಿಮೆ ಮಳೆ (0.25 ಸೆ.ಮೀ–1.55 ಸೆಂ.ಮೀ)
- ರಾಜರಾಜೇಶ್ವರಿನಗರ
- ಬೊಮ್ಮನಹಳ್ಳಿ
- ಕೋಣನಕುಂಟೆ
- ಗೊಟ್ಟಿಗೆರೆ
- ಕೋರಮಂಗಲ
- ದೊಡ್ಡಬಿದರಕಲ್ಲು
- ಪುಲಿಕೇಶಿನಗರ
- ಬೆನ್ನಿಗಾನಹಳ್ಳಿ
- ಹೊಯ್ಸಳನಗರ
- ವಿಜ್ಞಾನನಗರ
- ಗರುಡಾಚಾರ್ಯಪಾಳ್ಯ
- ಹೂಡಿ
- ಬಸವನಪುರ
- ವರ್ತೂರ
- ಬೆಳ್ಳಂದೂರು

ಜೋರು ಮಳೆ (6.45 ಸೆಂ.ಮೀ–11.55 ಸೆಂ.ಮೀ)
- ಕಾಟನ್‌ಪೇಟೆ
- ದಯಾನಂದನಗರ
- ಜಕ್ಕೂರು
- ಚೌಡೇಶ್ವರಿ



ಪ್ರಜಾವಾಣಿ ಗ್ರಾಫಿಕ್ಸ್

ಸಾಧಾರಣ ಮಳೆ (1.56 ಸೆಂ.ಮೀ–6.44 ಸೆಂ.ಮೀ)
- ಅಟ್ಟೂರು
- ಯಲಹಂಕ
- ವಿದ್ಯಾರಣ್ಯಪುರ
- ಬ್ಯಾಟರಾಯನಪುರ
- ಹೊರಮಾವು
- ಕೊಡಿಗೇಹಳ್ಳಿ
- ಯಶವಂತಪುರ
- ಚೊಕ್ಕಸಂದ್ರ
- ನಂದಿನಿ ಲೇಔಟ್
- ಬಸವೇಶ್ವರನಗರ
- ರಾಜಾಜಿನಗರ
- ಜ್ಞಾನಭಾರತಿ
- ಕೆಂಗೇರಿ
- ಹೆಮ್ಮಿಗೆಪುರ
- ಸಂಪಂಗಿರಾಮನಗರ
- ಚಾಮರಾಜಪೇಟೆ
- ಸಾರಕ್ಕಿ
- ಸಿಂಗಸಂದ್ರ
- ಮಾರತ್ತಹಳ್ಳಿ
- ಎಚ್‌ಎಎಲ್ ಏರ್‌ಪೋರ್ಟ್
- ದೊಮ್ಮಲೂರು
- ದೊಡ್ಡನೆಕ್ಕುಂದಿ
- ಕೋನೇನ ಅಗ್ರಹಾರ
- ಕೆ.ಆರ್.ಪುರ
- ಬೇಗೂರು

ಅಕ್ಟೋಬರ್‌ನಲ್ಲಿ ವಾಡಿಕೆಗಿಂತ ಹೆಚ್ಚು ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅಕ್ಟೋಬರ್ ಆರಂಭದಿಂದ ಎಡಬಿಡದೆ ಮಳೆ ಸುರಿಯುತ್ತಿದ್ದು, ಈ ತಿಂಗಳಲ್ಲಿ ವಾಡಿಕೆಗಿಂತ ಶೇ 80ರಷ್ಟು ಹೆಚ್ಚು ಮಳೆಯಾಗಲಿದೆ ಎಂದು ಹವಾಮಾನ ತಜ್ಞರು ತಿಳಿಸಿದ್ದಾರೆ.

ನಗರದಲ್ಲಿ 2020ರ ಅಕ್ಟೋಬರ್ 21ರಂದು 6.7 ಸೆಂ.ಮೀ ಗರಿಷ್ಠ ಮಳೆ ದಾಖಲಾಗಿತ್ತು. ಆದರೆ, ಈ ತಿಂಗಳ 4ರಂದು 6.3 ಸೆಂ.ಮೀ ಮಳೆಯಾಗಿದ್ದು, ಇದೇ ಈವರೆಗಿನ ಗರಿಷ್ಠ ಮಳೆ ಎಂದೂ ಹವಾಮಾನ ಇಲಾಖೆ ತಿಳಿಸಿದೆ. 2018–19ಕ್ಕೆ ಹೋಲಿಸಿದರೆ, ಈ ಬಾರಿ ಮೊದಲ ವಾರದಲ್ಲೇ ಸರಾಸರಿಗಿಂತ ಹೆಚ್ಚು ಮಳೆ ಸುರಿದಿದೆ. ಮುಂದಿನ ಐದು ದಿನಗಳವರೆಗೆ ಮಳೆ ಮುಂದುವರಿಯಲಿದೆ ಎಂದು ಇಲಾಖೆ ಹೇಳಿದೆ.

'ಸೆಪ್ಟೆಂಬರ್‌ನಲ್ಲಿ ವಾಡಿಕೆ ಮಳೆ 20 ಸೆಂ.ಮೀ ಆಗಬೇಕಿತ್ತು. ಆದರೆ, 15 ಸೆಂ.ಮೀ ಮಾತ್ರ ಮಳೆ ಸುರಿದಿತ್ತು. ಅ.12ರವರೆಗೆ ಸಾಮಾನ್ಯವಾಗಿ 8 ಸೆಂ.ಮೀ ವಾಡಿಕೆ ಮಳೆ ನಿರೀಕ್ಷಿಸಿದ್ದೆವು. ಆದರೆ, ಈಗಾಗಲೇ 15 ಸೆಂ.ಮೀ ಮಳೆಯಾಗಿದೆ' ಎಂದು ಹವಾಮಾನ ತಜ್ಞ ಎಚ್.ಎಸ್. ಶಿವರಾಮು ವಿವರಿಸಿದರು.

'ಅಕ್ಟೋಬರ್ ಪೂರ್ಣ ತಿಂಗಳ ವಾಡಿಕೆ ಮಳೆ ಪ್ರಮಾಣ 16 ಸೆಂ.ಮೀ. ಮೊದಲ ವಾರದಲ್ಲೇ ನಿರೀಕ್ಷಿತ ಮಳೆ ಸುರಿದಿರುವುದರಿಂದ ತಿಂಗಳಾಂತ್ಯದಲ್ಲಿ ಮಳೆ ಪ್ರಮಾಣ ದ್ವಿಗುಣಗೊಳ್ಳುವುದರಲ್ಲಿ ಅನುಮಾನವಿಲ್ಲ' ಎಂದು ಮಾಹಿತಿ ನೀಡಿದರು.

'ಸಾಮಾನ್ಯವಾಗಿ ಅಕ್ಟೋಬರ್‌ನಲ್ಲಿ ಹಿಂಗಾರು ಆರಂಭವಾಗುತ್ತದೆ. ಈ ನಡುವೆ, ಮಳೆಗೆ ವಾರಗಟ್ಟಲೆ ಬಿಡುವು ಇರುತ್ತಿತ್ತು. ಆದರೆ, ಚಂಡಮಾರುತದ ಪರಿಣಾಮದಿಂದ ಮುಂಗಾರು ಮತ್ತು ಹಿಂಗಾರಿನ ನಡುವೆ ತಡೆ ಇಲ್ಲದೆ, ಮಳೆ ನಿರಂತರವಾಗಿ ಸುರಿಯುತ್ತಿದೆ. ಹಾಗಾಗಿ, ಈ ತಿಂಗಳು ಹೆಚ್ಚು ಮಳೆ ಕಾಣಲಿದ್ದೇವೆ' ಎಂದೂ ಹೇಳಿದರು.

ಕೆಐಎನಲ್ಲಿ ದಾಖಲೆ ಮಳೆ: ನಗರದ 'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಕೆಐಎ) ಮಂಗಳವಾರ (ಅ.12) 17.8 ಸೆಂ.ಮೀ ಮಳೆಯಾಗಿದೆ. ಇದು ದಾಖಲೆ ಮಳೆ. ಇಲ್ಲಿ 2017ರ ಮೇ 27ರಂದು 8.6 ಸೆಂ.ಮೀ ದಾಖಲೆ ಮಳೆಯಾಗಿತ್ತು' ಎಂದು ಹವಾಮಾನ ಇಲಾಖೆ ವರದಿ ಮಾಡಿದೆ.

'ಚಳಿಯ ತೀವ್ರತೆ ಹೆಚ್ಚು'



'ಅಕ್ಟೋಬರ್ ಕೊನೆಯ ವಾರದಲ್ಲಿ ಚಳಿ ಆರಂಭವಾಗಲಿದೆ. ನಿರಂತರ ಮಳೆಯಾಗುತ್ತಿರುವುದರಿಂದ ಬೆಂಗಳೂರು ಸೇರಿದಂತೆ ರಾಜ್ಯದಾದ್ಯಂತ ಈ ಬಾರಿ ಚಳಿಯ ತೀವ್ರತೆಯೂ ಹೆಚ್ಚಾಗಿರಲಿದೆ' ಎಂದು ಎಚ್.ಎಸ್.ಶಿವರಾಮು ತಿಳಿಸಿದರು.

(2021ರ ಅ.1ರಿಂದ 12ರವರೆಗೆ)

6.3 ಸೆಂ.ಮೀ ದಾಖಲಾದ ಗರಿಷ್ಠ ಮಳೆ (ಅ.4)

18.1 ಸೆಂ.ಮೀ ಈವರೆಗಿನ ಸರಾಸರಿ ಮಳೆ

ಅಕ್ಟೋಬರ್‌ನಲ್ಲಿ ನಗರದ ಮಳೆ ಪ್ರಮಾಣ (ಸೆಂ.ಮೀಗಳಲ್ಲಿ)

ವರ್ಷ	ಗರಿಷ್ಠ ಮಳೆಯಾದ ದಿನ	ಮಾಸಿಕ ಸರಾಸರಿ ಮಳೆ
2011	3.8(ಅ.1)	17.0
2012	3.4(ಅ.7)	8.3
2013	2.6(ಅ.28)	10
2014	6.3(ಅ.9)	34.3
2015	1.0(ಅ.5)	4.7
2016	7(ಅ.12)	1.1
2017	7.6(ಅ.6)	38.5
2018	4.8(ಅ.18)	11.1
2019	3.8(ಅ.22)	17.8
2020	6.7(ಅ.21)	20.4

17ರವರೆಗೆ 'ಯೆಲ್ಲೊ ಅಲರ್ಟ್': ಬೆಂಗಳೂರಿನಲ್ಲಿ ಅ.13ರಿಂದ 17ರವರೆಗೆ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇರುವುದರಿಂದ ಐದೂ ದಿನ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಸಿಎಂಆರ್ ವಿಶ್ವವಿದ್ಯಾಲಯ: ಶೇ 100 ರಷ್ಟು ವಿದ್ಯಾರ್ಥಿಗಳಿಗೆ ಉದ್ಯೋಗ

ಬೆಂಗಳೂರು: ಸಿಎಂಆರ್ ವಿಶ್ವವಿದ್ಯಾಲಯದ ಶೇ 100ರಷ್ಟು ವಿದ್ಯಾರ್ಥಿಗಳು ಕೋವಿಡ್ ನಡುವೆಯೂ ವಿವಿಧ ಕಂಪನಿಗಳಲ್ಲಿಉದ್ಯೋಗಪಡೆದಿದ್ದಾರೆ.

'ಸೆರ್ನರ್ ಕಾರ್ಪೊರೇಷನ್ ಇಂಡಿಯಾ, ಬಾಷ್, ಕ್ಯಾಪ್‌ಜೆಮಿನಿ, ಇನ್ಫೊಸಿಸ್, ಬಜಾಜ್ ಅಲಯನ್ಸ್, ವಿಪ್ರೊ, ಫ್ಲಿಪ್‌ಕಾರ್ಟ್ ಸೇರಿದಂತೆ ದೇಶದ ಪ್ರಮುಖ ಕಂಪನಿಗಳು ವರ್ಚುವಲ್ ವೇದಿಕೆಯ ಮೂಲಕ ವಿಶ್ವವಿದ್ಯಾಲಯದ ಎಂಬಿಎ, ಬಿಬಿಎ, ಬಿ.ಟೆಕ್ ವಿದ್ಯಾರ್ಥಿಗಳ ಸಂದರ್ಶನ ನಡೆಸಿ ಕೆಲಸಕ್ಕೆ ಆಯ್ಕೆ ಮಾಡಿಕೊಂಡಿವೆ' ಎಂದು ಪ್ರಕಟಣೆ ತಿಳಿಸಿದೆ.

'ಎಂಬಿಎ ಪದವೀಧರರಾದ ಕೆ.ಕೆ.ಸುಬ್ಬಯ್ಯ ವಾರ್ಷಿಕ ₹7 ಲಕ್ಷ, ಆಶುತೋಷ್ ಕುಮಾರ್, ಎಸ್. ಕ್ಯಾಲೆಬ್, ಹನಿ ಸೈಯದ್ ಮತ್ತು ಅಖಿಲ್ ಹರಿ ಅವರು ವಾರ್ಷಿಕ ₹6 ಲಕ್ಷ ವೇತನ ಪಡೆಯಲಿದ್ದಾರೆ. ಕೆಲ ಬಿಬಿಎ ಪದವೀಧರರಿಗೆ ವಾರ್ಷಿಕ ₹6 ಲಕ್ಷ, ಬಿ.ಟೆಕ್ ಪದವೀಧರರಿಗೆ ₹11 ಲಕ್ಷದವರೆಗೂ ಪ್ಯಾಕೇಜ್ ನೀಡಲಾಗಿದೆ' ಎಂದೂ ತಿಳಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಇದೇ 15ರವರೆಗೆ 'ಅನುಭವ್ 3.0' ಸರಣಿ

ಬೆಂಗಳೂರು:'ಸೊಸೈಟಿ ಫಾರ್ ದಿ ಪ್ರಮೋಷನ್ ಆಫ್ ಇಂಡಿಯನ್ ಕ್ಲಾಸಿಕಲ್ ಮ್ಯೂಸಿಕ್ ಆ್ಯಂಡ್ ಕಲ್ಚರ್ ಅಮಾಂಗ್ ಯೂತ್' (ಸ್ಪಿಕ್ ಮೆಕೆ) ಸಂಸ್ಥೆಯು ಇದೇ 15ರವರೆಗೆ 'ಅನುಭವ್ 3.0' ಶೀರ್ಷಿಕೆಯಡಿ ವಿದ್ಯಾರ್ಥಿಗಳಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಆನ್‌ಲೈನ್ ಮೂಲಕ ಹಮ್ಮಿಕೊಂಡಿದೆ.

ಸರಣಿಯಲ್ಲಿ ಪ್ರತಿದಿನ ಬೆಳಿಗ್ಗೆ 4ರಿಂದ 7 ಗಂಟೆಯವರೆಗೆ ಯೋಗ, ಕಲಾವಿದರಿಂದ 150 ಕಾರ್ಯಾಗಾರಗಳು, ಶಾಸ್ತ್ರೀಯ ಸಂಗೀತ, ನೃತ್ಯ, ಚಿತ್ರಕಲೆ ಮತ್ತು ಭರತನಾಟ್ಯ, ಒಡಿಸ್ಸಿ, ಕಥಕ್, ಕೂಚಿಪುಡಿ, ಮಣಿಪುರಿ, ಮೋಹಿನಿಯಾಟ್ಟಂ, ಹಿಂದೂಸ್ತಾನಿ ಸಂಗೀತ, ಕರ್ನಾಟಕ ಸಂಗೀತ, ಚಿತ್ರಕಲಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ಎಲ್ಲ ಕಾರ್ಯಕ್ರಮಗಳನ್ನು www.youtube.com/user/spicmacay ಮೂಲಕ ನೇರಪ್ರಸಾರದಲ್ಲಿ ವೀಕ್ಷಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಈಡಿಗರ ವಿದ್ಯಾರ್ಥಿನಿಲಯದ ಹಳೆಯ ವಿದ್ಯಾರ್ಥಿಗಳ ಸಂಘವು ವಿದ್ಯಾರ್ಥಿವೇತನಕ್ಕೆ ಈಡಿಗ ಜನಾಂಗದ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಪಿಯುಸಿ, ಪದವಿ, ತಾಂತ್ರಿಕ, ವೈದ್ಯಕೀಯ, ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೊಮಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಅರ್ಜಿಗಳನ್ನು ಶೇಷಾದ್ರಿಪುರದ ರಾಜೀವ್‌ಗಾಂಧಿ ವೃತ್ತದಲ್ಲಿರುವ ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದಲ್ಲಿ ವಿತರಿಸಲಾಗುವುದು.

ಭರ್ತಿ ಮಾಡಿದ ಅರ್ಜಿಗಳನ್ನು ಈಡಿಗರ ವಿದ್ಯಾರ್ಥಿನಿಲಯದ ಹಳೆಯ ವಿದ್ಯಾರ್ಥಿಗಳ ಸಂಘದ ವಿಳಾಸಕ್ಕೆ ನವೆಂಬರ್ 12ರೊಳಗೆ ತಲುಪಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಬೆಂಗಳೂರು ಈಡಿಗರ ವಿದ್ಯಾರ್ಥಿನಿಲಯದ ಹಳೆಯ ವಿದ್ಯಾರ್ಥಿಗಳ ಸಂಘ, ಈಡಿಗ ಭವನ, ಶೇಷಾದ್ರಿಪುರ.

ಸಂಪರ್ಕ:9916045255

ದಿನಸಿ ವ್ಯಾಪಾರಿಗಳಿಗೆ 'ಇಂಪ್ರೆಸ್' ಆಪ್


ಬೆಂಗಳೂರು: ದೇಶದ ದಿನಸಿ ವ್ಯಾಪಾರಿಗಳ ವಹಿವಾಟು ಸುಲಭಗೊಳಿಸುವ ಸಲುವಾಗಿ ಅಭಿವೃದ್ಧಿಪಡಿಸಿರುವ ಇಂಪ್ರೆಸ್ (Imprezz) ಎನ್ನುವ ಮೊಬೈಲ್ ಆ್ಯಪ್ ಅನ್ನು ಜರ್ಮನಿಯ ಬುಹ್ಲ್ ಕಂಪನಿಯು ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದೆ.

ವ್ಯಾಪಾರಸ್ಥರು ತಮ್ಮ ಅಂಗಡಿ ವ್ಯಾಪಾರದಲ್ಲಿ ಪಾರದರ್ಶಕತೆ, ದಾಸ್ತಾನು ನಿರ್ವಹಣೆ, ಬಿಲ್ಲಿಂಗ್, ಪಾವತಿ ಸಂಗ್ರಹ, ಗ್ರಾಹಕರ ಮಾಹಿತಿ ನಿರ್ವಹಣೆ ಸೇರಿದಂತೆ ಇನ್ನೂ ಹಲವು ಕೆಲಸಗಳನ್ನು ಈ ಆ್ಯಪ್ ಮೂಲಕ ಸುಲಭವಾಗಿ ಮಾಡಬಹುದಾಗಿದೆ. ಉತ್ಪನ್ನಗಳ ಮೇಲೆ ಇರುವ ಬಾರ್ ಕೋಡ್ ಸ್ಕ್ಯಾನ್ ಮಾಡುವುದರ ಮೂಲಕ ಬಿಲ್‌ನ ಪ್ರಿಂಟ್ ಔಟ್ ಅಥವಾ ಮೆಸೆಜ್ ಮಾಡುವ ಸೌಲಭ್ಯ ಇದರಲ್ಲಿದೆ ಎಂದು ಕಂಪನಿಯು ತಿಳಿಸಿದೆ.

ಆ್ಯಪ್‌ನಲ್ಲಿ ಇರುವ ಪಾಯಿಂಟ್ ಆಫ್ ಸೇಲ್ (ಪಿಒಎಸ್) ವ್ಯವಸ್ಥೆಯು ವ್ಯಾಪಾರಸ್ಥರು ಮತ್ತು ಗ್ರಾಹಕರು ಉಪಯುಕ್ತವಾಗಿದೆ. ಗ್ರಾಹಕರಿಗೆ ಉತ್ತಮ ಗ್ರಾಹಕ ಶಾಪಿಂಗ್ ಅನುಭವವನ್ನು ನೀಡುವುದರ ಜೊತೆಗೆ ಅವರ ದಿನನಿತ್ಯದ ಕಾರ್ಯಾಚರಣೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಲು ಈ ಆ್ಯಪ್ ಸಹಾಯ ಮಾಡುತ್ತದೆ. ಈ ಅಪ್ಲಿಕೇಶನ್ನೊಂದಿಗೆ, ಮಳಿಗೆಗಳು ಈಗ ಸಾಂಪ್ರದಾಯಿಕ ವಿಧಾನದ ಬಿಲ್ಲಿಂಗ್,ಇನ್‌ವಾಯ್ಸ್ ಮತ್ತು ದಿನನಿತ್ಯದ ವಹಿವಾಟು ಇತರ ಪ್ರಕ್ರಿಯೆಗಳನ್ನು ಈಗ ಸುಲಭವಾಗಿ ಡಿಜಿಟಲೀಕರಣ ಮಾಡಬಹುದು. ಈ ಮೂಲಕ ವ್ಯಾಪಾರವನ್ನು ಹೇಗೆ ಬೆಳೆಸುವುದರ ಮೇಲೆ ಹೆಚ್ಚು ಗಮನಹರಿಸಬಹುದು ಎಂದು ಬುಹ್ಲ್ ಡೇಟಾ ಸರ್ವೀಸ್ ಪ್ರೈವೇಟ್ ಲಿಮಿಟೆಡ್‌ನ ಸಿಇಒ ಅಮಿತ್ ಮುಂದ್ರಾ ತಿಳಿಸಿದರು.

6 ತಿಂಗಳಲ್ಲಿ ಗಡಿ ಗ್ರಾಮಗಳ ಸಮೀಕ್ಷೆ

ಪ್ರಜಾವಾಣಿ ವಾರ್ತೆ



ಸೋಮಶೇಖರ್

ಬೆಂಗಳೂರು: ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು ರಾಜ್ಯದ ಗಡಿ ಗ್ರಾಮಗಳಲ್ಲಿನ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ಶೈಕ್ಷಣಿಕ ಪರಿಸ್ಥಿತಿಯ ಬಗ್ಗೆ ಸಮೀಕ್ಷೆ ಕೈಗೊಂಡಿದೆ.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್ ನೇತೃತ್ವದಲ್ಲಿ ಮಂಗಳವಾರ ಸಮಾಲೋಚನಾ ಸಭೆ ನಡೆಸಲಾಯಿತು.

'ವಿವಿಧ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ 6 ತಿಂಗಳ ಒಳಗೆ ಈ ಸಮೀಕ್ಷೆ ನಡೆಸಲಾಗುವುದು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಅಂತಿಮ ವರದಿ ಸಿದ್ಧಪಡಿಸಲಾಗುತ್ತದೆ. ಇಂತಹ ಸಮೀಕ್ಷೆಯನ್ನು ರಾಜ್ಯದಲ್ಲಿ ಪ್ರಥಮ ಬಾರಿಗೆ ಪ್ರಾಧಿಕಾರವು ಕೈಗೊಂಡಿದೆ. ವರದಿಯ ಆಧಾರದಲ್ಲಿ ಗಡಿ ನಾಡಿನ ಹಳ್ಳಿಗಳ ಅಭಿವೃದ್ಧಿಗೆ ಸಮಗ್ರ ನೀತಿ ರೂಪಿಸಲಾಗುವುದು' ಎಂದು ಸಿ. ಸೋಮಶೇಖರ್ ತಿಳಿಸಿದರು.

ಲಘು ಭೂಕಂಪನ: ಪರಿಹಾರ ಕೇಂದ್ರ ತೆರೆಯಲು ಸಿಎಂ ಬೊಮ್ಮಾಯಿ ಸೂಚನೆ

ಬೆಂಗಳೂರು: ಕಲಬುರಗಿ ಜಿಲ್ಲೆಯಲ್ಲಿ ಲಘು ಭೂಕಂಪನ ಪ್ರಕರಣ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಮುಖ್ಯಮಂತ್ರಿ ಬೊಮ್ಮಾಯಿ, ಚಿಂಚೋಳಿ ಮತ್ತು ಸೇಡಂನಲ್ಲಿ ತುರ್ತಾಗಿ ಪರಿಹಾರ ಕೇಂದ್ರಗಳನ್ನು ತೆರೆಯುವಂತೆ ಅಧಿಕಾರಿಗಳು ಸೂಚನೆ ನೀಡಿದರು.

ಪ್ರಕೃತಿ ವಿಕೋಪ ನಿರ್ವಹಣೆ ಕೋಶದ ಅಧಿಕಾರಿಗಳ ಜೊತೆ ಮಂಗಳವಾರ ರಾತ್ರಿ ತುರ್ತು ಸಭೆ ನಡೆಸಿದ ಅವರು, ಭೂಕಂಪನದಿಂದ ಹಾನಿಗೀಡಾದ ಮನೆಗಳಿಗೆ ಪರಿಹಾರ ಒದಗಿಸುವಂತೆ ಮತ್ತು ಪ್ರಕರಣಕ್ಕೆ ಸಂಬಂಧಪಟ್ಟಂತೆ ವರದಿ ನೀಡುವಂತೆ ಸೂಚಿಸಿದರು.


'ರಾಜ್ಯದಲ್ಲಿ ಅಕ್ಟೋಬರ್ ತಿಂಗಳಲ್ಲಿ ವಾಡಿಕೆಗಿಂತ ಶೇ 50ರಷ್ಟು ಹೆಚ್ಚು ಮಳೆ ಆಗಿದೆ. ಬಳ್ಳಾರಿ, ಬೀದರ್, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಮಾತ್ರ ಮಳೆ ಕೊರತೆ ಆಗಿದೆ' ಎಂದು ಮುಖ್ಯಮಂತ್ರಿ ತಿಳಿಸಿದರು.

'ಜೂನ್ ತಿಂಗಳಿನಿಂದ 4.71 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಸಂಭವಿಸಿದ್ದು, ಈಗಾಗಲೇ 1.17 ಲಕ್ಷ ರೈತರಿಗೆ ₹ 105 ಕೋಟಿ ಪರಿಹಾರ ವಿತರಿಸಲಾಗಿದೆ. ಜಿಲ್ಲಾಧಿಕಾರಿಗಳ ಬಳಿ ಪ್ರಕೃತಿ ವಿಕೋಪ ಪರಿಹಾರಕ್ಕೆ ₹ 738 ಕೋಟಿ ಅನುದಾನ ಲಭ್ಯವಿದೆ' ಎಂದರು.

'ಅಕ್ಟೋಬರ್ 1ರಿಂದ 12ರವರೆಗೆ ಮಳೆಯಿಂದ ಮೃತಪಟ್ಟ 21 ಜನರಿಗೆ ಕೂಡಲೇ ಪರಿಹಾರ ನೀಡಲು ಸೂಚನೆ ನೀಡಲಾಗಿದೆ. ಮಳೆಯಿಂದ ಹಾನಿಗೆ ಒಳಗಾದವರಿಗೆ ₹ 10 ಸಾವಿರ ತಕ್ಷಣದ ಪರಿಹಾರ ನೀಡಲಾಗುತ್ತದೆ. ಭಾಗಶಃ ಹಾನಿಗೊಳಗಾದ 2,500 ಮನೆಗಳಿಗೆ ಹಾಗೂ ಬೆಳೆ ಹಾನಿಗೆ ಕಳೆದ ವರ್ಷದಂತೆ ಎನ್‌ಡಿಆರ್‌ಎಫ್ ನಿಯಮಾವಳಿಗಳಂತೆ ಪರಿಹಾರ ನೀಡಲು ಸೂಚಿಸಲಾಗಿದೆ. 2,300 ವಿದ್ಯುತ್ ಕಂಬಗಳು ಬಿದ್ದಿದ್ದು, ರಸ್ತೆ, ಸೇತುವೆ, ಶಾಲಾ ಕಟ್ಟಡಗಳ ಹಾನಿಯನ್ನು ಮೌಲ್ಯಮಾಪನ ಮಾಡಿ ಪರಿಹಾರ ನೀಡಲು ಹಣ ಬಿಡುಗಡೆ ಮಾಡಲಾಗಿದೆ' ಎಂದರು.

ನಗರದಲ್ಲಿ ಇಂದು


ಸಶಸ್ತ್ರ ಪೊಲೀಸ್ ತರಬೇತಿ ಶಾಲೆಯ 7ನೇ ತಂಡದ ಸಶಸ್ತ್ರ ಪೊಲೀಸ್ ಕಾನ್‌ಸ್ಟೆಬಲ್‌ಗಳ ನಿರ್ಗಮನ ಪಥಸಂಚಲನ ಹಾಗೂ ನವೀಕರಣಗೊಂಡ ಸಭಾಂಗಣದ ಉದ್ಘಾಟನೆ: ಗೃಹ ಸಚಿವ ಆರಗ ಜ್ಞಾನೇಂದ್ರ, ಅತಿಥಿಗಳು–ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಸ್ಥಳ–ತರಬೇತಿ ಶಾಲೆಯ ಕವಾಯತು ಮೈದಾನ, ಯಲಹಂಕ, ಬೆಳಿಗ್ಗೆ 8.30



ಪ್ರವೀಣ್ ಸೂದ್

'ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನ' ಕುರಿತು ಒಂದು ದಿನದ ಕಾರ್ಯಾಗಾರ: ಉದ್ಘಾಟನೆ: ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ.ಪ್ರದೀಪ್, ಅಧ್ಯಕ್ಷತೆ–ಪ್ರೊ.ಎಲ್.ಗೋಮತಿ ದೇವಿ, ಆಯೋಜನೆ–ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಸ್ಥಳ–ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 11.30

ಕಡಿದಾಳ್ ಮಂಜಪ್ಪ ಹಾಗೂ ಮೈಸೂರು ಗಂಧದ ಎಣ್ಣೆ ಕುರಿತು ವಿಶೇಷ ಅಂಚೆ ಲಕೋಟೆ ಬಿಡುಗಡೆ: ಪೋಸ್ಟ್ ಮಾಸ್ಟರ್ ಜನರಲ್ ಎಲ್.ಕೆ.ಡ್ಯಾಶ್, ಅತಿಥಿಗಳು–ಮಹೇಶ್ ಬಿ.ಶಿರೂರು, ಶ್ರೀಕಲಾ ಕಡಿದಾಳ್, ಆಯೋಜನೆ–ಅಂಚೆ ಇಲಾಖೆ, ಸ್ಥಳ–ಮೇಘದೂತ ಸಭಾಂಗಣ, ಇಲಾಖೆ ಕೇಂದ್ರ ಕಚೇರಿ (ಜಿಪಿಒ), ಮಧ್ಯಾಹ್ನ 3



ಕೋವಿಡ್ ನಿಯಂತ್ರಣದಿಂದ ಸಂಸ್ಥೆಗೆ ಭೇಟಿ ನೀಡುವ ರೋಗಿಗಳ ಸಂಖ್ಯೆ ದಿಢೀರ್ ಏರಿಕೆ

ಕ್ಯಾನ್ಸರ್ ಉಲ್ಬಣ: ಕಿದ್ವಾಯಿ ಹಾಸಿಗೆಗಳು ಭರ್ತಿ

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ಕಡಿಮೆಯಾಗುತ್ತಿರುವುದರಿಂದಾಗಿ, ಕ್ಯಾನ್ಸರ್ ಚಿಕಿತ್ಸೆಗೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ಬರುವ ರೋಗಿಗಳ ಸಂಖ್ಯೆ ದಿಢೀರ್ ಏರಿಕೆ ಕಂಡಿದೆ. ಸಂಸ್ಥೆಯಲ್ಲಿನ ಎಲ್ಲ 700 ಹಾಸಿಗೆಗಳು ಭರ್ತಿಯಾಗಿವೆ.

ಮೂರು ತಿಂಗಳಿಂದ ಪ್ರತಿನಿತ್ಯ ಸರಾಸರಿ 1,200 ಹಳೆ ರೋಗಿಗಳು ಸಂಸ್ಥೆಗೆ ಭೇಟಿ ನೀಡುತ್ತಿದ್ದಾರೆ. 80ರಿಂದ 100 ಹೊಸ ಪ್ರಕರಣಗಳು ಪತ್ತೆಯಾಗುತ್ತಿವೆ. ಇದರಿಂದಾಗಿ ರೋಗಿಗಳ ನಿರ್ವಹಣೆ ಸಂಸ್ಥೆಗೆ ಸವಾಲಾಗಿ ಪರಿಣಮಿಸಿದೆ.

ಕಳೆದ ವರ್ಷ ಕೋವಿಡ್ ಪ್ರಕರಣಗಳು ಪತ್ತೆಯಾಗುತ್ತಿದ್ದಂತೆ ಸಂಸ್ಥೆಗೆ ಕ್ಯಾನ್ಸರ್ ತಪಾಸಣೆ ಹಾಗೂ ಚಿಕಿತ್ಸೆಗೆ ಬರುವವರ ಸಂಖ್ಯೆ ಇಳಿಕೆ ಕಂಡಿತ್ತು. ಕೋವಿಡ್ ಪೂರ್ವದಲ್ಲಿ ಪ್ರತಿನಿತ್ಯ ಸರಾಸರಿ 55 ಹೊಸ ಪ್ರಕರಣಗಳು ಸಂಸ್ಥೆಯಲ್ಲಿ ಪತ್ತೆಯಾಗುತ್ತಿದ್ದವು. ಕಳೆದ ವರ್ಷ ಕೋವಿಡ್‌ನಿಂದಾಗಿ ಕ್ಯಾನ್ಸರ್ ತಪಾಸಣೆ ಶಿಬಿರಗಳು ನಡೆದಿರಲಿಲ್ಲ. ಆಸ್ಪತ್ರೆಗಳಲ್ಲಿಯೂ ಕೋವಿಡ್ ಚಿಕಿತ್ಸೆಗೆ ಆದ್ಯತೆ ನೀಡಲಾಗಿತ್ತು. ಇದರಿಂದಾಗಿ ಸಂಸ್ಥೆಯಲ್ಲಿ ದಿನವೊಂದಕ್ಕೆ ದಾಖಲಾಗುತ್ತಿದ್ದ ಹೊಸ ಪ್ರಕರಣಗಳ ಸರಾಸರಿ ಸಂಖ್ಯೆ 37ಕ್ಕೆ ಇಳಿಕೆಯಾಗಿತ್ತು.


ಕೋವಿಡ್ ಎರಡನೇ ಅಲೆಯು ನಿಯಂತ್ರಣಕ್ಕೆ ಬಂದಿರುವುದರಿಂದ ಕಳೆದ ಮೂರು ತಿಂಗಳಿಂದ ಕ್ಯಾನ್ಸರ್ ತಪಾಸಣಾ ಶಿಬಿರಗಳು ಪುನರಾರಂಭವಾಗಿವೆ. ಮೊಬೈಲ್ ವಾಹನಗಳ ಮೂಲಕವೂ ತಪಾಸಣೆ ಮಾಡಲಾಗುತ್ತಿದೆ. ಇದರಿಂದಾಗಿ ಹೊಸ ಪ್ರಕರಣಗಳ ಜೊತೆಗೆ ಚಿಕಿತ್ಸೆಗೆ ಬರುವ ಹಳೆ ರೋಗಿಗಳ ಸಂಖ್ಯೆಯೂ ಏರುಮುಖವಾಗಿದೆ.

ತಪಾಸಣೆಯಿಂದ ದೃಢ: 'ಕೋವಿಡ್ ಮೊದಲ ಮತ್ತು ಎರಡನೇ ಅಲೆಯ ಅವಧಿಯಲ್ಲಿ ಸಂಸ್ಥೆಗೆ ಬರುವ ರೋಗಿಗಳ ಸಂಖ್ಯೆ ಇಳಿಕೆಯಾಗಿತ್ತು. ಈ ಅವಧಿಯಲ್ಲಿ ಕ್ಯಾನ್ಸರ್ ತಪಾಸಣೆ ಮಾಡಿಸಿಕೊಳ್ಳಲು ಗ್ರಾಮೀಣ ಪ್ರದೇಶದ ಜನರು ಅಷ್ಟಾಗಿ ಮುಂದೆ ಬರಲಿಲ್ಲ. ಈಗ ತಪಾಸಣೆಗೆ ಒಳಪಡುತ್ತಿರುವುದರಿಂದ ಹೊಸ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆಯಾಗುತ್ತಿವೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದರು.

'ರಾಜ್ಯದ ವಿವಿಧೆಡೆ ಕಿದ್ವಾಯಿಯ ಪ್ರಾದೇಶಿಕ ಕೇಂದ್ರಗಳನ್ನು ಪ್ರಾರಂಭಿಸಲಾಗುತ್ತಿದೆ. ಬೆಂಗಳೂರಿನ ಉತ್ತರದಲ್ಲಿ ಸಂಸ್ಥೆಯ ಸಂಶೋಧನ ಮತ್ತು ಉಪಶಮನ ಚಿಕಿತ್ಸೆ ಕೇಂದ್ರ ಸ್ಥಾಪನೆಗೆ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಲಾಗಿದೆ. ಇಲ್ಲಿನ ರೋಗಿಗಳ ಜೊತೆಗೆ ಹೊರ ರಾಜ್ಯಗಳಿಂದಲೂ ಕ್ಯಾನ್ಸರ್ ಪೀಡಿತರು ಚಿಕಿತ್ಸೆಗೆ ಬರುತ್ತಾರೆ. ಹೀಗಾಗಿ, ರೋಗಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ' ಎಂದರು.

ಸಂಸ್ಥೆಯ ಕ್ಯಾನ್ಸರ್ ನೋಂದಣಿ ಪ್ರಕಾರ 1984ರಿಂದ 2020ರ ಅವಧಿಯಲ್ಲಿ ಒಟ್ಟು 4,19,052 ಮಂದಿ ಕ್ಯಾನ್ಸರ್ ಶಂಕೆಯಿಂದ ದಾಖಲಾಗಿದ್ದಾರೆ. ಇವರಲ್ಲಿ 2,45,797 ಮಂದಿ ಕ್ಯಾನ್ಸರ್ ಪೀಡಿತರಾಗಿರುವುದು ದೃಢಪಟ್ಟಿದೆ.


ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಹೊರರೋಗಿ ವಿಭಾಗ – ಪ್ರಜಾವಾಣಿ ಚಿತ್ರ



> ಕೋವಿಡ್ ನಿಯಂತ್ರಣಕ್ಕೆ ಬಂದಿರುವುದರಿಂದ ಕ್ಯಾನ್ಸರ್ ತಪಾಸಣೆಯನ್ನು ಎಲ್ಲೆಡೆ ನಡೆಸಲಾಗುತ್ತಿದೆ. ಇದರಿಂದ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆಯಾಗುತ್ತಿವೆ
> **ಡಾ.ಸಿ. ರಾಮಚಂದ್ರ,** ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ಸಂಸ್ಥೆಯಲ್ಲಿ ನೋಂದಣಿಯಾದ ಪ್ರಕರಣಗಳು


2016	17,035
2017	17,874
2018	18,990
2019	19,764
2020	13,793
2021 (ಸೆ.12)	12,925

ಕೋವಿಡ್ ಚೇತರಿಕೆ: ಮಕ್ಕಳಲ್ಲಿ ಹೊಸ ಸಮಸ್ಯೆ

ಬೆಂಗಳೂರು: ಕೋವಿಡ್‌ನಿಂದ ಚೇತರಿಸಿಕೊಂಡ ಕೆಲ ತಿಂಗಳ ಬಳಿಕ ಮಕ್ಕಳಲ್ಲಿ ಹೊಸ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿರುವುದನ್ನು ನಗರದ ವೈದ್ಯರು ಗುರುತಿಸಿದ್ದು, ಕಾಲು ಬೆರಳುಗಳು ಬಿಳಿಚುಕೊಳ್ಳುವಿಕೆ ಹಾಗೂ ರಕ್ತ ಪರಿಚಲನೆಯಲ್ಲಿ ವ್ಯತ್ಯಾಸ ಕಂಡುಬಂದಿದೆ.

ಕೋರಮಂಗಲದ ಗ್ರೋಯಿಂಗ್ ಅಪ್ ಚಿಲ್ಡ್ರನ್ಸ್ ಕ್ಲಿನಿಕ್‌ನಲ್ಲಿ ಐದು ಪ್ರಕರಣಗಳು ಹಾಗೂ ಬನ್ನೇರುಘಟ್ಟದ ಅಪೋಲೊ ಆಸ್ಪತ್ರೆಯಲ್ಲಿ ಮೂರು ಪ್ರಕರಣಗಳನ್ನು ಗುರುತಿಸಲಾಗಿದೆ.

'ಕೋವಿಡ್‌ನಿಂದ ಚೇತರಿಸಿಕೊಂಡ ಬಳಿಕ ದೇಹದಲ್ಲಿ ಅಭಿವೃದ್ಧಿ ಹೊಂದುವ ಪ್ರತಿಕಾಯಗಳು ಉರಿಯೂತಕ್ಕೆ ಕಾರಣವಾಗುವ ಸಾಧ್ಯತೆಯಿರುತ್ತದೆ. ಇದು ಕಾಲು ಬೆರಳು ಹಾಗೂ ಕೈಗಳಲ್ಲಿನ ರಕ್ತನಾಳಗಳ ಮೇಲೆ ಪರಿಣಾಮ ಬೀರುತ್ತದೆ. 5ರಿಂದ 11 ವರ್ಷದ ಮಕ್ಕಳಲ್ಲಿ ಹೆಚ್ಚಾಗಿ ಈ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ' ಎಂದು ಗ್ರೋಯಿಂಗ್ ಅಪ್ ಚಿಲ್ಡ್ರನ್ಸ್ ಕ್ಲಿನಿಕ್‌ನ ಮಕ್ಕಳ ತಜ್ಞ ಡಾ. ಶ್ರೀನಾಥ್ ಎಸ್. ತಿಳಿಸಿದರು.



ಲಸಿಕೆ ಪಡೆಯದಿದ್ದರೆ ಪಡಿತರ ಸ್ಥಗಿತ?

ತುಮಕೂರು: 'ಹಿಂದೆ ಕೋವಿಡ್ ಲಸಿಕೆ ಇಲ್ಲ ಎನ್ನುತ್ತಿದ್ದರು. ಈಗ ಲಸಿಕೆ ಲಭ್ಯವಿದ್ದರೂ ಪಡೆದುಕೊಳ್ಳಲು ಮುಂದೆ ಬರುತ್ತಿಲ್ಲ. ಕೋವಿಡ್ ತಡೆಗಟ್ಟಲು ಎಲ್ಲರಿಗೂ ಲಸಿಕೆ ಹಾಕುವುದು ಅನಿವಾರ್ಯವಾಗಿದ್ದು, ಹಾಕಿಸಿಕೊಳ್ಳದವರಿಗೆ ಪಡಿತರ ನೀಡುವುದನ್ನು ಸ್ಥಗಿತಗೊಳಿಸುವಂತೆ ಈಗಾಗಲೇ ಸಲಹೆ ನೀಡಿದ್ದೇನೆ' ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು.

ಕೆಡಿಪಿ ಸಭೆಯಲ್ಲಿ ಮಂಗಳವಾರ ಮಾತನಾಡಿ, 'ಲಸಿಕೆ ಹಾಕಿಸಿಕೊಳ್ಳದವರಿಗೆ ಪಡಿತರ ನೀಡದಿರುವ ನಿರ್ಧಾರವನ್ನು ಜಿಲ್ಲೆಯ ಮಟ್ಟಿಗಾದರೂ ತೆಗೆದುಕೊಳ್ಳಬೇಕಿದೆ. ಕೆಡಿಪಿ ಸಭೆ ಬುಧವಾರವೂ ಮುಂದುವರೆಯಲಿದ್ದು, ಸಭೆಯಲ್ಲಿ ಜಿಲ್ಲೆಯ ಶಾಸಕರು ಭಾಗವಹಿಸಲಿದ್ದಾರೆ. ಎಲ್ಲರ ಜತೆಗೂ ಚರ್ಚಿಸಿ ಅಂತಹದೊಂದು ಕಠಿಣ ನಿರ್ಧಾರ ಕೈಗೊಳ್ಳಬೇಕಿದೆ. ಜಿಲ್ಲೆಯಲ್ಲಿ ಇನ್ನೂ 5 ಲಕ್ಷ ಜನರು ಲಸಿಕೆ ಹಾಕಿಸಿಕೊಂಡಿಲ್ಲ' ಎಂದರು.


ಮಾಧುಸ್ವಾಮಿ

ಕೋವಿಡ್ ಯಾವ ಸಮಯದಲ್ಲಿ ಬೇಕಾದರೂ ಹೆಚ್ಚಾಗಬಹುದು. ನಿಯಂತ್ರಿಸಲು ಈಗಿನಿಂದಲೇ ಕ್ರಮ ಕೈಗೊಳ್ಳದಿದ್ದರೆ ಮುಂದೆ ತೊಂದರೆ ಅನುಭವಿಸಬೇಕಾಗುತ್ತದೆ ಎಂದರು.

ಕೋವಿಡ್ ಲಸಿಕೆಯ ತುರ್ತು ಬಳಕೆಗೆ ಅನುಮತಿ ನೀಡಬಹುದು: ಸಿಡಿಎಸ್‌ಸಿಒ

2–18ರ ಮಕ್ಕಳಿಗೆ ಕೋವ್ಯಾಕ್ಸಿನ್: ಶಿಫಾರಸು

ನವದೆಹಲಿ (ಪಿಟಿಐ): ಎರಡರಿಂದ 18 ವರ್ಷದ ಮಕ್ಕಳಿಗೆ ಭಾರತ್ ಬಯೊಟೆಕ್‌ನ ಕೋವಿಡ್ ಲಸಿಕೆ ಕೋವ್ಯಾಕ್ಸಿನ್ ಅನ್ನು ತುರ್ತು ಸಂದರ್ಭದಲ್ಲಿ ನೀಡಬಹುದು ಎಂದು ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆಯು (ಸಿಡಿಎಸ್‌ಸಿಒ) ಮಂಗಳವಾರ ಶಿಫಾರಸು ಮಾಡಿದೆ. ಈ ಶಿಫಾರಸನ್ನು ಪರಿಗಣಿಸಿ ಕೋವ್ಯಾಕ್ಸಿನ್ ಅನ್ನು 2-18 ವರ್ಷದ ಮಕ್ಕಳಿಗೆ ನೀಡಲು ಭಾರತೀಯ ಪ್ರಧಾನ ಔಷಧ ನಿಯಂತ್ರಕರು ಇನ್ನಷ್ಟೇ ಅನುಮತಿ ನೀಡಬೇಕಿದೆ.

ಝೈಡಸ್ ಕ್ಯಾಡಿಲಾ ಕಂಪನಿಯ ಮೂರು ಡೋಸ್‌ಗಳ ಇಂಜೆಕ್ಷನ್ ರಹಿತ ಲಸಿಕೆ ಜೈಕೋವ್-ಡಿ ಅನ್ನು ತುರ್ತು ಸಂದರ್ಭದಲ್ಲಿ 12-18 ವರ್ಷದ ಮಕ್ಕಳಿಗೆ ನೀಡಲು ಈಗಾಗಲೇ ಅನುಮತಿ ದೊರೆತಿದೆ. ಕೋವ್ಯಾಕ್ಸಿನ್‌ಗೆ ಈ ಅನುಮತಿ ದೊರೆತರೆ, 2 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನ ಮಕ್ಕಳಿಗೂ ನೀಡಬಹುದಾದ ಲಸಿಕೆ ಮಾರುಕಟ್ಟೆಯಲ್ಲಿ ಲಭ್ಯವಾಗುತ್ತದೆ.

2ರಿಂದ 18 ವರ್ಷದ ಮಕ್ಕಳ ಮೇಲೆ ನಡೆಸಲಾದ 2ನೇ ಮತ್ತು 3ನೇ ಹಂತದ ಕ್ಲಿನಿಕಲ್ ಟ್ರಯಲ್‌ನ ವರದಿಯನ್ನು ಸಿಡಿಎಸ್‌ಸಿಒಗೆ ಭಾರತ್ ಬಯೊಟೆಕ್ ಸಲ್ಲಿಸಿತ್ತು. ಅವುಗಳನ್ನು ಪರಿಶೀಲಿಸಿ ಸಿಡಿಎಸ್‌ಸಿಒ ಈ ಶಿಫಾರಸು ಮಾಡಿದೆ. ಆದರೆ ಅನುಮತಿ ನೀಡಲು ಕೆಲವು ಷರತ್ತುಗಳನ್ನು ವಿಧಿಸಬೇಕು ಎಂದೂ ಸಿಡಿಎಸ್‌ಸಿಒ ಹೇಳಿದೆ.

'12-18 ವರ್ಷದ ಮೇಲೆ ಈಗ ನಡೆಸಲಾಗುತ್ತಿರುವ ಕೊನೆಯ ಹಂತದ ಕ್ಲಿನಿಕಲ್ ಟ್ರಯಲ್‌ನ ಅಂತಿಮ ವರದಿಯನ್ನು ಭಾರತ್ ಬಯೊಟೆಕ್ ಸಲ್ಲಿಸಬೇಕು. ಅಗತ್ಯವಿರುವ ಕ್ಲಿನಿಕಲ್ ಟ್ರಯಲ್‌ಗಳನ್ನು ಪೂರೈಸಬೇಕು. ಈ ಷರತ್ತುಗಳಿಗೆ ಬದ್ಧವಾಗಿದ್ದರೆ ಮಾತ್ರವೇ ತುರ್ತು ಬಳಕೆಗೆ ಅನುಮತಿ ನೀಡಬೇಕು. ತುರ್ತು ಬಳಕೆಗೆ ಅನುಮತಿ ದೊರೆತ ನಂತರದ ಎರಡು ತಿಂಗಳವರೆಗೆ ಪ್ರತಿ 15 ದಿನಕ್ಕೊಮ್ಮೆ ಲಸಿಕೆ ಬಳಕೆಯ ವರದಿಯನ್ನು ಕಂಪನಿ ಸಲ್ಲಿಸಬೇಕು' ಎಂದು ಸಿಡಿಎಸ್‌ಸಿಒ ಹೇಳಿದೆ.

ಹೈದರಾಬಾದ್‌ನ ಬಯಲಾಜಿಕಲ್-ಇ ಕಂಪನಿಯು 5ರಿಂದ 18 ವರ್ಷದ ಮಕ್ಕಳ ಮೇಲೆ ತನ್ನ ಕೋವಿಡ್ ಲಸಿಕೆಯ 3ನೇ ಹಂತದ ಕ್ಲಿನಿಕಲ್ ಟ್ರಯಲ್ ನಡೆಸುತ್ತಿದೆ. ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾವು 2ರಿಂದ 17 ವರ್ಷದ ಮಕ್ಕಳ ಮೇಲೆ ತನ್ನ ಕೋವೊವ್ಯಾಕ್ಸ್ ಲಸಿಕೆಯ ಮೂರನೇ ಹಂತದ ಕ್ಲಿನಿಕಲ್ ಟ್ರಯಲ್ ಅನ್ನು ನಡೆಸುತ್ತಿದೆ.

4 ವರ್ಷಗಳ ಬಿ.ಎಸ್ಸಿ (ಆನರ್ಸ್) ಪದವಿಗೆ ಸಿಎಂ ಚಾಲನೆ

ಇನ್ನು ಕನ್ನಡದಲ್ಲೂ ಬಿ.ಇ. ಬೋಧನೆ

ಬೆಂಗಳೂರು: 'ಇಡೀ ಶಿಕ್ಷಣ ವ್ಯವಸ್ಥೆ ಆಮೂಲಾಗ್ರವಾಗಿ ಬದಲಾಗಬೇಕಾಗಿದ್ದು, ಈ ಉದ್ದೇಶದಿಂದ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗೆ ತರಲಾಗುತ್ತಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ರಾಜ್ಯದ ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಎನ್‌ಇಪಿ ಜಾರಿಗೆ ತರುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇದೇ ಸಂದರ್ಭದಲ್ಲಿ ಅವರು ಬಿ.ಇ ಕಲಿಕೆಗೆ ರಾಜ್ಯವನ್ನು ಅತ್ಯುತ್ತಮ ತಾಣವನ್ನಾಗಿ ಬೆಳೆಸುವ ಉದ್ದೇಶದ 'ಡೆಸ್ಟಿನೇಶನ್ ಕರ್ನಾಟಕ', ಎಂಜಿನಿಯರಿಂಗ್ ಕಾಲೇಜುಗಳಲ್ಲಿ ನಾಲ್ಕು ವರ್ಷಗಳ ಬಿ.ಎಸ್ಸಿ (ಆನರ್ಸ್) ಪದವಿ ಮತ್ತು ಕನ್ನಡ ಮಾಧ್ಯಮದಲ್ಲೂ ಬಿ.ಇ ಬೋಧನೆಗೆ ಹಸಿರು ನಿಶಾನೆ ತೋರಿಸಲಾಯಿತು.

'ಶಿಕ್ಷಣ ವ್ಯವಸ್ಥೆಯನ್ನು ದಿಢೀರನೆ ಬದಲಿಸಲು ಸಾಧ್ಯವಿಲ್ಲ. ಹಲವು ವರ್ಷಗಳ ಕಾಲದ ಸಂಶೋಧನೆ, ವಿಶ್ಲೇಷಣೆ, ಅಳವಡಿಸಿಕೊಳ್ಳಲು ಇರುವ ಸಾಧ್ಯತೆಗಳು ಎಲ್ಲವನ್ನೂ ಗಂಭೀರವಾಗಿ ನಡೆಸಿ ಎನ್‌ಇಪಿ ಜಾರಿಗೆ ತರಲಾಗುತ್ತಿದೆ' ಎಂದು ವಿವರಿಸಿದರು.

ಪ್ರಧಾನಿಯವರ ದೂರದೃಷ್ಟಿಯನ್ನು ಕೊಂಡಾಡಿದ ಮುಖ್ಯಮಂತ್ರಿ, ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ ಅವರ ಬಗ್ಗೆಯೂ ಮೆಚ್ಚುಗೆ ವ್ಯಕ್ತಪಡಿಸಿದರು.



ಎಂಜಿನಿಯರಿಂಗ್ ಕಾಲೇಜುಗಳಲ್ಲಿ ನಾಲ್ಕು ವರ್ಷದ ಬಿ.ಎಸ್ಸಿ. ಆನರ್ಸ್ ಮತ್ತು ಕನ್ನಡ ಮಾಧ್ಯಮದಲ್ಲಿ ಎಂಜಿನಿಯರಿಂಗ್ ಶಿಕ್ಷಣಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು. ವಿಟಿಯು ಕುಲಸಚಿವ ಪ್ರೊ. ಕರಿಸಿದ್ದಪ್ಪ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕುಮಾರ ನಾಯಕ್, ಮುಖ್ಯಮಂತ್ರಿ ಕಾರ್ಯದರ್ಶಿ ಜಗದೀಶ್ ಇದ್ದರು–ಪ್ರಜಾವಾಣಿ ಚಿತ್ರ

ಕಾರ್ಯಕ್ರಮದಲ್ಲಿ 'ರಾಷ್ಟ್ರೀಯ ಶಿಕ್ಷಣ ನೀತಿ ಗೀತೆ'ಯಾದ 'ಜಯವಾಗಲಿ ಶಿಕ್ಷಣಕೆ'ಯನ್ನು ಕೂಡ ಮುಖ್ಯಮಂತ್ರಿ ಬಿಡುಗಡೆ ಮಾಡಿದರು. ಧಾರವಾಡದ ಉನ್ನತ ಶಿಕ್ಷಣ ಪರಿಷತ್ತಿನ ನಿರ್ದೇಶಕ ಪ್ರೊ.ಎಸ್.ಎಂ. ಶಿವಪ್ರಸಾದ್ ರಚಿಸಿರುವ ಈ ಗೀತೆಗೆ ರವಿ ಬಸ್ರೂರು ಸಂಗೀತ ನೀಡಿದ್ದಾರೆ. ಎನ್‌ಇಪಿ ಆಶಯಗಳನ್ನು ಸಾರುವ ಈ ಗೀತೆಯನ್ನು ಹೊಂಬಾಳೆ ಫಿಲಂಸ್ ಸಂಸ್ಥೆಯ ಮಾಲೀಕ ವಿಜಯ್ ಕಿರಗಂದೂರು ಅವರು ಉಚಿತವಾಗಿ ನಿರ್ಮಿಸಿ ಕೊಟ್ಟಿದ್ದಾರೆ.

'75 ಕಾಲೇಜುಗಳಲ್ಲಿ ಬಿ.ಎಸ್ಸಿ (ಆನರ್ಸ್)'

'ಖಾಸಗಿ ಶಿಕ್ಷಣ ಸಂಸ್ಥೆಗಳೊಂದಿಗೆ ಕೈಜೋಡಿಸಿ, ಎನ್‌ಇಪಿ ಆಶಯಗಳಿಗೆ ಅನುಗುಣವಾಗಿ ಐಐಟಿ ಮತ್ತು ಐಐಎಸ್ಸಿ ಗುಣಮಟ್ಟದ ಬಿ.ಇ. ಮತ್ತು ನಾಲ್ಕು ವರ್ಷಗಳ ಬಿ.ಎಸ್ಸಿ (ಆನರ್ಸ್) ಪದವಿ ಪಠ್ಯಗಳನ್ನು ರೂಪಿಸಲಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

'66 ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಈಗಾಗಲೇ ಬಿ.ಎಸ್ಸಿ(ಆನರ್ಸ್) ಆರಂಭಿಸಲು ಅನುಮತಿ ನೀಡಲಾಗಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ನೆನಪಿನಲ್ಲಿ ಒಟ್ಟು 75 ಕಾಲೇಜುಗಳಲ್ಲಿ ಈ ಪದವಿ ಆರಂಭಿಸಲಾಗುವುದು' ಎಂದರು.

ಪಠ್ಯ ಕಡಿತ ಇಲ್ಲ; ವಾರಾಂತ್ಯ ತರಗತಿಗೆ ಚಿಂತನೆ

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ (2021-22) ಶಾಲಾ ಪಠ್ಯ ಕಡಿತಗೊಳಿಸದಿರಲು ನಿರ್ಧರಿಸಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ನಷ್ಟವಾಗಿರುವ ಶೈಕ್ಷಣಿಕ ದಿನಗಳನ್ನು ಸರಿದೂಗಿಸಲು ವಾರಾಂತ್ಯದ ದಿನಗಳಲ್ಲಿ ವಿಶೇಷ ತರಗತಿ ನಡೆಸಲು ಚಿಂತನೆ ನಡೆಸಿದೆ.

ಅ. 21ರಿಂದ ಪ್ರಾಥಮಿಕ ಹಂತದಿಂದಲೇ ಭೌತಿಕ ತರಗತಿಗಳನ್ನು ಆರಂಭಿಸಲು ಇಲಾಖೆ ನಿರ್ಧರಿಸಿದೆ. ಕೋವಿಡ್ ಕಾರಣದಿಂದ ಶಾಲಾ ದಿನಗಳು ನಷ್ಟವಾಗಿದೆ. ಹೀಗಾಗಿ, ಪಠ್ಯಗಳನ್ನು ಮುಗಿಸಲು 10 ಮತ್ತು 12ನೇ ತರಗತಿಗೆ ಶನಿವಾರ ಮತ್ತು ಭಾನುವಾರ ವಿಶೇಷ ತರಗತಿಗಳನ್ನು ನಡೆಸಲು ಇಲಾಖೆ ಮುಂದಾಗಿದೆ.

ಪಠ್ಯ ಕಡಿತಗೊಳಿಸುವಂತೆ ಸರ್ಕಾರಿ ಶಾಲೆಗಳ ಶಿಕ್ಷಕರು ಮತ್ತು ಖಾಸಗಿ ಶಾಲಾ ಆಡಳಿತ ಮಂಡಳಿಗಳು ಬೇಡಿಕೆ ಇಟ್ಟಿವೆ. ಆದರೆ, ಈ ಕುರಿತು ಪ್ರತಿಕ್ರಿಯಿಸಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, 'ಪಠ್ಯ ಕಡಿತ ಮಾಡುವ ಪ್ರಶ್ನೆಯೇ ಇಲ್ಲ. ಅಗತ್ಯಬಿದ್ದರೆ ವಾರಾಂತ್ಯದ ದಿನಗಳಲ್ಲಿ ತರಗತಿಗಳನ್ನು ನಡೆಸಲಾಗುವುದು' ಎಂದರು.

'ನಿಗದಿತ ಸಮಯದ ಒಳಗೆ ಈ ವರ್ಷ ಪಠ್ಯಗಳನ್ನು ಪೂರ್ಣಗೊಳ್ಳುವ ವಿಶ್ವಾಸವಿದೆ. ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಬ್ರಿಡ್ಜ್ ಕೋರ್ಸ್ (ಸೇತು ಬಂಧ) ಮೂಲಕ ಪ್ರಥಮ ಪಿಯುಸಿಯಲ್ಲಿ ಕಡಿತಗೊಳಿಸಿದ್ದ ಪಾಠಗಳನ್ನು ಬೋಧಿಸಲಾಗುವುದು' ಎಂದರು.

'ಪಠ್ಯ ಕಡಿತಗೊಳಿಸುವ ಬಗ್ಗೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸೂಕ್ತ ನಿರ್ಧಾರ ತೆಗೆದುಕೊಳ್ಳುವಂತೆ ನಾವು ಸಚಿವರಿಗೆ ಮನವಿ ಸಲ್ಲಿಸಿದ್ದೇವೆ' ಎಂದು ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ತಿಳಿಸಿದರು.

ರಸಗೊಬ್ಬರಕ್ಕೆ ₹28.655 ಕೋಟಿ ಸಬ್ಸಿಡಿ

ನವದೆಹಲಿ: ಬಿತ್ತನೆ ಅವಧಿಯಲ್ಲಿ ರೈತರಿಗೆ ಕೈಗೆಟುಕುವ ದರದಲ್ಲಿ ರಸಗೊಬ್ಬರ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರವು ಮಂಗಳವಾರ ಫಾಸ್ಫಟಿಕ್ ಮತ್ತು ಪೊಟ್ಯಾಶ್ (ಪಿ ಅಂಡ್ ಕೆ) ರಸಗೊಬ್ಬರಗಳಿಗೆ ₹28,655 ಕೋಟಿ ನಿವ್ವಳ ಸಹಾಯಧನ ಘೋಷಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಅಧ್ಯಕ್ಷರಾಗಿರುವ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ (ಸಿಸಿಇಎ) 2021ರ ಅಕ್ಟೋಬರ್ ನಿಂದ 2022ರ ಮಾರ್ಚ್‌ವರೆಗೆ ಫಾಸ್ಫಟಿಕ್ ಮತ್ತು ಪೊಟ್ಯಾಶ್ ರಸಗೊಬ್ಬರಗಳಿಗೆ ಸಬ್ಸಿಡಿ (ಎನ್‌ಬಿಎಸ್) ನೀಡಲಾಗುತ್ತದೆ.

ಹೆಚ್ಚುವರಿ ಸಬ್ಸಿಡಿಯು 2021-22ರ ರಬಿ ಋತುವಿನಲ್ಲಿ ರೈತರಿಗೆ ಎಲ್ಲ ಪಿ ಮತ್ತು ಕೆ ರಸಗೊಬ್ಬರಗಳು ಕೈಗೆಟುಕುವ ದರದಲ್ಲಿ ಸರಾಗವಾಗಿ ಲಭಿಸುವಂತೆ ಮಾಡಲು ಹೆಚ್ಚುವರಿ ಸಬ್ಸಿಡಿ ನೀಡಲಾಗುತ್ತಿದೆ. 2021-22ರ ಬಜೆಟ್‌ನಲ್ಲಿ ರಸಗೊಬ್ಬರ ಸಬ್ಸಿಡಿಗಾಗಿ ಸುಮಾರು ₹79,600 ಕೋಟಿ ನಿಗದಿಪಡಿಸಲಾಗಿದೆ. ಹೆಚ್ಚುವರಿ ಸಬ್ಸಿಡಿ ಒದಗಿಸಿದ ನಂತರ ಈ ಅಂಕಿಅಂಶ ಏರಿಕೆಯಾಗಬಹುದು ಎಂದು ಸರ್ಕಾರ ಮಂಗಳವಾರ ಹೇಳಿದೆ.

ಸರ್ಕಾರಿ ಮತ್ತು ಖಾಸಗಿ ವಲಯದ 100 ಶಾಲೆಗಳನ್ನು ಸೈನಿಕ್ ಸ್ಕೂಲ್ ಸೊಸೈಟಿಯೊಂದಿಗೆ ಸಂಯೋಜಿಸುವ ಪ್ರಸ್ತಾವನೆಗೂ ಕ್ಯಾಬಿನೆಟ್ ಅನುಮೋದನೆ ನೀಡಿದೆ.

ಸ್ವಚ್ಛ ಭಾರತ ಮಿಷನ್ (ನಗರ) ಅನ್ನು 2025–26ರವರೆಗೆ ಮುಂದುವರಿಸಲು ಸಂಪುಟ ಒಪ್ಪಿಗೆ ನೀಡಿದೆ.

ಬಿಎಂಶ್ರೀ ಪ್ರತಿಷ್ಠಾನ: ಬೈರಮಂಗಲ ರಾಮೇಗೌಡ ಅಧ್ಯಕ್ಷ

ಬೆಂಗಳೂರು: ಎನ್.ಆರ್.ಕಾಲೊನಿಯ ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷರಾಗಿ ಲೇಖಕ ಡಾ.ಬೈರಮಂಗಲ ರಾಮೇಗೌಡ ಆಯ್ಕೆಯಾಗಿದ್ದಾರೆ. ಈ ಹಿಂದೆ ಆರ್. ಲಕ್ಷ್ಮೀನಾರಾಯಣ ಅವರು ಪ್ರತಿಷ್ಠಾನದ ಅಧ್ಯಕ್ಷರಾಗಿದ್ದರು.

ಪಿಎಚ್‌.ಡಿ ಕಡ್ಡಾಯಕ್ಕೆ 2 ವರ್ಷ ವಿನಾಯಿತಿ

ನವದೆಹಲಿ (ಪಿಟಿಐ): ವಿಶ್ವವಿದ್ಯಾಲಯಗಳಲ್ಲಿನ ಸಹಾಯಕ ಪ್ರಾಧ್ಯಾಪಕರ ನೇರ ನೇಮಕಾತಿಯ ಅರ್ಹತೆಗಾಗಿ ನಿಗದಿ ಪಡಿಸಲಾಗಿದ್ದ ಪಿಎಚ್‌.ಡಿ ಕಡ್ಡಾಯ ಮಾನದಂಡ ಅನ್ವಯವಾಗುವ ದಿನಾಂಕವನ್ನು ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ) ಎರಡು ವರ್ಷಗಳವರೆಗೆ ವಿಸ್ತರಿಸಿದೆ.

ಕೋವಿಡ್ ಪಿಡುಗನ್ನು ಗಮನದಲ್ಲಿಟ್ಟುಕೊಂಡು ಯುಜಿಸಿ ಈ ನಿರ್ಧಾರ ತೆಗೆದುಕೊಂಡಿದೆ.

ವಿಶ್ವವಿದ್ಯಾಲಯಗಳ ವಿಭಾಗಗಳಲ್ಲಿನ ಸಹಾಯಕ ಪ್ರಾಧ್ಯಾಪಕರ ನೇರ ನೇಮಕಾತಿಗೆ 2021ರ ಜುಲೈ 1ರಿಂದ ಪಿಎಚ್‌.ಡಿ ಅನ್ನು ಕಡ್ಡಾಯಗೊಳಿಸಲಾಗಿತ್ತು. ಈ ನಿಯಮ ಜಾರಿಯನ್ನು 2023ರ ಜುಲೈ 1ರವರೆಗೆ ಮುಂದೂಡಿರುವುದಾಗಿ ಯುಜಿಸಿ ಪ್ರಕಟಣೆ ಮಂಗಳವಾರ ತಿಳಿಸಿದೆ.

ಸಚಿವ ಡಾ.ಕೆ. ಸುಧಾಕರ್ ಮಾಹಿತಿ: ಡಿಜಿಟಲ್ ಕಲಿಕಾ ನಿರ್ವಹಣಾ ವ್ಯವಸ್ಥೆಗೆ ಚಾಲನೆ

'ಹೃದಯ ಚಿಕಿತ್ಸೆಗೆ ಜಿಲ್ಲಾ ಆಸ್ಪತ್ರೆಗಳಲ್ಲಿ ಘಟಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೃದಯ ಸಂಬಂಧಿ ಸಮಸ್ಯೆಗಳು ಎಲ್ಲ ವಯೋಮಾನದವರಲ್ಲಿಯೂ ಕಾಣಿಸಿಕೊಳ್ಳುತ್ತಿದೆ. ಆದ್ದರಿಂದ ಜಿಲ್ಲಾ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ 50 ಹಾಸಿಗೆಗಳ ಹೃದಯ ಚಿಕಿತ್ಸಾ ಘಟಕವನ್ನು ಪ್ರಾರಂಭಿಸಲಾಗುವುದು' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಡಿಜಿಟಲ್ ಗ್ರಂಥಾಲಯದ ಮಾದರಿಯಲ್ಲಿ ಕಾರ್ಯನಿರ್ವಹಿಸುವ 'ಡಿಜಿಟಲ್ ಕಲಿಕಾ ನಿರ್ವಹಣಾ ವ್ಯವಸ್ಥೆ' ಹಾಗೂ ಫಿಸಿಟಾಲ್ ಸೆಂಟರ್ ಆಫ್ ಅಕಾಡೆಮಿಕ್ಸ್‌ಗೆ ಚಾಲನೆ ನೀಡಿದರು.

'ಇತ್ತೀಚಿನ ವರ್ಷಗಳಲ್ಲಿ ಹೃದಯ ಸಂಬಂಧಿ ಕಾಯಿಲೆಗಳು ಯುವಜನರಲ್ಲಿಯೂ ಕಾಣಿಸಿಕೊಳ್ಳುತ್ತಿವೆ. ಬದಲಾದ ಜೀವನಶೈಲಿ, ಪಾಶ್ಚಾತ್ಯ ಆಹಾರ ಪದ್ಧತಿ ಹಾಗೂ ಒತ್ತಡ ಪ್ರಮುಖ ಕಾರಣ. ಹೃದ್ರೋಗ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಸಣ್ಣ ಚಿಕಿತ್ಸಾ ಘಟಕಗಳನ್ನು ರಾಜ್ಯದ ಎಲ್ಲೆಡೆ ಪ್ರಾರಂಭಿಸಲು ಸರ್ಕಾರ ನಿರ್ಧರಿಸಿದೆ. ಜಯದೇವ ಆಸ್ಪತ್ರೆಯು ಈ ಕಾರ್ಯಕ್ಕೆ ಸಹಕಾರ ನೀಡಲಿದೆ. ನಿರ್ಮಾಣಗೊಳ್ಳುವ ಘಟಕಗಳನ್ನು ವೈದ್ಯಕೀಯ ಕಾಲೇಜುಗಳೇ ನಿರ್ವಹಿಸಲಿವೆ. ಸಂಸ್ಥೆಯ ಶಾಖೆಯನ್ನು ಇನ್ನಷ್ಟು ಕಡೆ ವಿಸ್ತರಿಸಲಾಗುವುದು' ಎಂದರು.



ಡಾ.ಕೆ. ಸುಧಾಕರ್ ಅವರನ್ನು ಡಾ.ಸಿ.ಎನ್. ಮಂಜುನಾಥ್ ಸನ್ಮಾನಿಸಿದರು. ಎಎಂಸಿಐ ಎಡ್‌ಟೆಕ್ ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಸ್ವಪ್ನಾ ಸಿಂಗ್ ಹಾಗೂ ನಿರ್ದೇಶಕ ಡಾ. ಅಮಿತ್ ವರ್ಮಾ ಇದ್ದರು.

1.5 ಕೋಟಿ ಮಕ್ಕಳಿಗೆ ಲಸಿಕೆ

'ಮಕ್ಕಳ ಲಸಿಕೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಮಟ್ಟದಲ್ಲಿ ಮಾತುಕತೆ ನಡೆಯುತ್ತಿದೆ. ಕೊವ್ಯಾಕ್ಸಿನ್ ಲಸಿಕೆಯನ್ನು 2ರಿಂದ 18 ವರ್ಷದ ಮಕ್ಕಳಿಗೆ ನೀಡಲು ತಜ್ಞರ ಸಮಿತಿಯ (ಎಸ್‌ಇಸಿ) ಅನುಮೋದನೆ ದೊರೆತಿದೆ. ಲಸಿಕೆ ಪೂರೈಕೆ ಬಗ್ಗೆ ಕೇಂದ್ರ ಆರೋಗ್ಯ ಸಚಿವಾಲಯದೊಂದಿಗೆ ಚರ್ಚೆ ನಡೆಸಲಾಗುವುದು. ರಾಜ್ಯದಲ್ಲಿ 2ರಿಂದ 18 ವರ್ಷದ ಒಳಗಿನ 1.5 ಕೋಟಿ ಮಕ್ಕಳಿದ್ದಾರೆ. ಅವರಿಗೆ ಲಸಿಕೆ ನೀಡಲು 3 ಕೋಟಿ ಡೋಸ್ ಲಸಿಕೆ ಅಗತ್ಯ' ಎಂದು ಡಾ.ಕೆ. ಸುಧಾಕರ್ ತಿಳಿಸಿದರು.

'ಸಂಸ್ಥೆಯು ಕಾರ್ಪೊರೇಟ್ ಆಸ್ಪತ್ರೆಯಂತೆ ಕೆಲಸ ಮಾಡುತ್ತಿದೆ. ಎಲ್ಲ ವರ್ಗದವರಿಗೂ ವೈದ್ಯಕೀಯ ಚಿಕಿತ್ಸೆಗಳು ದೊರೆಯುತ್ತಿವೆ. ಟೆಲಿ ಮೆಡಿಸಿನ್ ವ್ಯವಸ್ಥೆಯಡಿ ವಿಳಂಬವಾಗದಂತೆ ರೋಗಿಗಳಿಗೆ ಸೇವೆಗಳನ್ನು ನೀಡಲಾಗುತ್ತಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್, 'ನೂತನ ವ್ಯವಸ್ಥೆಯು ವೈದ್ಯಕೀಯ ವಿದ್ಯಾರ್ಥಿಗಳ ಕಲಿಕೆಗೆ ಸಹಕಾರಿಯಾಗಲಿದೆ. ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಹೆಚ್ಚಾಗಿ ತೀವ್ರನಿಗಾ ಘಟಕ, ಶಸ್ತ್ರಚಿಕಿತ್ಸಾ ಘಟಕಗಳಲ್ಲಿ ಇರುತ್ತಾರೆ. ಇದರಿಂದ ತರಗತಿಗಳಿಗೆ ಹಾಜರಾಗಲು ಕೆಲವರಿಗೆ ಸಾಧ್ಯವಾಗುವುದಿಲ್ಲ. ನೂತನ ವ್ಯವಸ್ಥೆಯಡಿ ಬಿಡುವಿನ ಸಮಯದಲ್ಲಿಯೂ ನಿಗದಿತ ಪಾಠಗಳನ್ನು ಅಧ್ಯಯನ ಮಾಡಬಹುದು. ಯಾವುದೇ ಸಮಯದಲ್ಲಿ ತಮಗೆ ಬೇಕಾದ ವಿಷಯವನ್ನು ಹುಡುಕಿ, ತಿಳಿದುಕೊಳ್ಳಬಹುದು. ವಿದ್ಯಾರ್ಥಿಗಳ ಪ್ರಗತಿಗೆ ಇದು ಸಹಕಾರಿಯಾಗಲಿದೆ' ಎಂದು ಹೇಳಿದರು.

ನೀರಾವರಿ, ಹೆದ್ದಾರಿ ಕಾಮಗಾರಿಗಳ ಗುತ್ತಿಗೆದಾರರ ಮೇಲೆ ಐ.ಟಿ ದಾಳಿ • ನಕಲಿ ವಹಿವಾಟು ಬಹಿರಂಗ

₹750 ಕೋಟಿ ಅಘೋಷಿತ ಆದಾಯ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲ ಸಂಪನ್ಮೂಲ ಮತ್ತು ಲೋಕೋಪಯೋಗಿ ಇಲಾಖೆಗಳಲ್ಲಿ ಬೃಹತ್ ಕಾಮಗಾರಿಗಳ ಗುತ್ತಿಗೆ ಪಡೆದಿರುವ ಗುತ್ತಿಗೆದಾರರು ಮತ್ತು ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಕುಟುಂಬದ ಆಪ್ತರಾಗಿದ್ದ ಬಿಎಂಟಿಸಿ ಚಾಲಕ ಆಯನೂರು ಉಮೇಶ್ ಮನೆ, ಕಚೇರಿಗಳಲ್ಲಿ ನಡೆಸಿದ ಶೋಧದಲ್ಲಿ ₹750 ಕೋಟಿಯಷ್ಟು ಅಘೋಷಿತ ಆದಾಯ ಪತ್ತೆಯಾಗಿದೆ ಎಂದು ಆದಾಯ ತೆರಿಗೆ (ಐ.ಟಿ) ಇಲಾಖೆ ತಿಳಿಸಿದೆ.

ಗುತ್ತಿಗೆದಾರರು, ಉಮೇಶ್, ಯಡಿಯೂರಪ್ಪ ಅವರ ಮಗ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಸಹಪಾಠಿ ಅರವಿಂದ್ ರಾಮಸ್ವಾಮಿ ಸೇರಿದಂತೆ ಹಲವರ ಮನೆ, ಕಚೇರಿಗಳ ಮೇಲೆ ದಾಳಿ ನಡೆದಿತ್ತು. ಗುತ್ತಿಗೆದಾರರಾದ ಡಿ.ವೈ. ಉಪ್ಪಾರ, ಸ್ಟಾರ್ ಚಂದ್ರು, ಶಂಕರನಾರಾಯಣ ಕನ್‌ಸ್ಟ್ರಕ್ಷನ್ಸ್, ಅಮೃತ್ ಕನ್‌ಸ್ಟ್ರಕ್ಷನ್ಸ್‌ನ ಎಂ.ಸಿ. ರಾವ್, ಶ್ರೀನಿವಾಸ್, ಬಸವೇಶ್ವರ ನಗರದ ಸೋಮಶೇಖರ್, ಕಬ್ಬಿಣ ಮತ್ತು ಸಿಮೆಂಟ್ ಪೂರೈಸುವ ಸಹಕಾರ ನಗರದ ರಾಹುಲ್ ಎಂಟರ್‌ಪ್ರೈಸಸ್ ಸೇರಿದಂತೆ ಹಲವರ ಮೇಲೆ ಗುರುವಾರ ಐ.ಟಿ ಅಧಿಕಾರಿಗಳು ದಾಳಿ ಮಾಡಿದ್ದರು. ನಾಲ್ಕು ರಾಜ್ಯಗಳ 47 ಸ್ಥಳಗಳಲ್ಲಿ ಸತತ ಮೂರು ದಿನ ಶೋಧ ನಡೆದಿತ್ತು.

‘ಮೂವರು ಗುತ್ತಿಗೆದಾರರು ₹750 ಕೋಟಿಯಷ್ಟು ಆದಾಯವನ್ನು ಬಹಿರಂಗಪಡಿಸ-ದೇ ಇರುವುದು ಪತ್ತೆಯಾಗಿದೆ. ನಕಲಿ ಬಿಲ್‌ಗಳು ಹಾಗೂ ವಹಿವಾಟು ದಾಖಲೆಗಳನ್ನು ಸೃಷ್ಟಿಸಿ ಆದಾಯ ಬಚ್ಚಿಟ್ಟಿರುವುದು ಕಂಡುಬಂದಿದೆ. ಈ ಪೈಕಿ ₹487 ಕೋಟಿಯಷ್ಟು ಮೊತ್ತದ ಅಘೋಷಿತ ಆದಾಯವನ್ನು ಹೊಂದಿರುವುದಾಗಿ ಈ ಕಂಪನಿಗಳು ಒಪ್ಪಿಕೊಂಡಿವೆ’ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ.

ಒಂದು ಸಮೂಹವು ಕಾರ್ಮಿಕರ ವೆಚ್ಚವನ್ನು ಹೆಚ್ಚಾಗಿ ತೋರಿಸುವ ಮೂಲಕ ₹ 382 ಕೋಟಿಯಷ್ಟು ಆದಾಯವನ್ನು ಗೋಪ್ಯವಾಗಿ ಇಟ್ಟಿರುವುದನ್ನು ಒಪ್ಪಿಕೊಂಡಿದೆ. ಮತ್ತೊಂದು ಕಂಪನಿಯು ಅಸ್ತಿತ್ವದಲ್ಲೇ ಇಲ್ಲದ, ಕೇವಲ ಕಾಗದದ ಮೇಲಷ್ಟೇ ಇರುವ ಕಂಪನಿಗಳ ಜತೆ ವಹಿವಾಟು ನಡೆಸಿರುವ ದಾಖಲೆಗಳನ್ನು ಸೃಷ್ಟಿಸಿ ₹ 105 ಕೋಟಿ ವರಮಾನವನ್ನು ಬಚ್ಚಿಟ್ಟುಕೊಂಡಿರುವುದು ಪತ್ತೆಯಾಗಿದೆ ಎಂದು ಹೇಳಿದೆ.

ಬೇನಾಮಿ ವಹಿವಾಟು ಪತ್ತೆ: 2019ರಿಂದ ಈಚೆಗೆ ಜಲ ಸಂಪನ್ಮೂಲ ಇಲಾಖೆಯ ನೀರಾವರಿ ನಿಗಮಗಳು ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ಬೃಹತ್ ನೀರಾವರಿ ಯೋಜನೆಗಳು ಹಾಗೂ ಹೆದ್ದಾರಿಗಳ ಕಾಮಗಾರಿಗಳ ಗುತ್ತಿಗೆ ಪಡೆದಿರುವ ಕೆಲವು ಗುತ್ತಿಗೆದಾರರು ಬೇನಾಮಿ ಹೆಸರಿನಲ್ಲಿ ವಹಿವಾಟು ನಡೆಸಿರುವುದನ್ನು ಐ.ಟಿ ಅಧಿಕಾರಿಗಳು ಪತ್ತೆಹಚ್ಚಿದ್ದಾರೆ.

ಸಾಮಗ್ರಿ ಖರೀದಿ, ಕಾರ್ಮಿಕರ ವೇತನ ಪಾವತಿ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಆದಾಯ ಮುಚ್ಚಿಡಲಾಗಿದೆ. ಗುತ್ತಿಗೆ ಕೆಲಸವನ್ನೇ ಮಾಡದ ವ್ಯಕ್ತಿಗಳು, ನಿರ್ಮಾಣ ಕಾಮಗಾರಿಯನ್ನೇ ನಿರ್ವ-ಹಿಸದವರು, ಆರ್ಥಿಕವಾಗಿ ಶಕ್ತರಲ್ಲದ ವ್ಯಕ್ತಿಗಳ ಹೆಸರಿನಲ್ಲಿ ಉಪ ಗುತ್ತಿಗೆ ಒಪ್ಪಂದಗಳನ್ನು ಸೃಷ್ಟಿಸಿ ತೆರಿಗೆ ವಂಚಿಸಲಾಗಿದೆ. ಒಂದು ಕಂಪನಿಯು ಇಂತಹ 40 ಉಪ ಗುತ್ತಿಗೆದಾರರ ಸೇವೆ ಪಡೆದಿರುವುದಾಗಿ ದಾಖಲೆ ಸೃಷ್ಟಿಸಿ ಭಾರಿ ಪ್ರಮಾಣದ ತೆರಿಗೆ ವಂಚಿಸಿದೆ. ಅಕ್ರಮ ಎಸಗಿರುವುದಾಗಿ ಈ ಕಂಪನಿಗಳು ವಿಚಾರಣೆ ವೇಳೆ ಒಪ್ಪಿಕೊಂಡಿವೆ ಎಂದು ಇಲಾಖೆ ತಿಳಿಸಿದೆ.

ಡಿಕೆಶಿ ಪ್ರಚಾರಕರ ಮೇಲೂ ಐ.ಟಿ ದಾಳಿ

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವು ರಾಜ-ಕಾರಣಿಗಳಿಗೆ ಚುನಾವಣಾ ಪ್ರಚಾರ, ಸಾಮಾಜಿಕ ಮಾಧ್ಯಮಗಳ ನಿರ್ವಹಣೆ, ರಾಜಕೀಯ ಪ್ರಚಾರದ ಸೇವೆ ಒದಗಿಸುತ್ತಿರುವ ‘ಡಿಸೈನ್ ಬಾಕ್ಸ್ಡ್’ ಎಂಬ ಕಂಪನಿಯ ಕಚೇರಿ ಮೇಲೆ ಮಂಗಳವಾರ ದಾಳಿ ಮಾಡಿದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು, ಶೋಧ ನಡೆಸಿದ್ದಾರೆ.

ಬಳ್ಳಾರಿ ರಸ್ತೆಯಲ್ಲಿ ಕಚೇರಿ ಹೊಂದಿರುವ ಈ ಕಂಪನಿ, ಶಿವಕುಮಾರ್ ಸೇರಿದಂತೆ ಕಾಂಗ್ರೆಸ್‌ನ ಹಲವು ಮುಖಂಡರಿಗೆ ಸೇವೆ ಒದಗಿಸುತ್ತಿದೆ. ಪಂಜಾಬ್ ಪ್ರದೇಶ ಕಾಂಗ್ರೆಸ್ ಸಮಿತಿಗೂ ಸೇವೆ ನೀಡುತ್ತಿದೆ. ಬಳ್ಳಾರಿ ರಸ್ತೆಯಲ್ಲಿರುವ ಕಚೇರಿಯಲ್ಲಿ ಹಲವು ಗಂಟೆಗಳ ಕಾಲ ಶೋಧ ನಡೆಸಲಾಗಿದೆ ಎಂಬ ಮಾಹಿತಿ ಲಭಿಸಿದೆ.

ದಾಳಿ ಕುರಿತು ಪ್ರತಿಕ್ರಿಯಿಸಿರುವ ಶಿವಕುಮಾರ್, ‘ಈ ಕಂಪನಿ ಹಿಂದೆ ನನಗೆ ಸೇವೆ ಒದಗಿಸುತ್ತಿತ್ತು. ಆದರೆ, ನನ್ನ ಸಾಮಾಜಿಕ ಮಾಧ್ಯಮಗಳ ಖಾತೆಗಳನ್ನು ನಿರ್ವಹಣೆ ಮಾಡುತ್ತಿರಲಿಲ್ಲ. ಐ.ಟಿ ಅಧಿಕಾರಿಗಳ ಪ್ರಶ್ನೆಗಳಿಗೆ ಕಂಪನಿ ಪ್ರತಿನಿಧಿಗಳು ಉತ್ತರಿಸುತ್ತಾರೆ. ಶೋಧದಲ್ಲಿ ಏನು ಪತ್ತೆಯಾಗುತ್ತದೆ ನೋಡೋಣ. ಆಮೇಲೆ ನಾನು ಮಾತನಾಡುತ್ತೇನೆ’ ಎಂದರು.

₹ 4.69 ಕೋಟಿ ನಗದು ವಶ

ದಾಳಿಯ ವೇಳೆ ಲೆಕ್ಕಪತ್ರಗಳಿಲ್ಲದ ₹4.69 ಕೋಟಿ ನಗದು, ₹8.67 ಕೋಟಿ ಮೌಲ್ಯದ ಚಿನ್ನಾಭರಣ ಮತ್ತು ₹ 29.83 ಕೋಟಿ ಮೌಲ್ಯದ ಬೆಳ್ಳಿಯ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಕೇಂದ್ರೀಯ ನೇರ ತೆರಿಗೆ ಮಂಡಳಿ (ಸಿಬಿಡಿಟಿ) ಮಾಹಿತಿ ನೀಡಿದೆ. ಈ ಪ್ರಕರಣದಲ್ಲಿ ಅರವಿಂದ್ ರಾಮಸ್ವಾಮಿ ಮತ್ತು ಅವರ ಕೆಲವು ಸಹವರ್ತಿಗಳನ್ನು ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಮಂಗಳವಾರ ವಿಚಾರಣೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಚಿಲ್ಲರೆ ಹಣದುಬ್ಬರ ಇಳಿಕೆ

ನವದೆಹಲಿ (ಪಿಟಿಐ): ಆಹಾರ ವಸ್ತುಗಳ ಬೆಲೆ ಕಡಿಮೆ ಆಗಿರುವುದರಿಂದ ಚಿಲ್ಲರೆ ಹಣದುಬ್ಬರವು ಸೆಪ್ಟೆಂಬರ್‌ನಲ್ಲಿ ಶೇ 4.35ಕ್ಕೆ ಇಳಿಕೆ ಆಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಮಂಗಳವಾರ ಹೇಳಿದೆ.

ಗ್ರಾಹಕರ ದರ ಸೂಚ್ಯಂಕ (ಸಿಪಿಐ) ಆಧರಿಸಿದ ಹಣದುಬ್ಬರವು ಆಗಸ್ಟ್‌ನಲ್ಲಿ ಶೇ 5.30ರಷ್ಟಿತ್ತು. 2020ರ ಸೆಪ್ಟೆಂಬರ್ ನಲ್ಲಿ ಶೇ 7.27ರಷ್ಟು ಗರಿಷ್ಠ ಮಟ್ಟಕ್ಕೆ ತಲುಪಿತ್ತು.

ಆಹಾರ ವಸ್ತುಗಳ ಹಣದುಬ್ಬರವು ಆಗಸ್ಟ್‌ನಲ್ಲಿ ಶೇ 3.11ರಷ್ಟು ಇತ್ತು. ಇದು ಸೆಪ್ಟೆಂಬರ್‌ನಲ್ಲಿ ಶೇ 0.68ಕ್ಕೆ ಇಳಿಕೆ ಆಗಿದೆ ಎಂದು ಎನ್‌ಎಸ್‌ಒ ಬಿಡುಗಡೆ ಮಾಡಿರುವ ಮಾಹಿತಿಯಲ್ಲಿ ಇದೆ.

ಕೈಗಾರಿಕಾ ಉತ್ಪಾದನೆ ಶೇ 11.9ರಷ್ಟು ಬೆಳವಣಿಗೆ

ದೇಶದ ಕೈಗಾರಿಕಾ ವಲಯದ ಉತ್ಪಾದನೆಯು ಆಗಸ್ಟ್ ನಲ್ಲಿ ಶೇ 11.9ರಷ್ಟು ಬೆಳವಣಿಗೆ ಕಂಡಿದೆ ಎಂದು ಎನ್‌ಎಸ್‌ಒ ಮಾಹಿತಿ ನೀಡಿದೆ. ಎನ್‌ಎಸ್‌ಒ ಮಂಗಳವಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ, ಕೈಗಾರಿಕಾ ಉತ್ಪಾದನಾ ಸೂಚ್ಯಂಕಕ್ಕೆ (ಐಐಪಿ) ಶೇ 77.63ರಷ್ಟು ಕೊಡುಗೆ ನೀಡುವ ತಯಾರಿಕಾ ವಲಯವು ಶೇ 9.7ರಷ್ಟು ಬೆಳವಣಿಗೆ ಕಂಡಿದೆ. ಗಣಿಗಾರಿಕೆಯ ಉತ್ಪಾದನೆಯು ಶೇ 23.6 ರಷ್ಟು ಮತ್ತು ವಿದ್ಯುತ್ ಉತ್ಪಾದನೆಯು ಶೇ 16ರಷ್ಟು ಹೆಚ್ಚಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Part-Time Jobs

LIMITED MNC COMPANY Lost Job, Provide Work From Home Earn 30K to35K: 7019215243/ 9886641282

Overseas

THUMBAY Growth Through Innovation

EXCITING CAREER OPPORTUNITIES IN THE UNITED ARAB EMIRATES

GROUP CHIEF FINANCIAL OFFICER
CA/CPA/ Masters in Accounting, Finance or Business or equivalent qualification with minimum of 15 years of experience, out of that 10 years in a senior role in healthcare industry.

CHIEF OPERATING OFFICER, HEALTH CARE DIVISION
Masters in Healthcare Management / MBA in healthcare or equivalent qualification with more than 20 years of experience.

CEO - CHIEF EXECUTIVE OFFICER Online Health Varsity Education Startup
CEO for a New Healthcare Education Startup providing online courses. This role requires a futuristic, forward-thinking leader to continually ensure the organization is ready to meet tomorrow's needs. 5 Years experience in similar field

CIO - CHIEF INFORMATION OFFICER
15 -20 years of IT experience including 10+ years of executive experience in managing end-to-end Group level IT function.

Shortlisted candidates will attend the face to face interviews tentatively at Delhi on 5th & 6th November 2021 and Bangalore on 7th & 8th November 2021

DIRECT RECRUITMENT, ATTRACTIVE SALARIES AND BENEFITS OFFERED

Interested Candidates can send their CV to careers@thumbay.com on or before 25th October 2021
www.thumbay.com

مستشفى ثومبي
THUMBAY HOSPITAL
Dubai - Sharjah - Ajman - Fujairah

EXCITING CAREER OPPORTUNITIES IN UNITED ARAB EMIRATES

DOCTORS - CONSULTANTS/SPECIALISTS
ANESTHESIA • INTERVENTIONAL CARDIOLOGY
NEONATOLOGY • CARDIOLOGY • CRITICAL CARE
DERMATOLOGY • COSMETOLOGY • PLASTIC SURGERY
ENDOCRINOLOGY • ENT • GENERAL SURGERY
BARIATRIC SURGERY • INTERNAL MEDICINE
GASTROENTEROLOGY • PATHOLOGY • NEPHROLOGY
NEUROLOGY • NEURO SURGERY • OBG
OPHTHALMOLOGY • ORTHOPEDICS
PEDIATRIC SURGERY • PEDIATRICS • PULMONOLOGY
RADIOLOGY • UROLOGY
RHEUMATOLOGY • EMERGENCY MEDICINE
CARDIOTHORACIC SURGERY
PhD/DM/MCH/MD/MS/DNB or equivalent qualification with minimum 5 years experience from reputed Hospital. Teaching experience & DHA/MOH license candidates preferred. Eligible candidates will be offered adjunct faculty position at Gulf Medical University.

PARAMEDICAL
EEG TECHNICIAN • CATH LAB TECHNICIAN
EMT • OCCUPATIONAL THERAPIST
ANESTHESIA TECHNICIAN • SPEECH THERAPIST
Bachelors Degree with Minimum 3 years of Experience
DHA/MOH license Candidates Preferred

Shortlisted candidates will attend the face to face interviews tentatively at Delhi on 5th & 6th November 2021 and Bangalore on 7th & 8th November 2021

DIRECT RECRUITMENT, ATTRACTIVE SALARIES AND BENEFITS OFFERED

Interested Candidates can send their CV to careers@thumbay.com on or before 25th October 2021
www.thumbay.com

URGENTLY REQUIRED Sales Executives for Petroleum Products Salary Rs.45000/- Call:7338084555 080-25207889 glprojects7889 @gmail.com

WANTED TEACHERS Part/ Full-Time Social science, English, Computers. Primary/ High School. J.P.Nagar. 3rd Phase. 7795065330, 9845042249.

WANTED LADY Teacher's for Primary for all Subjects Coffee Board Layout, Hebbal. Contact: 9008981637/ 22330003

WANTED QUALIFIED AND EXPERIENCED TEACHERS. MMET ENGLISH SCHOOL, 8, Patel Kullappa Road, R.S.Palya, M.S.Nagar, Bangalore-33.Phone: 080-25450522, Mobile: 7259648179 9740290056 mmetschool@gmail.com. HM High School:-Graduate /Post-Graduate in Science or Arts with B.Ed, minimum of 10 years of teaching experience of which 3 years as HM in a reputed institution. PRT: Hindi and English- TCH / D.Ed.TGT: V- VII- English, Social-Science, Science, Hindi- B.Ed Compulsory TGT: VIII- X- Science- B.Sc., B.Ed (PCB, CBZ).'KNSS VIDYAMNADIR SCHOOL' #14, Mannamnagar, Anandapura, Thambuchetty Palya Main Road, Bangalore-36, Phone:080-25450522, 7022477196 9632526497 mmetschool@gmail.com PRT: Hindi and English - TCH/D.Ed. Pre-Primary: NTT/MTT. Experienced Teachers will be given preference. Interested Candidates may submit resume in our office at MMET ENGLISH PRIMARY AND HIGH SCHOOL or Email: mmetschool@gmail.com Attractive Salary with PF,ESI & other benefits. Retired personsalso will be considered.

TEACHERS WANTED At Kengeri and Sadashivanagar English, Social Studies, Kannada, Hindi,Science For Middle and High School Passion for Teaching, Excellent English language skills needed. Pls email resume to teachersjobsforyou@ gmail.com For any queries: 9632947857

Accounts & Finance

WANTED EXPERIENCED accountants with knowledge of online business and tally And assistants for om shanti textiles at JM Road Avenue road cross. Contact: 9538814505.

General

Sapna Since 1967 India's Largest Book Mall requires Young & Dynamic MALE / FEMALE Candidates with min. 2 years Exp
SALES PERSONNEL for retail stores at Jayanagar & Koramangala
OFFICE ASSISTANT Must be conversant in Kannada typing (For store at Gandhinagar).
Email Resume to: hr@sapnaretail.com Call: 080-4011 4455

JOB OPPORTUNITY, for Retired, Men, House wife, Work from home/ office, SSLC, PUC, Degree, in Reputed Company, Age 40-75, Bangalorians only, Earn up to 40000, Call: 9741401834

REQUIRED OFFICE staff (2 Nos)Designer (1 No) IELTS Trainers (Full-time/ Part-time) Company: Ceeco International Location: Peenya Contact: 7892664764 email: bangalore@ceecointl.com

Wanted

SRI. THAIMADOM Wanted. Sales executives Part time, full time Attractive salary Age above 19 years: 8050744170, 8050168393

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

Teachers/ Professors

RMS DEGREE College requires faculties for the department of Commerce & Management and Hindi. Experience: 3+ years. RMS PU College requires English faculty. Near Metro Cash and Carry, Kanakapura Road, Bengaluru. Email: ashokmv@ymail.com Contact: 9606798188/ 9606416534

EDUCATION To Place your Classified Ads Contact: 9845114560

LADY PE Teachers needed for Chitrakoota CBSE School in Nagarbhavi, Kengeri Ring Road, with high salary. Immediately or for the next academic year. Call: 7829647333 Email: chitrakootajobs@ gmail.com WALK IN Welcome

IMMEDIATE APPOINTMENT wanted from Bangalore South: MANAGER, SALES ADVISORS, Lady RECEPTIONIST, TELE-CALLERS. Ladies Pick/drop. 'V&V'- 98450-15353

Hospital & Medical Jobs

V.S. DENTAL COLLEGE & HOSPITAL
K.R. Road, V.V. Puram, Bangalore-560 004. Ph No. 080-2242 6705

Application are invited from eligible candidates as per DCI norms for the post of Asst. Professors on **Temporary / Contract / Permanent in the following departments.**

1.	Orals & Maxillofacial Surgery Temporary/Contract	= 02 Posts
2.	Conservative Dentistry & Endodontics 03 Temporary/Contract & 01 Permanent Post	= 04 Posts
3.	Prosthodontics Temporary/Contract	= 05 Posts
4.	Oral Pathology Temporary/Contract	= 01 Post

Late date for Submission of application is 23-10-2021

Administrator RVS · C.E.O RVS · PRINCIPAL VSDCH

WANTED MEDICAL REPRESENTATIVE Empiai Pharma, Mumbai needs experienced Medical Representative for Bangalore HQ. Please send biodata to Mr. M. M. Shetty Area Manager No. 751 4th cross Roopanagar Bogadi Post Mysore 570026.

Security & Detectives

SENTINEL SECURITY, a reputed Security Agency. Urgent requirement for Accountant with 5years experience. Contact 9035221652

SECURITY AGENCY Required experienced MARKETING MANAGERS, FIELD OFFICER. infohawk68@gmail.com Mobile 9886180873/ 7624815116

RENTAL PROPERTIES

Accommodation Available

Commercial

BASAVANAGUDI RENT: 6 BHK independent house, suitable for office/ Godown at Tatasilk Farm, KR.Road- 9845152307

REAL ESTATE SELLING

Sites

Sunkadakatte

SUNKADKATTE NEAR Anjali School South Facing 30X50 Available for Sale. Rate 5300/Sqft (Negotiable) Contact: 9880439138

BUSINESS

Business Offers

Finance

NRI'S INVESTMENT And Finance Available On Low Interest Against Properties, Land & Building, Sites, Flats, Converted & Agriculture Lands Call: 7411265189

FINANCE AGAINST Land & Building Properties Industries Schools Hospitals Projects & NRI Funds.7358729820

Business to Business

Business

EXPERIENCED CONSULTANT needed Mineral Water project incl bottling. Turnkey/ Marketing. Location near Saklespur/ Hassan.Mail: contact@hppindia.com/ rasik_ranjan@hotmail.com

INVEST IN World's Largest Forex trading platform Steady option. Get everyday Fixed Income Return & withdraw daily on your investment - Rs. 500 to Rs. 10,000. Personally i have invested. For more details, Contact: 6361333375.

PUBLIC NOTICE

PUBLIC NOTICE

My Client has been nogotiating with Sriyuths **T. R. Narayanaswamy, T. R. Murthy, T. R. Chandrashekhar, and Sri T. R. Narasimhaiah,** all sons of Sri **S. Ramaiah** and Residents of **Thanisandra Village, K R Puram Hobli, Bangalore East Taluk, the owners of the lands bearing Sy No.2/3B and 2/4, respectively measiring 01 acre 04 guntas and 02 acres 12 guntas, and Sri. Manjunath P, S/o Sri. Padmanabaiah K, No.1029, Thanisandra Village, Dr Shivaram Karanth Layout Post, Bangalore-560077,** the owner of the lands bearing **Sy No.2/2, 2/3A & 2/3B, respectively measuring 02 acres, 01 acre 10 guntas and 06 guntas, all lands being situated at Thanisandra Village, K R Puram Hobli, Bangalore East Taluk, and set out in the Schedule hereto (The Shedule Land's) for joint development of the Schedule Lands.**

Before concluding the negotiations for joint development as aforesaid, my client desires to conduct due diligence into the title of the respective owners to the Schedule Lands.

As part of conducting such due diligence, I on behalf of my client, hereby notify and call upon all those persons that may claim to have any right, title or interest in the Schedule Lands or any item or part thereof to send full particulars of such claims along with true copies of the documents in support thereof to my address or email set out below within **10 days** of the publication of this notice. If any person that claim to have any right etc, in the Schedule Land fails to send full particulars or submit all the supporting documents or send the particulars after the expiry of the time stipulated herein or does not send any particulars, my client shall ignore any such claim for any right etc, in the Schedule Lands and shall proceed to conclude the negotiations.

SCHEDULE

All those pieces and parcels of the **Lands bearing Sy No.2/3B and 2/4, respectively measuring 01 acres 04 guntas and 2 acre 12 guntas and Sy No.2/2, 2/3A and 2/3B, respectively measruing 02 acres, 01 acre 10 guntas and 06 guntas, all lands situated at Thanisandra Village, K R Puram Hobli, Bangalore East Taluk, Bangalore.**

Bangalore: 12.10.2021
C G GOPALASWAMY, Advocate 141, Gowra-Saideep, 3rd Main, 1st Block, RMV 2nd Stage, Dollars Colony, Bangalore-560094 Email: cggswamy@gmail.com

DH ಪ್ರಜಾವಾಣಿ FOR CLASSIFIED ADVERTISEMENTS
SERVICES
Contact: Santhosh: 9880856233 Jerry: 9731810277 Tanveer: 9886213331

EDUCATIONAL

Admission

DIRECT FINAL: LLB (Can Practice) B.Tech/ M.Tech/ Diploma/ B.Pharm/ D.Pharm/ MBA/ BBA/ BCA/ B.Sc (IT, CS)/ B.Com. LIMITED SEATS. Call: 9448460103/ 7093438248.

School

REQUEST FOR Quotation: Daya Special School, Belthangady, needs 24+1 Seater School Bus. Call- 8197679453

PERSONAL

Announcements

I, SERVICE No. 15313211M, Rank SEP, P. THIRUMALAI CHAMI residing at No. 1043, 'A' DSC Platoon, Air Force Station, Tambaram, Chennai-46 hereby declare that the name and date of birth of my dependent wife in the service document has been recorded incorrectly as C.T. Anitha and 07.06.1982 instead of ANITHA C and 07.07.1982 respectively. sworn before Notary Uday Kumar. K vide affidavit dated 11.10.2021, Bangalore.

I, NITA SABHAPATHI, residing at B002, Hoysala Samruddhi, Amruthahalli, Bangalore-560092, bring to the notice of the general public that I am called as NITA SABHAPATHI, ARCHANA NAYAK and NITA. I have sworn the same vide affidavit dated 12-10-2021 before notary S.R.Ravikumar, Bangalore.

I, 4190003A HAV Narendra Singh residing at #9 KAR-BN NCC Bangalore- 560042 wrongly mentioned my Wife Kamla Devi Date of Birth 22/04/1981 instead of 19/04/1983 affidavit 11/10/2021 notary L.Gopalakrishna, Bangalore.

I, 4190003A HAV Narendra Singh residing at #9 KAR-BN NCC Bangalore- 560042 wrongly mentioned my Daughter Shalini Samant Date of Birth 11/05/2003 instead of 11/06/2003 affidavit 11/10/2021 notary L.Gopalakrishna, Bangalore.

Change of Name

WE, VINAY Kadam, aged 39 years, S/o. Nagaraj Rao Kadam M & Mrs. Nalini R Karmore, aged 33 years, W/o. Vinay Kadam, both are presently residing at #007, B-Block, B-Wing, Charitha Greenwoods, Thubarahalli Extended Road, Whitefield Post, Bangalore- 560066. Hereby declare that, We are changing our minor daughter's (Date of Birth 01.01.2017) name from SHREEJA V KADAM to ADISHA KADAM vide affidavit 06/02/2020 sworn before Advocate and Notary A.M.Rajasekar, Bengaluru.

I, DEEPIKA RODDAM HARIHARANATH, changed-my name- to VIZAYA DIPIKA HARIHARANATH RODDAM dtd.07-10-2021 Sworn-before notary H.S. Sakalesh Aradhya, Bengaluru.

CHANGE OF NAME
I, CHANDAKALA Spouse of Namasivayam Ganeshan Palanivelu Resident of #5/1, 2nd Cross, Ayyappa Temple Street Oil Mill Road, Arvind Nagar, Kammanahalli, Bangalore-560084, have changed my name from **CHANDAKALA to CHANDRAKALA** vide affidavit dated 27/08/2021 before Notary S.R. Nanjunda Swamy, Bangalore.

TARIF SK B/o 14872023P-SEP/MT- SORIF SK R/a Batuknathpur, Sonatikuri, Nowda, Murshidabad, West Bengal changed name from TARIF SK to TARIF SHEIKH notary KV Mani Bangalore.

I, AYAPPA CHEPPUDIRA BOPAIAH residing at No.6, 5th Cross, Shabari, RMV Extn, MLA Layout, Boopasandra, Bangalore-560094 have changed my name to AIYAPPA CHEPPUDIRA BOPAIAH affidavit dated 22.09.2021 notary V.Anjanappa, Bangalore.

I, DEEPTHI RODDAM HARIHARANATH, changed-my name- to DEEPTHISSHRIE HARIHARANATH RODDAM dated. 07-10-2021. Sworn before- notary H.S. Sakalesh Aradhya, Bengaluru.

I, NIRMALA HARIHARANATH, changed-my name to NIRMALA HARIHARANATH RODDAM dated. 07-10-2021. Sworn before- notary H.S. Sakalesh Aradhya, Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

CONNECT



ADMISSION CORNER

MONTFORT COLLEGE
A unit of Montfort Brothers of St. Gabriel
(AFFILIATED TO BENGALURU NORTH UNIVERSITY)
184, Old Madras Road, Indiranagar, Bengaluru-560038
(Opposite Swami Vivekananda Metro)

ADMISSIONS OPEN FOR 2021-22
New Degree Courses Offered In Compliance With New Education Policy (NEP), 2020

- B.B.A. Bachelor of Business Administation
- B.Com. Bachelor of Commerce
- B.Voc. Bachelor of Commerce - Vocational
- BA Journalism, Psychology Communicative English
- BA Journalism, Psychology Optional English
- B.Sc. Statistics, Mathematics, Computer Science
- B.Sc. Computer Science, Journalism, Psychology
- M.Sc. Psychology
- M.Sc. Counselling Psychology
- M.Sc. Clinical Psychology
- PG Diploma in Counselling Psychology

APPLICATIONS ARE INVITED FROM STUDENTS WHO HAVE FINANCIAL DIFFICULTY TO JOIN UG PROGRAM.
Fee concession will be provided to eligible candidates. Instalment options to pay fees available. Offer valid till 31.10.2021.

CONTACT FOR ADMISSION
Call: 7411624688 / 080-25283320 25284050, 25201864
Email: montfortcollege.edu.in
mail@montfortcollege.edu.in

ROUNAQH

BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
5 Easy steps to book your ads
1. LOG INTO WWW.DHCLASSIFIEDS.COM
2. CHOOSE THE CATEGORY
3. CHOOSE THE AD DATES
4. COMPOSE THE MATTER
5. CONFIRM AND PAY

REAL ESTATE · NAME CHANGE · JOB · EDUCATION · HEALTH · MATRI · AUTO · ASTRO

condition apply*

WWW.DHCLASSIFIEDS.COM
FOR MORE INFORMATION CONTACT 9880856233 | 9886213331
Email: santhoshkumar@deccanherald.co.in
DH DECCAN HERALD · ಪ್ರಜಾವಾಣಿ ಕ್ಲಾಸಿಫೈಡ್ಸ್

ಹೊಂಡಗಳ ಹಾದಿಯಲ್ಲಿ ಬಂಡಿಗೆಲ್ಲಿ ದಾರಿ?



ಟಿ.ದಾಸರಹಳ್ಳಿ ಸರ್ವಿಸ್ ರಸ್ತೆ – –ಪ್ರಜಾವಾಣಿ ಚಿತ್ರಗಳು / ಎಂ.ಎಸ್‌.ಮಂಜುನಾಥ್‌

ಬೆಂಗಳೂರು: ಕಣ್ಣು ಹಾಯಿಸಿದಷ್ಟೂ ದೂರ ಹರಡಿರುವ ಕಲ್ಲುಗಳು. ಗುಂಡಿ ಬಿದ್ದ ಜಾಗಗಳಲ್ಲೆಲ್ಲಾ ತುಂಬಿರುವ ಮಳೆ ನೀರು. ಕಾಲಿಟ್ಟಲ್ಲೆಲ್ಲಾ ಕೆಸರು..

ಇದ್ಯಾವುದೋ ಕುಗ್ರಾಮದ ಚಿತ್ರಣವಲ್ಲ. ಇದು ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ರಸ್ತೆಗಳ ದುಸ್ಥಿತಿ.

ಈ ರಸ್ತೆಗಳು ಡಾಂಬರು ಕಾಣದೆ ವರ್ಷಗಳೇ ಉರುಳಿವೆ. ಅಲ್ಲೊ ಇಲ್ಲೊ ಹಾಕಿದ್ದ ಒಂದಷ್ಟು ಡಾಂಬರು ಮಳೆಯ ರಭಸಕ್ಕೆ ಕೊಚ್ಚಿಹೋಗಿವೆ. ಕೆಸರಿನ ರಾಡಿಯ ನಡುವೆ ಸಾಗಲು ಪಾದಚಾರಿಗಳು ಹರಸಾಹಸ ಪಡಬೇಕಿದೆ. ದ್ವಿಚಕ್ರ ವಾಹನ ಸವಾರರೂ ಉಸಿರು ಬಿಗಿ ಹಿಡಿದೇ ಸಾಗಬೇಕಿದೆ. ಆಯಾ ತಪ್ಪಿದರೆ ರಸ್ತೆ ಬದಿಯಲ್ಲೇ ಸೃಷ್ಟಿಯಾಗಿರುವ ಹೊಂಡಗಳಲ್ಲಿ ಬೀಳುವುದು ನಿಶ್ಚಿತ.



ಮಲ್ಲಸಂದ್ರ ಮುಖ್ಯ ರಸ್ತೆಯ ಬಾಗಲಗುಂಟೆ ಬಸ್ ನಿಲ್ದಾಣ ಬಳಿಯ ರಸ್ತೆ



ಹೆಸರಘಟ್ಟ ಮುಖ್ಯರಸ್ತೆಯ 8ನೇ ಮೈಲಿ ರಸ್ತೆಯ ಸ್ಥಿತಿ



ಹೆಸರಘಟ್ಟ ಮುಖ್ಯರಸ್ತೆಯ ವಿಡಿಯಾ ಸ್ಕೂಲ್ ಬಸ್ ನಿಲ್ದಾಣದ ಬಳಿಕ ರಸ್ತೆಯ ಸ್ಥಿತಿ



ಹೆಸರಘಟ್ಟ ಮುಖ್ಯರಸ್ತೆಯ ತ್ರಿವೇಣಿ ಗ್ರೂಪ್ ಆಫ್ ಇನ್ಸ್‌ಟಿಟ್ಯೂಟ್ ಬಳಿಯ ರಸ್ತೆ

ಬೆಂಗಳೂರಿನಲ್ಲಿ ದಾಖಲಾಗಿದ್ದ ನಾಪತ್ತೆ ಪ್ರಕರಣ ಸುಖಾಂತ್ಯ

ಮಂಗಳೂರಿನಲ್ಲಿ ಪತ್ತೆಯಾದ ಮಕ್ಕಳು

ಪ್ರಜಾವಾಣಿ ವಾರ್ತೆ

ಮಂಗಳೂರು/ಬೆಂಗಳೂರು: 'ಓದಲು ಇಷ್ಟವಿಲ್ಲ' ಎಂಬುದಾಗಿ ಪತ್ರ ಬರೆದಿಟ್ಟು ಬೆಂಗಳೂರಿನ ಬಾಗಲಗುಂಟೆ ಠಾಣೆ ವ್ಯಾಪ್ತಿಯಿಂದ ನಾಪತ್ತೆಯಾಗಿದ್ದ 15 ವರ್ಷದ ಮೂವರು ಬಾಲಕರು ಸೋಮವಾರ ಪತ್ತೆಯಾದ ಬೆನ್ನಲ್ಲೇ, ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯಿಂದ ನಾಪತ್ತೆಯಾಗಿದ್ದ ನಾಲ್ವರು ಸಹ ಮಂಗಳೂರಿನಲ್ಲಿ ಮಂಗಳವಾರ ಸಿಕ್ಕಿದ್ದಾರೆ.

'ನಗರದಿಂದ ಏಕಕಾಲದಲ್ಲಿ ಯುವತಿ ಹಾಗೂ ಆರು ಮಕ್ಕಳು ನಾಪತ್ತೆಯಾಗಿದ್ದರು. ಆ ಪೈಕಿ, ಪರೀಕ್ಷಿತ್, ನಂದನ್ ಹಾಗೂ ಕಿರಣ್ ಉಪ್ಪಾರಪೇಟೆ ಠಾಣೆ ವ್ಯಾಪ್ತಿಯಲ್ಲಿ ಸಿಕ್ಕಿದ್ದರು. ಇದೀಗ, ಬಿಸಿಎ 3ನೇ ವರ್ಷದ ವಿದ್ಯಾರ್ಥಿನಿ ಅಮೃತವರ್ಷಿಣಿ (21), 12 ವರ್ಷ ವಯಸ್ಸಿನ ರಾಯನ್ ಸಿದ್ಧಾರ್ಥ್, ಚಿಂತನ್ ಹಾಗೂ ಭೂಮಿ ಸಹ ಮಂಗಳೂರಿನಲ್ಲಿ ಪತ್ತೆಯಾಗಿದ್ದಾರೆ. ಅಲ್ಲಿಯ ಪೊಲೀಸ್ ಠಾಣೆಯಲ್ಲಿ ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿ ಮಕ್ಕಳನ್ನು ಪೋಷಕರು ನಗರಕ್ಕೆ ಕರೆತರುತ್ತಿದ್ದಾರೆ. ಈ ಮೂಲಕ ಮಕ್ಕಳ ನಾಪತ್ತೆ ಪ್ರಕರಣ ಸುಖಾಂತ್ಯ ಕಂಡಿದೆ' ಎಂದು ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ ಹೇಳಿದರು.

ಖಾಸಗಿ ಬಸ್‌ನಲ್ಲಿ ಪ್ರಯಾಣ: ಬೆಂಗಳೂರಿನಿಂದ ಸೋಮವಾರ (ಅ. 11) ರಾತ್ರಿ ಖಾಸಗಿ ಬಸ್ಸಿನಲ್ಲಿ ಹೊರಟಿದ್ದ ನಾಲ್ವರು, ಮಂಗಳವಾರ ಬೆಳಿಗ್ಗೆ ಮಂಗಳೂರಿಗೆ ಬಂದಿಳಿದಿದ್ದರು. 7 ಗಂಟೆ ಸುಮಾರಿಗೆ ಮಂಗಳೂರಿನ ಅಂಬೇಡ್ಕರ್ ವೃತ್ತದ ಬಳಿ ಆಟೊ ಚಾಲಕರನ್ನು ಮಕ್ಕಳು ಮಾತನಾಡಿಸಿದ್ದರು.

ಮೊಬೈಲ್ ಕೇಳಿ ಪಡೆದಿದ್ದ ಮಕ್ಕಳು, ಯಾರಿಗೋ ಕರೆ ಮಾಡಲು ಪ್ರಯತ್ನಿಸಿದ್ದರು. ಆದರೆ, ಕರೆ ಹೋಗಿರಲಿಲ್ಲ. 'ಉಳಿದುಕೊಳ್ಳಲು ವಸತಿಗೃಹ ಬೇಕು. ಉತ್ತಮ ವಸತಿಗೃಹ ಎಲ್ಲಿದೆ' ಎಂದು ಕೆಲವರನ್ನು ವಿಚಾರಿಸಿದ್ದರು. 'ಚಿನ್ನಾಭರಣ ಒತ್ತೆ ಇರಿಸುವ ಅಂಗಡಿ ಎಲ್ಲಿದೆ' ಎಂಬುದಾಗಿಯೂ ವಿಚಾರಿಸಿದ್ದರು. ಸ್ಥಳದಲ್ಲಿದ್ದ ಆಟೊ ಚಾಲಕರಾದ ಪ್ರಶಾಂತ್ ಮತ್ತು ರಮೇಶ್, ನಾಪತ್ತೆಯಾದ ಮಕ್ಕಳ ಬಗ್ಗೆ ಸೋಮವಾರ ದಿನಪತ್ರಿಕೆಯಲ್ಲಿ ಸುದ್ದಿ ಓದಿದ್ದರು. ಬೆಂಗಳೂರಿನಿಂದ ನಾಪತ್ತೆಯಾದ ಮಕ್ಕಳು ಇವರೇ ಇರಬಹುದೆಂಬ ಅನುಮಾನ ಕಾಡಿತ್ತು.

ಅದೇ ಸಂದರ್ಭದಲ್ಲೇ ಬಾಲಕನೊಬ್ಬ, ತನ್ನ ಬ್ಯಾಗ್‌ನ್ನು ಕಸದ ಬುಟ್ಟಿಯಲ್ಲಿ ಹಾಕಿದ್ದ. ಅದನ್ನು ನೋಡಿದ್ದ ಚಾಲಕರು, ಮಕ್ಕಳ ಬಳಿ ಹೋಗಿ ಮಾತನಾಡಿಸಿದ್ದರು. ಮನೆ ಬಿಟ್ಟು ಬಂದಿರುವುದಾಗಿ ಮಕ್ಕಳು ಹೇಳಿದ್ದರು. ಸಮಯಪ್ರಜ್ಞೆ ಮೆರೆದ ಚಾಲಕರು, ಮಕ್ಕಳನ್ನು ಆಟೊದಲ್ಲಿ ಹತ್ತಿಸಿಕೊಂಡು ಪಾಂಡೇಶ್ವರ ಠಾಣೆಗೆ ಹೋಗಿ ಪೊಲೀಸರಿಗೆ ಒಪ್ಪಿಸಿದರು. ನಂತರ, ಬೆಂಗಳೂರಿನ ಪೊಲೀಸರು ಹಾಗೂ ಪೋಷಕರಿಗೆ ವಿಷಯ ತಿಳಿಸಲಾಯಿತು. ಪೊಲೀಸರ ಸಮೇತ ಬಂದ ಪೋಷಕರು, ಮಕ್ಕಳನ್ನು ಕರೆದುಕೊಂಡು ಬೆಂಗಳೂರಿಗೆ ಹೋದರು.

ಮಕ್ಕಳ ಬಗ್ಗೆ ಮಾತನಾಡಿದ ಚಾಲಕ ರಮೇಶ್, 'ನಿತ್ಯವೂ ಪತ್ರಿಕೆ ಓದುತ್ತೇನೆ. ಸೋಮವಾರದ ಪತ್ರಿಕೆಯಲ್ಲಿ ಮಕ್ಕಳು ನಾಪತ್ತೆಯಾದ ಸುದ್ದಿ ಗಮನಿಸಿದ್ದೆ. ಅದೇ ಮಕ್ಕಳಿರಬಹುದೆಂದು ಅನುಮಾನಗೊಂಡು ಮಾತನಾಡಿಸಿದಾಗ ವಿಷಯ ತಿಳಿಯಿತು. ನೇರವಾಗಿ ಠಾಣೆಗೆ ಕರೆದೊಯ್ದೆ' ಎಂದರು.

ಮನೆಯೇ ಬೆಟ್ಟಿಂಗ್ ಅಡ್ಡೆ; ₹ 5 ಲಕ್ಷ ಜಪ್ತಿ


ಬೆಂಗಳೂರು: ತನ್ನ ಮನೆಯನ್ನೇ ಅಡ್ಡೆ ಮಾಡಿಕೊಂಡು ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಆತನಿಂದ ₹ 5 ಲಕ್ಷ ನಗದು ಜಪ್ತಿ ಮಾಡಿದ್ದಾರೆ.

'ರಾಮಮೂರ್ತಿನಗರ ಠಾಣೆ ವ್ಯಾಪ್ತಿಯ ಕೆ. ಚನ್ನಸಂದ್ರದ ಮನೆಯೊಂದರಲ್ಲಿ ವಾಸವಿದ್ದ ಆರೋಪಿ, ಅಲ್ಲಿಯೇ ಕ್ರಿಕೆಟ್ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಮನೆ ಮೇಲೆ ದಾಳಿ ಮಾಡಿ ಆತನನ್ನು ಸೆರೆ ಹಿಡಿಯಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಐಪಿಎಲ್ ಆರಂಭವಾದ ದಿನದಿಂದಲೂ ಆರೋಪಿ ಬೆಟ್ಟಿಂಗ್ ನಡೆಸುತ್ತಿದ್ದ. ಮೊಬೈಲ್ ಆ್ಯಪ್ ಹಾಗೂ ಜಾಲತಾಣಗಳ ಮೂಲಕ ಕ್ರಿಕೆಟ್ ಪಂದ್ಯಗಳ ಮಾಹಿತಿ ತಿಳಿದುಕೊಂಡು, ಸೋಲು–ಗೆಲುವು ಲೆಕ್ಕಾಚಾರದಲ್ಲಿ ಹಣ ಕಟ್ಟಿಸಿಕೊಳ್ಳುತ್ತಿದ್ದ.'

'ಚೆನ್ನೈ ಸೂಪರ್ ಕಿಂಗ್ಸ್– ದೆಹಲಿ ಕ್ಯಾಪಿಟಲ್ಸ್ ಹಾಗೂ ರಾಯಲ್ ಚಾಲೆಂಜರ್ಸ್–ಕೋಲ್ಕತ್ತಾ ನೈಟ್ ರೈಡರ್ಸ್ ನಡುವಿನ ಪಂದ್ಯಗಳ ಮೇಲೆ ಆರೋಪಿ ಬೆಟ್ಟಿಂಗ್ ಕಟ್ಟಿಸಿಕೊಂಡಿದ್ದಕ್ಕೆ ಪುರಾವೆಗಳು ಸಿಕ್ಕಿವೆ' ಎಂದೂ ಪೊಲೀಸರು ತಿಳಿಸಿದರು.

ಚಿತ್ರಾವಳಿ



ಯಲಹಂಕ ವಲಯದ ಕೊಡಿಗೇಹಳ್ಳಿ ಉಪ ವಿಭಾಗದ ಸಹಕಾರನಗರದಲ್ಲಿ ಹಮ್ಮಿಕೊಂಡಿದ್ದ 'ಖಾತಾ ಮೇಳ'ದಲ್ಲಿ ಸಹಾಯಕ ಕಂದಾಯ ಅಧಿಕಾರಿ ಬಸವರಾಜ ಮಗ್ಗಿ ಅವರು ಹೊಯ್ಸಳ ಸಮೃದ್ಧಿ ವಸತಿ ಸಮುಚ್ಚಯದ 62 ನಿವಾಸಿಗಳಿಗೆ ಖಾತಾ ಮತ್ತು ವಂಶವೃಕ್ಷವನ್ನು ಮಂಗಳವಾರ ವಿತರಿಸಿದರು. ಯಲಹಂಕ ಉಪ ಆಯುಕ್ತ ಶಿವೇಗೌಡ ಇದ್ದರು.



ಗೋವಿಂದರಾಜನಗರ ಕ್ಷೇತ್ರದ ಶಾಸಕರೂ ಆಗಿರುವ ವಸತಿ ಸಚಿವ ವಿ.ಸೋಮಣ್ಣ ಅವರು ರಾಜ್‌ಕುಮಾರ್ ವಾರ್ಡ್ ಬಳಿ ನಿರ್ಮಿಸಲಾಗುತ್ತಿರುವ ಮೇಲ್ಸೇತುವೆ ಕಾಮಗಾರಿಯನ್ನು ಮಂಗಳವಾರ ಪರಿಶೀಲಿಸಿದರು. ಗಂಗಮ್ಮ ತಿಮ್ಮಯ್ಯ ಕಲ್ಯಾಣ ಮಂಟಪದ ಬಳಿ ನಡೆಯುತ್ತಿರುವ ಕಾಮಗಾರಿಯನ್ನೂ ವೀಕ್ಷಿಸಿದರು.



ವಿದ್ಯಾರಣ್ಯಪುರ ವಾರ್ಡ್ ವ್ಯಾಪ್ತಿಯ ರಾಜೀವ್ ಗಾಂಧಿ ನಗರ ಬಡಾವಣೆಯಲ್ಲಿ ಜಲಮಂಡಳಿ ವತಿಯಿಂದ ₹90 ಲಕ್ಷ ವೆಚ್ಚದಲ್ಲಿ ಕೈಗೊಂಡಿರುವ ಒಳಚರಂಡಿ ಸೌಲಭ್ಯ ಕಲ್ಪಿಸುವ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು. ಮಾಜಿ ಉಪಮೇಯರ್ ಎಂ.ಆನಂದ್, ಮುಖಂಡರಾದ ಎನ್‌.ಎನ್‌. ಶ್ರೀನಿವಾಸಯ್ಯ, ವಿ.ಹರಿ, ಎಂ.ಹನುಮಂತೇಗೌಡ, ತಿಂಡ್ಲು ಸತೀಶ್, ದಿಲೀಪ್, ಹನುಮಂತಿ ಇತರರು ಇದ್ದರು.

₹ 2.84 ಕೋಟಿ ವಂಚನೆ: ಕಟ್ಟಾ ಸುಬ್ರಹ್ಮಣ್ಯ ನಾಯ್ಡು ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ



ಕಟ್ಟಾ ಸುಬ್ರಹ್ಮಣ್ಯ ನಾಯ್ಡು

ಬೆಂಗಳೂರು: ನಿವೇಶನ ಹಾಗೂ ಫ್ಲ್ಯಾಟ್ ಖರೀದಿ ವಿಚಾರವಾಗಿ ₹ 2.84 ಕೋಟಿ ವ್ಯವಹಾರ ನಡೆಸಿ ವಂಚಿಸಿರುವ ಆರೋಪದಡಿ ಬಿಜೆಪಿ ಮುಖಂಡ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಇಂಡ್ ಸಿಂಗ್ ಡೆವಲಪರ್ಸ್ ಕಂಪನಿ ನಿರ್ದೇಶಕ ಎಂ. ಕೃಷ್ಣ ಎಂಬುವವರ ಖಾಸಗಿ ಮೊಕದ್ದಮೆ ವಿಚಾರಣೆ ನಡೆಸಿದ್ದ 4ನೇ ಎಸಿಎಂಎಂ ನ್ಯಾಯಾಲಯ, ಆರೋಪಿ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುವಂತೆ ಸೂಚಿಸಿತ್ತು. ಅದರನ್ವಯ ಕೃಷ್ಣ ಅವರಿಂದ ದೂರು ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತನಿಖೆ ಮುಂದುವರಿದಿದ್ದು, ಆರೋಪಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸರು ಹೇಳಿದರು.

'ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಹಾಗೂ ಎಂ. ಕೃಷ್ಣ, ಹಲವು ವರ್ಷಗಳಿಂದ ಪರಿಚಿತರು. ಅವರ ನಡುವೆ ಹಣಕಾಸಿನ ವ್ಯವಹಾರ ಇತ್ತು. ನಿವೇಶನ ಹಾಗೂ ಫ್ಲ್ಯಾಟ್‌ಗಳನ್ನು ಖರೀದಿ ಮಾಡುವ ಸಲುವಾಗಿ ಆರೋಪಿ, ಕೃಷ್ಣ ಅವರಿಂದ ಹಂತ ಹಂತವಾಗಿ ₹ 2.84 ಕೋಟಿ ಪಡೆದಿದ್ದರು. ಕೆಲ ದಿನ ಬಿಟ್ಟು ದುಪ್ಪಟ್ಟು ಲಾಭ ನೀಡುವುದಾಗಿಯೂ ಭರವಸೆ ನೀಡಿದ್ದರು.'

'ಹಲವು ದಿನ ಕಳೆದರೂ ಆರೋಪಿ ಹಣ ವಾಪಸು ಕೊಟ್ಟಿರಲಿಲ್ಲ. ಈ ಬಗ್ಗೆ ಕೃಷ್ಣ ವಿಚಾರಿಸಿದಾಗ ₹ 2 ಲಕ್ಷವನ್ನು ಮಾತ್ರ 2018ರಲ್ಲಿ ಹಿಂದಿರುಗಿಸಿದ್ದರು. ಬಾಕಿ ಹಣ ನೀಡುವಂತೆ ಕೃಷ್ಣ ಒತ್ತಾಯಿಸಿದ್ದರು. ಹಣ ನೀಡಲು ಸುಬ್ರಹ್ಮಣ್ಯ ಹಿಂದೇಟು ಹಾಕಿದ್ದರು. ಈ ಸಂಗತಿ ದೂರಿನಲ್ಲಿದೆ' ಎಂದೂ ಪೊಲೀಸರು ತಿಳಿಸಿದರು.

ತಮ್ಮ ಮೇಲಿನ ಆರೋಪಕ್ಕೆ ಪ್ರತಿಕ್ರಿಯಿಸಿ 'ಫೇಸ್‌ಬುಕ್'ನಲ್ಲಿ ಪೋಸ್ಟ್ ಪ್ರಕಟಿಸಿರುವ ಕಟ್ಟಾ ಸುಬ್ರಮಹ್ಮಣ್ಯ ನಾಯ್ಡು, 'ರಾಜಕೀಯ ದುರುದ್ದೇಶದಿಂದ ನನ್ನ ಮೇಲೆ ಸುಳ್ಳು ಆರೋಪ ಹೊರಿಸಲಾಗುತ್ತಿದೆ. ನನಗೆ ನ್ಯಾಯಾಲಯದಲ್ಲಿ ನಂಬಿಕೆಯಿದ್ದು, ಕಾನೂನು ಹೋರಾಟ ನಡೆಸುತ್ತೇನೆ' ಎಂದಿದ್ದಾರೆ.

ಅಪಘಾತ ಸನ್ನಿವೇಶ ಸೃಷ್ಟಿಸಿ ಆರೋಪಿಗಳ ಸೆರೆ

ಬೆಂಗಳೂರು: ಕಂಪನಿಯೊಂದರ ವ್ಯವಸ್ಥಾಪಕ ಆರ್‌. ಶಿವಕುಮಾರ್ ಎಂಬುವವರನ್ನು ಅಪಹರಿಸಿ ಸುಲಿಗೆ ಮಾಡಿದ್ದ ಮೂವರು ಆರೋಪಿಗಳನ್ನು ಕೋಣನಕುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಎಲೆಕ್ಟ್ರಾನಿಕ್ ಸಿಟಿಯ ಸಿಲಿಕಾನ್ ಟೌನ್‌ನ ಸುನೀಲ್ (25), ಬನ್ನೇರುಘಟ್ಟದ ಕಗ್ಗಲೀಪುರ ಮುಖ್ಯರಸ್ತೆಯ ಜಿ. ಹರೀಶ್ (19) ಹಾಗೂ ಚನ್ನಪಟ್ಟಣ ತಾಲ್ಲೂಕಿನ ಸಾಮಂದಿಪುರದ ನವೀನ್ ಕುಮಾರ್ (25) ಬಂಧಿತರು. ಮೂವರಿಂದ ₹ 32,200 ನಗದು, ಚಾಕು ಹಾಗೂ ಬೈಕ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಎಲೆಕ್ಟ್ರಾನಿಕ್ ಸಿಟಿಯ ಮಾರಗೊಂಡನಹಳ್ಳಿ ನಿವಾಸಿ ಶಿವಕುಮಾರ್, ಮಾದನಾಯಕನಹಳ್ಳಿಯ 'ಸಫಾರಿ ಇಂಡಸ್ಟ್ರೀಸ್ ಇಂಡಿಯಾ ಪ್ರೈ. ಲಿ.' ಲಗೇಜು ತಯಾರಿಕೆ ಕಂಪನಿಯಲ್ಲಿ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು. ಅ. 8ರಂದು ರಾತ್ರಿ ಕೆಲಸ ಮುಗಿಸಿ ಮನೆಗೆ ಹೋಗಲೆಂದು ತುಮಕೂರು ರಸ್ತೆಯ ನೈಸ್ ರಸ್ತೆ ಜಂಕ್ಷನ್‌ನಲ್ಲಿ ಬಸ್ಸಿಗಾಗಿ ಕಾಯುತ್ತಿದ್ದರು.'

'ಗೂಡ್ಸ್ ವಾಹನದಲ್ಲಿ ಬಂದಿದ್ದ ಆರೋಪಿಗಳು, ಹೊಸೂರು ಕಡೆ ಹೊರಟಿರುವುದಾಗಿ ಹೇಳಿ ಶಿವಕುಮಾರ್ ಅವರನ್ನು ಹತ್ತಿಸಿಕೊಂಡಿದ್ದರು. ಮಾರ್ಗಮಧ್ಯೆ ವಾಹನದಲ್ಲಿ ಶಿವಕುಮಾರ್ ಮೇಲೆ ದಾಳಿ ಮಾಡಿದ್ದ ಆರೋಪಿಗಳು, ಚಾಕುವಿನಿಂದ ದೇಹದ ಹಲವೆಡೆ ಚುಚ್ಚಿದ್ದರು. ಮೊಬೈಲ್, ಡೆಬಿಟ್–ಕ್ರೆಡಿಟ್ ಕಾರ್ಡ್ ಕಸಿದುಕೊಂಡಿದ್ದರು. ಕಾರ್ಡ್ ಬಳಸಿ ಸಮೀಪದಲ್ಲಿದ್ದ ಎಟಿಎಂ ಯಂತ್ರದಲ್ಲಿ ₹ 43,000 ಡ್ರಾ ಮಾಡಿಕೊಂಡಿದ್ದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ ಶಿವಕುಮಾರ್, ಠಾಣೆಗೆ ದೂರು ನೀಡಿದ್ದರು' ಎಂದೂ ಪೊಲೀಸರು ತಿಳಿಸಿದರು.

ದಟ್ಟಣೆ ಉಂಟು ಮಾಡಿ ಬಂಧನ: 'ಡ್ರಾಪ್ ನೆಪದಲ್ಲಿ ಸಾರ್ವಜನಿಕರನ್ನು ವಾಹನದಲ್ಲಿ ಹತ್ತಿಸಿಕೊಂಡು ಸುಲಿಗೆ ಮಾಡುವುದನ್ನೇ ವೃತ್ತಿ ಮಾಡಿಕೊಂಡಿದ್ದ ಆರೋಪಿಗಳು, ನಿತ್ಯವೂ ನೈಸ್ ರಸ್ತೆ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ಸುತ್ತಾಡುತ್ತಿದ್ದರು. ಈ ಬಗ್ಗೆ ಮಾಹಿತಿ ಕಲೆಹಾಕಿ, ಅವರ ಬಂಧನಕ್ಕಾಗಿ ಕಾರ್ಯಾಚರಣೆ ಆರಂಭಿಸಿದೆವು' ಎಂದು ಪೊಲೀಸರು ಹೇಳಿದರು.

'ಕನಕಪುರ ರಸ್ತೆ ಮೂಲಕವಾಗಿ ತಾಟಗುಪ್ಪೆ ಬಳಿ ಆರೋಪಿಗಳು ಗೂಡ್ಸ್ ವಾಹನದಲ್ಲಿ ಬರುತ್ತಿದ್ದ ಮಾಹಿತಿ ಸಿಕ್ಕಿತ್ತು. 'ರಸ್ತೆಯಲ್ಲಿ ಅಪಘಾತವಾಗಿರುವುದಾಗಿ ಹೇಳಿ ವಾಹನಗಳನ್ನು ತಡೆದು ನಿಲ್ಲಿಸಲಾಯಿತು. ಆರೋಪಿಗಳ ವಾಹನ ಸಹ ದಟ್ಟಣೆಯಲ್ಲಿ ಸಿಲುಕಿತ್ತು. ಇದೇ ಸಂದರ್ಭದಲ್ಲೇ ವಾಹನ ಸುತ್ತುವರಿದು ಆರೋಪಿಗಳನ್ನು ಬಂಧಿಸಲಾಯಿತು' ಎಂದೂ ಪೊಲೀಸರು ವಿವರಿಸಿದರು.

ಸುಲಿಗೆ ಪ್ರಕರಣ: ಮೂವರನ್ನು ಬಂಧಿಸಿದ ಪೊಲೀಸರು

ಆರೋಪಿ ಜೀವ ಉಳಿಸಿದ ಕಾನ್‌ಸ್ಟೆಬಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತನ್ನನ್ನು ಬಂಧಿಸಲು ಬಂದ ಪೊಲೀಸರಿಂದ ತಪ್ಪಿಸಿಕೊಳ್ಳಲು ಯತ್ನಿಸುವಾಗ ಬಾವಿಯೊಳಗೆ ಬಿದ್ದ ಆರೋಪಿಯನ್ನು ಯಲಹಂಕದ ಕಾನ್‌ಸ್ಟೆಬಲ್ ಶಿವಕುಮಾರ್ ಕಾಪಾಡಿದ್ದಾರೆ.

'ಯಲಹಂಕ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಸುಲಿಗೆ ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪದಡಿ ಮೂವರನ್ನು ತಮಿಳುನಾಡಿನ ಧರ್ಮಪುರಿಯಲ್ಲಿ ಇತ್ತೀಚೆಗೆ ಬಂಧಿಸಲಾಗಿದೆ. ಆ ಪೈಕಿ ಆರೋಪಿ ಇಮ್ರಾನ್ ಎಂಬಾತನ ಜೀವವನ್ನು ಕಾನ್‌ಸ್ಟೆಬಲ್ ಉಳಿಸಿದ್ದಾರೆ. ಆರೋಪಿಗಳಿಂದ ಚಿನ್ನಾಭರಣ, ಮೊಬೈಲ್, ಎರಡು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಈಶಾನ್ಯ ವಿಭಾಗದ ಡಿಸಿಪಿ ಸಿ.ಕೆ.ಬಾಬಾ ತಿಳಿಸಿದರು.

'ಮಾರುತಿ ನಗರದಲ್ಲಿ ರೆಡ್ಡಿ ಶೇಖರ್ ಎಂಬುವರನ್ನು ಹಿಂಬಾಲಿಸಿದ್ದ ಆರೋಪಿಗಳು, ಚಾಕುವಿನಿಂದ ಇರಿದು ಸುಲಿಗೆ ಮಾಡಿ ಪರಾರಿಯಾಗಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ಆರೋಪಿಗಳು ಗೋವಿಂದಪುರ



ಕಾನ್‌ಸ್ಟೆಬಲ್ ಶಿವಕುಮಾರ್

ನಿವಾಸಿಗಳು ಎಂಬುದು ತನಿಖೆಯಿಂದ ತಿಳಿಯಿತು. ವಾಸಸ್ಥಳಕ್ಕೆ ಹೋದಾಗ ಆರೋಪಿಗಳು ಕೈಗೆ ಸಿಗಲಿಲ್ಲ.

'ತಮಿಳುನಾಡಿನ ಧರ್ಮಪುರಿ ಬಳಿಯ ತೂಪುರು ಗ್ರಾಮಕ್ಕೆ ಆರೋಪಿಗಳು ಹೋಗಿರುವ ಮಾಹಿತಿ ಲಭ್ಯವಾಯಿತು. ಪಿಎಸ್‌ಐಗಳಾದ ಸುನೀಲ್‌ಕುಮಾರ್, ಹರೀಶ್ ನೇತೃತ್ವದ ತಂಡ, ತೂಪುರು ಗ್ರಾಮಕ್ಕೆ ಹೋಗಿತ್ತು. ತಮಿಳುನಾಡು ಪೊಲೀಸರ ಸಹಾಯದಿಂದ ಮೂವರು ಆರೋಪಿಗಳನ್ನು ಹಿಡಿಯಲು ಮುಂದಾಗಿತ್ತು' ಎಂದೂ ಹೇಳಿದರು.

'ಇಬ್ಬರು ಆರೋಪಿಗಳು ಸೆರೆ ಸಿಕ್ಕಿದ್ದರು. ಆರೋಪಿ ಇಮ್ರಾನ್, ತಪ್ಪಿಸಿಕೊಂಡು ಓಡಲಾರಂಭಿಸಿದ್ದ. ಆತನನ್ನು ಪೊಲೀಸರು ಬೆನ್ನಟ್ಟಿದ್ದರು. ಜೋರು ಮಳೆಯಲ್ಲೇ ಕಾರ್ಯಾಚರಣೆ ನಡೆದಿತ್ತು. ಓಡುತ್ತಲೇ ಇಮ್ರಾನ್, ನೀರು ತುಂಬಿದ್ದ ಪಾಳು ಬಾವಿಯೊಳಗೆ ಬಿದ್ದಿದ್ದ. ಮೇಲೆ ಹತ್ತಿ ಬರಲು ಮೆಟ್ಟಿಲು ಸಹ ಇರಲಿಲ್ಲ. 'ಕಾಪಾಡಿ... ಕಾಪಾಡಿ..' ಎಂದು ಕೂಗಲಾರಂಭಿಸಿದ್ದ.'

'ಅಗ್ನಿಶಾಮಕ ದಳದ ಸಿಬ್ಬಂದಿಗೆ ಮಾಹಿತಿ ನೀಡಲಾಗಿತ್ತು. ಸ್ಥಳಕ್ಕೆ ಬರಲು ಎರಡು ಗಂಟೆ ಬೇಕಾಗಬಹುದೆಂದು ಸಿಬ್ಬಂದಿ ಹೇಳಿದ್ದರು. ಬಾವಿಯಲ್ಲಿ ನೀರು ಹೆಚ್ಚಿದ್ದರಿಂದ ಕೆಳಗೆ ಇಳಿಯದಂತೆ ಸ್ಥಳೀಯರು ಹೇಳಿದ್ದರು. ಅದಕ್ಕೆ ಹೆದರದ ಕಾನ್‌ಸ್ಟೆಬಲ್ ಶಿವಕುಮಾರ್, ತಮ್ಮ ಪ್ರಾಣ ಲೆಕ್ಕಿಸದೇ ಸೊಂಟಕ್ಕೆ ಹಗ್ಗ ಕಟ್ಟಿಕೊಂಡು ಬಾವಿಯೊಳಗೆ ಇಳಿದಿದ್ದರು. ನೀರಿನಲ್ಲಿ ಮುಳುಗುತ್ತಿದ್ದ ಆರೋಪಿಯನ್ನು ಮೇಲಕ್ಕೆ ಎತ್ತಿ ತಂದು ಜೀವ ಉಳಿಸಿದರು. ಸ್ಥಳೀಯ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಆರೋಪಿಯನ್ನು ಬೆಂಗಳೂರಿಗೆ ಕರೆತರಲಾಯಿತು' ಎಂದೂ ಡಿಸಿಪಿ ಬಾಬಾ ತಿಳಿಸಿದರು.

'ಕಾನ್‌ಸ್ಟೆಬಲ್ ಬಾವಿಗೆ ಇಳಿಯದಿದ್ದರೆ, ಬಾವಿಯೊಳಗೆ ಮುಳುಗಿ ಆರೋಪಿ ಮೃತಪಡುತ್ತಿದ್ದ. ಆ ರೀತಿಯಾಗಿದ್ದರೆ ಕರ್ನಾಟಕ ಪೊಲೀಸರ ಬಗ್ಗೆ ತಮಿಳುನಾಡಿನಲ್ಲಿ ತಪ್ಪು ಸಂದೇಶ ರವಾನೆಯಾಗುತ್ತಿತ್ತು. ಕಾನ್‌ಸ್ಟೆಬಲ್ ಧೈರ್ಯ ಹಾಗೂ ಕರ್ತವ್ಯನಿಷ್ಠೆಯನ್ನು ಮೆಚ್ಚಿ ಬಹುಮಾನ ನೀಡಿ ಸನ್ಮಾನಿಸಲಾಗಿದೆ' ಎಂದೂ ಅವರು ಹೇಳಿದರು.

ಬೆತ್ತಲೆ ವಿಡಿಯೊ ಬ್ಲ್ಯಾಕ್‌ಮೇಲ್: ಮತ್ತೆ ಮೂವರು ಆರೋಪಿಗಳ ಬಂಧನ

ಬೆಂಗಳೂರು: ಸಾಮಾಜಿಕ ಜಾಲತಾಣಗಳಲ್ಲಿ ಯುವತಿಯರ ಹೆಸರಿನಲ್ಲಿ ನಕಲಿ ಖಾತೆ ತೆರೆದು ಸಾರ್ವಜನಿಕರನ್ನು ಪರಿಚಯಿಸಿಕೊಂಡು ಬೆತ್ತಲೆಗೊಳಿಸಿ ವಿಡಿಯೊ ಚಿತ್ರೀಕರಿಸಿಕೊಂಡು ಬ್ಲ್ಯಾಕ್ ಮೇಲ್ ಮಾಡುತ್ತಿದ್ದ ಪ್ರಕರಣದಲ್ಲಿ ಮತ್ತೆ ಮೂವರು ಆರೋಪಿಗಳನ್ನು ಸಿಐಡಿ ಪೊಲೀಸರು ಬಂಧಿಸಿದ್ದಾರೆ.

ನಗರದಲ್ಲಿ ದಾಖಲಾಗಿದ್ದ ಪ್ರಕರಣಗಳ ತನಿಖೆ ಕೈಗೊಂಡಿದ್ದ ಸಿಐಡಿ ಸೈಬರ್ ಕ್ರೈಂ ಪೊಲೀಸರು, ಹರಿಯಾಣದ ಇಕ್ಬಾಲ್, ಮುಜಾಹಿದ್ ಹಾಗೂ ಆಸಿಫ್ ಎಂಬುವರನ್ನು ಕಳೆದ ತಿಂಗಳು ಬಂಧಿಸಿದ್ದರು. ಇಂಥದ್ದೇ ಪ್ರಕರಣದಲ್ಲಿ ಇದೀಗ, ರಾಜಸ್ಥಾನದ ಸಾಕೀರ್, ಕಸಮ್ ಖಾನ್ ಹಾಗೂ ಜಮೀಲ್ ಖಾನ್ ಎಂಬುವರನ್ನು ಸೆರೆ ಹಿಡಿದಿದ್ದಾರೆ.

'ಯುವತಿಯರ ಫೋಟೊ ಬಳಸಿಕೊಂಡು ನಕಲಿ ಖಾತೆ ತೆರೆಯುತ್ತಿದ್ದ ಆರೋಪಿಗಳು, ಸಾರ್ವಜನಿಕರಿಗೆ ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿ ಪರಿಚಯಿಸಿಕೊಳ್ಳುತ್ತಿದ್ದರು. ಯುವತಿಯರ ಹೆಸರಿನಲ್ಲಿ ಸಲುಗೆಯಿಂದ ಸಂದೇಶ ಕಳುಹಿಸುತ್ತಿದ್ದರು. ಲೈಂಗಿಕವಾಗಿ ಮಾತನಾಡಿ ಪ್ರಚೋದಿಸುತ್ತಿದ್ದರು' ಎಂದು ಸಿಐಡಿ ಮೂಲಗಳು ಹೇಳಿವೆ. 'ಪ್ರಚೋದನೆಗೆ ಒಳಗಾದ ಜನ, ಮೈ ಮೇಲಿನ ಬಟ್ಟೆ ತೆಗೆದು ವಿಡಿಯೊ ಕರೆ ಮಾಡುತ್ತಿದ್ದರು. ಇದೇ ದೃಶ್ಯವನ್ನು



ಕಸಮ್ ಖಾನ್



ಸಾಕೀರ್



ಜಮೀಲ್ ಖಾನ್

ಚಿತ್ರೀಕರಿಸಿಕೊಳ್ಳುತ್ತಿದ್ದ ಆರೋಪಿಗಳು, ಸಾರ್ವಜನಿಕರಿಗೆ ವಿಡಿಯೊ ಕಳುಹಿಸಿ ಹಣಕ್ಕೆ ಬೇಡಿಕೆ ಇರಿಸುತ್ತಿದ್ದರು. ಹಣ ನೀಡದಿದ್ದರೆ ಫೇಸ್‌ಬುಕ್ ಹಾಗೂ ಇತರೆ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಹರಿಬಿಡುವುದಾಗಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು' ಎಂದೂ ತಿಳಿಸಿವೆ.

'ಕೃತ್ಯಕ್ಕೆಂದೇ, ಅಪರಿಚಿತರ ದಾಖಲೆಗಳನ್ನು ಕದ್ದು ಅದೇ ದಾಖಲೆ ಬಳಸಿಕೊಂಡು ಬ್ಯಾಂಕ್ ಖಾತೆಗಳನ್ನೂ ತೆರೆಯುತ್ತಿದ್ದರು' ಎಂದೂ ಮೂಲಗಳು ಹೇಳಿವೆ.

ಎಚ್ಚರಿಕೆ ವಹಿಸಿ: 'ಸಾಮಾಜಿಕ ಜಾಲತಾಣಗಳಲ್ಲಿ ಅಪರಿಚಿತರ ಫ್ರೆಂಡ್ ರಿಕ್ವೆಸ್ಟ್ ಸ್ವೀಕರಿಸುವ ಮುನ್ನ ಸಾರ್ವಜನಿಕರು ಎಚ್ಚರಿಕೆ ವಹಿಸಬೇಕು.' ಎಂದು ಸಿಐಡಿ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಐಪಿಎಲ್ ಬೆಟ್ಟಿಂಗ್; ನಾಲ್ವರ ಬಂಧನ

ರಾಮನಗರ: ಚನ್ನಪಟ್ಟಣ ತಾಲ್ಲೂಕಿನ ಹೊಡಿಕೆ ಹೊಸಹಳ್ಳಿ ಸೇರಿದಂತೆ ಜಿಲ್ಲೆಯ ವಿವಿಧೆಡೆ ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್ ದಂದೆಯಲ್ಲಿ ತೊಡಗಿದ್ದ ನಾಲ್ವರು ಬುಕ್ಕಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ.

ಹೊಡಿಕೆ ಹೊಸಹಳ್ಳಿ ಗ್ರಾಮದ ಎಚ್‌.ಎಂ. ಆತ್ಮಾನಂದ್ (40), ಮಳೂರುಪಟ್ಟಣ ನಿವಾಸಿ ಎಂ. ಸಿ. ಮನು (39), ರಾಮನಗರದ ವಿವೇಕಾನಂದ ನಗರ ನಿವಾಸಿ ಎಸ್. ಕೃಷ್ಣಮೂರ್ತಿ ಹಾಗೂ ಚನ್ನಪಟ್ಟಣದ ಎಂ.ಜಿ. ರಸ್ತೆ ಸಮೀಪದ ನಿವಾಸಿ ನಾಗಾರ್ಜುನ (31) ಬಂಧಿತರು. ಮತ್ತೊಬ್ಬ ಆರೋಪಿ ಸಂದೀಪ್ ತಲೆಮರಿಸಿಕೊಂಡಿದ್ದಾರೆ.

ಬಂಧಿತರಿಂದ ₹10.98 ಲಕ್ಷ ನಗದು, ಹುಂಡೈ ಕಾರ್, 2 ಟಿ.ವಿ. ಸೆಟ್ ಅಪ್ ಬಾಕ್ಸ್‌ಗಳು, 8 ಮೊಬೈಲ್, ವಿವಿಧ ಬ್ಯಾಂಕ್‌ಗಳ ಚೆಕ್ ಪುಸ್ತಕ, ವಿವಿಧ ಬಾಂಡ್ ಕಾಗದಪತ್ರಗಳು ಹಾಗೂ ಎಟಿಎಂ ಕಾರ್ಡ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಸೋಮವಾರ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಕೋಲ್ಕತ್ತ ನೈಟ್ ರೈಡರ್ಸ್ ನಡುವಿನ ಪಂದ್ಯದ ವೇಳೆ ಈ ಆರೋಪಿಗಳು ಜನರಿಂದ ಹಣ ಸಂಗ್ರಹಿಸಿ ಬೆಟ್ಟಿಂಗ್ ಜೂಜಾಟ ನಡೆಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಹೊರಗುತ್ತಿಗೆ ನೌಕರರ ಮುಷ್ಕರ ವಾಪಸ್

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಹೊರಗುತ್ತಿಗೆ ನೌಕರರನ್ನು ಮುಂದುವರಿಸಿ ಕುಲಸಚಿವರು ಮಂಗಳವಾರ ಆದೇಶ ಹೊರಡಿಸಿದ್ದಾರೆ.

ಹೊರಗುತ್ತಿಗೆ ನೌಕರರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಕುಲಸಚಿವರು ಅ.8ರಂದು ಹೊರಡಿಸಿದ್ದ ಆದೇಶವನ್ನು ಕುಲಪತಿ ಅವರು ರದ್ದುಪಡಿಸಿ ಅ.10ರಂದು ಹೊರಡಿಸಿದ್ದರು. ಹೀಗಾಗಿ, ಕುಲಸಚಿವರು ಕೆಲವು ಸೂಚನೆಗಳೊಂದಿಗೆ ಹೊಸದಾಗಿ ಆದೇಶ ಹೊರಡಿಸಿದ್ದಾರೆ.

ಒಟ್ಟು 496 ಹೊರಗುತ್ತಿಗೆ ನೌಕರರು ಇದ್ದಾರೆ. ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರು ಕೆಲಸವನ್ನು ಬಿಟ್ಟರೆ ಆ ಜಾಗಕ್ಕೆ ಬೇರೆಯವರನ್ನು ನೇಮಿಸಿಕೊಳ್ಳಲು ಅವಕಾಶ ಇರುವುದಿಲ್ಲ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಹಿರಿಯ ಅಧಿಕಾರಿಗಳ ಗಮನಕ್ಕೆ ತಾರದೆಯೇ ಹೊಸದಾಗಿ ಹೊರಗುತ್ತಿಗೆ ಅಡಿಯಲ್ಲಿ ನೌಕರರನ್ನು ನೇಮಿಸಿಕೊಂಡಿದ್ದಲ್ಲಿ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಕುಲಸಚಿವರು ತಿಳಿಸಿದ್ದಾರೆ.

ತಾತ್ಕಾಲಿಕ ಸ್ಥಗಿತ: ಹೊರಗುತ್ತಿಗೆ ನೌಕರರ ಸೇವೆಯನ್ನು ಮತ್ತೆ ಮುಂದುವರಿಸಿ ಆದೇಶ ನೀಡಿರುವುದರಿಂದ ಅ.13ರಿಂದ ಎಲ್ಲ ಹೊರಗುತ್ತಿಗೆ ನೌಕರರು ಮುಷ್ಕರವನ್ನು ತಾತ್ಕಾಲಿಕ ಸ್ಥಗಿತಗೊಳಿಸಿ ಕೆಲಸಕ್ಕೆ ಹಾಜರಾಗುತ್ತಾರೆ ಎಂದು ಬೆಂಗಳೂರು ವಿಶ್ವವಿದ್ಯಾಲಯದ ನೌಕರರ ಸಂಘದ ಎಚ್‌. ಕೃಷ್ಣಪ್ಪ ತಿಳಿಸಿದ್ದಾರೆ.

ಪಕ್ಷದ ಅಧ್ಯಕ್ಷರ ಶೀಘ್ರ ನೇಮಕಕ್ಕೆ ಮನವಿ

ನವದೆಹಲಿ: ಕಾಂಗ್ರೆಸ್‌ನ ಹಿರಿಯ ಮುಖಂಡ ಕೆ.ಎಚ್‌. ಮುನಿಯಪ್ಪ ಅವರು ಮಂಗಳವಾರ ಪಕ್ಷದ ವರಿಷ್ಠರಾದ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿ ರಾಜ್ಯ ರಾಜಕಾರಣದ ಕುರಿತು ಚರ್ಚೆ ನಡೆಸಿದರು.

ಪಕ್ಷದ ರಾಜ್ಯ ಹಾಗೂ ಜಿಲ್ಲಾ ಘಟಕಗಳ ಪದಾಧಿಕಾರಿಗಳ ನೇಮಕಕ್ಕೆ ಸಂಬಂಧಿಸಿದಂತೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಸಲ್ಲಿಸಿರುವ ಪಟ್ಟಿಗಳ ಕುರಿತು ಶೀಘ್ರವೇ ತೀರ್ಮಾನ ಕೈಗೊಳ್ಳುವಂತೆ ಮುನಿಯಪ್ಪ ಅವರು ಈ ಸಂದರ್ಭ ಮನವಿ ಮಾಡಿದರು ಎಂದು ಪಕ್ಷದ ಮೂಲಗಳು ತಿಳಿಸಿವೆ.

ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್‌ನ ಪುನಶ್ಚೇತನ ಪ್ರಕ್ರಿಯೆಗೆ ಕೈಹಾಕಿರುವ ಸೋನಿಯಾ ಅವರು ವಿವಿಧ ರಾಜ್ಯಗಳ ಪ್ರಮುಖ ಮುಖಂಡರೊಂದಿಗೆ ಸಮಾಲೋಚನೆ ನಡೆಸುತ್ತಿರುವ ಭಾಗವಾಗಿ ಮುನಿಯಪ್ಪ ಅವರಿಗೆ ಆಹ್ವಾನ ನೀಡಲಾಗಿತ್ತು. ಪಕ್ಷ ಬಲಪಡಿಸುವ ಉದ್ದೇಶದೊಂದಿಗೆ ರಾಜ್ಯದ ಕೆಲವು ಪ್ರಮುಖ ನಾಯಕರಿಗೆ ರಾಷ್ಟ್ರೀಯ ಘಟಕದಲ್ಲಿ ಸ್ಥಾನಮಾನ ನೀಡುವ ಕುರಿತೂ ಅಭಿಪ್ರಾಯ ಸಂಗ್ರಹಿಸಲಾಗಿದೆ.

ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ನೇಮಕ ಸಂದರ್ಭ ದಲಿತ ಎಡಗೈ ಸಮುದಾಯದ ಮುಖಂಡರಿಗೆ ಆದ್ಯತೆ ನೀಡುವಂತೆಯೂ ಈ ಸಂದರ್ಭ ಆಗ್ರಹಿಸಿದ್ದಾರೆ ಎಂದು ತಿಳಿದುಬಂದಿದೆ.

ಸೋನಿಯಾ ಗಾಂಧಿ ಅವರು ಕಳೆದ ವಾರ ಸಿದ್ದರಾಮಯ್ಯ ಅವರೊಂದಿಗೆ ಚರ್ಚೆ ನಡೆಸಿದ್ದರಲ್ಲದೆ, ರಾಜ್ಯ ರಾಜಕೀಯ ಬೆಳವಣಿಗೆಗಳ ಕುರಿತು ಮಾಹಿತಿ ಪಡೆದಿದ್ದರು.

ಅಧ್ಯಕ್ಷರ ನೇಮಕಕ್ಕೆ ಮನವಿ: 'ಕೊರೊನಾ ಕಾರಣದಿಂದಾಗಿ ಒಂದೂವರೆ ವರ್ಷದಿಂದ ನಡೆಯದೇ ಇದ್ದ ಕಾಂಗ್ರೆಸ್ ಕಾರ್ಯಕಾರಿಣಿ ಸಭೆಯು ಅಕ್ಟೋಬರ್ 16ರಂದು ನಡೆಯಲಿದೆ. ಸಭೆಯ ಕಾರ್ಯಸೂಚಿ ಏನು ಎಂಬುದು ಗೊತ್ತಾಗಿಲ್ಲ. ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ನೇಮಕ ಪ್ರಕ್ರಿಯೆಯನ್ನು ಆದಷ್ಟು ಬೇಗ ಪೂರ್ಣಗೊಳಿಸುವಂತೆ ಸೋನಿಯಾ ಅವರಿಗೆ ಮನವಿ ಸಲ್ಲಿಸಿದ್ದೇನೆ' ಎಂದು ಭೇಟಿಯ ನಂತರ ಮುನಿಯಪ್ಪ ಅವರು ಸುದ್ದಿಗಾರರಿಗೆ ತಿಳಿಸಿದರು.

ಮುಂದಿನ ವರ್ಷದ ಆರಂಭಕ್ಕೆ ಉತ್ತರ ಪ್ರದೇಶ ಸೇರಿದಂತೆ ಪಂಚ ರಾಜ್ಯಗಳ ವಿಧಾನಸಭೆಗಳಗೆ ನಡೆಯುವ ಚುನಾವಣೆ ಕುರಿತು ಹಾಗೂ ಪಂಜಾಬ್, ಕರ್ನಾಟಕ ಮತ್ತಿತರ ರಾಜ್ಯಗಳಲ್ಲೂ ಪಕ್ಷವನ್ನು ಮರಳಿ ಅಧಿಕಾರಕ್ಕೆ ತರುವ ನಿಟ್ಟಿನಲ್ಲೂ ಸಭೆಯಲ್ಲಿ ಚರ್ಚಿಸುವ ಸಾಧ್ಯತೆ ಇದೆ ಎಂದು ಅವರು ಹೇಳಿದರು.

ಸಮುದಾಯದ ಪ್ರಮುಖರಿಗೆ ಅಭಿನಂದನಾ ಸಮಾರಂಭ

ಬಿಜೆಪಿ ಸರ್ಕಾರದಲ್ಲಿ ರೆಡ್ಡಿ ಶಾಸಕರಿಗೆ ಅನ್ಯಾಯ: ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಕೆ.ಆರ್‌.ಪುರ: 'ಬಿಜೆಪಿ ಸರ್ಕಾರದಲ್ಲಿ ರೆಡ್ಡಿ ಸಮುದಾಯದ ಒಬ್ಬ ಶಾಸಕರಿಗೂ ಸಚಿವ ಸ್ಥಾನ ನೀಡದೆ, ಅನ್ಯಾಯ ಮಾಡಲಾಗಿದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಅಸಮಾಧಾನ ವ್ಯಕ್ತಪಡಿಸಿದರು.

ಮಾರತ್ತಹಳ್ಳಿಯಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು ರೆಡ್ಡಿ ಸಮುದಾಯದ ವತಿಯಿಂದ ಹಮ್ಮಿಕೊಂಡಿದ್ದ ಸಮುದಾಯದ ಪ್ರಮುಖರಿಗೆ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ರೆಡ್ಡಿ ಸಮುದಾಯದ ಶಾಸಕರಿಗೆ ಅರ್ಹತೆ ಇದ್ದರೂ ಸಚಿವ ಸ್ಥಾನ ನೀಡದೆ, ನಿರ್ಲಕ್ಷ್ಯ ತೋರಿರುವುದರಿಂದ ಸಮುದಾಯದ ಅಭಿವೃದ್ಧಿಗೆ ಹಿನ್ನಡೆಯಾಗಿದೆ. ಪಕ್ಷಬೇಧ ಮರೆತು ಸಮುದಾಯದ ಏಳಿಗೆಗೆ ಶ್ರಮಿಸಬೇಕು' ಎಂದರು.

'ರೆಡ್ಡಿ ಸಮುದಾಯದಲ್ಲಿ ಒಗ್ಗಟ್ಟು ಬರುವವರೆಗೂ ರಾಜಕೀಯ ಪ್ರಾತಿನಿಧ್ಯ ಸಿಗದೆ, ನಮ್ಮ ಕೂಗು ಸರ್ಕಾರಕ್ಕೆ ಕೇಳಿಸುವುದಿಲ್ಲ. ಬೀದರ್‌ನಿಂದ ಬೆಂಗಳೂರುವರೆಗೆ ರೆಡ್ಡಿ ಸಮುದಾಯದ ಜನರಿದ್ದಾರೆ. ರೆಡ್ಡಿ ಸಮುದಾಯವನ್ನು ಒಗ್ಗೂಡಿಸುವ ಕೆಲಸ ಮಾಡಬೇಕಿದೆ' ಎಂದು ಹೇಳಿದರು.



ರೆಡ್ಡಿ ಸಮುದಾಯದ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರನ್ನು ಶಾಸಕ ಸತೀಶ್ ರೆಡ್ಡಿ ಸನ್ಮಾನಿಸಿದರು. ನಂದೀಶ್ ರೆಡ್ಡಿ, ಭಾಸ್ಕರ್ ರೆಡ್ಡಿ, ಚಂದ್ರಶೇಖರ ರೆಡ್ಡಿ ಹಾಗೂ ಇತರರು ಇದ್ದರು.

ಬಿಎಂಟಿಸಿ ಅಧ್ಯಕ್ಷ ನಂದೀಶ್ ರೆಡ್ಡಿ, 'ಹಿಂದಿನ ಬಿಬಿಎಂಪಿ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ಮೀಸಲಾತಿ ನೀಡದೆ ಸಮುದಾಯಕ್ಕೆ ವಂಚಿಸಿವೆ. ಮುಂದಿನ ದಿನಗಳಲ್ಲಿ ರೆಡ್ಡಿ ಸಮುದಾಯ ರಾಜಕೀಯವಾಗಿ ಬೆಳೆಯಲು ಶ್ರಮಿಸುತ್ತೇವೆ' ಎಂದರು.

ರೆಡ್ಡಿ ಸಮುದಾಯದ ರಾಮಲಿಂಗಾರೆಡ್ಡಿ, ಟಿಟಿಡಿ ಸದಸ್ಯ ಎಸ್‌.ಆರ್‌.ವಿಶ್ವನಾಥ್, ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ, ಕೆಎಎಸ್ ಅಧಿಕಾರಿ ವರಪ್ರಸಾದ್ ರೆಡ್ಡಿ, ವೈದ್ಯ ಡಾ.ವಿಜಯಕುಮಾರ್, ಡಾ.ಶಶಿಧರ್, ಮಾರ್ಷಲ್ ಆರ್ಟ್ ಚಿನ್ನದ ಪದಕ ವಿಜೇತ ಸಂತೋಷ್ ರೆಡ್ಡಿ ಅವರನ್ನು ಸನ್ಮಾನಿಸಲಾಯಿತು.



ದಸರಾ ಅಂಗವಾಗಿ ಕೆ.ಆರ್‌.ಮಾರುಕಟ್ಟೆ ಆವರಣದಲ್ಲಿ ವ್ಯಾಪಾರಕ್ಕೆ ರಾಶಿ ಹಾಕಲಾಗಿರುವ ಬೂದುಗುಂಬಳ



ಕೆ.ಆರ್‌.ಮಾರುಕಟ್ಟೆಯಲ್ಲಿ ಹಬ್ಬಕ್ಕೆ ಹೂವು ಖರೀದಿಸಲು ಮಂಗಳವಾರ ಬಂದಿದ್ದ ಜನ

ಮಳೆಯಿಂದ ಬೇಡಿಕೆ ಕಳೆದುಕೊಂಡ ಕೆಲ ಹೂಗಳು • ಬೆಲೆ ಕಡಿಮೆ ಇದ್ದರೂ ಖರೀದಿಗೆ ಗ್ರಾಹಕರ ಹಿಂದೇಟು

ದಸರಾ: ಮಾರುಕಟ್ಟೆಗಳಲ್ಲಿ ಹೂ ವ್ಯಾಪಾರ ನೀರಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಯುಧ ಪೂಜೆ ಮತ್ತು ವಿಜಯದಶಮಿ ಪ್ರಯುಕ್ತ ತರಕಾರಿ, ಸೊಪ್ಪು ಹಾಗೂ ಸಾಮಗ್ರಿಗಳ ದರ ಗಗನಕ್ಕೇರಿವೆ. ಈ ಬಾರಿ ಮಳೆಯಿಂದಾಗಿ ಹೂಗಳೆಲ್ಲ ಹೆಚ್ಚು ಹಾನಿಗೆ ತುತ್ತಾಗಿದ್ದು, ಮಾರುಕಟ್ಟೆಗಳಲ್ಲಿ ಹೂವಿನ ವ್ಯಾಪಾರಕ್ಕೆ ಸ್ವಲ್ಪ ಪೆಟ್ಟು ಬಿದ್ದಿದೆ.

ನವರಾತ್ರಿ ಆಚರಣೆಯ ವೇಳೆ ಪ್ರತಿ ವರ್ಷ ಹೂಗಳ ದರ ಏರಿಕೆಯಾಗುತ್ತಿತ್ತು. ಎರಡು ವಾರಗಳವರೆಗೆ ಧಾರ್ಮಿಕ ಆಚರಣೆಗಳು ನಡೆಯುವುದರಿಂದ ಈ ಸಮಯದಲ್ಲಿ ಹೂವಿನ ಬೆಳೆಗಾರರು ಹಾಗೂ ವರ್ತಕರು ಲಾಭ ನೋಡುತ್ತಿದ್ದರು.

ಆಯುಧ ಪೂಜೆಯಂದು ವಾಹನಗಳು, ಕಚೇರಿ, ಮನೆಯಲ್ಲಿರುವ ವಸ್ತುಗಳನ್ನು ಅಲಂಕರಿಸಿ ಪೂಜೆ ಮಾಡುತ್ತಿದ್ದರು. ವಾಹನಗಳ ಅಲಂಕಾರಕ್ಕೆ ಹೂವು ಹೆಚ್ಚಾಗಿ ಮಾರಾಟ ಆಗುತ್ತಿತ್ತು.

‘ವಾರದಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಸೇವಂತಿಗೆ, ಕನಕಾಂಬರ, ಚೆಂಡು ಹೂವು ಹಾಗೂ ಗುಲಾಬಿ ಹೂಗಳು ಹಾಳಾಗಿವೆ. ಇದರಿಂದ ಮಾರುಕಟ್ಟೆಗೆ ಬರುತ್ತಿರುವ ಹೂಗಳು ನೀರು ತುಂಬಿಕೊಂಡಿದ್ದು, ಅವುಗಳ ಖರೀದಿಗೆ ಗ್ರಾಹಕರು ಹಿಂದೇಟು ಹಾಕುತ್ತಿದ್ದಾರೆ’ ಎಂದು ಹೂವಿನ ವ್ಯಾಪಾರಿಗಳು ಅಳಲು ತೋಡಿಕೊಂಡರು.

‘ಸೇವಂತಿಗೆ, ಕನಕಾಂಬರ, ಗುಲಾಬಿ ದಸರಾ ವೇಳೆ ಹೆಚ್ಚು ಬೇಡಿಕೆಯಾಗುವ ಹೂಗಳು. ಗುಲಾಬಿಗೆ ಹೋಲಿಸಿದರೆ, ಈ ಬಾರಿ ಸೇವಂತಿ, ಕನಕಾಂಬರ ಮತ್ತು ಚೆಂಡು ಹೂ ಮಳೆಗೆ ಹಾಳಾಗಿವೆ’ ಎಂದು ಕೆ.ಆರ್. ಮಾರುಕಟ್ಟೆಯ ಹೂವಿನ ವರ್ತಕ ದಿವಾಕರ್ ಬೇಸರ ವ್ಯಕ್ತಪಡಿಸಿದರು.

‘ಗುಣಮಟ್ಟದ ಹೂವಿಗೆ ಗ್ರಾಹಕರಿಂದ ಬೇಡಿಕೆ ಹೆಚ್ಚು. ಆಗ ಬೆಲೆಯೂ ಸಾಮಾನ್ಯವಾಗಿ ಏರುತ್ತದೆ. ಆದರೆ, ಈಗ ಸೇವಂತಿಯಂತಹ ಹೂಗಳು ಮಳೆಗೆ ಬಲುಬೇಗನೆ ಹಾಳಾಗುತ್ತವೆ. ಮಾರುಕಟ್ಟೆಗೆ ಬರುವಷ್ಟರಲ್ಲಿ ಉದುರುವ ಸ್ಥಿತಿಯಲ್ಲಿರುವ ಹೂವನ್ನು ಗ್ರಾಹಕರು ಹೇಗೆ ಖರೀದಿಸುತ್ತಾರೆ?’ ಎಂದೂ ಪ್ರಶ್ನಿಸಿದರು.

‘ಕಳೆದ ವರ್ಷ ಕೋವಿಡ್, ಈ ಬಾರಿ ಮಳೆ ನಮ್ಮ ವ್ಯಾಪಾರವನ್ನು ಕಸಿದಿದೆ. ಮಾರುಕಟ್ಟೆಗೆ ನಿರೀಕ್ಷಿತ ಮಟ್ಟದ ಗ್ರಾಹಕರೂ ಬರುತ್ತಿಲ್ಲ. ಹೂವಿನ ದರಗಳೆಲ್ಲ ಅಷ್ಟೇನೂ ಏರಿಕೆಯಾಗಿಲ್ಲ. ಬುಧವಾರ ಸಂಜೆ ವೇಳೆಗೆ ಗ್ರಾಹಕರ ಸಂಖ್ಯೆ ಹೆಚ್ಚಾಗುವ ನಿರೀಕ್ಷೆಯಲ್ಲಿದ್ದೇವೆ’ ಎಂದೂ ಹೇಳಿದರು.

ನಗರದ ಕೆ.ಆರ್.ಮಾರುಕಟ್ಟೆ, ಯಶವಂತಪುರ, ಬಸವನಗುಡಿ ಸೇರಿದಂತೆ ಜನಜಂಗುಳಿಯಾಗುತ್ತಿದ್ದ ಮಾರುಕಟ್ಟೆ ಪ್ರದೇಶಗಳಲ್ಲಿ ಮಂಗಳವಾರ ಹೆಚ್ಚು ಗ್ರಾಹಕರು ಕಂಡುಬರಲಿಲ್ಲ. ಆದರೆ, ತರಕಾರಿ, ಅಲಂಕಾರಿ ವಸ್ತುಗಳು, ದಿನಸಿ, ಬೂದುಗುಂಬಳ, ಬಾಳೆಕಂದು ಖರೀದಿ ಜೋರಾಗಿತ್ತು. ಹಣ್ಣಿನ ದರಗಳು ಸ್ಥಿರವಾಗಿದ್ದು, ಸೊಪ್ಪಿನ ದರಗಳೆಲ್ಲ ದುಬಾರಿಯಾಗಿವೆ.

ತರಕಾರಿಗಳ ದರ ಕೆ.ಜಿಗೆ ₹10ರಷ್ಟು ಏರಿಕೆ: ‘ಟೊಮೆಟೊ, ಈರುಳ್ಳಿ, ಬದನೆ, ಬೀನ್ಸ್, ಕ್ಯಾರೆಟ್ ಸೇರಿದಂತೆ ಪ್ರತಿ ತರಕಾರಿ ದರಗಳು ಕೆ.ಜಿಗೆ ₹10ರಿಂದ ₹20ರವರೆಗೆ ದಿಢೀರ್ ಏರಿಕೆಯಾಗಿವೆ. ಸಗಟು ದರದಲ್ಲೇ ಟೊಮೆಟೊ ₹60ರಂತೆ ಮಾರಾಟವಾಗುತ್ತಿದ್ದು, ಚಿಲ್ಲರೆ ದರ ₹80 ದಾಟಿದೆ’ ಎಂದು ತರಕಾರಿ ವ್ಯಾಪಾರಿ ಕುಮಾರ್ ಮಾಹಿತಿ ನೀಡಿದರು.



ಆಯುಧ ಪೂಜೆ ಪ್ರಯುಕ್ತ ಗ್ರಾಹಕರು ಕೆ.ಆರ್‌.ಮಾರುಕಟ್ಟೆ ಬಳಿ ಬಾಳೆಕಂದುಗಳ ಖರೀದಿಯಲ್ಲಿ ತೊಡಗಿದ್ದರು

ದಸರಾ ವಿಶೇಷ	
ಬಾಳೆ ಕಂದು	50-300 (ಜೋಡಿಗೆ)
ಬೂದುಗುಂಬಳ	20 (ಕೆ.ಜಿಗೆ)
ನಿಂಬೆ ಹಣ್ಣು	5-8(ಒಂದಕ್ಕೆ)

ಹೂವಿನ ದರಪಟ್ಟಿ (ಪ್ರತಿ ಕೆ.ಜಿಗೆ ₹ಗಳಲ್ಲಿ)	
ಮಲ್ಲಿಗೆ	500
ಕನಕಾಂಬರ	400
ಗೆನ್ನೇರಿ	400
ಕಾಕಡ	400
ಗುಲಾಬಿ	250
ಸುಗಂಧರಾಜ	250
ಸೇವಂತಿಗೆ (ಪಾಲಿಹೌಸ್)	200
ಸೇವಂತಿಗೆ	50
ಚೆಂಡುಹೂವು	40

ಹಣ್ಣು	ಚಿಲ್ಲರೆ ದರ	ಹಾಪ್‌ಕಾಮ್ಸ್ ದರ
ಸೇಬು	120	144
ದಾಳಿಂಬೆ	150	206
ಕಿತ್ತಳೆ	70	100
ದ್ರಾಕ್ಷಿ	50	68
ಸೀಬೆ	50	56
ಸಪೋಟ	45	56
ಸೀತಾಫಲ	40	50
ಮೂಸಂಬಿ	60	71
ಅನಾನಸ್	40	46
ಏಲಕ್ಕಿ ಬಾಳೆ	50	60

ಸೊಪ್ಪು	ಚಿಲ್ಲರೆ (ಕಟ್ಟಿಗೆ)	ಹಾಪ್‌ಕಾಮ್ಸ್ (ಕೆ.ಜಿ.ಗೆ)
ಮೆಂತ್ಯೆ	30	134
ಕೊತ್ತಂಬರಿ	20	67
ಸಬ್ಬಕ್ಕಿ	20	70
ಪಾಲಕ್	18	67
ದಂಟು	15	56

ತರಕಾರಿ	ಚಿಲ್ಲರೆ ದರ	ಹಾಪ್‌ಕಾಮ್ಸ್ ದರ
ಬಟಾಣಿ	170	194
ಬೆಳ್ಳುಳ್ಳಿ	80	136
ಟೊಮೆಟೊ	80	65
ಕ್ಯಾರೆಟ್	70	74
ಶುಂಠಿ	60	68
ಈರುಳ್ಳಿ	50	54
ಬೀನ್ಸ್	50	44
ಬದನೆ	40	54
ಮೆಣಸಿನಕಾಯಿ	40	43
ಬೆಂಡೆಕಾಯಿ	30	36
ಹೂಕೋಸು	30	36
ಆಲೂಗಡ್ಡೆ	30	30
ಮೂಲಂಗಿ	30	32
ಎಲೆಕೋಸು	20	20

ಸುದ್ದಿ 2 ನಿಮಿಷ

ವರ್ಗಾವಣೆ ಕಾಯ್ದೆ ಜಾರಿಗೆ ಒತ್ತಾಯ

ಬೆಂಗಳೂರು: ‘ಈ ವರ್ಷದ ನವೆಂಬರ್ 10ರೊಳಗೆ ವರ್ಗಾವಣೆ ಕಾಯ್ದೆ ಅನುಷ್ಠಾನಗೊಳಿಸಿ ವರ್ಗಾವಣೆ ಪ್ರಕ್ರಿಯೆ ಆರಂಭಿಸಬೇಕು. ಇಲ್ಲದಿದ್ದರೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಕೇಂದ್ರ ಕಚೇರಿ ಎದುರು ಕುಟುಂಬ ಸಮೇತರಾಗಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗುತ್ತದೆ’ ಎಂದು ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಸರ್ಕಾರವನ್ನು ಎಚ್ಚರಿಸಿದೆ.

ಈ ಕುರಿತು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರಿಗೆ ಸಂಘದ ವತಿಯಿಂದ ಪತ್ರ ಬರೆಯಲಾಗಿದೆ.

‘ವರ್ಗಾವಣೆ ಸಂಬಂಧ ಹಿಂದಿನ ಶಿಕ್ಷಣ ಸಚಿವರು, ಕಾರ್ಯದರ್ಶಿಗಳು ಹಾಗೂ ನಿರ್ದೇಶಕರ ಜೊತೆಗೆ ಹಲವು ಬಾರಿ ಚರ್ಚಿಸಲಾಗಿತ್ತು. ನೀವು ಸಚಿವರಾದ ಮೇಲೆ ನಿಮ್ಮೊಂದಿಗೂ ಈ ಬಗ್ಗೆ ಮಾತನಾಡಿದ್ದೇವೆ. ಹೀಗಿದ್ದರೂ ಕಾಯ್ದೆ ಅನುಷ್ಠಾನಗೊಂಡಿಲ್ಲ. ಇಲಾಖೆಯ ವಿಳಂಬ ಧೋರಣೆ ಖಂಡಿಸಿ ಒಮ್ಮೆ ಸಾಂಕೇತಿಕವಾಗಿ ಧರಣಿ ನಡೆಸಲಾಗಿದೆ. ಅಧಿವೇಶನದ ಸಮಯದಲ್ಲೇ ಕಾಯ್ದೆ ಜಾರಿಗೆ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದ ತಾವು ಮಾತು ಮರೆತಿದ್ದೀರಿ. ನವೆಂಬರ್ 10ರೊಳಗೆ ನಮ್ಮ ಬೇಡಿಕೆ ಈಡೇರದಿದ್ದರೆ ಪ್ರತಿಭಟನೆಯ ಹಾದಿ ಹಿಡಿಯುವುದು ಅನಿವಾರ್ಯ’ ಎಂದು ಪತ್ರದಲ್ಲಿ ವಿವರಿಸಲಾಗಿದೆ.

ದಲಿತ ಮಹಿಳೆಯ ಅತ್ಯಾಚಾರ ಯತ್ನ, ಕೊಲೆ: ಗಲ್ಲು ಶಿಕ್ಷೆಗೆ ಆಗ್ರಹ



ಕೆ.ಆರ್.ಪುರ: ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಗ್ರಾಮವೊಂದರ ದಲಿತ ಮಹಿಳೆ ಮೇಲೆ ಅತ್ಯಾಚಾರಕ್ಕೆ ಯತ್ನ ಹಾಗೂ ಕೊಲೆ ಪ್ರಕರಣದ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿ ಆದಿಜಾಂಭವ ಜನಸಂಘ, ಮೂಲನಿವಾಸಿ ಡಾ.ಬಿ.ಆರ್.ಅಂಬೇಡ್ಕರ್ ಸಂಘ ಹಾಗೂ ದಲಿತ ಜನಸೇನೆ ಕಾರ್ಯಕರ್ತರು ಕೆ.ಆರ್.ಪುರ ಬಿಬಿಎಂಪಿ ಕಚೇರಿಯಿಂದ ಪೂರ್ವ ತಾಲ್ಲೂಕು ತಹಶೀಲ್ದಾರ್ ಕಚೇರಿವರೆಗೆ ಧರಣಿ ನಡೆಸಿದರು.

ಮೂಲನಿವಾಸಿ ಡಾ.ಬಿ.ಆರ್.ಅಂಬೇಡ್ಕರ್ ಸಂಘದ ರಾಜ್ಯ ಘಟಕದ ಅಧ್ಯಕ್ಷ ಮುನಿಮಾರಪ್ಪ, ‘ಈ ಘಟನೆಯಿಂದ ನಾಗರಿಕ ಸಮಾಜವೇ ತಲೆ ತಗ್ಗಿಸುವಂತಾಗಿದೆ. ಮಹಿಳೆಯರಿಗೆ ರಕ್ಷಣೆ ಇಲ್ಲದಂತಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಇಲಾಖೆ ವಿಫಲವಾಗಿದೆ. ದೌರ್ಜನ್ಯ, ಅತ್ಯಾಚಾರ, ಜಾತಿ ನಿಂದನೆ ಪ್ರಕರಣಗಳು ಮಿತಿ ಮೀರಿವೆ’ ಎಂದರು.

ಆದಿಜಾಂಬವ ಜನಸಂಘದ ಪೂರ್ವ ತಾಲ್ಲೂಕು ಘಟಕದ ಅಧ್ಯಕ್ಷ ವಿ. ಕೃಷ್ಣಮೂರ್ತಿ, ‘ದಲಿತರ ಮೇಲೆ ಅತ್ಯಾಚಾರ, ಅನ್ಯಾಯ, ದೌರ್ಜನ್ಯಗಳು ನಡೆಯುತ್ತಿದ್ದರೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಅತ್ಯಾಚಾರ ಮಾಡಿದ ವ್ಯಕ್ತಿಯು ಹಣಬಲ ಮತ್ತು ರಾಜಕೀಯ ಬಲದಿಂದ ಜೈಲಿನಿಂದ ಹೊರಬರುವ ಸಾಧ್ಯತೆ ಹೆಚ್ಚಿದೆ. ಅತ್ಯಾಚಾರ ಎಸಗಿದ ವ್ಯಕ್ತಿಯನ್ನು ಜೈಲಿನಿಂದ ಹೊರಬರದಂತೆ ಶಿಕ್ಷೆ ವಿಧಿಸಿ ಗಲ್ಲು ಶಿಕ್ಷೆ ನೀಡಬೇಕು’ ಎಂದು ಒತ್ತಾಯಿಸಿದರು. ಪೂರ್ವ ತಾಲ್ಲೂಕು ವಿಶೇಷ ತಹಶೀಲ್ದಾರ್ ನಾಗಪ್ರಶಾಂತ್ ಅವರಿಗೆ ಮನವಿ ಸಲ್ಲಿಸಲಾಯಿತು. ಆದಿಜಾಂಭವ ಜನಸಂಘದ ಪ್ರಧಾನ ಕಾರ್ಯದರ್ಶಿ ಬಿ.ಆರ್.ಮಾದೇಶ್, ಕಾರ್ಯಾಧ್ಯಕ್ಷ ವೆಂಕಟಸ್ವಾಮಿ, ಉಪಾಧ್ಯಕ್ಷ ಚಂದ್ರಶೇಖರ್, ಪಟೇಂದ್ರಪ್ಪ, ವೇಣು ಮಾದರ್ ಭರತ್ ಇದ್ದರು.

ರಾಜ್ಯದಲ್ಲಿ ವಿದ್ಯುತ್ ಕಡಿತ ಇಲ್ಲ: ಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಕಲ್ಲಿದ್ದಲು ದಾಸ್ತಾನು ಇದೆ. ಆದ್ದರಿಂದ, ಯಾವುದೇ ರೀತಿಯ ವಿದ್ಯುತ್ ಕಡಿತ ಇಲ್ಲ. ಮುಂದಿನ ದಿನಗಳಲ್ಲಿಯೂ ವಿದ್ಯುತ್ ಕಡಿತ ಆಗದಂತೆ ನೋಡಿಕೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ, ಬೇಡಿಕೆ ಮತ್ತು ಕಲ್ಲಿದ್ದಲು ಪರಿಸ್ಥಿತಿಯ ಬಗ್ಗೆ ಇಂಧನ ಇಲಾಖೆಯ ಅಧಿಕಾರಿಗಳ ಜೊತೆ ಮಂಗಳವಾರ ರಾತ್ರಿ ನಡೆಸಿದ ತುರ್ತು ಅವಲೋಕನ ಸಭೆಯ ಬಳಿಕ ಮಾತನಾಡಿದ ಅವರು, ‘ಸದ್ಯ ರಾಜ್ಯದಲ್ಲಿ 98,863 ಟನ್ ಕಲ್ಲಿದ್ದಲು ದಾಸ್ತಾನಿದೆ’ ಎಂದರು.

‘ದೆಹಲಿಯಲ್ಲಿ ಕೇಂದ್ರ ಕಲ್ಲಿದ್ದಲು ಸಚಿವರನ್ನು ನಾನು ಭೇಟಿ ಮಾಡಿ ಚರ್ಚೆ ನಡೆಸಿದ ಬಳಿಕ ದೆಹಲಿಯಿಂದ ರಾಜ್ಯಕ್ಕೆ ಎರಡು ರೇಕ್ ಕಲ್ಲಿದ್ದಲು ಹೆಚ್ಚು ಬಂದಿದೆ. ಈಗ ಪ್ರತಿ ದಿನ 10 ರೇಕ್ ಬರುತ್ತಿದೆ. ಹೆಚ್ಚುವರಿಯಾಗಿ ಇನ್ನೂ ಮೂರು ರೇಕ್ ಕಲ್ಲಿದ್ದಲು ಅವಶ್ಯಕತೆ ಇದೆ’ ಎಂದರು.

‘ಸಿಂಗರೇಣಿಯಿಂದ ಇನ್ನೂ ಎರಡು ರೇಕ್ ಕಲ್ಲಿದ್ದಲು ಕೊಡುತ್ತೇವೆ ಎಂದಿದ್ದಾರೆ. ಅವರಿಗೆ ಸ್ವಲ್ಪ ಹಣ ಪಾವತಿಸಬೇಕಾಗಿದೆ. ಗುರುವಾರ ಆ ಹಣ ಪಾವತಿಸಲಾಗುವುದು. ಬಳಿಕ ತೆಲಂಗಾಣ ಮುಖ್ಯಮಂತ್ರಿ ಜೊತೆ ಮಾತನಾಡುತ್ತೇನೆ. ಕೇಂದ್ರ ಕಲ್ಲಿದ್ದಲು ಸಚಿವರ ಜೊತೆಗೂ ಮಾತನಾಡಿ ಇನ್ನೂ ಎರಡು ಹೆಚ್ಚುವರಿ ರೇಕ್ ಪಡೆಯಲು ವ್ಯವಸ್ಥೆ ಮಾಡುತ್ತೇವೆ’ ಎಂದರು.

ಕುಸಿದ ವಿದ್ಯುತ್ ಉತ್ಪಾದನೆ: ಕಲ್ಲಿದ್ದಲು ಅಭಾವ ತಲೆದೋರಿರುವುದರಿಂದ ರಾಜ್ಯದ ಪ್ರಮುಖ ಶಾಖೋತ್ಪನ್ನ ಕೇಂದ್ರಗಳಲ್ಲಿ ಬೇಡಿಕೆಗೆ ತಕ್ಕಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿಲ್ಲ ಎಂದು ಮೂಲಗಳು ತಿಳಿಸಿವೆ.

ಪ್ರಮುಖ ಶಾಖೋತ್ಪನ್ನ ಕೇಂದ್ರಗಳಾದ ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರ (ಆರ್‌ಟಿಪಿಎಸ್), ಬಳ್ಳಾರಿ ಶಾಖೋತ್ಪನ್ನ ಕೇಂದ್ರ (ಬಿಟಿಪಿಎಸ್) ಮತ್ತು ಯರಮರಸ್ ಶಾಖೋತ್ಪನ್ನ ವಿದ್ಯುತ್ ಸ್ಥಾವರದಿಂದ (ವೈಟಿಪಿಎಸ್) ಒಟ್ಟು 5,020 ಮೆಗಾ ವಾಟ್ ವಿದ್ಯುತ್ ಉತ್ಪಾದನೆಯಾಗಬೇಕಾಗಿತ್ತು. ಆದರೆ, ಮಂಗಳವಾರ 1,300 ಮೆಗಾ ವಾಟ್‌ಗಿಂತಲೂ ಕಡಿಮೆ ಉತ್ಪಾದನೆಯಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸೌರಶಕ್ತಿ ಮೂಲಕ ವಿದ್ಯುತ್ ಕೊರತೆಯನ್ನು ನೀಗಿಸುವ ಪ್ರಯತ್ನ ಮಾಡಲಾಗುತ್ತಿದೆ. 7,300 ಮೆಗಾ ವಾಟ್ ಸ್ಥಾಪಿತ ಸಾಮರ್ಥ್ಯದ ಮೂಲಕ 3,500 ಮೆಗಾ ವಾಟ್ ಉತ್ಪಾದನೆಯಾಗಿದೆ. ರಾಜ್ಯದಲ್ಲಿ ಮಳೆ ಮತ್ತು ಮೋಡದಿಂದ ಕೂಡಿದ ವಾತಾವರಣ ಇರುವುದರಿಂದ ವಿದ್ಯುತ್ ಉತ್ಪಾದನೆ ಇಳಿಕೆಯಾಗಿದೆ ಎಂದು ಹೇಳಿದ್ದಾರೆ.

ಜಲ ವಿದ್ಯುತ್ ಉತ್ಪಾದನೆಯಲ್ಲೂ ಕುಸಿತವಾಗಿದೆ. ಮಂಗಳವಾರ 4,701 ಮೆಗಾ ವಾಟ್ ಉತ್ಪಾದನೆಯಾಗಬೇಕಾಗಿತ್ತು. ಆದರೆ, 1,300 ಮೆಗಾವಾಟ್ ಉತ್ಪಾದನೆಯಾಗಿದೆ ಎಂದಿದ್ದಾರೆ.

ಶರಾವತಿ: ಗರಿಷ್ಠ ವಿದ್ಯುತ್ ಉತ್ಪಾದನೆ

ಶಿವಮೊಗ್ಗ: ಶರಾವತಿ ಕಣಿವೆ ಜಲ ವಿದ್ಯುದಾಗರಗಳಲ್ಲಿ 1,400 ಮೆಗಾವಾಟ್‌ವರೆಗೂ ವಿದ್ಯುತ್ ಉತ್ಪಾದಿಸಲಾಗುತ್ತಿದೆ. 44.35 ಕೋಟಿ ಘನ ಮೀಟರ್ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿರುವ ಲಿಂಗನಮಕ್ಕಿ ಜಲಾಶಯ ನೀರು ಬಳಸಿಕೊಂಡು ಮಹಾತ್ಮ ಗಾಂಧಿ, ಶರಾವತಿ, ಲಿಂಗನಮಕ್ಕಿ ಹಾಗೂ ಗೇರುಸೊಪ್ಪ ಘಟಕಗಳು ಗರಿಷ್ಠ 1,469.8 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿವೆ.

ಈಗ ಕಲ್ಲಿದ್ದಲು ಪೂರೈಕೆಯಲ್ಲಿ ವ್ಯತ್ಯಾಸವಾಗಿರುವ ಪರಿಣಾಮ ವಿದ್ಯುದಾಗರಗಳು ಮತ್ತೆ ದಿನದ 24 ಗಂಟೆಗಳೂ ಗರಿಷ್ಠ ಉತ್ಪಾದನೆಯಲ್ಲಿ ತೊಡಗಿವೆ. ಶರಾವತಿ ಜಲ ವಿದ್ಯುದಾಗರ 1,035 ಮೆಗಾವಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೊಂದಿದೆ. ವಿದ್ಯುದಾಗರದ 10 ಘಟಕಗಳಿಂದ ಪ್ರಸ್ತುತ 950 ಮೆಗಾವಾಟ್‌ವರೆಗೂ ವಿದ್ಯುತ್ ಉತ್ಪಾದಿಸಲಾಗುತ್ತಿದೆ. 220 ಕೆ.ವಿ. ಸಾಮರ್ಥ್ಯದ 9 ಮಾರ್ಗಗಳ ಮೂಲಕ ವಿದ್ಯುತ್ ಹರಿಸಲಾಗುತ್ತಿದೆ. ಮಾಣಿ, ವರಾಹಿ ಸೇರಿ ಜಿಲ್ಲೆಯಲ್ಲಿ ಒಟ್ಟು 1,800 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ.

ಕಾಮಗಾರಿಯಿಂದ ವಿದ್ಯುತ್ ವ್ಯತ್ಯಯ

ಬೆಂಗಳೂರು: ‘ಬೆಸ್ಕಾಂ ವ್ಯಾಪ್ತಿಯಲ್ಲಿ ಲೋಡ್ ಶೆಡ್ಡಿಂಗ್ ಮಾಡುತ್ತಿಲ್ಲ. ಕೆಲವು ಕಾಮಗಾರಿಗಳನ್ನು ಕೈಗೊಂಡಿರುವುದರಿಂದ ಬೆಂಗಳೂರು ನಗರ ಹಾಗೂ ವಿವಿಧೆಡೆ ಅನಿಯಮಿತವಾಗಿ ವಿದ್ಯುತ್ ವ್ಯತ್ಯಯವಾಗುತ್ತಿದೆ. ಲೋಡ್ ಶೆಡ್ಡಿಂಗ್ ಮಾಡುತ್ತಿಲ್ಲ’ ಎಂದು ಬೆಸ್ಕಾಂ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹಲವು ಕಡೆಗಳಲ್ಲಿ ಕೇಬಲ್ ಅಳವಡಿಕೆ ಕಾಮಗಾರಿ ನಡೆಯುತ್ತಿದೆ. ಬೆಸ್ಕಾಂ ವ್ಯಾಪ್ತಿಯಲ್ಲಿ ಪ್ರತಿ ದಿನ 4,500 ರಿಂದ 6,000 ಮೆಗಾ ವಾಟ್ ವಿದ್ಯುತ್ ಬೇಡಿಕೆ ಇದೆ. ಮಳೆಯಾಗುತ್ತಿರುವುದರಿಂದ ವಿದ್ಯುತ್ ಬೇಡಿಕೆ ಸದ್ಯ ಕಡಿಮೆಯಾಗಿದೆ. ಜತೆಗೆ, ಜಲ ಮತ್ತು ಪವನ ವಿದ್ಯುತ್ ಉತ್ಪಾದನೆಯು ಹೆಚ್ಚಾಗಿರುವುದರಿಂದ ಸಮಸ್ಯೆಯಾಗಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹಾನಗಲ್ ಉಪಚುನಾವಣೆ: ಸಿ.ಆರ್. ಬಳ್ಳಾರಿ ಜತೆ ಮಾತುಕತೆ ನಡೆಸಿದ ಸಿಎಂ

ಬಂಡಾಯ ಅಭ್ಯರ್ಥಿಯ ಮನವೊಲಿಸಲು ಕಸರತ್ತು

ಪ್ರಜಾವಾಣಿ ವಾರ್ತೆ

ದಾವಣಗೆರೆ: ಹಾವೇರಿ ಜಿಲ್ಲೆಯ ಹಾನಗಲ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿ ಬಂಡಾಯ ಅಭ್ಯರ್ಥಿ ಸಿ.ಆರ್. ಬಳ್ಳಾರಿ ಅವರನ್ನು ಉಮೇದುವಾರಿಕೆ ಹಿಂತೆಗೆದುಕೊಳ್ಳುವಂತೆ ಮಾಡಲು ಕಸರತ್ತು ನಡೆದಿದೆ. ಸ್ವತಃ ಮುಖ್ಯಮಂತ್ರಿಯವರೇ ದಾವಣಗೆರೆಗೆ ಬಂದಿದ್ದಲ್ಲದೇ ಬಂಡಾಯ ಅಭ್ಯರ್ಥಿಯನ್ನು, ಪಂಚಮಸಾಲಿ ಸಮಾಜದ ಮುಖಂಡರನ್ನು ಕರೆಸಿಕೊಂಡು ಮಾತುಕತೆ ನಡೆಸಿದ್ದಾರೆ.

ಬಸವರಾಜ ಬೊಮ್ಮಾಯಿ ಅವರು ಸೋಮವಾರ ರಾತ್ರಿಯೇ ಇಲ್ಲಿನ ಜಿಎಂಐಟಿ ಅತಿಥಿಗೃಹಕ್ಕೆ ಬಂದಿದ್ದರು. ಸಂಸದ ಜಿ.ಎಂ. ಸಿದ್ದೇಶ್ವರ, ಶಿವಕುಮಾರ ಉದಾಸಿ, ಸಚಿವರಾದ ಸುನಿಲ್ ಕುಮಾರ್, ಬಿ.ಸಿ. ಪಾಟೀಲ, ಮುನಿರತ್ನ ಸಹಿತ ಹಲವರ ಜತೆಗೆ ಗುಪ್ತ ಸಭೆ ನಡೆಸಿದ್ದರು. ಮಂಗಳವಾರ ಬೆಳಿಗ್ಗೆ ಪಂಚಮಸಾಲಿ ಸಮುದಾಯದ ಮುಖಂಡರಾದ ಚಂದ್ರಶೇಖರ ಪೂಜಾರ್, ಬಿ.ಸಿ. ಉಮಾಪತಿ, ರಾಣೆಬೆನ್ನೂರು ಶಾಸಕ ಅರುಣಕುಮಾರ್ ಪೂಜಾರ್ ಅವರ ಜತೆಗೂ ಚರ್ಚೆ ನಡೆಸಿದ್ದಾರೆ. ಬಳಿಕ ಹಾನಗಲ್‌ನ ಮುಖಂಡರ ಜತೆಗೆ ಬಂಡಾಯ ಅಭ್ಯರ್ಥಿ ಸಿ.ಆರ್. ಬಳ್ಳಾರಿ ಅವರೂ ಅತಿಥಿಗೃಹಕ್ಕೆ ಬಂದರು. ಅವರ ಜತೆಗೂ ಮುಕ್ಕಾಲು ಗಂಟೆಗಳ ಕಾಲ ಚರ್ಚೆ ನಡೆಸಿದರು. ಚರ್ಚೆ ಬಹುತೇಕ ಫಲಪ್ರದಗೊಂಡಿದ್ದು, ಬುಧವಾರ ಅಧಿಕೃತವಾಗಿ ಘೋಷಣೆಯಾಗಲಿದೆ.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಸಿ.ಆರ್. ಬಳ್ಳಾರಿ ಮತ್ತು ನಮ್ಮದು ಬಹಳ ಹಳೇ ಸಂಬಂಧ. ಉದಾಸಿಯವರಿಗೂ ಹತ್ತಿರ. ಅವರು ಸರ್ಕಾರಿ ಸೇವೆಯಲ್ಲಿರುವಾಗಲೇ ಹತ್ತಿರದವರಾಗಿದ್ದರು. 40 ವರ್ಷಗಳಿಂದ ನಮ್ಮ ನಂಟು ಇದೆ. ನಾನು ಇಲ್ಲಿಗೆ ಬರುತ್ತೇನೆ. ಭೇಟಿಯಾಗಬೇಕು ಎಂದಾಗ ಅವರು ಬಂದಿದ್ದಾರೆ. ಅವರ ಜತೆಗೂ ಚರ್ಚೆ ಮಾಡಿದ್ದೇವೆ. ಅವರೂ ಅವರ ಬೆಂಬಲಿಗರು, ಸಮಾಜದ ಮುಖಂಡರ ಜತೆಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಿದ್ದಾರೆ’ ಎಂದು ತಿಳಿಸಿದರು.

‘ನಾನು ಬಿಜೆಪಿ ಟಿಕೆಟ್ ಆಕಾಂಕ್ಷಿ ಆಗಿದ್ದೆ. ಬಿಜೆಪಿಯವರು ಯಾವ ಕಾರಣಕ್ಕೆ ಟಿಕೆಟ್ ನೀಡಿಲ್ಲ ಎಂಬುದು ಗೊತ್ತಿಲ್ಲ. ಪಂಚಮಸಾಲಿ ಸಮಾಜದ ಒತ್ತಾಯದ ಮೇರೆಗೆ ನಾನು ಸ್ವತಂತ್ರವಾಗಿ ಸ್ಪರ್ಧಿಸಿದ್ದೇನೆ. ಅ.13ರಂದು ಬೆಳಿಗ್ಗೆ ಹಾನಗಲ್‌ನಲ್ಲಿ ಸಮಾಜದವರ ಜತೆಗೆ ಚರ್ಚಿಸಿ ಮುಂದಿನ ಸೂಕ್ತ ನಿರ್ಧಾರ ಕೈಗೊಳ್ಳುತ್ತೇನೆ’ ಎಂದು ಬಿಜೆಪಿ ಬಂಡಾಯ ಅಭ್ಯರ್ಥಿ ಸಿ.ಆರ್. ಬಳ್ಳಾರಿ ಪ್ರತಿಕ್ರಿಯಿಸಿದರು.

‘ಬಸವರಾಜ ಬೊಮ್ಮಾಯಿ ಮತ್ತು ನಾನು ಸ್ನೇಹಿತರು. ಅವರು ಮುಖ್ಯಮಂತ್ರಿ ಆಗಿರುವಾಗ ಚುನಾವಣೆಯಲ್ಲಿ ಹೆಚ್ಚುಕಮ್ಮಿ ಆದರೆ ಅವರಿಗೆ ಗೌರವ ತರುವಂಥದ್ದಲ್ಲ. ಆ ದೃಷ್ಟಿಯಿಂದಲೂ ವಿಚಾರ ಮಾಡುತ್ತಿದ್ದೇನೆ’ ಎಂದು ಹೇಳಿದರು.

ಹಿಂತೆಗೆತ ಶೇ 99 ಖಚಿತ: ‘ಸಿ.ಆರ್. ಬಳ್ಳಾರಿ ಅವರು ನಾಮಪತ್ರ ಹಿಂತೆಗೆದುಕೊಳ್ಳುವುದು ಶೇ 99ರಷ್ಟು ಖಚಿತವಾಗಿದೆ. ನಾಳೆ ಸಂಜೆ ನಿಮಗೆ ಅದೆಲ್ಲ ಗೊತ್ತಾಗಲಿದೆ’ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಪ್ರತಿಕ್ರಿಯಿಸಿದರು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸದ ಜಿ.ಎಂ. ಸಿದ್ದೇಶ್ವರ ಜತೆಗೆ ರಾಣೆಬೆನ್ನೂರು ಶಾಸಕ ಅರುಣಕುಮಾರ್ ಪೂಜಾರ್, ಬಂಡಾಯ ಅಭ್ಯರ್ಥಿ ಸಿ.ಆರ್. ಬಳ್ಳಾರಿ ಅವರೂ ಇದ್ದರು.

‘ಬ್ಯಾಂಕ್‌ಗೆ ಗ್ರಾಹಕನ ವೈಯಕ್ತಿಕ ಹಿತಕ್ಕಿಂತ ಜನರ ವಿಶ್ವಾಸ ದೊಡ್ಡದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬ್ಯಾಂಕ್‌ಗಳಿಗೆ ಯೋಜನೆಯೊಂದರ ಅಡಿಯಲ್ಲಿ ಒಬ್ಬ ಗ್ರಾಹಕನಿಗೆ ದೊರೆಯಬಹುದಾದ ಅನುಕೂಲಕ್ಕಿಂತಲೂ ಜನಸಮೂಹದ ವಿಶ್ವಾಸ ಉಳಿಸಿಕೊಳ್ಳುವುದೇ ಮುಖ್ಯ’ ಎಂದು ಹೈಕೋರ್ಟ್ ಹೇಳಿದೆ.

ಸಾಲ ಖಾತರಿ ಯೋಜನೆಯ ಅಡಿಯಲ್ಲಿ ಫಲಾನುಭವಿಯಾಗಿದ್ದು, ಮರುಪಾವತಿ ಮಾಡದೇ ಸುಸ್ಥಿದಾರನಾಗಿದ್ದ ಕಂಪನಿಯೊಂದು ತನಗೆ ಪುನಃ ನೆರವು ನೀಡದ ಬ್ಯಾಂಕ್‌ನ ತೀರ್ಮಾನ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿರುವ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರನ್ನೊಳಗೊಂಡ ಏಕಸದಸ್ಯ ಪೀಠ ಈ ಮಾತು ಹೇಳಿದೆ.

ಅರ್ಜಿದಾರ ಕಂಪನಿಯು ಸಂಗೀತ ಉಪಕರಣಗಳು ಹಾಗೂ ಧ್ವನಿವರ್ಧಕಗಳಿಗೆ ಸಂಬಂಧಿಸಿದ ವಹಿವಾಟು ನಡೆಸುತ್ತಿದೆ. ಕಂಪನಿಯು ಸೌತ್ ಇಂಡಿಯನ್ ಬ್ಯಾಂಕ್‌ನಿಂದ ಕೆಲವು ಕೋಟಿ ರೂಪಾಯಿಗಳಷ್ಟು ‘ಕ್ಯಾಶ್ ಕ್ರೆಡಿಟ್ ಓಪನ್ ಲೋನ್’ ಹಾಗೂ ಕಾಲಾವಧಿ ಸಾಲಗಳನ್ನು ಪಡೆದಿತ್ತು. ಆದರೆ, ಕಂಪನಿ ಸಾಲ ಮರುಪಾವತಿ ಮಾಡಿರಲಿಲ್ಲ. ಬ್ಯಾಂಕ್ ಸಾಲ ವಸೂಲಿಗೆ ಕ್ರಮ ಕೈಗೊಂಡಿತ್ತು.

ಪುನಃ ನೆರವು ನೀಡುವಂತೆ ಕಂಪನಿ ಸಲ್ಲಿಸಿದ್ದ ಮನವಿಯನ್ನು ಬ್ಯಾಂಕ್ ತಿರಸ್ಕರಿಸಿತ್ತು. ಅದನ್ನು ಪ್ರಶ್ನಿಸಿ ಕಂಪನಿಯು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಯಾವುದೇ ಕಾರಣ ನೀಡದೆ ತಮ್ಮ ಮನವಿಯನ್ನು ತಿರಸ್ಕರಿಸುವ ಕ್ರಮ ಕಾನೂನಿನ ಪ್ರಕಾರ ಸರಿಯಲ್ಲ ಎಂಬುದು ಅರ್ಜಿದಾರರ ವಾದ.

‘ಬ್ಯಾಂಕ್‌ಗಳು ಗ್ರಾಹಕರ ಜತೆ ವ್ಯವಹರಿಸುವ ಪ್ರಕ್ರಿಯೆನ್ನು ಇತರ ಸರ್ಕಾರಿ ಇಲಾಖೆ, ಸಂಸ್ಥೆಗಳು ಜನರೊಂದಿಗೆ ವ್ಯವಹರಿಸುವ ವಿಧಾನಕ್ಕೆ ಸರಿಸಮನಾಗಿ ಪರಿಗಣಿಸಿ ನ್ಯಾಯಾಂಗವು ಪರಾಮರ್ಶೆಗೆ ಒಳಪಡಿಸಲು ಆಗದು. ಬ್ಯಾಂಕ್‌ಗಳು ಸಂವಿಧಾನದ 12ನೇ ಪರಿಚ್ಛೇದದ ಪ್ರಕಾರ ಸರ್ಕಾರದ ಪರಿಧಿಯೊಳಗೆ ಬರುವುದು ನಿಜ. ಆದರೆ, ಬ್ಯಾಂಕ್ ಮತ್ತು ಗ್ರಾಹಕರ ನಡುವಿನ ವ್ಯವಹಾರವು ಒಪ್ಪಂದ ಅನುಸಾರವೇ ನಡೆಯುತ್ತಿರುತ್ತದೆ. ಈ ಕಾರಣದಿಂದ ಬ್ಯಾಂಕ್‌ನ ನಿರ್ಧಾರವನ್ನು ಮರುಪರಿಶೀಲಿಸಲು ಸೂಚಿಸಲಾಗದು’ ಎಂದು ನ್ಯಾಯಪೀಠ ಹೇಳಿದೆ.

ತಮ್ಮ ವಾಣಿಜ್ಯ ಸಂಬಂಧಿ ದೂರದೃಷ್ಟಿಯನ್ನು ಬದಿಗಿರಿಸಿ ಕೆಲಸ ಮಾಡಬೇಕು ಎನ್ನಲಾಗದು. ಅದರಲ್ಲೂ, ಸಾಲಗಾರರ ಆರ್ಥಿಕ ಶಕ್ತಿಯು ಕುಗ್ಗಿದ ಸಂದರ್ಭದಲ್ಲಿ ಆ ರೀತಿ ಯೋಚಿಸಲಾಗದು ಎಂದು ತಿಳಿಸಿದೆ.

‘ಇತ್ತೀಚಿನ ವರ್ಷಗಳಲ್ಲಿ ಸಾರ್ವಜನಿಕ ವಲಯದ 24 ಬ್ಯಾಂಕ್‌ಗಳು ಬಾಗಿಲು ಮುಚ್ಚಿವೆ ಅಥವಾ ಇತರ ಬ್ಯಾಂಕ್‌ಗಳೊಂದಿಗೆ ವಿಲೀನಗೊಂಡಿವೆ. ಅಸಮರ್ಪಕ ರೀತಿಯ ಸಾಲ ಮಂಜೂರಾತಿಯೇ ಬ್ಯಾಂಕ್‌ಗಳು ಮುಳುಗಲು ಮುಖ್ಯ ಕಾರಣ ಎಂಬುದು ಗಮನದಲ್ಲಿರಬೇಕಾಗುತ್ತದೆ’ ಎಂದು ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಹೇಳಿದ್ದಾರೆ.

ಕೈಗಾರಿಕಾ ಟೌನ್‌ಶಿಪ್ ತಾತ್ವಿಕ ಅನುಮೋದನೆ

ಬೆಂಗಳೂರು: 2021-22ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿರುವ ಬೆಂಗಳೂರು - ಮುಂಬೈ ಮತ್ತು ಬೆಂಗಳೂರು– ಚೆನ್ನೈ ಕೈಗಾರಿಕಾ ಕಾರಿಡಾರ್‌ಗಳಲ್ಲಿ ಕೈಗಾರಿಕಾ ಟೌನ್‌ಶಿಪ್‌ಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರ ತಾತ್ವಿಕ ಅನುಮೋದನೆ ನೀಡಿದೆ.

ಬೆಂಗಳೂರು - ಮುಂಬೈ ಮತ್ತು ಬೆಂಗಳೂರು-ಚೆನ್ನೈ ಕೈಗಾರಿಕಾ ಕಾರಿಡಾರ್‌ಗಳಲ್ಲಿಲಭ್ಯವಿರುವಅವಕಾಶಗಳನ್ನುಬಳಸಿಕೊಂಡು ಎರಡು ಕಡೆಗಳಲ್ಲಿ ತಲಾ ಕನಿಷ್ಠ 500 ಎಕರೆ ಜಾಗದಲ್ಲಿ ಮುಖ್ಯಮಂತ್ರಿಗಳ ಮೆಗಾ ಸಂಯೋಜಿತ ಕೈಗಾರಿಕಾ ಟೌನ್‌ಶಿಪ್ ಸ್ಥಾಪಿಸಲು ಉದ್ದೇಶಿಸಲಾಗಿದೆ.

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮಗಳ ವತಿಯಿಂದ ಸಾರ್ವಜನಿಕ - ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಾಣವಾಗಲಿರುವ ಈ ಟೌನ್‌ಶಿಪ್‌ಗಳಿಂದ ಮುಂದಿನ ಮೂರು ವರ್ಷಗಳಲ್ಲಿ ₹ 10 ಸಾವಿರ ಕೋಟಿಯ ಖಾಸಗಿ ಬಂಡವಾಳ ಆಕರ್ಷಿಸುವ ಮೂಲಕ ಐದು ಲಕ್ಷ ಉದ್ಯೋಗಾವಕಾಶ ಸೃಷ್ಟಿಸುವ ನಿರೀಕ್ಷೆ ಇದೆ ಎಂದು ಘೋಷಿಸಲಾಗಿದೆ.

ಎನ್‌.ಎಸ್‌.ಎಸ್‌. ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ

‘ಎನ್‌ಇಪಿಯಲ್ಲಿ ಋಣಾತ್ಮಕ ಅಂಶಗಳೇ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ) ಸಮಾಜ ಹಾಗೂ ಶಿಕ್ಷಣ ವ್ಯವಸ್ಥೆಯಲ್ಲಿರುವ ಲೋಪಗಳನ್ನು ಸರಿಪಡಿಸಲು ಸಹಕಾರಿ. ಇದು ಸಮಾಜ, ವಿದ್ಯಾರ್ಥಿ ಹಾಗೂ ಶಿಕ್ಷಕ ಕೇಂದ್ರಿತವಾಗಿರುವ ನೀತಿ. ಋಣಾತ್ಮಕವಾದಂತಹ ಯಾವ ಅಂಶಗಳೂ ನೀತಿಯಲ್ಲಿ ಅಡಕವಾಗಿಲ್ಲ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಸ್ಪಷ್ಟಪಡಿಸಿದರು.

ರಾಜ್ಯ ಎನ್.ಎಸ್.ಎಸ್. ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಸಹಯೋಗದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಎನ್.ಎಸ್.ಎಸ್. ರಾಜ್ಯ ಪ್ರಶಸ್ತಿ ಪ್ರದಾನ, ಎನ್.ಎಸ್.ಎಸ್. ಸ್ವಯಂ ಸೇವಕರ ನೋಂದಣಿ ಜಾಲತಾಣ ಲೋಕಾರ್ಪಣೆ, 100 ಜೀವನ ಕೌಶಲ ತರಬೇತಿ ಕಾರ್ಯಕ್ರಮಗಳ ಕೈಪಿಡಿ ಬಿಡುಗಡೆ ಹಾಗೂ ಯುವ ಸಹಾಯವಾಣಿ 155265 ಮತ್ತು ಯುವ ಸ್ಪಂದನ ಸಹಾಯ ಕೇಂದ್ರಗಳ ಅನಾವರಣ ಸಮಾರಂಭದಲ್ಲಿ ಮಾತನಾಡಿದರು.

‘ಎನ್‌ಇಪಿಯಲ್ಲಿ ಸಮಸ್ಯೆ, ಯೋಜನೆ ಹಾಗೂ ಸೇವೆ ಆಧರಿತ ಕಲಿಕೆಗಳಿಗೆ ಒತ್ತು ನೀಡಲಾಗುತ್ತದೆ. ಪಠ್ಯಕ್ರಮದಲ್ಲಿ ಇರುವುದನ್ನಷ್ಟೇ ಕಲಿತು ಪರೀಕ್ಷೆ ಬರೆದು ಉತ್ತೀರ್ಣರಾಗುವ ಈಗಿನ ಪದ್ಧತಿಗೆ ತಿಲಾಂಜಲಿ ಇಡಲಾಗುತ್ತದೆ. ಇನ್ನು ಮುಂದೆ ವಿದ್ಯಾರ್ಥಿಗಳಿಗೆ ಸಮಾಜವೇ ಶಾಲೆ’ ಎಂದರು.

‘ಈಗಿನ ಶಿಕ್ಷಣ ವ್ಯವಸ್ಥೆಯಲ್ಲಿ ಮೌಲ್ಯ ಕಾಣಲು ಸಾಧ್ಯವಿಲ್ಲ. ಅಕ್ಷರತೆ ಹೆಚ್ಚುತ್ತಿದ್ದರೂ ಕೂಡ ಸಮಸ್ಯೆಗಳು ಕಡಿಮೆಯಾಗುತ್ತಿಲ್ಲ. ಕಾನೂನು ಉಲ್ಲಂಘನೆ ಸಾಮಾನ್ಯವಾಗಿಬಿಟ್ಟಿದೆ. ಸಮಾಜದ ಬಗ್ಗೆ ಕಾಳಜಿ ಇಲ್ಲದವರು ಹಾಗೂ ಕಾನೂನು ಉಲ್ಲಂಘಿಸುವವರಿಗೆ ಯಾವ ಸ್ಥಾನಮಾನವನ್ನೂ ನೀಡಬಾರದು. ಎನ್.ಎಸ್.ಎಸ್ ಹಾಗೂ ಎನ್.ಸಿ.ಸಿಯನ್ನು ಮೊದಲು ಪಠ್ಯೇತರ ಚಟುವಟಿಕೆಗಳೆಂದು ಪರಿಗಣಿಸಲಾಗುತ್ತಿತ್ತು. ಈಗ ಪಠ್ಯ ಚಟುವಟಿಕೆಗಳಾಗಿ ಸೇರ್ಪಡೆ ಮಾಡಲಾಗಿದೆ. ಯುವಕರನ್ನು ದುಶ್ಚಟಗಳಿಂದ ದೂರ ಇಡಲು ಕ್ರೀಡೆ ಸಹಕಾರಿ. ಹೀಗಾಗಿ ಕ್ರೀಡೆಗೆ ಇನ್ನಷ್ಟು ಒತ್ತು ನೀಡುವ ಕೆಲಸ ಆಗಬೇಕು. ಬಜೆಟ್‌ನಲ್ಲೂ ಹೆಚ್ಚು ಅನುದಾನ ಒದಗಿಸಬೇಕು’ ಎಂದು ಹೇಳಿದರು.

ಕ್ರೀಡಾ ಸಚಿವ ಕೆ.ಸಿ.ನಾರಾಯಣ ಗೌಡ,‘2.35 ಲಕ್ಷ ಜನರಿಗೆ ಆನ್‌ಲೈನ್ ಮೂಲಕ ಎನ್.ಎಸ್.ಎಸ್ ಕುರಿತು ತರಬೇತಿ ನೀಡಲಾಗಿದೆ. ಇನ್ನೂ 5 ಲಕ್ಷಕ್ಕಿಂತ ಹೆಚ್ಚು ಜನರಿಗೆ ತರಬೇತಿ ಕೊಡಲು ಚಿಂತಿಸಲಾಗಿದೆ. ಅವರು ಪ್ರತಿ ಹಳ್ಳಿಗೂ ಭೇಟಿ ನೀಡಿ ಅಲ್ಲಿನ ನಿವಾಸಿಗಳ ಮನಃ ಪರಿವರ್ತನೆ ಮಾಡಲು ಪ್ರಯತ್ನಿಸಲಿದ್ದಾರೆ’ ಎಂದರು.

120 ಮಂದಿಗೆ ಪ್ರಶಸ್ತಿ: ಕಾರ್ಯಕ್ರಮದಲ್ಲಿ 2017-18, 2018-19 ಹಾಗೂ 2019-20ನೇ ಸಾಲಿನಲ್ಲಿ ಉತ್ತಮ ಸಾಧನೆ ಮಾಡಿದ ಒಟ್ಟು 120 ಸ್ವಯಂಸೇವಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕೋವಿಡ್ ಕಾರಣ ಕಳೆದ ಎರಡು ವರ್ಷ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆದಿರಲಿಲ್ಲ.



2019–20ನೇ ಸಾಲಿನ ರಾಷ್ಟ್ರೀಯ ಎನ್‌ಎಸ್‌ಎಸ್‌ಪ್ರಶಸ್ತಿಗೆ ಪಾತ್ರರಾಗಿದ್ದ (ಎಡದಿಂದ) ಸಿರೀಶ್ ಗೋವರ್ಧನ್ (ಅತ್ಯುತ್ತಮ ಸ್ವಯಂ ಸೇವಕ), ಡಾ.ಬಿ. ವಸಂತ ಶೆಟ್ಟಿ (ವಿಶ್ವವಿದ್ಯಾಲಯ ಮಟ್ಟದ ಅತ್ಯುತ್ತಮ ಸಂಯೋಜನಾಧಿಕಾರಿ), ಬಿಂದಿಯಾ ಶೆಟ್ಟಿ (ಅತ್ಯುತ್ತಮ ಸ್ವಯಂ ಸೇವಕಿ) ಮತ್ತು ಸುರೇಶಪ್ಪ ಕೆ.ಸಜ್ಜನ (ಕಾಲೇಜು ಮಟ್ಟದ ಅತ್ಯುತ್ತಮ ಕಾರ್ಯಕ್ರಮ ಅಧಿಕಾರಿ) ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು–ಪ್ರಜಾವಾಣಿ ಚಿತ್ರ

ನಾಗಮೋಹನ್ ದಾಸ್‌ಗೆ 'ತೋಂಟದ ಸಿದ್ಧಲಿಂಗ ಶ್ರೀ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ



ನಾಗಮೋಹನ್ ದಾಸ್

ಗದಗ: ಲಿಂಗೈಕ್ಯ ತೋಂಟದ ಸಿದ್ಧಲಿಂಗ ಸ್ವಾಮೀಜಿ ಅವರ ತೃತೀಯ ಪುಣ್ಯಸ್ಮರಣೆ 'ಮರಣವೇ ಮಹಾನವಮಿ' ಆಚರಣೆ ವೇಳೆ ಪ್ರದಾನ ಮಾಡುವ 'ತೋಂಟದ ಸಿದ್ಧಲಿಂಗ ಶ್ರೀ ರಾಷ್ಟ್ರೀಯ ಪ್ರಶಸ್ತಿ'ಗೆ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ತೋಂಟದಾರ್ಯಮಠದ ಆಡಳಿತಾಧಿಕಾರಿ ಎಸ್.ಎಸ್.ಪಟ್ಟಣಶೆಟ್ಟರ ತಿಳಿಸಿದ್ದಾರೆ.

ಅ.16ರಂದು ತೋಂಟದಾರ್ಯ ಮಠದ ಶಿವಾನುಭವ ಮಂಟಪದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಯು ₹5 ಲಕ್ಷ ನಗದು ಹಾಗೂ ಫಲಕವನ್ನು ಒಳಗೊಂಡಿದೆ ಎಂದು ಅವರು ತಿಳಿಸಿದ್ದಾರೆ.

ಇಬ್ಬರು ಸಚಿವರು, 4 ಐಎಎಸ್, ಐಪಿಎಸ್ ಸೇರಿ 21 ಮಂದಿಯ ನಿಯೋಗ

'ದುಬೈ ಎಕ್ಸ್‌ಪೋ'ಗೆ ರಾಜ್ಯದ ದಂಡು!

● ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಉನ್ನತ ಶಿಕ್ಷಣ, ಐಟಿ ಬಿಟಿ ಮತ್ತು ಕೌಶಲಾಭಿವೃದ್ಧಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ನಾಲ್ವರು ಐಎಎಸ್ ಮತ್ತು ಒಬ್ಬರು ಐಪಿಎಸ್ ಸೇರಿ ಒಟ್ಟು 21 ಮಂದಿಯ ದಂಡು ಸರ್ಕಾರದ ವೆಚ್ಚದಲ್ಲಿ ಇದೇ 15 ರಿಂದ ಒಂದು ವಾರ 'ದುಬೈ ಎಕ್ಸ್‌ಪೋ – 2020'ಕ್ಕೆ ಹೊರಟಿರುವುದು ಚರ್ಚೆಗೆ ಗ್ರಾಸವಾಗಿದೆ.

ರಾಜ್ಯಕ್ಕೆ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಲು ಮತ್ತು ಮಾರುಕಟ್ಟೆ ವಿಸ್ತರಿಸಿ ರಫ್ತು ಉತ್ತೇಜಿಸುವ ಉದ್ದೇಶದಿಂದ ಸಚಿವರು, ಅಧಿಕಾರಿಗಳ ತಂಡ ಈ ಎಕ್ಸ್‌ಪೋದಲ್ಲಿ ಪಾಲ್ಗೊಳ್ಳಲಿದೆ. 200ಕ್ಕೂ ಹೆಚ್ಚು ದೇಶಗಳು ಭಾಗವಹಿಸುವ ಈ ಎಕ್ಸ್‌ಪೋ ಇದೇ ಅ. 1 ರಂದು ಆರಂಭಗೊಂಡಿದ್ದು, 2022ರ ಮಾರ್ಚ್ 31ರವರೆಗೆ ನಡೆಯಲಿದೆ. ರಾಜ್ಯದ ತಂಡ ಇದೇ 15ರಿಂದ 21 ರವರೆಗೆ ಭಾಗವಹಿಸಲಿದೆ.

'ಪ್ರಯಾಣದ ಅವಧಿಯೂ ಸೇರಿ ಅ. 16 ರಿಂದ 20ರವರೆಗೆ ನಾನು ದುಬೈ ತೆರಳಲಿದ್ದೇನೆ. ಈ ದಿನಗಳಲ್ಲಿ ನನ್ನ ಆಪ್ತ ಶಾಖೆಯ ಸಿಬ್ಬಂದಿಯೂ ಜೊತೆಗೆ ಇರಬೇಕಾದ ಅವಶ್ಯಕತೆ ಇರುವುದರಿಂದ ಅನುಮತಿ ನೀಡಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮುರುಗೇಶ್ ನಿರಾಣಿ ಮನವಿ ಮಾಡಿದ್ದರು. ಆದರೆ, ರಾಜ್ಯದಲ್ಲಿ ಅತಿವೃಷ್ಟಿ, ಕೋವಿಡ್ ಮೂರನೇ ಅಲೆ ಆತಂಕ, ಆರ್ಥಿಕ ಸಂಕಷ್ಟದ ಮಧ್ಯೆ, ದೊಡ್ಡ ಸಂಖ್ಯೆಯಲ್ಲಿ ಸಿಬ್ಬಂದಿಯನ್ನು ಕರೆದುಕೊಂಡು ಹೋಗುವುದಕ್ಕೆ ಮುಖ್ಯಮಂತ್ರಿ ಆಕ್ಷೇಪ ವ್ಯಕ್ತಪಡಿಸಿದ್ದರು ಎಂದು ಗೊತ್ತಾಗಿದೆ. ಸಂಖ್ಯೆಯನ್ನು ಕಡಿಮೆ ಮಾಡುವಂತೆಯೂ ಅವರು ಸಲಹೆ ನೀಡಿದ್ದರು' ಎಂದು ಕೈಗಾರಿಕೆ ಇಲಾಖೆ ಮೂಲಗಳು ಹೇಳಿವೆ.

ಮುರುಗೇಶ್ ನಿರಾಣಿ ಅವರ ನೇತೃತ್ವದ ತಂಡದಲ್ಲಿ ಅವರ ಆಪ್ತ ಕಾರ್ಯದರ್ಶಿ ಪ್ರಕಾಶ್ ಎಂ. ಸುರದ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ತಾಂತ್ರಿಕ ಕೋಶದ ನಿರ್ದೇಶಕ ಆರ್. ರಮೇಶ್, ವಿಶ್ವೇಶ್ವರಯ್ಯ ವಾಣಿಜ್ಯ ಉತ್ತೇಜನ ಕೇಂದ್ರದ (ವಿಟಿಪಿಸಿ) ವ್ಯವಸ್ಥಾಪಕ ನಿರ್ದೇಶಕ (ರಫ್ತು) ಎಸ್. ಆರ್ ಸತೀಶ್, ಇನ್ವೆಸ್ಟ್ ಕರ್ನಾಟಕ ಫೋರಂನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಬಿ.ಕೆ. ಶಿವಕುಮಾರ್, ಕರ್ನಾಟಕ ಉದ್ಯೋಗ ಮಿತ್ರದ ವ್ಯವಸ್ಥಾಪಕ ನಿರ್ದೇಶಕ ಎಚ್.ಎಂ. ರೇವಣ್ಣಗೌಡ, ವಿಟಿಪಿಸಿ ಜಂಟಿ ನಿರ್ದೇಶಕ ಪ್ರವೀಣ್ ರಾಮದುರ್ಗ, ವಿಟಿಪಿಪಿ ಉಪ ನಿರ್ದೇಶಕ ಸಂತೋಷ್ ಮಲಜಿ, ನಿರಾಣಿ ಅವರ ವಿಶೇಷ ಅಧಿಕಾರಿ ಭೀಮಪ್ಪ ಪರಗೊಂಡ ಅಜೂರ್, ವಿಟಿಪಿಸಿ ಸಹಾಯಕ ನಿರ್ದೇಶಕ ಜೈದೀಪ್, ಸಚಿವರ ಆಪ್ತ ಸಹಾಯಕ ಪ್ರಭು ಎಂ. ನ್ಯಾಮತಿ, ಮೂಲಸೌಲಭ್ಯ ವಿಭಾಗದ ವ್ಯವಸ್ಥಾಪಕ ರಕ್ಷಾ ಶಾರದಾ, 'ಉದ್ಯೋಗ ಮಿತ್ರ'ದ ಮಾಧ್ಯಮ ಸಮನ್ವಯಾಧಿಕಾರಿ ಅನಿಲ್‌ಕುಮಾರ್ ಇದ್ದಾರೆ.

ನಿಗಮದಿಂದ ವೆಚ್ಚ: ದುಬೈ ಪ್ರವಾಸಕ್ಕೆ ಅನುಮತಿ ಕೋರಿ ಸರ್ಕಾರದ ಕಾರ್ಯದರ್ಶಿಗೆ (ಎಂಎಸ್‌ಎಂಇ ಮತ್ತು ಮೈನ್ಸ್) ಪತ್ರ ಬರೆದಿರುವ ರೂಪಾ ಮೌದ್ಗಿಲ್, 'ದುಬೈ ಎಕ್ಸ್‌ಪೋದಲ್ಲಿ ಹಲವು ದೇಶಗಳು ಭಾಗವಹಿಸುತ್ತಿವೆ. ಇಲ್ಲಿ ರಾಜ್ಯದ ಕೈಮಗ್ಗ ಉತ್ಪನ್ನಗಳ ಮಾರಾಟಕ್ಕೆ ಹೆಚ್ಚಿನ ಉತ್ತೇಜನ ಸಿಗುವ ನಿರೀಕ್ಷೆ ಇದೆ. ಇದರಿಂದ ನಿಗಮಕ್ಕೂ ಲಾಭ ಆಗಲಿದೆ. ಈ ಎಕ್ಸ್‌ಪೋದ ವೆಚ್ಚಕ್ಕೆ ವಿಶ್ವೇಶ್ವರಯ್ಯ ವಾಣಿಜ್ಯ ಉತ್ತೇಜನ ಕೇಂದ್ರ (ವಿಟಿಪಿಸಿ) ಈಗಾಗಲೇ ₹ 5 ಲಕ್ಷ ಪಾವತಿ ಮಾಡಿದೆ. ದುಬೈಯಲ್ಲಿ ಉಚಿತವಾಗಿ ಸ್ಟಾಲ್ ಸಿಗಲಿದೆ. ದುಬೈಗೆ ತೆರಳುಬಗ್ಗೆ ಸೆ. 27ರಂದು ನಡೆದ ನಿಗಮದ ಮಂಡಳಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗಿದೆ. ಪ್ರಯಾಣ ಸೇರಿದಂತೆ ತಗಲುವ ವೆಚ್ಚವನ್ನು ವಿಟಿಪಿಸಿ ಮತ್ತು ನಿಗಮದಿಂದ ಬರಿಸಿಕೊಳ್ಳಲಾಗುವುದು' ಎಂದಿದ್ದಾರೆ.

ತಂಡದಲ್ಲಿರುವ ಪ್ರಮುಖರು

ದುಬೈಗೆ ತೆರಳುವ ತಂಡದಲ್ಲಿ ಐಎಎಸ್ ಅಧಿಕಾರಿಗಳಾದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ. ರಮಣರೆಡ್ಡಿ, ನಿರ್ದೇಶಕಿ ಗುಂಜಾನ್ ಕೃಷ್ಣ, ಕೆಐಎಡಿಬಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎನ್. ಶಿವಶಂಕರ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ನಿರ್ದೇಶಕಿ ಮೀನಾ ನಾಗರಾಜ್ ಇದ್ದಾರೆ. ಅಲ್ಲದೆ, ಕೈಮಗ್ಗ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ, ಐಪಿಎಸ್ ಅಧಿಕಾರಿ ಡಿ. ರೂಪಾ ಮೌದ್ಗಿಲ್, ಅಧ್ಯಕ್ಷ ಬೇಲೂರು ರಾಘವೇಂದ್ರ ಶೆಟ್ಟಿ ಮತ್ತು ಮಾರಾಟ ಪ್ರತಿನಿಧಿ ಬಿ.ಎಸ್. ಪ್ರಶಾಂತ್ ಕೂಡಾ ಈ ತಂಡದಲ್ಲಿದ್ದಾರೆ.

ಕಲ್ಲಿದ್ದಲು ಬೇಡಿಕೆ ಪೂರೈಸಲು ಕೇಂದ್ರ ಪ್ರಯತ್ನ: ಪ್ರಲ್ಹಾದ ಜೋಶಿ

ನವದೆಹಲಿ(ಪಿಟಿಐ): ವಿದ್ಯುತ್ ಉತ್ಪಾದಕರ ಕಲ್ಲಿದ್ದಲು ಬೇಡಿಕೆ ಪೂರೈಸಲು ಕೇಂದ್ರ ಸರ್ಕಾರ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ. ಪ್ರತಿ ದಿನ ಪೂರೈಸುತ್ತಿರುವ ಪ್ರಸ್ತುತ 1.95 ದಶಲಕ್ಷ ಟನ್ ಕಲ್ಲಿದ್ದಲನ್ನು ಶೀಘ್ರದಲ್ಲೇ ಎರಡು ದಶಲಕ್ಷ ಟನ್‌ಗಳಿಗೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಕೇಂದ್ರ ಕಲ್ಲಿದ್ದಲು ಸಚಿವ ಪ್ರಲ್ಹಾದ ಜೋಶಿ ಮಂಗಳವಾರ ಹೇಳಿದರು.



ಕಲ್ಲಿದ್ದಲು ವಾಣಿಜ್ಯ ಗಣಿಗಾರಿಕೆಯ ಮೂರನೇ ಹಂತದ ಹರಾಜಿನ ಅನಾವರಣ ಕಾರ್ಯಕ್ರಮದಲ್ಲಿ ಸಚಿವರು ಮಾತನಾಡಿದರು.

ದೇಶದ ವಿದ್ಯುತ್ ಸ್ಥಾವರಗಳು ಕಲ್ಲಿದ್ದಲು ಕೊರತೆ ಎದುರಿಸುತ್ತಿರುವ ಸಮಯದಲ್ಲಿ ಸಚಿವರು ಈ ಹೇಳಿಕೆ ನೀಡಿದ್ದಾರೆ.


'ಕಲ್ಲಿದ್ದಲು ಬೇಡಿಕೆಯನ್ನು ಪೂರೈಸಲು ಸಚಿವಾಲಯ ಮತ್ತು ಕೋಲ್ ಇಂಡಿಯಾ ಲಿಮಿಟೆಡ್ (ಸಿಐಎಲ್) ಪ್ರಯತ್ನಿಸುತ್ತಿವೆ. ಸೋಮವಾರ ನಾವು ಸುಮಾರು 1.95 ದಶಲಕ್ಷ ಟನ್ ಕಲ್ಲಿದ್ದಲು ಪೂರೈಸಿದ್ದೇವೆ. ಸಿಐಎಲ್‌ನಿಂದ ಸುಮಾರು 1.6 ದಶಲಕ್ಷ ಟನ್ ಮತ್ತು ಸಿಂಗರೇನಿ ಕಾಲಿಯರೀಸ್ ಕಂಪನಿ ಲಿಮಿಟೆಡ್ ಹಾಗೂ ಇತರ ಕಂಪನಿಗಳಿಂದ ಸೇರಿ 1.95 ದಶಲಕ್ಷ ಟನ್ ಕಲ್ಲಿದ್ದಲು ಪೂರೈಸಿದ್ದೇವೆ' ಎಂದು ಸಚಿವರು ಹೇಳಿದರು.

ವಿದ್ಯಾರ್ಥಿವೇತನ ಬಾಕಿ ಬಿಡುಗಡೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳು ಬಾಕಿ ಇರಿಸಿಕೊಂಡಿರುವ ವಿದ್ಯಾರ್ಥಿ ವೇತನ ಮತ್ತು ಶೈಕ್ಷಣಿಕ ಪ್ರೋತ್ಸಾಹಧನದ ಮೊತ್ತವನ್ನು ತಕ್ಷಣ ಬಿಡುಗಡೆ ಮಾಡುವಂತೆ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಆದೇಶಿಸಿದ್ದಾರೆ.

ಎರಡೂ ಇಲಾಖೆಗಳಲ್ಲಿ ವಿದ್ಯಾರ್ಥಿಗಳಿಗೆ ನೀಡಬೇಕಿರುವ ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹಧನಗಳನ್ನು ಬಾಕಿ ಇರಿಸಿಕೊಂಡಿರುವ ಕುರಿತು ದೂರುಗಳು ಕೇಳಿಬಂದಿದ್ದವು. ಈ ಸಂಬಂಧ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ಹಿರಿಯ ಅಧಿಕಾರಿಗಳ ಜತೆ ಮಂಗಳವಾರ ಸಭೆ ನಡೆಸಿದ ಸಚಿವರು, ತಕ್ಷಣ ಬಾಕಿ ಪಾವತಿಸುವಂತೆ ನಿರ್ದೇಶನ ನೀಡಿದರು.



ಶ್ರೀನಿವಾಸ ಪೂಜಾರಿ

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಚಿವರು, 'ಸಮಾಜ ಕಲ್ಯಾಣ ಇಲಾಖೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ 2020–21ನೇ ಸಾಲಿನ ಪ್ರೋತ್ಸಾಹ ಧನ ₹ 55 ಕೋಟಿ ಪಾವತಿ ಬಾಕಿ ಇದೆ. ಅದನ್ನು ತಕ್ಷಣ ಬಿಡುಗಡೆ ಮಾಡುವಂತೆ ಆದೇಶಿಸಿದ್ದೇನೆ' ಎಂದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿಯಲ್ಲಿ ಶೇಕಡ 60 ರಿಂದ 70ರಷ್ಟು ಅಂಕಗಳೊಂದಿಗೆ ಉತ್ತೀರ್ಣರಾದರೆ ₹ 2,000 ಮತ್ತು ಶೇ 70ಕ್ಕಿಂತ ಹೆಚ್ಚು ಅಂಕಗಳೊಂದಿಗೆ ಉತ್ತೀರ್ಣರಾದರೆ ತಲಾ ₹ 15,000 ಪ್ರೋತ್ಸಾಹ ಧನ ನೀಡಲಾಗುತ್ತಿದೆ ಎಂದು ತಿಳಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ 1.90 ಲಕ್ಷ ವಿದ್ಯಾರ್ಥಿಗಳಿಗೆ 2019–20 ಮತ್ತು 2020–21ನೇ ಸಾಲಿನ ಪ್ರೋತ್ಸಾಹ ಧನ ಹಾಗೂ ವಿದ್ಯಾರ್ಥಿವೇತನ ಪಾವತಿ ಬಾಕಿ ಇದೆ. ಈ ಮೊತ್ತವನ್ನು ವಾರದೊಳಗೆ ಬಿಡುಗಡೆ ಮಾಡಿ, ವಿದ್ಯಾರ್ಥಿಗಳಿಗೆ ಪಾವತಿಸಲು ಕ್ರಮ ಕೈಗೊಳ್ಳುವಂತೆ ಆದೇಶಿಸಲಾಗಿದೆ ಎಂದರು.

ಖಾಸಗಿ ಕೋಟಾದವರಿಗೂ ವಿದ್ಯಾರ್ಥಿವೇತನ: ಎಂಜಿನಿಯರಿಂಗ್ ಮತ್ತು ಇತರ ವೃತ್ತಿಪರ ಕೋರ್ಸ್‌ಗಳಲ್ಲಿ ಪ್ರವೇಶ ಪಡೆದಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ತಮಗೂ ಇಲಾಖೆಯಿಂದ ವಿದ್ಯಾರ್ಥಿವೇತನ ನೀಡುವಂತೆ ಮನವಿ ಸಲ್ಲಿಸಿದ್ದರು. ಈವರೆಗೂ ಖಾಸಗಿ ಕೋಟಾದವರಿಗೆ ಈ ಸೌಲಭ್ಯವಿರಲಿಲ್ಲ. ಮಾನವೀಯ ನೆಲೆಗಟ್ಟಿನಲ್ಲಿ ಅವರಿಗೂ ವಿದ್ಯಾರ್ಥಿವೇತನ ನೀಡಲು ತೀರ್ಮಾನಿಸಲಾಗಿದೆ ಎಂದು ಶ್ರೀನಿವಾಸ ಪೂಜಾರಿ ತಿಳಿಸಿದರು.

ಪ್ರತಿ ವಿದ್ಯಾರ್ಥಿಗೆ ₹ 1 ಲಕ್ಷದವರೆಗೂ ವಿದ್ಯಾರ್ಥಿವೇತನ ದೊರೆಯಲಿದೆ. ಇದಕ್ಕಾಗಿ ₹ 9 ಕೋಟಿಯಷ್ಟು ಹೆಚ್ಚುವರಿ ವೆಚ್ಚವಾಗಲಿದೆ ಎಂದು ಹೇಳಿದರು.

ಭಾಗವತ ಪದ್ಯಾಣ ಗಣಪತಿ ಭಟ್ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಮಂಗಳೂರು: ತೆಂಕುತಿಟ್ಟಿನ ಅಗ್ರಮಾನ್ಯ ಭಾಗವತರಾಗಿದ್ದ ಪದ್ಯಾಣ ಗಣಪತಿ ಭಟ್ (66) ಹೃದಯಾಘಾತದಿಂದ ಮಂಗಳವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.



ಪದ್ಯಾಣ ಗಣಪತಿ ಭಟ್

ಸುಳ್ಯ ತಾಲ್ಲೂಕಿನ ಕಲ್ಮಡ್ಕ ಸಮೀಪದ ಗೋಳ್ತಜೆಯ ಗಣಪತಿ ಭಟ್ಟರದು ಯಕ್ಷಗಾನ ಹಿನ್ನೆಲೆಯ ಮನೆತನ. ಅಜ್ಜ ಪುಟ್ಟು ನಾರಾಯಣ ಅವರು ಭಾಗವತರು, ತಂದೆ ತಿರುಮಲೇಶ್ವರ ಭಟ್ ಹಿಮ್ಮೇಳ ವಾದಕರಾಗಿದ್ದರು. ಚಂಡೆ-ಮದ್ದಳೆಯ ನಾದದಲ್ಲಿ ಬೆಳೆದ ಪದ್ಯಾಣರು, 15 ವರ್ಷದ ಬಾಲಕನಾಗಿದ್ದಾಗ, ಧರ್ಮಸ್ಥಳ ಯಕ್ಷಗಾನ ಲಲಿತ ಕಲಾ ತರಬೇತಿ ಕೇಂದ್ರದಲ್ಲಿ ಮಾಂಬಾಡಿ ನಾರಾಯಣ ಭಟ್ಟರ ಶಿಷ್ಯನಾಗಿ ಭಾಗವತಿಕೆ ಕಲಿತರು.

ನಂತರದಲ್ಲಿ ಚೌಡೇಶ್ವರಿ, ಕುಂಡಾವು, ಸುರತ್ಕಲ್, ಮಂಗಳಾದೇವಿ, ಎಡನೀರು, ಹೊಸನಗರ, ಹನುಮಗಿರಿ ಮೊದಲಾದ ಮೇಳಗಳಲ್ಲಿ ಭಾಗವತಿಕೆ ಮಾಡಿ, ಐದು ದಶಕಗಳ ಕಾಲ ಯಕ್ಷರಂಗಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿದ್ದ ಭಟ್ಟರು, ಕನ್ನಡ ಹಾಗೂ ತುಳು ಎರಡೂ ಭಾಷೆಗಳಲ್ಲಿ ಭಾಗವತಿಕೆಯ ಇಂಪನ್ನು ಪಸರಿಸಿದವರು. ಸಂಗೀತ ಜ್ಞಾನ ಹೊಂದಿದ್ದ ಅವರು, ಯಕ್ಷ ಪದ್ಯಗಳಿಗೆ ಹೊಸ ರಾಗ ಸಂಯೋಜನೆ ಮಾಡಿದ್ದರು. ಶೇಣಿ ಗೋಪಾಲಕೃಷ್ಣ ಭಟ್ಟರ ನೆಚ್ಚಿನ ಭಾಗವತರಾಗಿದ್ದರು. ಶೇಣಿ, ಅಗರಿ ರಘುರಾಮ ಭಾಗವತ ಮೊದಲಾದ ಶ್ರೇಷ್ಠ ಕಲಾವಿದರ ಒಡನಾಟದಿಂದ ಪದ್ಯಾಣ ಗಣಪತಿ ಭಟ್ಟರು ಯಕ್ಷರಂಗದಲ್ಲಿ ಇನ್ನಷ್ಟು ಪರಿಪಕ್ವವಾಗಿ ಬೆಳೆದರು. 'ನಾಟ್ಯರಾಣಿ ಶಾಂತಲೆ', 'ಪಾಪಣ್ಣ ವಿಜಯ', 'ರಾಜಾ ಯಯಾತಿ', 'ಸತಿ ಶೀಲವತಿ', 'ತುಳುನಾಡ ಬಲಿಯೇಂದ್ರೆ' ಪ್ರಸಂಗಗಳು ಗಣಪತಿ ಭಟ್ಟರಿಗೆ ವಿಶೇಷ ಕೀರ್ತಿ ತಂದುಕೊಟ್ಟಿದ್ದವು.

ಪ್ರಶಸ್ತಿಗಳು: ಉಡುಪಿಯ ಯಕ್ಷಗಾನ ಕಲಾರಂಗದ ಮಲ್ಪೆ ಶಂಕರನಾರಾಯಣ ಸಾಮಗ ಪ್ರಶಸ್ತಿ, ದಕ್ಷಿಣ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗಳು ಅವರಿಗೆ ದೊರೆತಿವೆ.

ಹಂಚಿಕೆಯಾಗದ ವಿದ್ಯುತ್ ಬಳಕೆಗೆ ರಾಜ್ಯಗಳಿಗೆ ಇಂಧನ ಸಚಿವಾಲಯ ಸೂಚನೆ

ನವದೆಹಲಿ (ಪಿಟಿಐ): 'ಕೇಂದ್ರೀಯ ಉತ್ಪಾದನಾ ಘಟಕ'ಗಳಿಂದ (ಸಿಜಿಎಸ್) ಹಂಚಿಕೆಯಾಗದ ವಿದ್ಯುತ್ ಅನ್ನು ಬಳಸಿಕೊಳ್ಳುವಂತೆ ರಾಜ್ಯಗಳಿಗೆ ಇಂಧನ ಸಚಿವಾಲಯ ಮಂಗಳವಾರ ತಿಳಿಸಿದೆ.

ದೇಶದಲ್ಲಿ ಕಲ್ಲಿದ್ದಲು ಕೊರತೆ ಹಾಗೂ ವಿದ್ಯುತ್ ಉತ್ಪಾದನೆಯಲ್ಲಿ ಕಂಡುಬಂದಿರುವ ತೊಂದರೆಯಿಂದಾಗಿ ಗ್ರಾಹಕರಿಗೆ ಸಮಸ್ಯೆ ಆಗಬಾರದು ಎಂಬ ಹಿನ್ನೆಲೆಯಲ್ಲಿ ಈ ಸೂಚನೆ ನೀಡಲಾಗಿದೆ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

'ಕೆಲವು ರಾಜ್ಯಗಳು ಒಂದೆಡೆ ಗ್ರಾಹಕರಿಗೆ ಸಮರ್ಪಕ ವಿದ್ಯುತ್ ಸರಬರಾಜು ಮಾಡುತ್ತಿಲ್ಲ ಹಾಗೂ ವಿದ್ಯುತ್ ನಿಲುಗಡೆಯನ್ನೂ ಆರಂಭಿಸಿವೆ. ಮತ್ತೊಂದೆಡೆ, ವಿನಿಮಯ ಕೇಂದ್ರಗಳ ಮೂಲಕ ಅಧಿಕ ದರಕ್ಕೆ ವಿದ್ಯುತ್ ಮಾರಾಟ ಮಾಡುತ್ತಿರುವುದು ಕಂಡುಬಂದಿದೆ' ಎಂದು ಸಚಿವಾಲಯ ತಿಳಿಸಿದೆ.

ವಿದ್ಯುತ್ ಹಂಚಿಕೆಗೆ ಸಂಬಂಧಿಸಿದ ಮಾರ್ಗಸೂಚಿಗಳ ಪ್ರಕಾರ ಸಿಜಿಎಸ್‌ಗಳಲ್ಲಿನ ಶೇ 15ರಷ್ಟು ವಿದ್ಯುತ್ ಅನ್ನು ಹಂಚಿಕೆ ಮಾಡಿರುವುದಿಲ್ಲ. ಈ ರೀತಿ ಹಂಚಿಕೆ ಮಾಡದೇ ಇರುವ ವಿದ್ಯುತ್ ಅನ್ನು ಪಡೆದು, ಗ್ರಾಹಕರಿಗೆ ಸರಬರಾಜು ಮಾಡುವಂತೆ ರಾಜ್ಯಗಳಿಗೆ ತಿಳಿಸಲಾಗಿದೆ. ಒಂದು ವೇಳೆ ಉತ್ಪಾದನೆ ಹೆಚ್ಚಿದರೆ, ಕೂಡಲೇ ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು. ಇದರಿಂದ ಅಗತ್ಯವಿರುವ ರಾಜ್ಯಗಳಿಗೆ ವಿದ್ಯುತ್ ಮರುಹಂಚಿಕೆ ಮಾಡಲು ಅನುಕೂಲವಾಗುತ್ತದೆ ಎಂದು ಸೂಚಿಸಿದ್ದಾಗಿ ಸಚಿವಾಲಯ ತಿಳಿಸಿದೆ.

ದೇಶಿ ಕಲ್ಲಿದ್ದಲಿನ ಜೊತೆ ಆಮದು ಕಲ್ಲಿದ್ದಲು ಮಿಶ್ರಣಕ್ಕೆ ಅವಕಾಶ

ನವದೆಹಲಿ (ರಾಯಿಟರ್ಸ್): ವಿದ್ಯುತ್ ಬೇಡಿಕೆಯನ್ನು ಈಡೇರಿಸಲು ದೇಶೀಯ ಕಲ್ಲಿದ್ದಲಿನ ಜೊತೆಗೆ ಆಮದು ಮಾಡಿಕೊಂಡ ಕಲ್ಲಿದ್ದಲನ್ನು ಶೇ 10ರಷ್ಟು ಮಿಶ್ರಣ ಮಾಡಲು ಹಾಗೂ ಕಲ್ಲಿದ್ದಲು ಆಮದು ಪ್ರಕ್ರಿಯೆಯನ್ನು ಚುರುಕುಗೊಳಿಸಲು ವಿದ್ಯುತ್ ಉತ್ಪಾದಕರಿಗೆ ಕೇಂದ್ರ ಸರ್ಕಾರ ಅವಕಾಶ ಕಲ್ಪಿಸಿದೆ.

ಶಸ್ತ್ರಾಸ್ತ್ರ ಪರವಾನಗಿ ಅಕ್ರಮ: 41 ಕಡೆ ದಾಳಿ

ಶ್ರೀನಗರ (ಪಿಟಿಐ): ಶಸ್ತ್ರಾಸ್ತ್ರ ಪರವಾನಗಿ ಪ್ರಕರಣದ ಸಂಬಂಧ ಸಿಬಿಐ ಅಧಿಕಾರಿಗಳು ಮಂಗಳವಾರ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನಂಟ್ ಗವರ್ನರ್‌ರ ಮಾಜಿ ಸಲಹೆಗಾರ ಬಶೀರ್ ಅಹ್ಮದ್ ಖಾನ್ ಸೇರಿ 14 ಅಧಿಕಾರಿಗಳ ನಿವಾಸದ ಮೇಲೆ ದಾಳಿ ನಡೆಸಿದ್ದಾರೆ.

ಇಬ್ಬರು ಹಾಲಿ ಐಎಎಸ್ ಅಧಿಕಾರಿಗಳ ನಿವಾಸದ ಮೇಲೂ ದಾಳಿ ನಡೆದಿದೆ. ಈ ಹಿಂದೆ, ನಕಲಿ ಮತ್ತು ತಿರುಚಲಾಗಿದ್ದ ದಾಖಲೆಗಳನ್ನು ಆಧರಿಸಿ ಶಸ್ತ್ರಾಸ್ತ್ರ ಪರವಾನಗಿಗಳನ್ನು ನೀಡಲಾಗಿದೆ ಎಂಬ ಪ್ರಕರಣಗಳಿಗೆ ಸಂಬಂಧಿಸಿದಂತೆ ಈ ದಾಳಿ ನಡೆದಿದೆ.

ಸಿಬಿಐ ವಕ್ತಾರರ ಪ್ರಕಾರ ಜಮ್ಮು ಮತ್ತು ಕಾಶ್ಮೀರದ ಅನಂತನಾಗ್, ಬನಿಹಾಲ್, ಬಾರಾಮುಲ್ಲಾ, ಜಮ್ಮು, ಕಿಶ್ತ್‌ವಾರ್ ಹಾಗೂ ಲೇಹ್, ದೆಹಲಿ ಮತ್ತು ಮಧ್ಯಪ್ರದೇಶದ ಭಿಂಡ್ ಸೇರಿದಂತೆ ಒಟ್ಟು 41 ಕಡೆ ಏಕಕಾಲದಲ್ಲಿ ದಾಳಿ ನಡೆಯಿತು.

2012 ರಿಂದ 2016ರ ಅವಧಿಯಲ್ಲಿ ಸಗಟು ರೂಪದಲ್ಲಿ ಶಸ್ತ್ರಾಸ್ತ್ರ ಪರವಾನಗಿಗಳನ್ನು ನೀಡಲಾಗಿದೆ ಎಂಬುದರ ಸಂಬಂಧ ಜಮ್ಮು ಮತ್ತು ಕಾಶ್ಮೀರ ಸರ್ಕಾರವು, ಎರಡು ಪ್ರತ್ಯೇಕ ದೂರನ್ನು ಸಿಬಿಐನಲ್ಲಿ ದಾಖಲಿಸಿತ್ತು.

ಈ ಹಿಂದಿನ ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ಸುಮಾರು 22 ಜಿಲ್ಲೆಗಳ ವ್ಯಾಪ್ತಿಯಲ್ಲಿ ಅರ್ಹರಲ್ಲದವರಿಗೂ ಸೇರಿದಂತೆ ಸುಮಾರು 2.78 ಲಕ್ಷದಷ್ಟು ಶಸ್ತ್ರಾಸ್ತ್ರ ಪರವಾನಗಿ ನೀಡಲಾಗಿತ್ತು ಎಂದು ಆರೋಪಿಸಲಾಗಿತ್ತು.

ಒಟ್ಟು 14 ಮಂದಿ ಹಾಲಿ ಮತ್ತು ನಿವೃತ್ತ ಐಎಎಸ್ ಹಾಗೂ ಕಾಶ್ಮೀರ ಆಡಳಿತ ಸೇವೆಯ (ಕೆಎಎಸ್) ಅಧಿಕೃತ ಕಚೇರಿ ಮತ್ತು ನಿವಾಸಗಳ ಮೇಲೆ ದಾಳಿ ನಡೆದಿದೆ. ಇವರುಗಳು ಈ ಹಿಂದೆ ಜಿಲ್ಲಾಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದ್ದರು.

ಅಲ್ಲದೆ, ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸಿದ್ದರು ಎಂದು ಹೇಳಲಾಗಿರುವ ಐವರು ಖಾಸಗಿಯವರು, ಏಜೆಂಟರು ಹಾಗೂ 10 ಮಂದಿ ಗನ್ ಹೌಸ್ ಅಥವಾ ವಿತರಕರಿಗೆ ಸೇರಿದ ಮನೆಗಳ ಮೇಲೂ ದಾಳಿ ನಡೆಸಲಾಯಿತು ಎಂದು ವಕ್ತಾರರು ತಿಳಿಸಿದ್ದಾರೆ.

ದಾಳಿ ಸಂದರ್ಭದಲ್ಲಿ ಶಸ್ತ್ರಾಸ್ತ್ರ ಪರವಾನಗಿ ವಿತರಣೆಗೆ ಸಂಬಂಧಿಸಿದ ದಾಖಲೆಗಳು, ಫಲಾನುಭವಿಗಳ ಪಟ್ಟಿ, ಹೂಡಿಕೆ ಹಾಗೂ ನಿಶ್ಚಿತ ಠೇವಣಿಗಳಿಗೆ ಸಂಬಂಧಿಸಿದ ದಾಖಲೆಗಳು, ಕ್ರಯಪತ್ರಗಳು ಲಭ್ಯವಾಗಿದ್ದು ವಶಕ್ಕೆ ಪಡೆಯಲಾಗಿದೆ.

ಮಾಜಿ ಸಚಿವ ವಿರುಪಾಕ್ಷಪ್ಪ ಅಗಡಿ ನಿಧನ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಮಾಜಿ ಸಚಿವ ವಿರುಪಾಕ್ಷಪ್ಪ ಅಗಡಿ (81) ವಯೋಸಹಜ ಅನಾರೋಗ್ಯದಿಂದ ಇಲ್ಲಿಯ ತಮ್ಮ ನಿವಾಸದಲ್ಲಿ ಸೋಮವಾರ ತಡ ರಾತ್ರಿ ನಿಧನರಾದರು.

ಅವರಿಗೆ ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

1985ರಲ್ಲಿ ಜನತಾದಳದಿಂದ ಕೊಪ್ಪಳ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು. ಎಸ್.ಆರ್. ಬೊಮ್ಮಾಯಿ ಮಂತ್ರಿಮಂಡಲದಲ್ಲಿ ವೈದ್ಯಕೀಯ ಶಿಕ್ಷಣ ಸಚಿವರಾದ ಎಂಟೇ ದಿನಗಳಲ್ಲಿ ಸರ್ಕಾರ ಪತನವಾಗಿತ್ತು.



ವಿರುಪಾಕ್ಷಪ್ಪ ಅಗಡಿ

2004ರಲ್ಲಿ ಜೆಡಿಎಸ್‌ನಿಂದ ಕೊಪ್ಪಳ ಕ್ಷೇತ್ರದಲ್ಲಿ ಸ್ಪರ್ಧಿಸಿ, ಲೋಕಸಭೆಗೆ ಆಯ್ಕೆಯಾಗಿದ್ದರು. ಒಂದು ಅವಧಿಗೆ ವಿಧಾನ ಪರಿಷತ್ ಸದಸ್ಯರಾಗಿದ್ದರು. ನಂತರ ಅವರು ಬಿಜೆಪಿ ಸೇರಿದ್ದರು.

ನಗರದ ವೀರಶೈವ ರುದ್ರಭೂಮಿಯಲ್ಲಿ ಮಂಗಳವಾರ ಸಂಜೆ 5ಕ್ಕೆ ಅಂತ್ಯಕ್ರಿಯೆ ನಡೆಯಿತು.

ಗ್ರಾಮ ತೊರೆಯುತ್ತಿರುವ ಜನ

ಒಂದನೇ ಪುಟದಿಂದ

'ಗಡಿಕೇಶ್ವಾರ, ರುದ್ನೂರು, ರಾಯಕೋಡ, ಭೂತ್ಪೂರ, ಕುಪನೂರ, ಸುಲೇಪೇಟ, ಹೊಡೆಬೀರನಹಳ್ಳಿ, ಮರನಾಳ, ಭಂಟನಳ್ಳಿ, ಬೆನಕನಳ್ಳಿ, ಕೊರವಿ, ಕೊರವಿ ತಾಂಡಾ, ಕುಡಳ್ಳಿ, ನಾವದಗಿ, ಹೊಸಳ್ಳಿ (ಎಚ್), ಹಲಚೇರಾ, ತೇಗಲತಿಪ್ಪಿ ಸೇರಿದಂತೆ ಹಲವು ಗ್ರಾಮಗಳಲ್ಲಿ ವಾರದ ಅವಧಿಯಲ್ಲಿ ಏಳು ಬಾರಿ ಭೂಮಿ ಕಂಪಿಸಿದೆ. ಹೀಗೆ ನಿರಂತರವಾಗಿ ಭೂಮಿ ಕಂಪಿಸುತ್ತಿರುವುದು ಇದೇ ಮೊದಲು' ಎಂದು ಗಡಿಕೇಶ್ವಾರ ಗ್ರಾಮದ ಮುಖಂಡ ರೇವಣಸಿದ್ದಪ್ಪ ಅಣಕಲ್ ಹೇಳಿದರು.

'ಮಂಗಳವಾರ ಬೆಳಿಗ್ಗೆ ಎದ್ದು ನಮ್ಮ ದೈನಂದಿನ ಕೆಲಸಗಳಲ್ಲಿ ತೊಡಗಬೇಕು ಎನ್ನುವಷ್ಟರಲ್ಲಿ ಗ್ರಾಮದ ಹೊರಗಿನಿಂದ ಭಾರಿ ಶಬ್ದ ಕೇಳಿಬಂತು. ಅದರ ಬೆನ್ನಲ್ಲೇ ಭೂಮಿ ತೂಗಿದ ಅನುಭವವಾಯಿತು' ಎಂದು ಸ್ಥಳಕ್ಕೆ ಭೇಟಿ ನೀಡಿದ 'ಪ್ರಜಾವಾಣಿ' ಪ್ರತಿನಿಧಿ ಎದುರು ಗ್ರಾಮದ ಮುಖಂಡ ಮಂಗಳಮೂರ್ತಿ ಅನುಭವ ಹಂಚಿಕೊಂಡರು.

> **ಮನೆಯ ಒಳಗಡೆ ಹೋಗಲು ಹೆದರಿಕೆ ಆಗುತ್ತಿದೆ. ಹೀಗಾಗಿ ನಾಲ್ಕು ದಿನಗಳಿಂದ ಮನೆಯ ಹೊರಗಿನ ಬಯಲಿನಲ್ಲಿಯೇ ಗುಂಡುಕಲ್ಲು ಇಟ್ಟುಕೊಂಡು ಒಂದಷ್ಟು ಅಕ್ಕಿ, ಬೇಳೆ ಬೇಯಿಸಿಕೊಳ್ಳುತ್ತಿದ್ದೇನೆ**
> **ಕಮಲಾಬಾಯಿ ಪಸಾರ,** ಗಡಿಕೇಶ್ವಾರ ಗ್ರಾಮದ ಗೃಹಿಣಿ

ಮುಕ್ಕಾಲು ಭಾಗ ಊರು ಖಾಲಿ: ಗಡಿಕೇಶ್ವಾರದಲ್ಲಿ 800 ಮನೆಗಳಿವೆ. ಪದೇಪದೇ ಸಂಭವಿಸುತ್ತಿರುವ ಭೂಕಂಪನದ ಕಾರಣ ಈಗಾಗಲೇ 500ಕ್ಕೂ ಹೆಚ್ಚು ಕುಟುಂಬಗಳು ಮನೆ ಖಾಲಿ ಮಾಡಿವೆ. ಬೇರೆ ಊರುಗಳಲ್ಲಿರುವ ಸಂಬಂಧಿಕರು, ಸ್ನೇಹಿತರ ಬಳಿಗೆ ಕೆಲವರು ತೆರಳಿದ್ದರೆ, ಇನ್ನೂ ಹಲವರು ಹೊಲಗಳಲ್ಲಿ ಹಾಕಿದ ಗುಡಿಸಲಿನಲ್ಲಿ ಆಶ್ರಯ ಪಡೆದಿದ್ದಾರೆ. ಮಂಗಳವಾರವೂ ಜೀವನಾವಶ್ಯಕ ಸಾಮಗ್ರಿಗಳನ್ನು ಕಟ್ಟಿಕೊಂಡು ಜನ ಬಸ್, ಟ್ರ್ಯಾಕ್ಟರ್, ಟೆಂಪೊ, ಬೈಕ್ ಏರಿ ಬೇರೆಡೆ ಹೊರಟಿರುವುದು ಕಂಡುಬಂತು.

ದೂರ ಶಿಕ್ಷಣ: ಪರೀಕ್ಷೆ ರದ್ದು

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯದ ದೂರ ಸಂಪರ್ಕ ಶಿಕ್ಷಣ ಮಹಾವಿದ್ಯಾಲಯ ಅ.4ರಂದು ನಡೆಸಿದ ಎಂ.ಎ. ಪ್ರಥಮ ಹಾಗೂ ಅಂತಿಮ ವರ್ಷದ ಕನ್ನಡ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಹಾಗೂ ಅಂತಿಮ ವರ್ಷದ ಕನ್ನಡ, ಇಂಗ್ಲಿಷ್, ಹಿಂದಿ, ರಾಜ್ಯಶಾಸ್ತ್ರ ಮತ್ತು ಎಂ.ಕಾಂ ಪ್ರಥಮ ಹಾಗೂ ಅಂತಿಮ ವರ್ಷದ ಪರೀಕ್ಷೆಗಳನ್ನು ತಾಂತ್ರಿಕ ಕಾರಣಗಳಿಂದ ರದ್ದುಪಡಿಸಲಾಗಿದೆ.

ಪರೀಕ್ಷೆಗಳನ್ನು ಅ.18ರಂದು ಮರು ನಿಗದಿಪಡಿಸಿ ಜರುಗಿಸಲು ನಿರ್ಧರಿಸಲಾಗಿದೆ. ಮಾಹಿತಿಗಾಗಿ ಕವಿವಿ ವೆಬ್‌ಸೈಟ್ www.kud.ac.in ಸಂಪರ್ಕಿಸಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಡುಗೆ ಮನೆಗೆ ಬೆಲೆ ಏರಿಕೆ ಬಿಸಿ

ಒಂದನೇ ಪುಟದಿಂದ

ಐವರು ಸದಸ್ಯರನ್ನು ಒಳಗೊಂಡ ಸಣ್ಣ ಕುಟುಂಬ ಕೆಲವು ತಿಂಗಳ ಹಿಂದೆ ದಿನಸಿಗಾಗಿ ₹ 5,000 ದಿಂದ ₹ 6000 ಖರ್ಚು ಮಾಡುತ್ತಿತ್ತು. ಈಗ ₹ 8,000 ಕ್ಕೆ ಏರಿಕೆ ಆಗಿದೆ. ತರಕಾರಿಗಳಿಗಾಗಿ ತಿಂಗಳಿಗೆ ₹ 2,000 ದಿಂದ ₹ 2,500 ಬೇಕಾಗುತ್ತಿತ್ತು. ಆ ಪ್ರಮಾಣ ಈಗ ₹ 3,000 ಕ್ಕೆ ತಲುಪಿದೆ. ಇದಲ್ಲದೇ ಇನ್ನೂ ಹಲವು ಅಗತ್ಯ ವಸ್ತುಗಳು, ಸೇವೆಗಳ ವೆಚ್ಚವೂ ದುಬಾರಿಯಾಗಿದೆ.

ಕೋವಿಡ್ ಪೂರ್ವಕ್ಕೂ ಈಗಿಗೂ ತಿಂಗಳ ಖರ್ಚಿನಲ್ಲಿ ಕನಿಷ್ಠ ₹ 5,000ದಷ್ಟು ಹೆಚ್ಚಳವಾಗಿದೆ. ಬೆಂಗಳೂರು ನಗರದಲ್ಲಿ ತಿಂಗಳಿಗೆ ಸುಮಾರು ₹ 50,000 ರಿಂದ ₹70,000 ಸಾವಿರ ಆದಾಯ ಇರುವ ಮಧ್ಯಮ ವರ್ಗದ ಕುಟುಂಬಕ್ಕೆ ಮನೆ ಬಾಡಿಗೆ ಸೇರಿ ಸುಮಾರು ₹ 40,000 ಖರ್ಚು ಬರುತ್ತಿದೆ. ಅಲ್ಲದೆ, ನಗರಗಳಲ್ಲಿ ವಾರಾಂತ್ಯದಲ್ಲಿ ಹೋಟೆಲ್‌ಗೆ ಊಟಕ್ಕೆ ಹೋಗುವ ವಾಡಿಕೆ ಇದ್ದು, ಅಲ್ಲಿಯೂ ಕಾಫಿ, ಟೀ, ತಿಂಡಿ ಬೆಲೆಯೂ ಶೇ 40 ರಿಂದ ಶೇ 50 ರಷ್ಟು ಹೆಚ್ಚಾಗಿದೆ.

₹50,000 ಕ್ಕಿಂತ ಕಡಿಮೆ ಆದಾಯದವರ ಸ್ಥಿತಿಯೂ ತೀರಾ ಗಂಭೀರ, ಕುಟುಂಬದ 'ಬಜೆಟ್' ಮೀರಿ ಸಾಲ ಮಾಡಿ ಬದುಕು ಸಾಗಿಸಬೇಕಾಗಿದೆ. ಮನೆ ಬಾಡಿಗೆ, ಮಕ್ಕಳ ಶಾಲಾ ಶುಲ್ಕಕ್ಕೂ ಅವರಿವರನ್ನು ಕೇಳಬೇಕಾಗಿದೆ.

ರಾಜ್ಯದಲ್ಲಿ ತರಕಾರಿ ಗಗನಮುಖಿ

ಬೆಂಗಳೂರು: ಕಳೆದ ಒಂದು ತಿಂಗಳಿನಿಂದ ಸುರಿದ ಭಾರಿ ಮಳೆಯಿಂದಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ತರಕಾರಿ ದರಗಳು ದಿಢೀರ್ ಏರಿಕೆ ಕಂಡಿವೆ. ಟೊಮೆಟೊಗೆ ಭಾರಿ ಬೇಡಿಕೆ ಸೃಷ್ಟಿಯಾಗಿರುವುದರಿಂದ ಅದರ ಬೆಲೆ ₹ 80 ಕ್ಕೆ ಏರಿದೆ. ನವರಾತ್ರಿ ಮತ್ತು ದೀಪಾವಳಿ ಹಬ್ಬಗಳ ಸಡಗರವನ್ನು ಬೆಲೆ ಏರಿಕೆ ತಗ್ಗಿಸಿದೆ.

ಮುಂಗಾರು ಹಾಗೂ ಚಂಡಮಾರುತದ ಪರಿಣಾಮ ಬೆಂಗಳೂರು ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಒಂದು ತಿಂಗಳಿನಿಂದ ಧಾರಾಕಾರ ಮಳೆ ಸುರಿಯುತ್ತಿದ್ದು, ತರಕಾರಿ ಮತ್ತು ಸೊಪ್ಪಿನ ಬೆಳೆಗಳು ತೀವ್ರ ಹಾನಿಗೆ ತುತ್ತಾಗಿವೆ. ಇದರಿಂದ ತರಕಾರಿ, ಸೊಪ್ಪಿನ ದರಗಳೆಲ್ಲ ಏರಿವೆ.


ಆರು ತಿಂಗಳಿನಿಂದ ಪ್ರತಿ ಕೆ.ಜಿಗೆ ₹15 ರ ಆಸುಪಾಸಿನಲ್ಲಿದ್ದ ಟೊಮೊಟೊ ದರ ಕಳೆದ ವಾರ ₹30ಕ್ಕೆ ಏರಿತ್ತು. ಒಂದು ವಾರದಿಂದ ನಿರಂತರವಾಗಿ ಏರಿಕೆ ಕಂಡಿರುವ ಟೊಮೊಟೊ ಸಗಟು ದರ ಪ್ರತಿ ಕೆ.ಜಿಗೆ ₹60 ರಂತೆ ಹಾಗೂ ಚಿಲ್ಲರೆ ದರ ₹70 ರಿಂದ ₹80 ಕ್ಕೆ ತಲುಪಿದೆ.

ಟೊಮೆಟೊ, ಕ್ಯಾರೆಟ್, ಬೀನ್ಸ್, ಈರುಳ್ಳಿ, ಆಲೂಗಡ್ಡೆ, ನುಗ್ಗೇಕಾಯಿ ಬೆಂಡೆಕಾಯಿ, ಬಟಾಣಿ, ಮೆಂತ್ಯೆ, ಪಾಲಕ್, ಕೊತ್ತಂಬರಿ ಸೇರಿದಂತೆ ಎಲ್ಲ ಸೊಪ್ಪಿನ ದರಗಳಲ್ಲೂ ಗಣನೀಯ ಏರಿಕೆ ಕಂಡು ಬಂದಿದೆ.

ಪ್ರತಿ ತರಕಾರಿ ದರ ₹10ರಷ್ಟು ಏರಿಕೆ: 'ಒಂದು ವಾರದ ಹಿಂದೆ ತರಕಾರಿ ದರಗಳು ರಾಜ್ಯದಾದ್ಯಂತ ಸ್ಥಿರವಾಗಿದ್ದವು. ಮಳೆಯಿಂದಾಗಿ ಈಗ ಎಲ್ಲ ತರಕಾರಿಗಳ ಬೆಲೆ ಪ್ರತಿ ಕೆ.ಜಿ.ಗೆ ಹೆಚ್ಚುವರಿಯಾಗಿ ₹10ರಿಂದ ಗರಿಷ್ಠ ₹20ರವರೆಗೆ ಏರಿಕೆ ಕಂಡಿವೆ. ಕನಿಷ್ಠ ಒಂದು ತಿಂಗಳವರೆಗೆ ಇದೇ ರೀತಿ ಬೆಲೆ ಏರುವ ಸಾಧ್ಯತೆ ಇದೆ' ಎಂದು ದಾಸನಪುರ ಎಪಿಎಂಸಿ ಪ್ರಾಂಗಣದ ಶ್ರೀಕೆಂಪೇಗೌಡ ಮಾರುಕಟ್ಟೆ ವರ್ತಕರ ಸಂಘದ ಅಧ್ಯಕ್ಷ ಎಂ.ಗೋವಿಂದಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ವಿವಿಧ ಪೇಟೆಗಳಲ್ಲಿ ಗರಿಷ್ಠ ದರ (₹ಗಳಲ್ಲಿ)

ಬೆಂಗಳೂರು	
ಬಟಾಣಿ	194
ಬೆಳ್ಳುಳ್ಳಿ	136
ಟೊಮೆಟೊ	80
ಕ್ಯಾರೆಟ್	74
ಬೀನ್ಸ್	50
ಮೆಂತ್ಯೆ (ಹಾಪ್‌ಕಾಮ್ಸ್ (ಕೆ.ಜಿ.ಗೆ)	134
ಮಂಗಳೂರು, ಚಿಕ್ಕಮಗಳೂರು ದರ(ಪ್ರತಿ ಕೆ.ಜಿಗೆ)	
ಬೀನ್ಸ್	60
ಟೊಮೆಟೊ	50
ದಪ್ಪ ಮೆಣಸಿನಕಾಯಿ	70
ಕ್ಯಾರೆಟ್	70
ನುಗ್ಗೆಕಾಯಿ	120
ಬೆಂಡೆಕಾಯಿ	50
ಅಲಸಂದೆ	55
ಹುಬ್ಬಳ್ಳಿ-ಧಾರವಾಡದಲ್ಲಿ ದರ (ಪ್ರತಿ ಕೆ.ಜಿ.ಗೆ)	
ದಪ್ಪ ಮೆಣಸಿನಕಾಯಿ	70
ಕ್ಯಾರೆಟ್	60
ಬೆಂಡೆಕಾಯಿ	50
ಹೂಕೋಸು	80
ಬಿನ್ಸ್	60
ಚವಳಿಕಾಯಿ	50



ಪ್ರಯೋಗ ಆಕಾಶದಲ್ಲಿ ಫಲ ಭೂಮಿಯಲ್ಲಿ

ಉದಯ ಶಂಕರ ಪುರಾಣಿಕ


ಉಪಗ್ರಹಗಳು, ಬಾಹ್ಯಾಕಾಶ ನೌಕೆಗಳು, ಪ್ರಯೋಗಾಲಯಗಳು - ಹೀಗೆ ವಿವಿಧ ಮಾಧ್ಯಮಗಳ ಮೂಲಕ ಸಂಗ್ರಹಿಸುವ ಅಗಾಧ ಪ್ರಮಾಣದ ಮಾಹಿತಿ (ಡೇಟಾ)ವನ್ನು ನಾವು ಭೂಮಿಗೆ ತರಿಸಿಕೊಂಡು, ಇಲ್ಲಿ ಈ ಮಾಹಿತಿಯ ಸಂಸ್ಕರಣೆ, ವಿಶ್ಲೇಷಣೆ ಮತ್ತು ಸಂಗ್ರಹಣೆಯನ್ನು ಮಾಡುತ್ತಿದ್ದೇವೆ. ಅದೇ ರೀತಿ ಉಪಗ್ರಹಗಳು, ಬಾಹ್ಯಾಕಾಶ ನೌಕೆಗಳ ನಿರ್ವಹಣೆಗಾಗಿ ಪ್ರತಿದಿನ ಸಾವಿರಾರು ಆದೇಶಗಳನ್ನು ನಾವು ಕಳುಹಿಸುತ್ತಿದ್ದೇವೆ. ಉಪಗ್ರಹಗಳು, ಬಾಹ್ಯಾಕಾಶ ನೌಕೆಗಳ ಸಂಖ್ಯೆ ಹೆಚ್ಚಾದಂತೆ, ಅವುಗಳ ನಿಯಂತ್ರಣ ಮತ್ತು ನಿರ್ವಹಣೆಗೆಂದು ನಾವು ಪ್ರತಿದಿನ ಕಳುಹಿಸುವ ಆದೇಶಗಳ ಸಂಖ್ಯೆ ಹಲವು ಪಟ್ಟು ಹೆಚ್ಚಾಗುತ್ತಿದ್ದು, ಈ ಸಂವಹನದಲ್ಲಿ ಕೂಡ ಈಗ ಉನ್ನತ ತಂತ್ರಜ್ಞಾನಗಳ ಬಳಕೆಯಾಗುತ್ತಿದೆ.

ಉದಾಹರಣೆಗೆ, ಅಮೆರಿಕದ 'ಸ್ಕ್ಯಾನ್' (ಸ್ಪೇಸ್ ಕಮ್ಯೂನಿಕೇಷನ್ ಎಂಡ್ ನ್ಯಾವಿಗೇಷನ್) ಯೋಜನೆಯನ್ನು ನೋಡೋಣ. 2024ರಲ್ಲಿ ಚಂದ್ರನ ಮೇಲೆ ಒಬ್ಬ ಪುರುಷ ಮತ್ತು ಸ್ತ್ರೀಗಗನಯಾತ್ರಿಯನ್ನು ಇಳಿಸುವ ಮಹಾತ್ವಾಕಾಂಕ್ಷೆಯ ಯೋಜನೆಯನ್ನು ನಾಸಾ ಹೊಂದಿದೆ. ಈ ಯೋಜನೆ ಸಫಲವಾಗಲು ಹಲವಾರು ಉನ್ನತ ತಂತ್ರಜ್ಞಾನಗಳ ಬಳಕೆಯಾಗುತ್ತಿವೆ:

1 ಟ್ರ್ಯಾಕಿಂಗ್ ಮತ್ತು ಡೇಟಾ ರಿಲೇ ಉಪಗ್ರಹಗಳು (ಟಿಡಿಆರ್‌ಎಸ್) ವ್ಯವಸ್ಥೆಯನ್ನು ಬಳಸಿ ದಿನದ 24 ಗಂಟೆ ನಿರಂತರವಾಗಿ ಮತ್ತು ಕರಾರುವಕ್ಕಾಗಿ ಕೆಲಸ ಮಾಡುವ ಹೊಸ ಸಂವಹನ ವ್ಯವಸ್ಥೆಯನ್ನು ಸ್ಕ್ಯಾನ್ ವಿಜ್ಞಾನಿಗಳು ಮತ್ತು ತಂತ್ರಜ್ಞರು ಅನುಷ್ಠಾನಗೊಳಿಸಿದ್ದಾರೆ. 2013ರಿಂದ 2017ರ ಅವಧಿಯಲ್ಲಿ ಮೂರು ಟಿಡಿಆರ್‌ಎಸ್ ಉಪಗ್ರಹಗಳನ್ನು ಉಡಾವಣೆ ಮಾಡಲಾಗಿದ್ದು, ಈಗ ಟಿಡಿಆರ್‌ಎಸ್ ವ್ಯವಸ್ಥೆಯನ್ನು 'ಐಎಸ್‌ಎಸ್' (ಇಂಟರ್ನ್ಯಾಷನಲ್ ಸ್ಪೇಸ್ ಸ್ಟೇಶನ್) ಮೊದಲಾದ ಬಾಹ್ಯಾಕಾಶ ಯೋಜನೆಗಳು ಬಳಸುತ್ತಿವೆ. ಈ ಮೊದಲು ಇದ್ದ 1980 ದಶಕದಲ್ಲಿ ಅಭಿವೃದ್ಧಿಯಾದ ಸಂವಹನ ವ್ಯವಸ್ಥೆಗಿಂತ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿ ಅಭಿವೃದ್ಧಿ ಪಡಿಸಲಾಗಿರುವ ಟಿಡಿಆರ್‌ಎಸ್ ವ್ಯವಸ್ಥೆ ಮುಂಬರುವ ಹತ್ತು ವರ್ಷಗಳ ಕಾಲ ಬಾಹ್ಯಾಕಾಶ ಯೋಜನೆಗಳ ಸಂವಹನಕ್ಕಾಗಿ ಬಳಕೆಯಾಗಲಿದೆ.

2 ಮುಂದೊಂದು ದಿನ ಮಾನವನು ಚಂದ್ರನ ಮೇಲೆ ವಾಸವಾಗಿರಲು ಅಗತ್ಯವಾದ ತಂತ್ರಜ್ಞಾನಗಳ ಅಭಿವೃದ್ಧಿಯನ್ನು ಮಾಡಲಾಗುತ್ತಿದೆ. ಚಂದ್ರನ ಮೇಲೆ ಇರುವ ಮಾನವರಿಗೆ ಇಂಟರ್‌ನೆಟ್ ಸೌಲಭ್ಯವನ್ನು ನೀಡುವುದು ಹೇಗೆ ಎಂದು ಯೋಚಿಸಿದ ಸ್ಕ್ಯಾನ್ ವಿಜ್ಞಾನಿಗಳು, 2013ರಲ್ಲಿ ಪ್ರಾಯೋಗಿಕವಾಗಿ ಎಲ್‌ಎಲ್‌ಸಿಡಿ(ಲೂನಾರ್ ಲೇಸರ್ ಕಮ್ಯೂನಿಕೇಷನ್ ಪ್ರಯೋಗ)ವನ್ನು ಮಾಡಿದರು. ಸೆಕೆಂಡಿಗೆ 622 ಎಂ.ಬಿ. ವೇಗದ ಇಂಟರ್‌ನೆಟ್ ಸೌಲಭ್ಯವನ್ನು ಚಂದ್ರನಿಂದ ಭೂಮಿಗೆ ಕಲ್ಪಿಸಲು ಸಾಧ್ಯವಿದೆ ಎಂದು ಈ ಪ್ರಯೋಗದಿಂದ ತಿಳಿಯಲಾಯಿತು. ಇಷ್ಟು ವೇಗದ ಅಥವಾ ಇದಕ್ಕಿಂತ ಹೆಚ್ಚು ವೇಗದ ಇಂಟರ್‌ನೆಟ್ ಸೌಲಭ್ಯವನ್ನು ಚಂದ್ರನ ಮೇಲೆ ವಾಸವಾಗಿರುವ ಮನುಷ್ಯರಿಗೆ ನೀಡಿದಾಗ, ಅವರು ಚಂದ್ರ ಮತ್ತು ಬಾಹ್ಯಾಕಾಶ ಕುರಿತು ಚಿತ್ರಿಸುವ ವಿಡಿಯೋವನ್ನು ಯಾವುದೇ ವಿಳಂಬವಿಲ್ಲದೆ, ನಾವು ಭೂಮಿಯಿಂದ ನೋಡಲು ಸಾಧ್ಯವಾಗುತ್ತದೆ.

> ಮುಂದೊಂದು ದಿನ ಮಾನವನು ಚಂದ್ರನ ಮೇಲೆ ವಾಸವಾಗಿರಲು ಅಗತ್ಯವಾದ ತಂತ್ರಜ್ಞಾನಗಳ ಅಭಿವೃದ್ಧಿಯನ್ನು ಮಾಡಲಾಗುತ್ತಿದೆ. ಚಂದ್ರನ ಮೇಲೆ ಇರುವ ಮಾನವರಿಗೆ ಇಂಟರ್‌ನೆಟ್ ಸೌಲಭ್ಯವನ್ನು ನೀಡುವುದು ಹೇಗೆ ಎಂದು ಯೋಚಿಸಿದ ಸ್ಕ್ಯಾನ್ ವಿಜ್ಞಾನಿಗಳು, 2013ರಲ್ಲಿ ಪ್ರಾಯೋಗಿಕವಾಗಿ ಎಲ್‌ಎಲ್‌ಸಿಡಿಯನ್ನು ಮಾಡಿದರು.



3 ಸಾರ್ವಜನಿಕರ ಉಪಯೋಗಕ್ಕಾಗಿ ನೀಡಿರುವ ಗೂಗಲ್ ಮ್ಯಾಪ್ ಮೊದಲಾದ ಸೌಲಭ್ಯಗಳಲ್ಲಿ ಜಿಪಿಎಸ್ ತಂತ್ರಜ್ಞಾನವನ್ನು ಬಳಸುತ್ತಾರೆ. ಆದರೆ ಬಾಹ್ಯಾಕಾಶದಲ್ಲಿ ಜಿಪಿಎಸ್ ಆಧಾರಿತ ಸೇವೆಗಳನ್ನು ಹೇಗೆ ನೀಡುವುದು ಎನ್ನುವ ಪ್ರಶ್ನೆಗೆ ಸ್ಕ್ಯಾನ್‌ನ ವಿಜ್ಞಾನಿಗಳು 2016ರಲ್ಲಿ ಎಂಎಂಎಸ್ ಹೆಸರಿನ ಪ್ರಯೋಗವನ್ನು ನಡೆಸಿದರು. ಭೂಮಿಯಿಂದ ಸುಮಾರು ಎಪ್ಪತ್ತು ಸಾವಿರ ಕಿ.ಮೀ.ಗಳಷ್ಟು ಎತ್ತರದಲ್ಲಿ ಜಿ.ಪಿ.ಎಸ್. ಸೌಲಭ್ಯವನ್ನು ನೀಡಲು ಇದರಿಂದ ಸಾಧ್ಯವಾಗಿದ್ದು, ವಿಶ್ವದಾಖಲೆಯಾಯಿತು. 2017ರಲ್ಲಿ ಸ್ಕ್ಯಾನ್ ವಿಜ್ಞಾನಿಗಳು ಈ ಕುರಿತು ನಡೆಸಿದ ಪ್ರಯೋಗದಲ್ಲಿ, ಭೂಮಿಯಿಂದ ಸುಮರು ಒಂದು ಲಕ್ಷ ಐವತ್ತು ಸಾವಿರ ಕಿ.ಮೀ.ಗಳಷ್ಟು ಎತ್ತರದಲ್ಲಿ ಜಿ.ಪಿ.ಎಸ್. ಸೌಲಭ್ಯವನ್ನು ಸಾಧ್ಯವಾಗಿದ್ದು ಹೊಸ ವಿಶ್ವ ದಾಖಲೆಯಾಯಿತು. 2019ರಲ್ಲಿ ಈ ವಿಜ್ಞಾನಿಗಳು ನಡೆಸಿದ ಪ್ರಯೋಗದಲ್ಲಿ ಭೂಮಿಯಿಂದ ಸುಮಾರು ಒಂದು ಲಕ್ಷ ಎಂಬತ್ತಾರು ಕಿ.ಮೀ.ಗಳಷ್ಟು ಎತ್ತರದಲ್ಲಿ ಜಿ.ಪಿ.ಎಸ್. ಸೌಲಭ್ಯವನ್ನು ನೀಡಲು ಸಾಧ್ಯವಾಗಿದ್ದು, ಹೊಸ ವಿಶ್ವ ದಾಖಲೆಯಾಗಿದೆ. ಅಂದ ಹಾಗೆ, ಭೂಮಿಯಿಂದ ಚಂದ್ರನವರೆಗೆ ಇರುವ ದೂರದಲ್ಲಿ ಅರ್ಧ ಭಾಗವು ಸುಮಾರು ಒಂದು ಲಕ್ಷ ಎಂಬತ್ತಾರು ಕಿ.ಮೀ. ಗಳಷ್ಟಾಗುತ್ತದೆ.

4 ವಿಮಾನವೊಂದು ಅಪಘಾತಕ್ಕೀಡಾಗುವ ಪರಿಸ್ಥಿತಿ ಎದುರಾದರೆ, ವಿಮಾನದಲ್ಲಿರುವ ತುರ್ತುಪರಿಸ್ಥಿತಿಯ ಬೀಕನ್‌ಗಳು ಕಾರ್ಯಪ್ರವೃತ್ತರಾಗುತ್ತವೆ. ಇದರಿಂದಾಗಿ ಸಂಕಷ್ಟದಲ್ಲಿರುವ ವಿಮಾನವನ್ನು ಗುರುತಿಸಲು ಮತ್ತು ಅಗತ್ಯ ನೆರವು ನೀಡಲು ವಿಮಾನ ನಿಲ್ದಾಣದ ಸಿಬ್ಬಂದಿಗೆ ಸಹಾಯವಾಗುತ್ತದೆ. ವಿಮಾನ ಅಪಘಾತಕ್ಕೀಡಾದರೂ ಈ ತುರ್ತುಪರಿಸ್ಥಿತಿಯ ಬೀಕಾನ್‌ಗಳು ಕೆಲಸ ಮಾಡುತ್ತಿರುವಂತೆ ಹೇಗೆ ಮಾಡುವುದು ಎಂದು ಸ್ಕ್ಯಾನ್‌ನ ವಿಜ್ಞಾನಿಗಳು ಮತ್ತು ತಂತ್ರಜ್ಞರು ಪ್ರಯೋಗಗಳನ್ನು ನಡೆಸಿದರು. ನಾಗರಿಕ ವಿಮಾಯಾನ ಸಂಸ್ಥೆಗಳು ಬಳಸುವಂತಹ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಮೂರು ವಿಮಾನಗಳನ್ನು ಅಪಘಾತಕ್ಕೀಡಾಗುವಂತೆ ಮಾಡಲಾಯಿತು. ಈ ಪ್ರಯೋಗದಿಂದ ನಾಗರಿಕ ವಿಮಾನಯಾನಕ್ಕೆ ಬಳಸಲಾಗುವ ವಿಮಾನಗಳಲ್ಲಿ ತುರ್ತುಪರಿಸ್ಥಿತಿಯ ಬೀಕನ್‌ಗಳನ್ನು ಎಲ್ಲಿ ಅಳವಡಿಸಿದರೆ, ವಿಮಾನ ಆಪಘಾತವಾದರೂ, ಈ ಬೀಕನ್‌ಗಳು ಕೆಲಸ ಮಾಡುತ್ತಿರುವಂತೆ ಮಾಡಬಹುದು ಎಂದು ವಿಜ್ಞಾನಿಗಳು ಮತ್ತು ತಂತ್ರಜ್ಞರಿಗೆ ಗೊತ್ತಾಯಿತು. ಮುಂಬರುವ ದಿನಗಳಲ್ಲಿ ವಿಮಾನಯಾನ ಮಾಡುವ ಪ್ರಯಾಣಿಕರಿಗೆ ಹೆಚ್ಚು ಸುರಕ್ಷತೆಯನ್ನು ನೀಡಲು ಸಾಧ್ಯವಾಗುತ್ತಿದೆ.



5 ಸೂರ್ಯನತ್ತ ಸಾಗುತ್ತಿರುವ ಪಾರ್ಕರ್ ಸೋಲಾರ್ ಪ್ರೋಬ್, ನಮ್ಮ ಸೌರವ್ಯೂಹದಿಂದ ಹೊರಗೆ ಹೋಗಿ ತಮ್ಮ ಪಯಣ ಮಾಡುತ್ತಿರುವ ವಾಯೋಜರ್ ಬಾಹ್ಯಾಕಾಶ ನೌಕೆಗಳು, ಶನಿಗ್ರಹದ ವಾತಾವರಣವನ್ನು ಪ್ರವೇಶಿಸಿದ ಸೆಸೆನಿ ಬಾಹ್ಯಾಕಾಶ ನೌಕೆ, ಹೀಗೆ ಬಾಹ್ಯಾಕಾಶ ಸಂಶೋಧನೆಯಲ್ಲಿ ಹೊಸ ಭಾಷ್ಯವನ್ನು ಬರೆಯುತ್ತಿರುವ ಯೋಜನೆಗಳ ಯಶಸ್ಸಿಗೆ ನಿರಂತರ ಮತ್ತು ಕರಾರುವಕ್ಕಾಗಿರುವ ಸಂವಹನ ವ್ಯವಸ್ಥೆ ಮುಖ್ಯವಾಗುತ್ತದೆ. ಅಮೇರಿಕಾದ 'ಡೀಪ್ ಸ್ಪೇಸ್ ನೆಟವರ್ಕ್' (ಡಿಎಸ್‌ಎನ್) ವರ್ಷ 2013ರಲ್ಲಿ 50 ವರ್ಷಗಳ ಕಾರ್ಯಾಚರಣೆಯ ಸಂಭ್ರಮವನ್ನಾಚರಿಸಿತು.

ಮುಂಬರುವ ದಿನಗಳಲ್ಲಿ ಸಂವಹನ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನಗಳು ಮತ್ತು ಆವಿಷ್ಕಾರಗಳು ಬಳಕೆಗೆ ಬಂದಂತೆ, ಬಾಹ್ಯಾಕಾಶ ಸಂಶೋಧನೆ ಮಾತ್ರವಲ್ಲ, ಜನಸಾಮಾನ್ಯರಿಗೂ ಪ್ರಯೋಜನವಾಗಲಿದೆ.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 75

1026. ಮೊಹೆಂಜೊದಾರೊದಲ್ಲಿ ಶೋಧಿಸಲ್ಪಟ್ಟ 'ನೃತ್ಯ ಮಾಡುತ್ತಿರುವ ಹುಡುಗಿ' ಪ್ರತಿಮೆ ಯಾವುದರಿಂದ ಮಾಡಲ್ಪಟ್ಟಿದೆ?
ಎ) ಚಿನ್ನ ಬಿ) ತಾಮ್ರ
ಸಿ) ಬೆಳ್ಳಿ ಡಿ) ಹಿತ್ತಾಳೆ

1027. ಫರಕ್ಕಾ ಅಣೆಕಟ್ಟೆಯನ್ನು ಯಾವ ನದಿಯ ಅಡ್ಡಕ್ಕೆ ನಿರ್ಮಿಸಲಾಗಿದೆ?
ಎ) ಗಂಗಾ ಬಿ) ಕಾವೇರಿ
ಸಿ) ಗೋದಾವರಿ ಡಿ) ಕೃಷ್ಣಾ

1028. ಡೊಂಕು ಡೊಂಕಾಗಿ ಹರಿಯುವ ನದಿಯೊಂದು ಮುಖ್ಯ ಧಾರೆಯಿಂದ ಬೇರ್ಪಡೆಗೊಂಡಾಗ ನಿರ್ಮಾಣಗೊಳ್ಳುವ ಸರೋವರವನ್ನು ಹೀಗೆನ್ನುತ್ತಾರೆ.
ಎ) ಆಕ್ಸ್-ಬೋ ಸರೋವರ
ಬಿ) ಗ್ಲೇಸಿಯರ್ ಸರೋವರ
ಸಿ) ಲಗೂನ್ಸ್ (ಕೃತಕ ಕೊಳಗಳು)
ಡಿ) ಮಾನವ ನಿರ್ಮಿತ ಸರೋವರಗಳು

1029. ವಿಶ್ವವಿಖ್ಯಾತ ಚೆನ್ನಕೇಶವ ದೇವಾಲಯ ಇಲ್ಲಿದೆ?
ಎ) ಬೇಲೂರು ಬಿ) ಗದಗ
ಸಿ) ತುಮಕೂರು ಡಿ) ಹಳೇಬೀಡು

1030. ವಿಜಯನಗರ ಸಾಮ್ರಾಜ್ಯವು-------ರಲ್ಲಿ ಸ್ಥಾಪಿಸಲ್ಪಟ್ಟಿತು.
ಎ) 1401 ಬಿ) 1298 ಸಿ) 1565 ಡಿ) 1336

1031. ದಕ್ಷಿಣ ಭಾರತದಲ್ಲಿ ಪ್ರಥಮ ಸ್ವತಂತ್ರ ಇಸ್ಲಾಮಿಕ್ ಸಾಮ್ರಾಜ್ಯ ಯಾವುದಾಗಿತ್ತು?
ಎ) ಬಹುಮನಿ ಸಾಮ್ರಾಜ್ಯ ಬಿ) ಬಿಜಾಪುರ ಸುಲ್ತಾನರು
ಸಿ) ಶ್ರೀರಂಗಪಟ್ಟಣದ ಸುಲ್ತಾನರು ಡಿ) ಸವಣೂರಿನ ನವಾಬರು

1032. ಕೆಳಗಿನವುಗಳಲ್ಲಿ ಯಾವುದು ಒಂದು ಸಂವೇದನಾ ಅಂಗವಲ್ಲ?
ಎ) ಕಣ್ಣುಗಳು ಬಿ) ಕಿವಿಗಳು ಸಿ) ಮೂಗು
ಡಿ) ಕರುಳುವಾಳ (ಅಪೆಂಡಿಕ್ಸ್)

1033. ಗಾಳಿಯ ವೇಗವನ್ನು ಅಳೆಯುವ ಉಪಕರಣವನ್ನು ಹೆಸರಿಸಿದಿ.
ಎ) ಹೈಡ್ರೋಮೀಟರ್ ಬಿ) ಉಡೋಮೀಟರ್
ಸಿ) ಬ್ಯಾರೋಮೀಟರ್ ಡಿ) ಅನಿಮೋಮೀಟರ್

1034. ಯಾವ ಗ್ರಹವು ಕೆಂಪು ಗ್ರಹ ಎಂದು ಕರೆಯಲ್ಪಡುತ್ತದೆ?
ಎ) ಗುರುಗ್ರಹ ಬಿ) ಬುಧಗ್ರಹ
ಸಿ) ಮಂಗಳಗ್ರಹ ಡಿ) ಶುಕ್ರಗ್ರಹ

1035. ಕೆಳಗಿನ ಬಲಗಳಲ್ಲಿ ಯಾವುದು ಗಾಳಿಯು ಸಾಮಾನ್ಯ ಪಥದಿಂದ ವಿಚಲನಗೊಳ್ಳಲು ಕಾರಣವಾಗುತ್ತದೆ?
ಎ) ಸಂವರ್ಧಕ (ಕಂಪ್ರೆಶನಲ್) ಬಲ ಬಿ) ಅನ್ವಯಿಕ ಬಲ
ಸಿ) ಕೋರಿಯೋಲಿಸ್ ಪರಿಣಾಮ ಡಿ) ಗುರುತ್ವಾಕರ್ಷಣ ಬಲ

1036. ಕೆಳಗಿನ ಯಾವ ರಾಜ್ಯಗಳ ಮೂಲಕ ಕಾವೇರಿ ನದಿಯು ಹರಿಯುವುದಿಲ್ಲ?
ಎ) ಕೇರಳ ಬಿ) ತಮಿಳುನಾಡು ಸಿ) ಪುದುಚೇರಿ ಡಿ) ಆಂಧ್ರಪ್ರದೇಶ

1037. ರಾಮಾನುಜಾಚಾರ್ಯರು ಈ ಕಾಲದಲ್ಲಿ ಜೀವಿಸಿದ್ದರು
ಎ) ಹೊಯ್ಸಳರ ಕಾಲ ಬಿ) ವಿಜಯನಗರ ಕಾಲ
ಸಿ) ಮೈಸೂರು ಅರಸರ ಕಾಲ ಡಿ) ಗಂಗರ ಕಾಲ


1038. ಲೋಕಾಯುಕ್ತ ಬಿಲ್ ಅಸೆಂಬ್ಲಿಯಲ್ಲಿ ಇವರಿಂದ ಪರಿಚಯಿಸಲ್ಪಟ್ಟಿತು.
ಎ) ಅಬ್ದುಲ್ ಹಕೀಂ ಬಿ) ಎನ್.ವೆಂಕಟಾಚಲ
ಸಿ) ಸಂತೋಷ್ ಹೆಗ್ಡೆ ಡಿ) ರಾಮಕೃಷ್ಣ ಹೆಗಡೆ

1039. ಚಂದ್ರಗ್ರಹಣ ಯಾವಾಗ ಸಂಭವಿಸುತ್ತದೆ?
ಎ) ಭೂಮಿಯು ಸೂರ್ಯ ಮತ್ತು ಚಂದ್ರರ ನಡುವೆ ಇರುವಾಗ
ಬಿ) ಸೂರ್ಯನು ಭೂಮಿ ಮತ್ತು ಚಂದ್ರನ ನಡುವೆ ಇರುವಾಗ
ಸಿ) ಚಂದ್ರನು ಭೂಮಿ ಮತ್ತು ಸೂರ್ಯನ ನಡುವೆಇರುವಾಗ
ಡಿ) ಭೂಮಿಯು ಸೂರ್ಯ ಮತ್ತು ಇತರ ಆಕಾಶಕಾಯಗಳ ನಡುವೆ ಇರುವಾಗ

1040. ವಿಶ್ವದ ಅತ್ಯಂತ ದೊಡ್ಡ ಸೌರಪಾರ್ಕ್ 'ಶಕ್ತಿಸ್ಥಳ' ಕರ್ನಾಟಕದ ಯಾವ ಜಿಲ್ಲೆಯಲ್ಲಿ ನಿರ್ಮಾಣಗೊಳ್ಳುತ್ತಿದೆ?
ಎ) ಬೆಳಗಾವಿ ಬಿ) ಚಿತ್ರದುರ್ಗ ಸಿ) ಕಲಬುರಗಿ ಡಿ) ತುಮಕೂರು

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 74ರ ಉತ್ತರಗಳು: 1011. ಡಿ, 1012. ಬಿ, 1013. ಸಿ, 1014. ಎ, 1015. ಸಿ, 1016. ಎ, 1017. ಬಿ, 1018. ಸಿ, 1019. ಎ, 1020. ಬಿ, 1021. ಸಿ, 1022. ಬಿ, 1023. ಡಿ, 1024. ಬಿ, 1025. ಬಿ



❦ ಸುಭಾಷಿತ ❦
ಯಾವುದೂ ನಿಜಕ್ಕೂ ನಿಮ್ಮನ್ನು ತಡೆಯಲಾರದು ಅಥವಾ ನೀವು ಹಿಂದಡಿ ಇಡುವಂತೆ ಮಾಡಲಾರದು. ನಿಮ್ಮ ಸ್ವಇಚ್ಛೆಯು ಯಾವಾಗಲೂ ನಿಮ್ಮ ನಿಯಂತ್ರಣದಲ್ಲಿಯೇ ಇರುತ್ತದೆ. –ಎಪಿಕ್ಟೀಟಸ್

ಕಲಬುರಗಿಯ ಸುತ್ತ ಪದೇಪದೇ ಭೂಕಂಪನ ಭಯಗ್ರಸ್ತರಿಗೆ ಬೇಕಿದೆ ಮಾಹಿತಿ, ಸಾಂತ್ವನ

ಏಳೆಂಟು ದಿನಗಳಿಂದ ಕಲಬುರಗಿ ಜಿಲ್ಲೆಯ ಚಿಂಚೋಳಿ, ಸೇಡಂ, ಕಾಳಗಿ ಹಾಗೂ ಕಮಲಾಪುರ ತಾಲ್ಲೂಕುಗಳ ಹಲವೆಡೆ ನೆಲ ನಡುಗುತ್ತಿದೆ. ಗ್ರಾಮವಾಸಿಗಳು ಆತಂಕಿತರಾಗಿದ್ದಾರೆ. ಒಂದೇ ವಾರದಲ್ಲಿ ಮೂರು ಬಾರಿ ಲಘು ಭೂಕಂಪನಗಳಾಗಿದ್ದು ಹೌದೆಂದು ಭೂವಿಜ್ಞಾನಿಗಳೂ ಹೇಳಿದ್ದಾರೆ. ಆದರೂ ಜಿಲ್ಲಾಡಳಿತ ಯಾವುದೇ ಕ್ರಮ ಕೈಗೊಂಡಿಲ್ಲವೆಂಬ ಜನಾಕ್ರೋಶ ಅಲ್ಲಲ್ಲಿ ವ್ಯಕ್ತವಾಗುತ್ತಿದೆ. ಚಿಂಚೋಳಿ ಭಾಗದ ಜನರು ಹೆದ್ದಾರಿಯಲ್ಲಿ ಕೂತು ಪ್ರತಿಭಟಿಸಿದ್ದಾರೆ. ತಮಗೆ ತಾತ್ಕಾಲಿಕ ಆಸರೆ ವ್ಯವಸ್ಥೆ ಆಗಬೇಕೆಂದೂ ಭೂಕಂಪನ ಮಾಪನಯಂತ್ರಗಳನ್ನು ಅಲ್ಲಲ್ಲಿ ಸ್ಥಾಪಿಸಬೇಕೆಂದೂ ಬೇಡಿಕೆ ಇಟ್ಟಿದ್ದಾರೆ. ವರ್ಷದ ಯಾವುದೇ ಕಾಲದಲ್ಲಿ ನೆಲ ನಡುಗಿದರೂ ಎದೆ ನಡುಗುತ್ತದಾದರೂ ಮಳೆಗಾಲದ ಈ ದಿನಗಳಲ್ಲಿ ಸಣ್ಣ ಕಂಪನಕ್ಕೂ ಭೀತಿಯಿಂದ ಮನೆಬಿಟ್ಟು ಹೊರಗಡೆ ಧಾವಿಸುವವರ ಸಂಕಷ್ಟಗಳನ್ನು ಯಾರೂ ಊಹಿಸಬಹುದು. ಅಂಥ ಆತಂಕಗಳನ್ನು ನಿವಾರಿಸುವಲ್ಲಿ ಜಿಲ್ಲಾ ಆಡಳಿತ ಯಾವುದೇ ಕ್ರಮ ಕೈಗೊಂಡಂತಿಲ್ಲ. ಭೂಕಂಪನದ ವಾಸ್ತವಗಳ ಬಗ್ಗೆ ಗ್ರಾಮೀಣ ಜನರಿಗೆ ಅರಿವು ಮೂಡಿಸುವಲ್ಲಿ ವಾರ್ತಾ ಇಲಾಖೆಯಾಗಲೀ ಸರ್ಕಾರಿ ಸ್ವಾಮ್ಯದ ಇತರ ಮಾಧ್ಯಮಗಳಾಗಲೀ ಏನೂ ಕೆಲಸ ಮಾಡಿದಂತಿಲ್ಲ. ಹಾಗೆಂದು ನಮ್ಮಲ್ಲಿ ಮಾಹಿತಿಯ ಅಭಾವವೇನೂ ಇಲ್ಲ. ಯಾವುದೇ ಬಗೆಯ ನೈಸರ್ಗಿಕ ಆತಂಕಗಳ ಮೇಲೆ ಕಣ್ಣಿಡಲು ಕರ್ನಾಟಕದಲ್ಲಿ 'ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ' ಇದೆ. ದೇಶದಲ್ಲೇ ಮೊದಲ ಬಾರಿಗೆ ಆರಂಭವಾದ ಈ ಕೇಂದ್ರ ಗಾಳಿ ಮಳೆ ಕುರಿತಂತೆ ಕ್ಷಣಕ್ಷಣಕ್ಕೂ ಮಾಹಿತಿ ನೀಡುವ ವಿಷಯದಲ್ಲಿ ಚುರುಕಾಗಿದ್ದು ಇತರ ಅನೇಕ ರಾಜ್ಯಗಳು ಕರ್ನಾಟಕದ ಮಾದರಿಯನ್ನೇ ಅನುಸರಿಸಲು ಮುಂದಾಗಿವೆ. ಆದರೆ ವಿಜ್ಞಾನ-ತಂತ್ರಜ್ಞಾನದ ಮಟ್ಟಿಗೆ ನಮ್ಮ ಸಾಧನೆಗಳು ಅದೆಷ್ಟೇ ಶ್ಲಾಘನೀಯವಾಗಿದ್ದರೂ ನೆಲಮಟ್ಟದಲ್ಲಿ ಜನರಿಗೆ ಮಾರ್ಗದರ್ಶನ ಮತ್ತು ನೆರವು ನೀಡುವಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದಿದ್ದರೆ ಆ ವೈಫಲ್ಯಕ್ಕೆ ಜನಪ್ರತಿನಿಧಿಗಳನ್ನೇ ಹೊಣೆಗಾರರನ್ನಾಗಿ ಮಾಡಬೇಕಾಗುತ್ತದೆ.



ಇದುವರೆಗೆ ಸಂಭವಿಸಿದ್ದೆಲ್ಲ ಲಘು ಭೂಕಂಪನವೆಂದ ಮಾತ್ರಕ್ಕೆ ಯಾರೂ ಲಘುವಾಗಿ ಪರಿಗಣಿಸುವ ವಿಷಯ ಇದಲ್ಲ

ಕಲಬುರಗಿಯ ಬಹುಪಾಲು ನೆಲವೆಲ್ಲ ಪಾಟಿಕಲ್ಲು ಮತ್ತು ಸುಣ್ಣದ ಶಿಲಾಹಾಸುಗಳಿಂದ ಆವೃತವಾಗಿದ್ದು, ಅಲ್ಲಲ್ಲಿನ ಭೂಗತ ಬಿರುಕುಗಳಲ್ಲಿ ಮಳೆನೀರು ಜಿನುಗಿದಾಗ ಸುಣ್ಣದ ಅಂಶಗಳೂ ನೀರಾಗಿ ತಳಕ್ಕಿಳಿದು ನೆಲದಾಳದಲ್ಲಿ ಟೊಳ್ಳುಗಳಾಗುತ್ತವೆ. ಅಂಥ ಟೊಳ್ಳುಗಳಿದ್ದಲ್ಲಿ ಶಿಲಾಸ್ತರಗಳು ಹೊಂದಾಣಿಕೆಗೆಂದು ಅತ್ತಿತ್ತ ಸರಿಯುವುದು ಸಹಜ. ಅಲ್ಲಿನ ಜನರ ಆತಂಕವನ್ನು ಇಮ್ಮಡಿಗೊಳಿಸುವ ಸಂಗತಿ ಏನೆಂದರೆ ಉತ್ತರ ಕರ್ನಾಟಕದ ಹಿಂದುಳಿದ ಪ್ರದೇಶಗಳಲ್ಲಿ ಬಡಜನರು ಪಾಟಿಕಲ್ಲುಗಳನ್ನೇ ಪೇರಿಸಿ ಸೂರಿಗೆ ಸಡಿಲವಾಗಿ ಹಾಸಿಕೊಂಡಿರುತ್ತಾರೆ. ಹೀಗೆ ನೆಲದ ಕಂಪನಕ್ಕೆ ತಲೆಯ ಮೇಲಿನ ಅಭದ್ರತೆಯೂ ಕೈಜೋಡಿಸಿದರೆ ಏನಾದೀತೆಂದು 1993ರ ಲಾತೂರಿನ ಭೂಕಂಪನದ ಸಂದರ್ಭದಲ್ಲಿ ನಮಗೆ ಗೊತ್ತಿದೆ. ಆದರೂ ಭೂಕಂಪನದ ಬಗ್ಗೆ ಜನರಿಗೆ ಮುನ್ನೆಚ್ಚರಿಕೆ ಕೊಡುವುದಾದರೆ ತೀರ ಹುಷಾರಾಗಿ ಹೆಜ್ಜೆ ಇಡಬೇಕಾಗುತ್ತದೆ. ಏಕೆಂದರೆ ಸುಂಟರಗಾಳಿ ಮತ್ತು ಜಡಿಮಳೆಯ ಮುನ್ಸೂಚನೆ ನೀಡುವಷ್ಟು ಕರಾರುವಾಕ್ಕಾಗಿ ಭೂಕಂಪನ ಅಥವಾ ಭೂಕುಸಿತದ ಮುನ್ಸೂಚನೆ ಸಾಧ್ಯವಿಲ್ಲ. ಭೂಕಂಪನ ಎಲ್ಲಿ ಸಂಭವಿಸುತ್ತದೆ, ಯಾವಾಗ ಸಂಭವಿಸುತ್ತದೆ ಎಂದು ಕೂಡ ಗೊತ್ತಾಗುವುದಿಲ್ಲ. ನಮ್ಮಲ್ಲಷ್ಟೇ ಅಲ್ಲ, ಯಾವ ದೇಶದಲ್ಲೂ ತಂತ್ರಜ್ಞಾನ ಅಷ್ಟು ನಿಖರವಾಗಿಲ್ಲ. ಆದರೂ ಅಂಥ ಅಪಕ್ವ ತಂತ್ರಗಳನ್ನು ಆಧರಿಸಿ ತಪ್ಪು ಮುನ್ನೆಚ್ಚರಿಕೆ ಕೊಟ್ಟು ಊರಿಗೆ ಊರನ್ನೇ ವೃಥಾ ಖಾಲಿ ಮಾಡಿಸಿದ ಉದಾಹರಣೆಗಳು ಬೇಕಾದಷ್ಟಿವೆ. ಅಂಥದ್ದು ಇಲ್ಲಿ ಆಗಬಾರದು.

ಇಂದು (ಅಕ್ಟೋಬರ್ 13) 'ದುರಂತಗಳ ತೀವ್ರತೆಯನ್ನು ಕಡಿಮೆ ಮಾಡುವ ಅಂತರರಾಷ್ಟ್ರೀಯ ದಿನ'. ಜಗತ್ತಿನ ಎಲ್ಲೆಡೆ ಈಚಿನ ವರ್ಷಗಳಲ್ಲಿ ನೈಸರ್ಗಿಕ ವಿಕೋಪಗಳ ತೀವ್ರತೆ ಹೆಚ್ಚುತ್ತಿದೆ. ಹಿಂದೆಲ್ಲ ಅಪರೂಪಕ್ಕೆ ಸಂಭವಿಸುತ್ತಿದ್ದ ಮಹಾಮಳೆ, ಬರಪೀಡೆ, ಭೂಕುಸಿತ, ಹಿಮಕುಸಿತ, ಚಂಡಮಾರುತದಂಥ ಘಟನೆಗಳು ಈಗೀಗ ಪದೇ ಪದೇ ಹೆಚ್ಚುತ್ತಿವೆ. ಹಿಂದುಳಿದ ಪ್ರದೇಶಗಳ ಜನರೇ ಅವಕ್ಕೆ ಹೆಚ್ಚುಹೆಚ್ಚಾಗಿ ಬಲಿಯಾಗುತ್ತಿದ್ದು ಅವುಗಳಿಂದ ರಕ್ಷಣೆ ಮಾಡಿಕೊಳ್ಳುವ ವಿಚಾರದಲ್ಲಿ ಜನಜಾಗೃತಿ ಮೂಡಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾದ ದಿನ ಇದು. ಯಾವ ಬಗೆಯ ಸಂಕಟಗಳು ಹೇಗೆ ಎದುರಾಗುತ್ತವೆ ಎಂಬುದನ್ನು ಜನರಿಗೆ ಸ್ಪಷ್ಟವಾಗಿ, ಸರಳವಾಗಿ ತಿಳಿಸಿ ಹೇಳಿದರೆ ಅವರು ತಂತಮ್ಮ ಮುಂಜಾಗ್ರತಾ ಕ್ರಮಗಳನ್ನು ತಾವೇ ಕೈಗೊಳ್ಳುತ್ತಾರೆ. ಅಷ್ಟರಮಟ್ಟಿಗೆ ಸಂಕಟ ನಿವಾರಣಾ ಕ್ರಮಗಳನ್ನು ಕೈಗೊಳ್ಳಬೇಕಾದ ಸರ್ಕಾರಿ ಹೊಣೆಗಾರಿಕೆಯೂ ಕಡಿಮೆಯಾಗುತ್ತದೆ. ಉದಾಹರಣೆಗೆ, ರಿಕ್ಟರ್ ಮಾಪಕದಲ್ಲಿ ಎಂಟರಷ್ಟು ತೀವ್ರ ಭೂಕಂಪನವಾದರೂ ನಿರಾತಂಕ ವಾಸಿಸಬಹುದಾದ ಮನೆಗಳನ್ನು ಕಟ್ಟುವಂಥ ಜಪಾನೀ ತಂತ್ರಜ್ಞಾನ ಈಗ ನಮ್ಮಲ್ಲೂ ಲಭ್ಯವಿದೆ. ಉತ್ತರ ಕರ್ನಾಟಕದಲ್ಲಿ ಹೇರಳ ಸಿಗುವ ಹತ್ತಿಕಟ್ಟಿಗೆ, ಜೋಳದಕಡ್ಡಿ, ತೊಗರಿ ಕಡ್ಡಿಗಳಂಥ ಕೃಷಿತ್ಯಾಜ್ಯಗಳಿಂದಲೇ ಗಟ್ಟಿಮುಟ್ಟಾದ ಹಲಗೆಗಳನ್ನು ತಯಾರಿಸಿ, ಸ್ಥಳೀಯರಿಗೆ ಉದ್ಯೋಗಾವಕಾಶವನ್ನೂ ಕಲ್ಪಿಸಿ, ಅಲ್ಪವೆಚ್ಚದ ಗೋಡೆ ಸೂರುಗಳನ್ನು ತಯಾರಿಸಬಹುದಾದ ಮಾದರಿಗಳನ್ನು ನಮ್ಮಲ್ಲೂ ಸಾಕ್ಷಾತ್ಕರಿಸಬಹುದು. ಭೂಕಂಪನದ ಸಂಭವನೀಯತೆ ವರ್ಷವರ್ಷಕ್ಕೆ ಹೆಚ್ಚುತ್ತಿರುವಾಗ ಅಂಥ ಸಂಕಟ ಪರಿಹಾರಕ್ಕೆ ಭೂವಿಜ್ಞಾನಿಗಳಲ್ಲ, ಎಂಜಿನಿಯರ್‌ಗಳ ಮತ್ತು ವಾಸ್ತುಶಿಲ್ಪಿಗಳ ಅಗತ್ಯವಿದೆ. ಎಲ್ಲಕ್ಕೂ ಮುಖ್ಯವಾಗಿ ಜನಸಾಮಾನ್ಯರ ಆತಂಕಗಳನ್ನು ನಿವಾರಿಸಬೇಕೆಂಬ ತುಡಿತ ಜನಪ್ರತಿನಿಧಿಗಳಲ್ಲಿ ಮೂಡಬೇಕಾಗಿದೆ. ಇದುವರೆಗೆ ಸಂಭವಿಸಿದ್ದೆಲ್ಲ ಲಘು ಭೂಕಂಪನವೆಂದ ಮಾತ್ರಕ್ಕೆ ಯಾರೂ ಲಘುವಾಗಿ ಪರಿಗಣಿಸುವ ವಿಷಯ ಇದಲ್ಲ.

ದಿನದ ಟ್ವೀಟ್



ಬಿಸಿಸಿಐ ಪರಿಗಣಿಸಲಿ

ಭಾರತೀಯ ಅಂಧರ ಕ್ರಿಕೆಟ್ ಸಂಸ್ಥೆ (ಸಿಎಬಿಐ) ಅದ್ಭುತವಾಗಿ ಕೆಲಸ ಮಾಡುತ್ತಿದೆ. ಸಂಸ್ಥೆಯನ್ನು ಬಿಸಿಸಿಐ ವ್ಯಾಪ್ತಿಗೆ ಒಳಪಡಿಸಿದರೆ ಅದರ ಆಟಗಾರರು ನಿಶ್ಚಿತ ವೇತನ ಮತ್ತು ಇತರ ಹಣಕಾಸು ಸೌಲಭ್ಯಗಳನ್ನು ಪಡೆಯಲು ಅರ್ಹರಾಗುತ್ತಾರೆ. ಇದು, ಆರ್ಥಿಕವಾಗಿ ಸದೃಢವಾಗಿರುವ ಬಿಸಿಸಿಐಗೆ ಯಾವುದೇ ಆರ್ಥಿಕ ಒತ್ತಡವನ್ನೂ ಉಂಟುಮಾಡುವುದಿಲ್ಲ.

ಅಚಲ್ ಶಾ, ನಾಗರಿಕ

ಕಿಡಿನುಡಿ



ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಈ ಋತುವಿನಲ್ಲಿ ಅಮೋಘವಾಗಿ ಆಡಿದೆ. ಅಲ್ಪ ಅಂತರದಿಂದ ಸೋತು ಹೊರ ಬೀಳುತ್ತೇವೆ ಎಂದು ಅಂದುಕೊಂಡಿರಲಿಲ್ಲ. ಆದರೆ ಈ ಸೋಲಿನಿಂದಾಗಿ ಸಾಮಾಜಿಕ ಜಾಲತಾಣದಲ್ಲಿ 'ಕಸ' ತುಂಬಿಕೊಳ್ಳುತ್ತಿದೆ. ಇದು ಜುಗುಪ್ಸೆ ಮೂಡಿಸಿದೆ. ಪ್ರತಿದಿನ ಅತ್ಯುತ್ತಮವಾಗಿ ಆಡಲು ಪ್ರಯತ್ನಿಸುತ್ತೇವೆ. ಆದರೆ ನಾವೂ ಮನುಷ್ಯರಲ್ಲವೇ? ಈ ರೀತಿ ಕೊಳಕು ಹರಡುವ ಬದಲು ಸಭ್ಯ ವ್ಯಕ್ತಿಗಳಾಗಲು ಪ್ರಯತ್ನಿಸಿ.

(ಐಪಿಎಲ್‌ನಲ್ಲಿ ಸೋಲಿನ ನಂತರ ಬಂದ ಹೀಯಾಳಿಕೆಗಳಿಗೆ ಪ್ರತಿಕ್ರಿಯೆ)

ಗ್ಲೆನ್ ಮ್ಯಾಕ್ಸ್‌ವೆಲ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ಕ್ರಿಕೆಟ್ ತಂಡದ ಆಟಗಾರ

25 ವರ್ಷಗಳ ಹಿಂದೆ

ಭಾನುವಾರ, 13-10-1996

● **ನ್ಯಾಯಾಂಗದ ಅತಿಕ್ರಮಣಕ್ಕೆ ಕಳವಳ**

ನವದೆಹಲಿ, ಅ. 12 (ಯುಎನ್ಐ, ಪಿಟಿಐ)– ನ್ಯಾಯಾಂಗವು ಶಾಸಕಾಂಗ ಮತ್ತು ಕಾರ್ಯಾಂಗದ ಹಕ್ಕುಗಳನ್ನು ಅತಿಕ್ರಮಿಸುತ್ತಿರುವ ಕುರಿತು ಅಧಿಕಾರಿಗಳು, ಸಂಸತ್ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಕರ್ತವ್ಯದಲ್ಲಿನ ತಮ್ಮ ವೈಫಲ್ಯವನ್ನು ಒಪ್ಪಿಕೊಂಡಿದ್ದಾರೆ.

ಇಲ್ಲಿ ನಡೆದ ವಿಚಾರಸಂಕಿರಣದಲ್ಲಿ ಮಾತನಾಡಿದ ಲೋಕಸಭಾ ಅಧ್ಯಕ್ಷ ಪಿ.ಎ. ಸಂಗ್ಮಾ ಅವರು, ಇತ್ತೀಚಿನ ದಿನಗಳಲ್ಲಿ ನ್ಯಾಯಾಂಗವು ಕಾರ್ಯಾಂಗದ ಕೆಲಸಗಳನ್ನು ವಹಿಸಿಕೊಂಡಿರುವುದಕ್ಕೆ ಕಳವಳ ವ್ಯಕ್ತಪಡಿಸಿದರು.

● **ಕಾಂಗ್ರೆಸ್– ಸಂಯುಕ್ತ ರಂಗಕ್ಕೆ ಕಾನ್ಷಿರಾಂ ಅಂತಿಮ ಗಡುವು**

ನವದೆಹಲಿ, ಅ. 12 (ಪಿಟಿಐ)– ಮಾಯಾವತಿ ಮುಖ್ಯಮಂತ್ರಿಯಾಗಲು ಸಂಯುಕ್ತರಂಗವು ಭಾನುವಾರದೊಳಗೆ ಬೇಷರತ್ ಬೆಂಬಲ ಪ್ರಕಟಿಸಬೇಕು. ರಂಗವು ಇದಕ್ಕೆ ಒಪ್ಪದಿದ್ದಲ್ಲಿ ಕೇಂದ್ರ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ಕಾಂಗ್ರೆಸ್ ಹಿಂತೆಗೆದುಕೊಳ್ಳಬೇಕು ಎಂದು ಬಿಎಸ್‌ಪಿ ನಾಯಕ ಕಾನ್ಷಿರಾಂ ಅವರು ಗಡುವು ನೀಡುವುದರೊಂದಿಗೆ ಉತ್ತರ ಪ್ರದೇಶದಲ್ಲಿ ಸರ್ಕಾರ ರಚನೆ ಪ್ರಕ್ರಿಯೆ ಇನ್ನಷ್ಟು ಗೊಂದಲಕ್ಕೀಡಾಗಿದೆ.

50 ವರ್ಷಗಳ ಹಿಂದೆ

ಬುಧವಾರ, 13-10-1971

● **ಆದಾಯ ತೆರಿಗೆಗೆ ಕೃಷಿ ವರಮಾನ ಸೇರಿಸಲು ರಾಜ್ಯಗಳ ವಿರೋಧ**

ನವದೆಹಲಿ, ಅ. 12– ಆದಾಯ ತೆರಿಗೆಯೊಡನೆ ಕೃಷಿ ಆದಾಯದ ತೆರಿಗೆಯನ್ನು ವಿಲೀನಗೊಳಿಸಿದರೆ ರಾಜ್ಯಗಳ ಆದಾಯದ ಸಂಪನ್ಮೂಲಗಳು ಕುಗ್ಗುವುದರ ಜೊತೆಗೆ ಅಂತಹ ಕ್ರಮವು ತಮ್ಮ ಸ್ವಾಯತ್ತತೆಯನ್ನು ಅತಿಕ್ರಮಿಸುವುದರಿಂದ ಆ ಸಂಬಂಧದ ಕೇಂದ್ರದ ಸಲಹೆಯನ್ನು ಇಂದು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ವಿರೋಧಿಸಿದರು.

ಕೇಂದ್ರ ಹಣಕಾಸು ಸಚಿವ ಶ್ರೀ ಚವಾಣರು ಕರೆದಿದ್ದ ತಮ್ಮ ಒಂದು ದಿನದ ಸಮ್ಮೇಳನದಲ್ಲಿ ಮುಖ್ಯಮಂತ್ರಿಗಳು ಮಾತನಾಡಿ, ಕೃಷಿ ಆದಾಯ ತೆರಿಗೆ ವಿಧಿಸುವ ತತ್ವವನ್ನು ಬಹುಮಟ್ಟಿಗೆ ಒಪ್ಪಿದರೂ ಅದರ ಅಧಿಕಾರವನ್ನು ರಾಜ್ಯಗಳಿಗೆ ಬಿಡುವಂತೆ ಅಪೇಕ್ಷೆ ವ್ಯಕ್ತಪಡಿಸಿದರೆಂದು ಗೊತ್ತಾಗಿದೆ.

ಔದ್ಯೋಗಿಕ ಕ್ಷೇತ್ರ ಪ್ರವೇಶಿಸುವ ಹೆಣ್ಣುಮಕ್ಕಳಿಗೆ ಪೂರಕವಾಗಿರುವ ನೀತಿಗಳು ನಮ್ಮಲ್ಲಿವೆಯೇ?

ಗಂಡಾಳಿಕೆಯ ನಿಂದನಾ 'ಸಂಸ್ಕೃತಿ'



ವಿಶ್ಲೇಷಣೆ

ಸಿ.ಜಿ. ಮಂಜುಳಾ

ಎಲ್ಲಾ 'ತಪ್ಪು'ಗಳಿಗೂ ಮಹಿಳೆಯನ್ನು ದೂಷಿಸುವುದು ನಮ್ಮ ಸಂಸ್ಕೃತಿಯಲ್ಲಿ ರಕ್ತಗತ. 'ನೂಲಿನಂತೆ ಸೀರೆ, ತಾಯಿಯಂತೆ ಮಗಳು' ಎಂಬ ಗಾದೆಯನ್ನೇ ಮಾಡಿದ್ದಾರಲ್ಲ?! ಬೇರೆ ಬೇರೆ ಸಂದರ್ಭಗಳಲ್ಲಿ ನಿಂದನೆ, ದೂಷಣೆ, ನಿರ್ಲಕ್ಷ್ಯಗಳಂತಹ ಭಾವನಾತ್ಮಕ ದೌರ್ಜನ್ಯಗಳ ಮೂಲಕ ಹೆಣ್ಣನ್ನು ಪಕ್ಕಕ್ಕೆ ತಳ್ಳಿ ಆಕೆಯ ನೈತಿಕ ಸ್ಥೈರ್ಯ ಕಸಿಯುವ 'ರಾಜಕೀಯ'ವನ್ನು ನಮ್ಮ ಸಮಾಜ ಮತ್ತು ಸಂಸ್ಕೃತಿ ಎಷ್ಟು ಕಾಲದಿಂದ ನಡೆಸಿಕೊಂಡು ಬಂದಿಲ್ಲ?

ಹೆಣ್ಣನ್ನು ಮೂಲೆಗೆ ತಳ್ಳುವಂತಹ ನಿಂದನಾತ್ಮಕ ಭಾಷೆ, ಮಾತುಗಳಿಂದ ಕೂಡಿದ ಭಾವನಾತ್ಮಕ ದೌರ್ಜನ್ಯಗಳು ಮನೆಮನೆಗಳ ಕಥೆಗಳಲ್ಲಿವೆ. ಈ 'ಭಾಷಾ ದೌರ್ಜನ್ಯ' ಸಮಾಜದಲ್ಲೂ ಪ್ರತಿಫಲಿಸುತ್ತಲೇ ಇರುತ್ತದೆ. ಆದರೆ ಪುರುಷ ಮತ್ತು ಮಹಿಳೆಗೆ ಸಮಾನತೆ ನೀಡುವಂತಹ ಸಂವಿಧಾನದ ಆದರ್ಶವನ್ನು ಜಾರಿಗೊಳಿಸಬೇಕಾದ ಹೊಣೆಗಾರಿಕೆ ಇರುವ ನಮ್ಮ ರಾಜಕೀಯ ನಾಯಕರೂ ಇಂತಹ ಭಾಷಾ ದೌರ್ಜನ್ಯದ ರಾಜಕೀಯ ಮಾಡುತ್ತಿರುವುದು ಅಸಹನೀಯ.

ರಾಜಕೀಯ ಕುತಂತ್ರಗಾರಿಕೆಯೋ ಅಥವಾ ಹೆಣ್ಣನ್ನು ಅಧಿಕಾರ ಸ್ಥಾನಗಳಲ್ಲಿ ನೋಡಲು ಬಯಸದ ಗಂಡಾಳಿಕೆಯ ದರ್ಪವೋ ಕೀಳಾದ ಭಾಷಾ ಬಳಕೆಯ ಮೂಲಕ ಆಕೆಯನ್ನು ನಿಯಂತ್ರಿಸುವ ಯತ್ನಗಳು ನಡೆಯುತ್ತಲೇ ಇರುತ್ತವೆ. ತೀರಾ ಇತ್ತೀಚಿನ ಉದಾಹರಣೆ, ಬೆಳಗಾವಿ ಗ್ರಾಮೀಣ ಕ್ಷೇತ್ರದ ಶಾಸಕಿ, ಕಾಂಗ್ರೆಸ್ಸಿನ ಲಕ್ಷ್ಮಿ ಹೆಬ್ಬಾಳ್ಕರ ಅವರ ವಿರುದ್ಧ ಬಿಜೆಪಿ ಬೆಳಗಾವಿ ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಸಂಜಯ ಪಾಟೀಲ ಅವರು ಆಡಿದ ಮಾತುಗಳು. ಲಕ್ಷ್ಮಿ ಅವರಿಗೆ 'ರಾತ್ರಿ ರಾಜಕೀಯ' ಚೆನ್ನಾಗಿ ಗೊತ್ತು ಎಂಬ ಈ ರಾಜಕಾರಣಿಯ ಹೇಳಿಕೆಗೆ ಸಂಬಂಧಿಸಿದಂತೆ ರಾಜ್ಯ ಮಹಿಳಾ ಆಯೋಗಕ್ಕೆ ದೂರು ಸಲ್ಲಿಸಲಾಗಿದೆ.

ರಾಷ್ಟ್ರಮಟ್ಟದ ನಾಯಕಿಯರೂ ಇಂತಹ ಮಾತುಗಳನ್ನು ಕೇಳಿಸಿಕೊಳ್ಳಬೇಕಾದಂತಹ ಕೆಟ್ಟ ಸಂಸ್ಕೃತಿ ಇಲ್ಲಿದೆ. 'ಪ್ರಜಾಸತ್ತೆಯ ಮಂದಿರ' ಎಂದು ಬಣ್ಣಿಸಲಾಗುವ ಸಂಸತ್ತಿನ ಒಳಗೂ ಹೆಣ್ಣಿನ ಕುರಿತಾದ ಕೀಳು ಭಾಷಾ ಬಳಕೆ ನಿಲ್ಲಿಸಲಾಗಿಲ್ಲ ಎಂದರೆ ನಮ್ಮ 'ಸಂಸ್ಕೃತಿ' ಎಷ್ಟು ಆಳವಾಗಿದೆಯಲ್ಲವೇ?

2015ರ ಆಗಸ್ಟ್‌ನಲ್ಲಿ ಬಿಜೆಪಿ ಸಂಸತ್ ಸದಸ್ಯ ರಮೇಶ್ ಬಿಧುರಿ ಅವರ ವಿರುದ್ಧ ನಾಲ್ವರು ಮಹಿಳಾ ಎಂ.ಪಿಗಳು ಲೋಕಸಭೆಯ ಆಗಿನ ಅಧ್ಯಕ್ಷೆ ಸುಮಿತ್ರಾ ಮಹಾಜನ್ ಅವರಿಗೆ ದೂರು ನೀಡಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಏಕಾಂಗಿ ಮಹಿಳೆಯರಿಗೆ ಸೌಲಭ್ಯಗಳನ್ನು ಕಲ್ಪಿಸಬೇಕಾದ ಅಗತ್ಯದ ಬಗ್ಗೆ ಬಜೆಟ್ ಭಾಷಣದ ಚರ್ಚೆಯ ವೇಳೆ ಬಿಹಾರದ ಕಾಂಗ್ರೆಸ್ ಎಂ.ಪಿಯಾಗಿದ್ದ ರಂಜೀತ್ ರಂಜನ್ ಮಾತನಾಡಿದ್ದರು. ಆಗ, 'ಮೊದಲು ನಿಮ್ಮ ಪತಿಗೆ ವಿಚ್ಛೇದನ ನೀಡಿ. ಆಗ ನಿಮಗೆ ಇಂತಹ ಸೌಲಭ್ಯಗಳನ್ನು ನೀಡಬಹುದು' ಎಂದು ನನ್ನೆಡೆ ತಿರುಗಿ ರಮೇಶ್ ಹೇಳಿದ್ದ ಮಾತನ್ನು ನಿರ್ಲಕ್ಷಿಸಿದ್ದೆ. ಆದರೆ ಕೆಟ್ಟ ಮಾತುಗಳಿಗೆ ತಡೆಯೇ ಬೀಳುತ್ತಿರಲಿಲ್ಲವಾದ್ದರಿಂದ ಸ್ಪೀಕರ್‌ಗೆ ಅಧಿಕೃತವಾಗಿ ದೂರು ನೀಡಬೇಕಾಯಿತು' ಎಂದು ರಂಜೀತ್ ಹೇಳಿಕೊಂಡಿದ್ದರು. ಆದರೆ ಈ ಆರೋಪವನ್ನು ನಿರಾಕರಿಸಿದ್ದ ರಮೇಶ್, ಸ್ಪೀಕರ್ ಅವರು ತಮ್ಮ ಜೊತೆ ಈ ದೂರಿನ ವಿಚಾರವನ್ನೇನೂ ಪ್ರಸ್ತಾಪಿಸಿಲ್ಲ ಎಂದು ಮಾಧ್ಯಮಗಳಿಗೆ ಹೇಳಿಕೊಂಡಿದ್ದೂ ಆಗಿತ್ತು.

ಇಂತಹ ಅನೇಕ ಪ್ರಸಂಗಗಳ ನಂತರವೂ ಮಹಿಳಾ ರಾಜಕಾರಣಿಗಳ ಕುರಿತಾಗಿ ವೈಯಕ್ತಿಕ ನಿಂದನೆಗಳು, ಟೀಕಾ ಪ್ರಹಾರಗಳು ಮಾತ್ರ ನಿಲ್ಲುತ್ತಿಲ್ಲ ಎಂಬುದಷ್ಟೇ ಕಡೆಗುಳಿದಿರುವ ವಾಸ್ತವಿಕ ಸತ್ಯವಾಗುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಾಕ್ಸಮರ, ವಾಗ್ಯುದ್ಧ, ಭಿನ್ನಾಭಿಪ್ರಾಯಗಳು ಪ್ರಜಾಪ್ರಭುತ್ವದ ಚೈತನ್ಯಕ್ಕೆ ಪ್ರತೀಕವಾಗಿರಬೇಕು. ಆದರೆ, ವೈಯಕ್ತಿಕ ನಿಂದನೆಗಳು, ಕೀಳು ಭಾಷಾ ಪ್ರಯೋಗಗಳ ಹಿಂದೆ ಪ್ರಜಾಪ್ರಭುತ್ವದ ಭಿನ್ನ ಭಿನ್ನ ಧ್ವನಿಗಳನ್ನು ಹತ್ತಿಕ್ಕುವ ಹುನ್ನಾರಗಳಿರುತ್ತವೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು.

ದರ್ಪದ ರಾಜಕಾರಣವು ಪ್ರಜಾಪ್ರಭುತ್ವದ ಆಶಯವನ್ನೇ ಮೂಲೆಗುಂಪಾಗಿಸುತ್ತದೆ. ಹೀಗಾಗಿಯೇ ಭಾರತದಂತಹ ದೊಡ್ಡ ಪ್ರಜಾಪ್ರಭುತ್ವದಲ್ಲಿ ಮಹಿಳೆಯರ ಪ್ರಾತಿನಿಧ್ಯ ಲೋಕಸಭೆಯಲ್ಲಿ ಇನ್ನೂ ಶೇ 14ರ ಆಸುಪಾಸಿನಲ್ಲೇ ಇದೆ. ರಾಜ್ಯ ವಿಧಾನಸಭೆಯಲ್ಲಿ ಇದು ಕೇವಲ ಶೇ 3. ಹಿಂಸೆ, ಕಿರುಕುಳ, ಚಾರಿತ್ರ್ಯಹರಣದ ಮಾತುಗಳನ್ನು ಎದುರಿಸಬೇಕಾಗುತ್ತದೆ ಎಂಬ ಅಂಶಗಳೇ ಭಾರತದಲ್ಲಿ ಮಹಿಳೆಯರ ರಾಜಕೀಯ ಪ್ರವೇಶಕ್ಕೆ ಅಡ್ಡಿಯಾಗುತ್ತಿವೆ ಎಂಬುದನ್ನು 2014ರಲ್ಲಿ ನಡೆಸಲಾದ 'ಯುಎನ್ ವಿಮೆನ್' ಅಧ್ಯಯನ ವರದಿ ಹೇಳಿತ್ತು.

ರಾಜಕೀಯ ಕ್ಷೇತ್ರದಲ್ಲಿರುವ ಮಹಿಳೆಯರ ಕುರಿತಾಗಿ ಚಾರಿತ್ರ್ಯಹರಣ ಮಾಡುವಂತಹ ಅಸಭ್ಯ ಹಾಗೂ ನಿಂದನಾತ್ಮಕ ಮಾತುಗಳನ್ನು ಅಪರಾಧವಾಗಿ ಗುರುತಿಸಿ ಅದರ ವಿರುದ್ಧ ಕಾನೂನು ಮಾಡಬಹುದಾದ ಅಧಿಕಾರ ಹೊಂದಿರುವ ನಮ್ಮ ಜನಪ್ರತಿನಿಧಿಗಳಿಂದ ನಾವು ಏನನ್ನಾದರೂ ನಿರೀಕ್ಷಿಸಬಹುದೇ? ಯಥಾಪ್ರಕಾರ, ರಾಜ್ಯದ ಆರೋಗ್ಯ ಸಚಿವರೂ ನಮ್ಮ ಗಂಡಾಳಿಕೆಯ ಸಂಸ್ಕೃತಿಗೆ ಅನುಗುಣವಾಗಿ ಮಹಿಳೆಯರನ್ನೇ ಮೊನ್ನೆ ದೂರಿದ್ದಾರೆ. ವಿವಾಹ ಬಯಸದ, ವಿವಾಹ ಮಾಡಿಕೊಂಡರೂ ಮಕ್ಕಳನ್ನು ಹೆರಲು ಬಯಸದ ಆಧುನಿಕ ಭಾರತೀಯ ಮಹಿಳೆಯ ಬಗ್ಗೆ ನಮ್ಮ ಸಚಿವರು ವ್ಯಕ್ತಪಡಿಸಿರುವ ಬೇಸರದ ಹಿಂದಿರುವ ಮೌಲ್ಯ, ಸಿದ್ಧಾಂತಗಳು ಏನೆಂಬುದಕ್ಕೆ ಹೆಚ್ಚಿನ ವಿವರಣೆ ಬೇಕಿಲ್ಲ. ಮಹಿಳೆಯರಲ್ಲಿ ಈ ಪಲ್ಲಟಗಳಿಗೆ 'ಪಾಶ್ಚಿಮಾತ್ಯ ಸಂಸ್ಕೃತಿ'ಯ ಪ್ರಭಾವವೇ ಕಾರಣ ಎಂದು ತಾವು ಪ್ರತಿನಿಧಿಸುವ ಪಕ್ಷದ ತಥಾಕಥಿತ ಚಿಂತನೆಯನ್ನೇ ನಿರೂಪಿಸಿದ್ದಾರೆ. ಮಕ್ಕಳನ್ನು ಹೆರುವುದು, ಬಿಡುವುದು ಮಹಿಳೆಯ ವೈಯಕ್ತಿಕ ಆಯ್ಕೆ. ಅದನ್ನು ರಾಜಕೀಯ ಸಿದ್ಧಾಂತದ ರೀತಿ ಹೇರಲು ಬಯಸುವುದು ಎಷ್ಟು ಸರಿ?



ಸಚಿವರ ಮಾತುಗಳ ಬಗ್ಗೆ ತೀವ್ರ ಆಕ್ರೋಶ ವ್ಯಕ್ತವಾದ್ದರಿಂದ, ತಮ್ಮ ಹೇಳಿಕೆಯು ಸಮೀಕ್ಷೆಯೊಂದನ್ನು ಆಧರಿಸಿತ್ತು ಎಂದು ಸಮಜಾಯಿಷಿ ನೀಡಿದ್ದಾರೆ. ಆದರೆ ಆ ಸಮೀಕ್ಷೆಯು ಹುಡುಗ, ಹುಡುಗಿಯರಿಬ್ಬರಿಗೂ ಅನ್ವಯಿಸುವಂತಹದ್ದಾಗಿತ್ತು ಎಂಬುದನ್ನು ಸ್ಪಷ್ಟನೆಯಲ್ಲಿ ಹೇಳಿರುವ ಸಚಿವರು, ತಮ್ಮ ಭಾಷಣದಲ್ಲಿ 'ಆಧುನಿಕ ಮಹಿಳೆ' ಎಂದೇಕೆ ಪ್ರತ್ಯೇಕಗೊಳಿಸಿದರು? ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ನಮ್ಮ ಸಾಂಪ್ರದಾಯಿಕ ಕುಟುಂಬ ಹಾಗೂ ಅದರ ಮೌಲ್ಯ ವ್ಯವಸ್ಥೆಯಲ್ಲಿ ನಮ್ಮ ಯುವಜನರು ಪರಿಹಾರ ಕಂಡುಕೊಳ್ಳಬಹುದು ಎಂದಷ್ಟೇ ನಾನು ಹೇಳಲು ಬಯಸಿದ್ದೆ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಕುಟುಂಬ ವ್ಯವಸ್ಥೆಯೊಳಗೆ ಅನುಭವಿಸುವ ಹಿಂಸೆ, ಎರಡನೇ ದರ್ಜೆ ಸ್ಥಾನಮಾನಗಳೂ ಮಹಿಳೆಯರ ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಮೂಲ ಕಾರಣಗಳಾಗಿವೆ ಎಂಬುದೂ ಸಚಿವರ ಗಮನದಲ್ಲಿರಬೇಕಿತ್ತು, ಎಲ್ಲವನ್ನೂ ಸಾಮಾನ್ಯೀಕರಿಸಿ, ಕುಟುಂಬ ಎಂದಾಕ್ಷಣ ಮಹಿಳೆಯನ್ನೇ ಮುಖ್ಯವಾಗಿಸಿ ಮಾತನಾಡುವುದು ಎಷ್ಟು ಸರಿ? ಕುಟುಂಬ ವ್ಯವಸ್ಥೆಯಲ್ಲಿ ಗಂಡು- ಹೆಣ್ಣು ಸಮಾನ ಸಹಜೀವಿಗಳು ಎಂಬ ಆದರ್ಶವನ್ನು ನಮ್ಮ ಸರ್ಕಾರದ ನೀತಿಗಳು ಬಿತ್ತುವಂತಾಗಬೇಕು.

ಬದಲಾಗುತ್ತಿರುವ ಸಮಾಜದಲ್ಲಿ ಗಂಡಾಳಿಕೆಯ ಮೌಲ್ಯಗಳಿಗೆ ಜೋತುಬೀಳದಂತೆ ನಮ್ಮ ಗಂಡು ಮಕ್ಕಳಲ್ಲಿ ಸಂವೇದನಾಶೀಲತೆ ಮೂಡಿಸಲು ನಮ್ಮ ಆಡಳಿತ ನೀತಿಗಳು ಎಷ್ಟರಮಟ್ಟಿಗೆ ಶ್ರಮಿಸುತ್ತಿವೆ? ಮದುವೆಯಾದ ನಂತರ ಹೆಣ್ಣುಮಕ್ಕಳೇ ಏಕೆ ಕೆಲಸ ಬಿಡಬೇಕು? ಭಾರತದಲ್ಲಿರುವ ಇಂತಹ ಮನಃಸ್ಥಿತಿಯಿಂದಾಗಿಯೇ ಔದ್ಯೋಗಿಕ ರಂಗದಲ್ಲಿ ಭಾರತೀಯ ಮಹಿಳೆಯರ ಪ್ರಮಾಣ ತೀವ್ರ ಇಳಿಮುಖವಾಗುತ್ತಿದೆ ಎಂಬ ಬಗ್ಗೆ ವಿಶ್ವ ಬ್ಯಾಂಕ್ ವರದಿಗಳು ಪದೇಪದೇ ಎಚ್ಚರಿಸುತ್ತಲೇ ಇವೆ. ಔದ್ಯೋಗಿಕ ರಂಗದಲ್ಲಿ ಮಹಿಳೆಯ ಪಾಲ್ಗೊಳ್ಳುವಿಕೆ ಇಲ್ಲದೆ, ಆರ್ಥಿಕ ದೈತ್ಯಶಕ್ತಿಯಾಗುವ ಮಹತ್ವಾಕಾಂಕ್ಷೆ ಈಡೇರುವುದು ಅಸಾಧ್ಯ ಎಂಬುದನ್ನು ನಮ್ಮ ಸರ್ಕಾರ ಅರಿಯಬೇಕು. ದುಡಿಯುವ ಸ್ಥಳಗಳಲ್ಲಿ ಶಿಶುಪಾಲನಾ ಕೇಂದ್ರಗಳಿರಲಿ, ಸ್ವಚ್ಛ ಶೌಚಾಲಯಗಳೂ ಇಲ್ಲದ ಸ್ಥಿತಿಯ ಬಗ್ಗೆ ನಮ್ಮ ಸರ್ಕಾರಗಳು ಎಷ್ಟರಮಟ್ಟಿಗೆ ಸ್ಪಂದಿಸುತ್ತಿವೆ?

ಕೌಟುಂಬಿಕ ದೌರ್ಜನ್ಯ ಪ್ರಕರಣಗಳು ಕೋವಿಡ್-19 ಕಾಲದಲ್ಲಿ ಹೆಚ್ಚಾದುದನ್ನು ನಮ್ಮ ಆರೋಗ್ಯ ಸಚಿವರು ನೆನಪಿಸಿಕೊಳ್ಳಲಿ. ಕಾನೂನು ನಿಷೇಧ ಇದ್ದರೂ ವರದಕ್ಷಿಣೆಯ ಹಾವಳಿ ತಪ್ಪಿಲ್ಲ ಏಕೆ? ಎಸ್ಎಸ್ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳನ್ನು ಪಡೆದ ಹೆಣ್ಣುಮಕ್ಕಳು ನಂತರ ಉನ್ನತ ಹುದ್ದೆಗಳಿರಲಿ, ಸಾಮಾನ್ಯ ಹುದ್ದೆಗಳಲ್ಲೂ ಇಲ್ಲದೆ ಕಾಣೆಯಾಗಿ ಹೋಗಲು ಕೌಟುಂಬಿಕ ವ್ಯವಸ್ಥೆ ಎಷ್ಟು ಕಾರಣ ಎಂಬುದು ನಮ್ಮ ಜನಪ್ರತಿನಿಧಿಗಳು ಕಾಳಜಿ ವಹಿಸಬೇಕಾಗಿರುವ ತುರ್ತಿನ ವಿಚಾರ.

ಎಲ್ಲ ವಿಚಾರಗಳಿಗೂ ಹೆಣ್ಣನ್ನೇ ದೂಷಿಸಿ, ನಿಂದಿಸಿ, ಆಕೆಯನ್ನು ನಿಯಂತ್ರಿಸುವ ನೀತಿಯನ್ನು ನಮ್ಮ ಪ್ರಭುತ್ವ ಅನುಸರಿಸದಿರಲಿ. ನಮ್ಮದು ಪ್ರಜಾಪ್ರಭುತ್ವ ಎಂಬುದು ನಮ್ಮನ್ನಾಳುವವರಿಗೆ ನೆನಪಿರಲಿ.

ಚುರುಮುರಿ



ಬೈಯ್ಯೋ ಭಾಗ್ಯ

● ಮಣ್ಣೆರಾಜು

'ಇವತ್ತು ಯಾವ ಯಾವ ನಾಯಕರು ಯಾರ್‍ಯಾರನ್ನು ಏನೇನು ಬೈದರು, ಎಷ್ಟೆಷ್ಟು ಬೈದರು ಎಂಬುದನ್ನು ಟಿ.ವಿ., ನ್ಯೂಸ್ ಪೇಪರ್ ವರದಿ ನೋಡಿ ಲೆಕ್ಕ ಹಾಕ್ತಿದ್ದೀನ್ರೀ...' ಎಂದಳು ಸುಮಿ.

'ನೀನು ಗಣಿತದಲ್ಲಿ ವೀಕು, ಎಚ್ಚರಿಕೆಯಿಂದ ಪಕ್ಷಾತೀತವಾಗಿ ಲೆಕ್ಕಹಾಕು. ಅದರಲ್ಲಿ ವೈಯಕ್ತಿಕ, ಸಾಮಾಜಿಕ, ಸಾಂಸ್ಕೃತಿಕ ಬೈಗುಳಗಳೆಷ್ಟು, ಬಳಸಿದ ಕೆಟ್ಟ ಪದ, ಅತಿ ಕೆಟ್ಟ ಪದ, ಸಾಧಾರಣ ಕೆಟ್ಟ ಪದಗಳನ್ನು ಗುರುತಿಸಿ ಪ್ರತ್ಯೇಕವಾಗಿ ಪಟ್ಟಿ ಮಾಡು' ಎಂದು ಶಂಕ್ರಿ ಸಲಹೆ ನೀಡಿದ.

'ಮಾಡ್ತಿದ್ದೀನ್ರೀ, ಬೈಸಿಕೊಂಡ ನಾಯಕರು ತಿರುಗಿಸಿ ಬೈದ ಬೈಗುಳ, ಬಳಸಿದ ಪದ, ಪ್ರಮಾಣವನ್ನೂ ಲಿಸ್ಟ್ ಮಾಡುತ್ತೇನೆ'.

'ಬೈಯ್ಯುವ, ಬೈಸಿಕೊಳ್ಳುವ ರಾಜಕೀಯ ನಾಯಕರ ಸ್ಥಾನ, ಅವರಿಗಿರುವ ಮಾನವನ್ನೂ ಲೆಕ್ಕಹಾಕು'.

'ಹಾಕ್ತೀನಿ. ನಾಯಕರ ಬೈದಾಟದಿಂದ ಪ್ರಜೆಗಳಿಗೆ ಆಗಬಹುದಾದ ಹಾನಿ, ಅನುಕೂಲ, ಬೇಸರ, ಮುಜುಗರ, ಆಕ್ರೋಶದ ಜೊತೆಗೆ, ಬೈಗುಳದಿಂದ ಪ್ರಜೆಗಳ ಪರಿಸ್ಥಿತಿ, ಮನಃಸ್ಥಿತಿ ಯಾವ ರೀತಿ ಬದಲಾಗಬಹುದು ಎಂದು ಅಂದಾಜು ಮಾಡ್ತೀನಿ'.

'ಒಂದು ದಿನಕ್ಕೆ ನಾಯಕರು ಇಷ್ಟು ಬೈದಾಡಿದರೆ, ತಿಂಗಳಿಗೆ, ವರ್ಷಕ್ಕೆ ಅವರ ಒಟ್ಟು ಬೈಗುಳಗಳೆಷ್ಟು, ಐದು ವರ್ಷಕ್ಕೆ ಎಷ್ಟಾಗಬಹುದು ಎಂದು ಕೂಡಿ, ಕಳೆದು, ಗುಣಿಸಿ, ಭಾಗಿಸಿ ನಾಯಕರ ಗಾತ್ರ, ಘನತೆಯನ್ನು ನಿಖರವಾಗಿ ಲೆಕ್ಕ ಹಾಕು. ಈಗ ನಾಯಕರ ಬೈಗುಳಕ್ಕೆ ಬೇಡಿಕೆ ಹೆಚ್ಚಾಗಿದೆ. ಟಿ.ವಿ. ಸೀರಿಯಲ್‌ಗಳಿಗಿಂತ ಬೈಗುಳವೇ ಹೆಚ್ಚು ಮನರಂಜಿಸಿ ಟಿಆರ್‌ಪಿ ಏರಬಹುದು'.

'ಏನೇ ಆಗ್ಲಿರೀ, ಜನನಾಯಕರ ಬೈಯ್ಯುವ, ಬೈಸಿಕೊಳ್ಳುವ ವಿಷಯ ಪ್ರಜೆಗಳಿಗೆ ಮನರಂಜನೆ ಆಗಿಬಿಟ್ಟರೆ, ರಾಜಕೀಯ ವ್ಯವಸ್ಥೆ ನಗೆಪಾಟಲಿಗೀಡಾಗುವುದಿಲ್ಲವೇ?' ಸುಮಿಗೆ ಬೇಸರ.

'ಆಗುವುದಾದರೆ ಆಗಲಿಬಿಡು, ಗೌರವಾಧ್ಯಕ್ಷನಿಗೆ ಗೌರವವಿಲ್ಲ, ಕಾರ್ಯಾಧ್ಯಕ್ಷನಿಗೆ ಕಾರ್ಯ ಇಲ್ಲ ಎನ್ನುವಂತಹ ವ್ಯವಸ್ಥೆಯಲ್ಲಿ ಜನನಾಯಕರ ಬೈಗುಳವೂ ಸಿನಿಮಾ, ಡ್ರಾಮಾದಂತೆ ಜನರಂಜನೆಯಾದರೆ ಆಗಲಿಬಿಡು, ಬೈಗುಳದ ಅಭಿರುಚಿ ಇರುವವರು ಆಸ್ವಾದಿಸಿ ಆನಂದಿಸುತ್ತಾರೆ...' ಎಂದ ಶಂಕ್ರಿ.

ಸಂಗತ

ಬೆಲೆಯೇರಿಕೆ: ಸೊಲ್ಲೆತ್ತದವರ ಕೊಡುಗೆ!

ಬೆಲೆ ಏರಿಕೆ ವಿರುದ್ಧ ದನಿ ಎತ್ತಲು ಹಿಂಜರಿಕೆ ಏಕೆ? ಸಂಕಷ್ಟ ಅನುಭವಿಸುತ್ತಿರುವ ಜನರನ್ನು ಮೌನಕ್ಕೆ ದೂಡಿರುವುದರ ಹಿಂದೆ ಇರುವ ಅಂಶಗಳಾವುವು?

● ಡಾ. ಎಂ.ವೆಂಕಟಸ್ವಾಮಿ

ಬೆಂಗಳೂರಿನ ನಿವಾಸಿಯಾದ ನಾನು, ಆಯುರ್ವೇದ ವೈದ್ಯರನ್ನು ಕಾಣುವ ಸಲುವಾಗಿ ಮೊನ್ನೆ ಬೆಳಿಗ್ಗೆ ಕಾರ್ 'ಸ್ಟಾರ್ಟ್' ಮಾಡಲು ಮುಂದಾದೆ. ಆಗಲಿಲ್ಲ. ಮೆಕ್ಯಾನಿಕ್‌ನನ್ನು ಕರೆತಂದೆ. ಆತ ಪರಿಶೀಲಿಸಿದಾಗ, ಒಳಗೆ ಕೆಲವು ತಂತಿಗಳು ತುಂಡರಿಸಿಹೋಗಿದ್ದುದು ಕಂಡುಬಂತು. ಕೊನೆಗೆ, ಅವನು ಒಂದು ಕಾರ್ ತಂದು ನನ್ನ ಕಾರಿಗೆ ಅದನ್ನು ಸೇರಿಸಿ ಹಗ್ಗ ಕಟ್ಟಿ ಗ್ಯಾರೇಜ್‌ಗೆ ಎಳೆದುಕೊಂಡು ಹೋದ.

ಗೇರ್‌ಬಾಕ್ಸ್ ಮೇಲಿದ್ದ ಕವಚವನ್ನು ತೆಗೆದು ನೋಡಿದರೆ ಇಲಿಗಳ ಕುಟುಂಬವೇ ಅಲ್ಲಿ ವಾಸಿಸುತ್ತಿದ್ದುದು ತಿಳಿಯಿತು. ಈರುಳ್ಳಿ, ತರಕಾರಿ, ಬಿಸ್ಕತ್ತು, ಕಾಗದದ ರಾಶಿಯೇ ಅಲ್ಲಿತ್ತು. ಆದರೆ ಇಲಿಗಳು ಮಾತ್ರ ಜಿಗಿದು ಓಡಿಹೋಗಿದ್ದವು. ಮನುಷ್ಯನಂತೆ ಇಲಿಗಳು ದುರಾಲೋಚನೆಯುಳ್ಳ ಪ್ರಾಣಿಗಳು. ಮನುಷ್ಯ ತನ್ನ ಮುಂದಿನ ಪೀಳಿಗೆಗೆ ಸಂಪನ್ಮೂಲಗಳನ್ನು ಹೇಗೆ ಗುಡ್ಡೆ ಹಾಕಿಕೊಳ್ಳುತ್ತಾನೋ ಅದೇ ರೀತಿ ಇಲಿಗಳೂ ಗುಡ್ಡೆ ಹಾಕಿಕೊಂಡಿದ್ದವು.

ಆತಂಕಗೊಂಡ ನಾನು, 'ಬಿಲ್ ಎಷ್ಟಾಗುತ್ತೆ?' ಎಂದು ಕೇಳಿದೆ. 'ಆರೇಳು ಸಾವಿರ ಆಗಬಹುದು' ಎಂದ. ನಾನು 'ಆಯಿತು ಸ್ವಲ್ಪ ಕಡಿಮೆ ಮಾಡಿಕೊಳ್ಳಿ' ಎಂದೆ. ಮೆಕ್ಯಾನಿಕ್ ನಗುತ್ತಾ, 'ನಿಮಗೆ ಜಾಸ್ತಿ ಮಾಡಲ್ಲ ಬಿಡಿ ಸರ್' ಎಂದ. ಕಂಪನಿ ಶೋರೂಂ ಗ್ಯಾರೇಜ್‌ಗೆ ಹೋಗಿದ್ದರೆ ಎಷ್ಟು ಸಾವಿರ ಬಿಲ್ ಆಗುತ್ತಿತ್ತೋ ಏನೋ ಎಂದು ಒಳಗೊಳಗೇ ಸ್ವಲ್ಪ ಸಮಾಧಾನಗೊಂಡು, 'ರೆಡಿ ಮಾಡಿದ ಮೇಲೆ ಫೋನ್ ಮಾಡಿ' ಎಂದು ಮನೆಗೆ ವಾಪಸಾದೆ.

ಬಳಿಕ, ಆಯುರ್ವೇದ ವೈದ್ಯರಿರುವ ವಾಣಿವಿಲಾಸ ರಸ್ತೆಗೆ ಹೋಗಲು ಓಲಾ ಮತ್ತು ಉಬರ್ ಆ್ಯಪ್ ಓಪನ್ ಮಾಡಿ ಟ್ಯಾಕ್ಸಿ ದರ ಪರಿಶೀಲಿಸಿದೆ. ನಮ್ಮ ಮನೆಯಿಂದ ವೈದ್ಯಾಲಯಕ್ಕೆ 16 ಕಿ.ಮೀ. ದೂರವಿದ್ದು, ಓಲಾ ವಾಹನಗಳಲ್ಲಿ ₹ 552- 687ರ ನಡುವೆ ಮೂರು ವಿಧದ ದರ ಕಾಣಿಸುತ್ತಿತ್ತು. ಆಟೊದಲ್ಲಿ ₹ 230 ತೋರಿಸುತ್ತಿತ್ತು. ಇನ್ನು ಉಬರ್ ಆ್ಯಪ್‌ನಲ್ಲಿಯೂ ₹ 481ರಿಂದ 581 ಮತ್ತು ಆಟೊದಲ್ಲಿ ₹ 217 ತೋರಿಸುತ್ತಿತ್ತು.

ಈ ದರಗಳನ್ನು ನೋಡಿ ಆತಂಕವಾಯಿತು. ಯಾಕೆಂದರೆ ಒಂದೆರಡು ವರ್ಷಗಳ ಹಿಂದಕ್ಕೆ ಹೋದರೆ ಓಲಾ, ಉಬರ್ ಪ್ರಯಾಣ ದರ 16 ಕಿ.ಮೀ.ಗಳ ದೂರಕ್ಕೆ ಸರಾಸರಿ ₹ 200-300ರ ಒಳಗಿತ್ತು.

ಈಗ ಈ ಪರಿ ಜಿಗಿತ. ವಾಪಸ್ ಬರಲು ಅಷ್ಟೇ ಹಣ ಕೊಟ್ಟರೂ ಹೆಚ್ಚುಕಡಿಮೆ ₹ 1,000 ಕೊಡಬೇಕಾಗಿತ್ತು. ಆಟೊದಲ್ಲಿ ಹೆಚ್ಚಿಗೆ ಓಡಾಡದ ನಾನು ಸ್ವಲ್ಪ ಯೋಚಿಸಿ, ₹ 230ಕ್ಕೆ ಆಟೊ ಬುಕ್ ಮಾಡಿಕೊಂಡು ಹೋದೆ. ವಾಪಸಾಗುವಾಗಲೂ ಅಷ್ಟೇ ಮೊತ್ತ ತೆತ್ತೆ.

ಚಾಲಕನನ್ನು 'ಆಟೊಗಳಿಗೆ ಹಾಕುವ ಗ್ಯಾಸ್ ಬೆಲೆ ಎಷ್ಟು?' ಎಂದು ಕೇಳಿದಾಗ, ಆತ ಬಹಳ ದುಃಖದಿಂದ 'ಸರ್, ಮೂರು ತಿಂಗಳ ಹಿಂದೆ 30 ರೂಪಾಯಿ ಇದ್ದಿದ್ದು ಈಗ 62 ರೂಪಾಯಿ ಆಗಿದೆ' ಎಂದ. 'ಒಂದು ಲೀಟರ್ ಗ್ಯಾಸ್‌ಗೆ ಆಟೊ ಎಷ್ಟು ಕಿ.ಮೀ. ಓಡುತ್ತೆ?' ಎಂದಿದ್ದಕ್ಕೆ '15ರಿಂದ 18 ಕಿ.ಮೀ.' ಎಂದ.

ಅಂದರೆ 62 ರೂಪಾಯಿಗಳ ಅನಿಲದಿಂದ ಆಟೊ ಸರಾಸರಿ 16 ಕಿ.ಮೀ. ದೂರ ಓಡುತ್ತದೆ ಎಂದುಕೊಳ್ಳೋಣ. ಇದರ ಜೊತೆಗೆ ಆನ್‌ಲೈನ್ ಮೂಲಕ ಗ್ರಾಹಕಸೇವೆ ಒದಗಿಸುವ ಕಂಪನಿಗಳು (ಓಲಾ, ಉಬರ್ ಇತ್ಯಾದಿ) ಶೇ 20ರಿಂದ 30 ಕಮಿಷನ್ (₹ 60- 70) ಮುರಿದುಕೊಂಡರೆ ಆಟೊದವರಿಗೆ ಉಳಿಯುವುದು ಸುಮಾರು ₹ 100 ಎಂದುಕೊಳ್ಳಬಹುದು.

ಇನ್ನು ಟ್ಯಾಕ್ಸಿಗಳ ಲೆಕ್ಕಕ್ಕೆ ಬಂದರೆ, ಡೀಸೆಲ್ ಲೀಟರ್‌ಗೆ ₹ 100 ಎಂದರೆ 16 ಕಿ.ಮೀ. ದೂರಕ್ಕೆ ₹ 100ರಿಂದ 120 ಬೀಳುತ್ತದೆ ಎಂದುಕೊಳ್ಳೋಣ. ಕಂಪನಿಗಳು 500 ರೂಪಾಯಿಗೆ ₹ 100– 120 ಕಮಿಷನ್ ಮುರಿದುಕೊಂಡರೆ, ಒಟ್ಟು 16 ಕಿ.ಮೀ.ಗಳಿಗೆ ₹ 240 ಹೋಗಿ ಟ್ಯಾಕ್ಸಿಯವರಿಗೆ ₹ 260 ಉಳಿಯಬಹುದು.



ಆಟೊ ಮತ್ತು ಟ್ಯಾಕ್ಸಿಗಳು ಗಿರಾಕಿಗಳನ್ನು ಹುಡುಕಿಕೊಂಡು ಖಾಲಿ ಸುತ್ತಾಡುವುದು ಎಷ್ಟೋ? ವಾಹನಗಳು ರಿಪೇರಿಗೆ ಬಂದರೆ? ಅವುಗಳ ದಿನನಿತ್ಯ ನಿರ್ವಹಣೆ? ಇನ್ನು ಸಾಲದಲ್ಲಿ ವಾಹನ ಕೊಂಡುಕೊಂಡಿದ್ದರೆ...? ಎರಡು ವರ್ಷಗಳ ಹಿಂದಿನ ಸ್ಥಿತಿಗೆ ಹೋಲಿಸಿದರೆ ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲ ಸಿಲಿಂಡರ್ ಬೆಲೆಯಲ್ಲಿ ಈಗ ಭಾರೀ ಪ್ರಮಾಣದ ಹೆಚ್ಚಳವಾಗಿದೆ.

ಇದಕ್ಕೆಲ್ಲ ಕೊರೊನಾ ಸೃಷ್ಟಿಸಿದ ಆರ್ಥಿಕ ಬಿಕ್ಕಟ್ಟೇ ಕಾರಣವೆ ಅಥವಾ ಇಂದಿನ ಸರ್ಕಾರದ ನೀತಿಗಳು ಕಾರಣವೇ ಎನ್ನುವುದರ ಬಗ್ಗೆ ಪರಾಮರ್ಶೆ ನಡೆಯಬೇಕಾಗಿದೆ. ಯಾವುದೇ ದೇಶದಲ್ಲಿ ಇಂಧನದ ಬೆಲೆ ಹೆಚ್ಚಾದರೆ ಎಲ್ಲ ರೀತಿಯಲ್ಲೂ ಬೆಲೆಗಳು ಹೆಚ್ಚಾಗುತ್ತವೆ ಎನ್ನುವುದು ಜಗತ್ತಿಗೆ ಗೊತ್ತಿರುವ ಸಾಮಾನ್ಯ ವಿಷಯ. ಹೀಗಿದ್ದರೂ ಸರ್ಕಾರವು ಜನರ ಸಂಕಷ್ಟ ನಿವಾರಣೆಗೆ ಸ್ಪಂದಿಸುತ್ತಿಲ್ಲ.

ಬೆಲೆ ಪ್ರತಿದಿನ ಏರುತ್ತಲೇ ಇದೆ. ವಿರೋಧ ಪಕ್ಷಗಳು ಇದನ್ನು ಪ್ರತಿಭಟನಾ ಅಸ್ತ್ರವಾಗಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿಲ್ಲ ಏಕೆ? ಸಂಕಷ್ಟ ಅನುಭವಿಸುತ್ತಿರುವ ಜನರೇಕೆ ಇದರ ವಿರುದ್ಧ ದನಿ ಎತ್ತುತ್ತಿಲ್ಲ? ಸಂಘ–ಸಂಸ್ಥೆಗಳು, ವಿದ್ಯಾರ್ಥಿಗಳು, ನಿರುದ್ಯೋಗಿಗಳು ಇಂದಿನ ರಾಜಕಾರಣದ ವರಸೆಗಳಿಗೆ ಹೆದರಿಬಿಟ್ಟಿದ್ದಾರೆಯೇ? ಸೊಲ್ಲು ಎತ್ತಲು ಸಾಧ್ಯವಾಗದೇ ಇರುವುದಕ್ಕೆ ಇನ್ನೇನಾದರೂ ಕಾರಣಗಳು, ಸಮಸ್ಯೆಗಳು ಇವೆಯೇ?

ವಾಚಕರ ವಾಣಿ

ಸರ್ಕಾರಿ ಶಾಲೆಯ ಗೌರವ ಹೆಚ್ಚಿಸಬಹುದಿತ್ತು

ತುಮಕೂರು ಜಿಲ್ಲೆ ಕೊರಟಗೆರೆಯ ಹುಡುಗಿ ಗ್ರೀಷ್ಮಾ ಎಸ್ಎಸ್ಎಲ್‌ಸಿ ಪೂರಕ ಪರೀಕ್ಷೆಯಲ್ಲಿ ರಾಜ್ಯಕ್ಕೇ ಪ್ರಥಮ ಸ್ಥಾನ ಪಡೆದಿರುವುದು ಸಂತಸದ ಸಂಗತಿ. ಆಕೆಯ ಸಾಧನೆಗೆ ಅಭಿನಂದನೆ. ಆದರೆ, ಬಿಸಿಯೂಟ, ಪಠ್ಯಪುಸ್ತಕ, ಸೈಕಲ್ಲು, ಸಮವಸ್ತ್ರ, ಲ್ಯಾಪ್‌ಟಾಪ್ ಇತ್ಯಾದಿಗಳನ್ನು ಸರ್ಕಾರ ನೀಡಿದರೂ, ತರಬೇತಿ ಪಡೆದ ಶಿಕ್ಷಕರ ಪಡೆ ಇದ್ದರೂ ಪೋಷಕರೇಕೆ ಮಕ್ಕಳ ಶಿಕ್ಷಣಕ್ಕೆ ದೂರದ ಊರುಗಳಲ್ಲಿರುವ ಖಾಸಗಿ ಶಾಲೆಗಳನ್ನು ಆರಿಸಿಕೊಳ್ಳುತ್ತಾರೆ ಎಂದು ಆಶ್ಚರ್ಯವಾಗುತ್ತದೆ. ಬುದ್ಧಿವಂತಳಾದ ಗ್ರೀಷ್ಮಾ ತನ್ನ ಊರಿನ, ಹೆಚ್ಚೆಂದರೆ ತುಮಕೂರಿನ ಶಾಲೆಗೆ ಸೇರಿದ್ದರೂ ಹೆಚ್ಚಿನ ಅಂಕ ಗಳಿಸಿ ಸರ್ಕಾರಿ ಶಾಲೆಯ ಗೌರವ ಹೆಚ್ಚಿಸುತ್ತಿದ್ದಳೋ ಏನೋ. ಯಾಕೆಂದರೆ 10ನೆಯ ತರಗತಿಗೆ ಹೋಗದೆಯೇ ಅಕ್ಕನ ಮಾರ್ಗದರ್ಶನದಲ್ಲಿ ಈ ಅಂಕಗಳನ್ನು ಅವಳು ಪಡೆದಿದ್ದಾಳೆ.

ಇವಳಂತೆ ಎಷ್ಟು ಜನ ಮಕ್ಕಳು ಶುಲ್ಕ ಕಟ್ಟಲಾಗದೆ, ಶಾಲೆಗೆ ಹೋಗಲಾಗದೆ ಪಡಿಪಾಟಲು ಪಟ್ಟಿರುವರೋ. ಆತ್ಮಹತ್ಯೆ ಮಾಡಿಕೊಂಡರೂ ಪರವಾಗಿಲ್ಲ, ಅವಮಾನ ಅನುಭವಿಸಿದರೂ ಪರವಾಗಿಲ್ಲ ಮಕ್ಕಳು ಪ್ರತಿಷ್ಠಿತ ಖಾಸಗಿ ಶಾಲೆಗಳಲ್ಲೇ ಓದಬೇಕು ಎಂಬ ಪೋಷಕರ ಮಹತ್ವಾಕಾಂಕ್ಷೆ ಗಾಬರಿ ಹುಟ್ಟಿಸುತ್ತದೆ. 'ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ' ಎಂಬುದನ್ನು ಅರಿಯಲಾಗದ ಇಂತಹವರ ಮೌಢ್ಯಕ್ಕೆ ಮದ್ದೆಲ್ಲಿದೆ? ಮಕ್ಕಳು ಪರೀಕ್ಷೆಯ ಫೀಸ್ ಕಟ್ಟದಿದ್ದರೆ ಅವರನ್ನು ಪರೀಕ್ಷೆ ತೆಗೆದುಕೊಳ್ಳುವುದರಿಂದಲೇ ವಂಚಿಸುವ 'ಹೃದಯಹೀನ' ವ್ಯವಸ್ಥೆ ಹೊಂದಿರುವ ಶಾಲೆಗಳನ್ನು 'ಶಿಕ್ಷಣ ಸಂಸ್ಥೆ'ಗಳು ಎಂದು ಕರೆಯಬಹುದೇ? ಒಟ್ಟು ನಮ್ಮ ಜನ, ಸಮಾಜ, ಶಿಕ್ಷಣ ಎಲ್ಲವೂ ದರಿದ್ರಾವಸ್ಥೆ ತಲುಪಿರುವುದನ್ನು ಈ ಪ್ರಕರಣ ಸೂಚಿಸುತ್ತದೆ.

ಸವಿತಾ ನಾಗಭೂಷಣ, ಶಿವಮೊಗ್ಗ

ಪಕ್ಷ ಪ್ರತಿಷ್ಠೆಯ ಅತಿರೇಕ ಸಲ್ಲದು

ಶಾಲಾ ಪಠ್ಯಪುಸ್ತಕದಲ್ಲಿನ ದೋಷಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಹಿಂಸೆಯನ್ನು ಪ್ರಚೋದಿಸುವಂತಹ ಹೇಳಿಕೆ ನೀಡಿರುವುದು (ಪ್ರ.ವಾ., ಅ. 9) ಖಂಡನಾರ್ಹ. ಇಷ್ಟು ದಿನಗಳವರೆಗೆ ಕಾಣಿಸದೇ ಇದ್ದ ದೋಷಗಳು ಸಚಿವರಾಗಿ ಕೇವಲ ಒಂದು ತಿಂಗಳಲ್ಲಿ ಕಾಣಿಸಿದ್ದು ಪಕ್ಷನಿಷ್ಠೆಯ ಅತಿರೇಕವೆನಿಸುತ್ತದೆ. ಪಠ್ಯ ರಚನೆಯಲ್ಲಿ ದೋಷಗಳಿರುವುದು ಸಹಜ. ಅವುಗಳನ್ನು ಸರಿಪಡಿಸಲು ಹೊಸ ಪಠ್ಯಪುಸ್ತಕಗಳು ಬರುವವರೆಗೆ ಕಾಯಬೇಕಾಗಿತ್ತು.

ಜೊತೆಗೆ, ಪಠ್ಯಪುಸ್ತಕ ರಚನಾ ಸಮಿತಿಯ ಅಧ್ಯಕ್ಷ ಬರಗೂರು ರಾಮಚಂದ್ರಪ್ಪ ಅವರು ಸಚಿವರ ಹೇಳಿಕೆಗೆ ಸ್ಪಷ್ಟನೆ ನೀಡಿದ್ದರೆ ಸಾಕಾಗಿತ್ತು. ಆದರೆ ಸಚಿವರು ತಮ್ಮ ಮಾತನ್ನು ಹಿಂಪಡೆಯುವಂತೆ ಆಗ್ರಹಿಸಿದುದನ್ನು ವಿವಿಧ ಸಾಮಾಜಿಕ ಸಂಘಟನೆಗಳು ಹಾಗೂ ವಿಚಾರವಾದಿಗಳು ಬೆಂಬಲಿಸಿ, ಬರಗೂರರು ಪ್ರಶ್ನಾತೀತರು ಎಂಬಂತೆ ಬಿಂಬಿಸುವುದು ಅತಿರೇಕವೆನಿಸುತ್ತದೆ.

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ಮತಾಂತರ: ಪ್ರಲೋಭನೆಗೆ ಒಳಗಾಗದಿರಿ

ಆರು ವರ್ಷಗಳ ಹಿಂದೆ ಪುತ್ರ ಮತ್ತು ಪತಿಯನ್ನು ಕಳೆದುಕೊಂಡ ತಮ್ಮ ತಾಯಿ ನೋವಿನಲ್ಲಿ ಜೀವನ ಸಾಗಿಸುತ್ತಿದ್ದರು, ಕ್ರಿಶ್ಚಿಯನ್ ಧರ್ಮಾಚರಣೆ ಮಾಡಿದರೆ ನೋವು ಕಡಿಮೆಯಾಗುತ್ತದೆ ಎಂಬ ಮಾತನ್ನು ನಂಬಿದ್ದ ಆಕೆ ಆ ಧರ್ಮಕ್ಕೆ ಮತಾಂತರಗೊಂಡಿದ್ದು, ಈಗ ಮತ್ತೆ ಹಿಂದೂ ಧರ್ಮಕ್ಕೆ ಮರಳಿದ್ದಾರೆ ಎಂದು ಶಾಸಕ ಗೂಳಿಹಟ್ಟಿ ಶೇಖರ್ ಹೇಳಿದ್ದಾರೆ. ಈ ಧರ್ಮದಿಂದ ಆ ಧರ್ಮಕ್ಕೆ, ಆ ಧರ್ಮದಿಂದ ಈ ಧರ್ಮಕ್ಕೆ ಹೋಗಿ ಬರುವುದೆಂದರೆ ಬಟ್ಟೆ ಬದಲಿಸಿದಷ್ಟು ಸುಲಭವಲ್ಲ.

ಯಾವ ಧರ್ಮಾಚರಣೆ ಮಾಡಬೇಕು ಎಂಬುದು ವೈಯಕ್ತಿಕ ವಿಚಾರವಾದರೂ ಮತಾಂತರಗೊಳ್ಳುವ ಧರ್ಮದ ಕುರಿತು ತಿಳಿದುಕೊಳ್ಳಬೇಕು. ಯಾರೋ ಹೇಳಿದರೆಂದೋ ಅಥವಾ ಪ್ರಚೋದನೆ, ಪ್ರಲೋಭನೆಗೋ ಒಳಗಾಗಿ ಧರ್ಮಾಂತರಗೊಂಡಲ್ಲಿ, ಇಲ್ಲಿರಲಾರೆ ಅಲ್ಲಿಗೆ ಮರಳಲಾರೆ ಎಂಬ ದ್ವಂದ್ವ ಸ್ಥಿತಿಯಲ್ಲಿ ಬದುಕಬೇಕಾಗುತ್ತದೆ. ಮತಾಂತರಗೊಳ್ಳುವವರು ಎಲ್ಲವನ್ನೂ ಅಧ್ಯಯನ ಮಾಡಿ ಮುಂದಡಿಯಿಡುವುದು ಸೂಕ್ತ. ಇದು ವರದಿಯಾದ ಒಂದು ಪ್ರಕರಣವಷ್ಟೇ. ಇಂತಹವು ಇನ್ನೆಷ್ಟಿವೆಯೋ?

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ತೆರಿಗೆ ದಾಳಿ: ಗಂಭೀರವಾದ ಕ್ರಮ

ರಾಜಕಾರಣಿಗಳು ಮತ್ತು ಅವರೊಂದಿಗೆ ನಂಟು ಹೊಂದಿರುವ ವ್ಯಕ್ತಿಗಳ ಮೇಲೆ ತೆರಿಗೆ ದಾಳಿಗಳಾದಾಗ, ತೆರಿಗೆ ಇಲಾಖೆಯನ್ನು ರಾಜಕೀಯ ಪಕ್ಷಗಳು (ಮುಖ್ಯವಾಗಿ ಆಡಳಿತ ಪಕ್ಷ) ತಮ್ಮ ದಾಳವನ್ನಾಗಿ ಬಳಸುತ್ತವೆ ಎನ್ನುವ ಮಾತು ಕೇಳಿಬರುತ್ತದೆ. ಅರ್ಥಾತ್, ತೆರಿಗೆ ಇಲಾಖೆಯು ಆಡಳಿತಾರೂಢ ಪಕ್ಷದ ಕೈಗೊಂಬೆಯಂತಿದೆ ಎನ್ನುವುದು ಪ್ರತೀತಿ. ಇಲಾಖೆ ತನ್ನದೇ ಶ್ರಮದಿಂದ ಮಾಹಿತಿ ಸಂಗ್ರಹಿಸಿ ಒಬ್ಬ ರಾಜಕೀಯ ವ್ಯಕ್ತಿಯ ವಿರುದ್ಧ ದಾಳಿ ಮಾಡಿದರೂ ಅದಕ್ಕೆ ರಾಜಕೀಯ ಬಣ್ಣ ಬಳಿಯುವುದು ಸಾಮಾನ್ಯವಾಗಿದೆ.

ವಾಸ್ತವದಲ್ಲಿ ತೆರಿಗೆ ದಾಳಿ ಬಹಳ ಗಂಭೀರವಾದ ಕ್ರಮ. ತೆರಿಗೆಗೆ ಸಂಬಂಧಿಸಿದಂತೆ ಬಗೆಬಗೆಯ ಮಾಹಿತಿಗಳು ಇಲಾಖೆಗೆ ವಿವಿಧ ಮೂಲಗಳಿಂದ ಬರುತ್ತವೆ. ರಾಜಕೀಯ ವ್ಯಕ್ತಿಗಳ ವಿರುದ್ಧದ ವೈಷಮ್ಯದಿಂದಲೂ ಮಾಹಿತಿ ಬರಬಹುದು. ಆದರೆ, ಅಂತಿಮವಾಗಿ ಮಾಹಿತಿಯ ಸ್ವರೂಪ, ಖಚಿತತೆ, ತೆರಿಗೆ ವಂಚನೆ ಸಾಧ್ಯತೆ ಕುರಿತ ಸತ್ಯಾಸತ್ಯತೆಯನ್ನು ಇಲಾಖೆ ತನ್ನದೇ ವಿಧಾನದಿಂದ, ಮೂಲದಿಂದ ತನಿಖೆ ನಡೆಸಿ ಖಚಿತ ಮಾಡಿಕೊಳ್ಳುತ್ತದೆ. ಹೀಗೆ ಹಲವು ಹತ್ತು ಕೋನಗಳಿಂದ ಖಚಿತಪಡಿಸಿಕೊಂಡು, ನಿರ್ದಿಷ್ಟ ಮೇಲಧಿಕಾರಿಗಳಿಂದ ಅನುಮತಿ ಪಡೆದೇ ದಾಳಿಗೆ ಮುಂದಾಗಬೇಕು. ಇನ್ನೂ ಮುಖ್ಯವಾದ ಮಾತೆಂದರೆ, ಹೀಗೆ ಅನುಮತಿ ನೀಡುವ ಮೇಲಧಿಕಾರಿ ಕೂಡ ದಾಖಲೆಗಳೆಲ್ಲವನ್ನೂ ಸ್ವತಃ ಅವಲೋಕಿಸಿ, ದಾಳಿಯ ಅಗತ್ಯ ಮನವರಿಕೆ ಮಾಡಿಕೊಂಡು, ದಾಳಿಗೆ ಅನುಮತಿ ನೀಡುತ್ತಿರುವುದೇಕೆ ಎನ್ನುವುದನ್ನು ವಿವರವಾಗಿ ಲಿಖಿತ ರೂಪದಲ್ಲಿ ದಾಖಲಿಸಿರುತ್ತಾರೆ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಇದನ್ನು ಪರೀಕ್ಷಿಸುವ ಅಧಿಕಾರ ಹೊಂದಿವೆ. ಅಚ್ಚರಿ ಎಂದರೆ, ತಮ್ಮವರ ಮೇಲೆ ನಡೆದ ತೆರಿಗೆ ದಾಳಿಗಳ ಬಗ್ಗೆ ಹೌಹಾರುವ ರಾಜಕೀಯ ವ್ಯಕ್ತಿಗಳು, ದಾಳಿಗಳು ರಾಜಕೀಯಪ್ರೇರಿತವಾಗಿವೆ, ಕಾಯ್ದೆಬಾಹಿರವಾಗಿವೆ ಎಂದು ಆರೋಪಿಸಿ ನ್ಯಾಯಾಲಯಕ್ಕೆ ಹೋಗಿರುವ ಸಂದರ್ಭಗಳಿವೆಯೇ? ಇಲ್ಲ. ಏಕೆಂದರೆ ದಾಳಿ ನಡೆದಾಗ ತೆರಿಗೆ ವಂಚನೆಯ ಕುರಿತು ಪುರಾವೆಗಳು ಸಿಕ್ಕಿರುತ್ತವೆ. ಎಂದರೆ, ದಾಳಿಗಳು ಯಾರದೋ ಮನೋಲಹರಿಗೆ ಅನುಗುಣವಾಗಿಯೇ ನಡೆದುವಲ್ಲ ಎನ್ನುವುದು ಇದರಿಂದ ಸ್ಪಷ್ಟವಾಗಬೇಕು.

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಪದೇ ಪದೇ ಕಂಪಿಸುತ್ತಿರುವ ಭೂಮಿ; ಊರವರಿಗೆ ಬಯಲೇ ಹಾಸಿಗೆ, ಆಕಾಶವೇ ಹೊದಿಕೆ

ಗಡಿಕೇಶ್ವಾರ: ಭೂಕಂಪನದ ಗಡಿಬಿಡಿ

• ಸಂತೋಷ ಈ.ಚಿನಗುಡಿ, ಜಗನ್ನಾಥ ಶೇರಿಕಾರ

ಕಲಬುರಗಿ ಜಿಲ್ಲೆಯ ಚಿಂಚೋಳಿ, ಕಾಳಗಿ, ಸೇಡಂ ತಾಲ್ಲೂಕುಗಳ 25ಕ್ಕೂ ಹೆಚ್ಚು ಗ್ರಾಮಸ್ಥರಲ್ಲಿ ನಿಂತ ನೆಲವೇ ಕುಸಿಯುತ್ತಿರುವ ಆತಂಕ ಮನೆಮಾಡಿದೆ. ದಸರೆಯ ಹಬ್ಬದ ಈ ಸಮಯದಲ್ಲಿ ಸಂಭ್ರಮದಲ್ಲಿ ಇರಬೇಕಾದ ಅವರ ಬದುಕು ಅಕ್ಷರಶಃ ಬೀದಿಗೆ ಬಿದ್ದಿದೆ. ಮನೆ ಬಿಟ್ಟು ಅವರೆಲ್ಲ ರಸ್ತೆಯಲ್ಲಿ ಒಲೆ ಹೊತ್ತಿಸಿ ಅಡುಗೆ ಮಾಡಿ ಹೊಟ್ಟೆ ಹೊರೆಯುತ್ತಿದ್ದಾರೆ.

ಗಡಿಕೇಶ್ವಾರ ಸೇರಿದಂತೆ ಈ ಭಾಗದಲ್ಲಿ ಪದೇಪದೇ ಭೂಕಂಪನ ಆಗುತ್ತಿದ್ದರೂ, ತಮಗೆ ಧೈರ್ಯ ತುಂಬುವ ಕೆಲಸವನ್ನು ಜಿಲ್ಲಾ ಆಡಳಿತ ಈವರೆಗೂ ಮಾಡಿಲ್ಲ. ಶಾಶ್ವತ ಪರಿಹಾರ ಹೋಗಲಿ, ಜೀವ ಉಳಿಸಿಕೊಳ್ಳಲು ತಾತ್ಕಾಲಿಕ ವ್ಯವಸ್ಥೆಯನ್ನಾದರೂ ಮಾಡಿ ಎಂದರೆ ಅದಕ್ಕೂ ಸ್ಪಂದಿಸಿಲ್ಲ ಎಂಬುದು ಈ ಗ್ರಾಮಗಳ ಬಹುತೇಕರ ಆರೋಪ.

ಜನರು ಹೆದ್ದಾರಿ ತಡೆದು ಸೋಮವಾರ ಪ್ರತಿಭಟನೆ ನಡೆಸಿದರೂ ಯಾರೂ ಸ್ಥಳಕ್ಕೆ ಬರಲಿಲ್ಲ. ಮಂಗಳವಾರ ಬಹುಪಾಲು ಜನ ಊರು ಬಿಡಲು ಮುಂದಾದ ವಿಷಯ ತಿಳಿದು, ಜಿಲ್ಲಾಧಿಕಾರಿ ಗಡಿಕೇಶ್ವಾರ ಸೇರಿದಂತೆ ಕೆಲ ಗ್ರಾಮಗಳಿಗೆ ಭೇಟಿ ನೀಡಿದರು. ಕಲಬುರಗಿ ಜಿಲ್ಲಾ ಪ್ರವಾಸದಲ್ಲಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸಹ ಪರಿಸ್ಥಿತಿಯ ಗಂಭೀರತೆಯನ್ನು ಅರಿತು, ಮಂಗಳವಾರ ರಾತ್ರಿ ಗಡಿಕೇಶ್ವಾರ ಗ್ರಾಮಕ್ಕೆ ಭೇಟಿ ನೀಡಿ ಸಮಸ್ಯೆ ಆಲಿಸಿದರು.

ಹಳೆಯ ಮನೆಗಳೇ ಈ ಊರುಗಳಲ್ಲಿ ಹೆಚ್ಚಾಗಿವೆ. ಅದರಲ್ಲೂ ಬಹುಪಾಲು ಮನೆಗಳು ಕಲ್ಲಿನ ಗೋಡೆಯಿಂದ ಕಟ್ಟಿದ ಎರಡಂತಸ್ತಿನವು. ಮತ್ತೆ ಕೆಲವು ಮನೆಗಳಿಗೆ ಪರಸಿಯನ್ನೇ ತಾರಸಿಯಾಗಿ ಹಾಕಲಾಗಿದೆ. ಈಗಾಗಲೇ ಸಂಭವಿಸಿದ ಭೂಕಂಪನದ ಕಾರಣ ಕೆಲ ಮನೆಗಳ ಗೋಡೆಗಳು ಬಿರುಕುಬಿಟ್ಟಿವೆ. ಕೆಲ ಮನೆಗಳು ಭಾಗಶಃ ಬಿದ್ದಿವೆ. ಹೀಗಾಗಿ, ಗ್ರಾಮಸ್ಥರಿಗೆ ಆಕಾಶವೇ ಹೊದಿಕೆ ಎನ್ನುವ ಸ್ಥಿತಿ ನಿರ್ಮಾಣವಾಗಿದೆ.



ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಗಡಿಕೇಶ್ವಾರ ಗ್ರಾಮದ ಹಲವು ಮನೆಗಳ ಚಾವಣಿಗೆ ಪರಸಿ ಕಲ್ಲುಗಳನ್ನೇ ಅಳವಡಿಸಲಾಗಿದೆ ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಪರಿಹಾರ ಮಾರ್ಗಗಳೇನು?: ಭೂಕಂಪವು ಎರಡು ರೀತಿ ಸಂಭವಿಸುತ್ತದೆ. ಭೂಮಿಯು ಮೇಲಿಂದ ಕೆಳಗೆ ಅಲ್ಲಾಡುವುದು ಮತ್ತು ಅಡ್ಡಡ್ಡವಾಗಿ ತೂಗುವುದು. ಮೇಲಿಂದ ಕೆಳಗೆ ಅಲ್ಲಾಡಿದಾಗ ಹೆಚ್ಚು ಅಪಾಯ ಆಗುವ ಸಂಭವವಿರುತ್ತದೆ. ಇದರಿಂದ ಸಂರಕ್ಷಿಸಿಕೊಳ್ಳಲು ಭೂವಿಜ್ಞಾನಿಗಳು ಎರಡು ರೀತಿಯ ಪರಿಹಾರಗಳನ್ನು ಸೂಚಿಸುತ್ತಾರೆ.

'ಭೂಕಂಪಕ್ಕೆ ಜಗ್ಗದಂತೆ ಮನೆಗಳನ್ನು ವಿನ್ಯಾಸಗೊಳಿಸಿಕೊಳ್ಳಬೇಕು ಅಥವಾ ಹಳೆ ಮನೆಗಳನ್ನು ಗಟ್ಟಿಗೊಳಿಸಬೇಕು. ಇದನ್ನು ರೆಟ್ರೋಫಿಟ್ಟಿಂಗ್ (Retrofitting) ಎನ್ನುತ್ತಾರೆ. ಮನೆ ಮುಂದೆ ಹಗುರ ವಸ್ತುಗಳಿಂದ ಶೆಡ್ ನಿರ್ಮಿಸಿಕೊಳ್ಳುವುದರಿಂದ ಕಬ್ಬಿಣ, ಗಟ್ಟಿಯಾದ ಮರದ ತೊಲೆಗಳಿಂದ ಅಪಾಯ ಆಗುವುದನ್ನು ತಪ್ಪಿಸಬಹುದು' ಎನ್ನುತ್ತಾರೆ ಅವರು.

ಭೂಮಿ ನಡುಗಿದಾಗ ಮನೆಯಲ್ಲಿ ಟೇಬಲ್, ಮಂಚದಡಿ ಅಡಗಿಕೊಳ್ಳುವುದು ಅಥವಾ ಸುರಕ್ಷಿತ ಸ್ಥಳಕ್ಕೆ ಜಿಗಿಯುವುದು, ಹೊರಗೆ ಓಡುವುದು ತಾತ್ಕಾಲಿಕ ಸಲಹೆಗಳು.

ಇದು ದೊಡ್ಡ ಅಪಾಯದ ಮುನ್ಸೂಚನೆಯೇ ಎಂದು ಪ್ರಶ್ನಿಸಿದರೆ, ಪರಿಣತರು ಹೇಳುವುದು ಹೀಗೆ, 'ಈ ಪ್ರಶ್ನೆಗೆ ನಿಖರ ಉತ್ತರ ನೀಡುವುದು ಕಷ್ಟ'.

'ಬಿರುಕುಬಿಟ್ಟ ಮನೆಗಳ ಸರ್ವೆ'

ಗಡಿಕೇಶ್ವಾರ ಗ್ರಾಮ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಭೂಕಂಪನದಿಂದಾಗಿ ಬಿರುಕು ಬಿಟ್ಟ ಮನೆಗಳ ಸಮೀಕ್ಷೆ ಆರಂಭಿಸಲಾಗಿದೆ. ಇಂತಹ ಸಂದರ್ಭಗಳಲ್ಲಿ ಗಾಬರಿಯಾಗದಂತೆ ಜನರಲ್ಲಿ ಧೈರ್ಯ ತುಂಬಲಾಗುವುದು. ಮುಂದೆ ಇಂತಹ ಭೂಕಂಪನಗಳು ಸಂಭವಿಸಿದಾಗ ಅದನ್ನು ಎದುರಿಸುವ ಬಗ್ಗೆಯೂ ತಿಳಿವಳಿಕೆ ನೀಡಲಾಗುವುದು. ಜನ ಗಾಬರಿಯಾಗಿದ್ದರಿಂದ ಊರು ಬಿಡುತ್ತಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ತಡೆಯಲು ಆಗುವುದಿಲ್ಲ. ನವೆಂಬರ್ ತಿಂಗಳ ಮೊದಲ ವಾರದಲ್ಲಿ ಭೂಗರ್ಭಶಾಸ್ತ್ರಜ್ಞರ ತಂಡ ಜಿಲ್ಲೆಗೆ ಭೇಟಿ ನೀಡಲಿದೆ.

ವಿ.ವಿ. ಜ್ಯೋತ್ಸ್ನಾ, ಜಿಲ್ಲಾಧಿಕಾರಿ, ಕಲಬುರಗಿ



ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಗಡಿಕೇಶ್ವಾರ ಗ್ರಾಮದಲ್ಲಿ ಭೂಕಂಪನದಿಂದ ಕುಸಿದುಬಿದ್ದ ಗೋಡೆಯ ಕಲ್ಲುಗಳನ್ನು ಮಹಿಳೆ ತೆರವುಗೊಳಿಸಿದರು

ಸುಣ್ಣದ ಶಿಲೆಯ ರಾಸಾಯನಿಕ ಪ್ರಕ್ರಿಯೆ

ಮಡಕೆಯೊಂದರಲ್ಲಿ ಹಾಕಿದ ಸುಣ್ಣಕ್ಕೆ ನೀರು ಸುರಿದಾಗ ಅದರಲ್ಲಾಗುವ ರಾಸಾಯನಿಕ ಪ್ರಕ್ರಿಯೆಗಳನ್ನು ಗಮನಿಸಬಹುದು. ಇದ್ದಕ್ಕಿದ್ದ ಹಾಗೆ ಸುಣ್ಣವು ಬುಸ್... ಎಂಬ ಶಬ್ದ ಮಾಡುತ್ತದೆ. ನೊರೆ ಹಾಗೂ ಹೊಗೆ ಬಿಡುತ್ತದೆ. ಚಿಂಚೋಳಿ ತಾಲ್ಲೂಕಿನಲ್ಲಿ ಮೇಲಿಂದ ಮೇಲೆ ಸಂಭವಿಸುವ ಭೂಕಂಪನ ಹಾಗೂ ಸ್ಫೋಟದ ಶಬ್ದವೂ ಇದೇ ರೀತಿಯ ರಾಸಾಯನಿಕ ಪ್ರಕ್ರಿಯೆ ಎನ್ನುತ್ತಾರೆ ಈ ಪ್ರದೇಶದಲ್ಲಿ ಅಧ್ಯಯನ ಮಾಡಿದ ಭೂಗರ್ಭ ಶಾಸ್ತ್ರಜ್ಞರು.

ಇಲ್ಲಿನ ಭೂಮಿ ಆಳದಲ್ಲಿ ಕೇವಲ 40 ಅಡಿಯವರೆಗೆ ಕರಿಕಲ್ಲು ಇದೆ. ಅದರ ನಂತರ ಸುಣ್ಣದ ಕಲ್ಲು ಆರಂಭವಾಗುತ್ತದೆ. ಬೋರ್‌ವೆಲ್ ಕೊರೆಯಿಸಿದ ಬಹುಪಾಲು ಸಂದರ್ಭದಲ್ಲೂ ಇದು ದೃಢಪಟ್ಟಿದೆ. ಧಾರಾಕಾರ ಮಳೆಯಾದಾಗ ನೀರು ಭೂತಳಕ್ಕೆ ಇಳಿದು ಸುಣ್ಣದಶಿಲೆಯನ್ನು ಸೇರುತ್ತದೆ. ಆಗ ಸ್ಫೋಟದ ಸದ್ದು, ನೆಲ ನಡುಗುವ ಪ್ರಕ್ರಿಯೆಗಳು ನಡೆಯುತ್ತವೆ ಎನ್ನುವುದು ಅವರ ವಿವರಣೆ.



ಚಿಂಚೋಳಿ ತಾಲ್ಲೂಕಿನ ಗಡಿಕೇಶ್ವಾರ ಗ್ರಾಮದಲ್ಲಿ ಮಂಗಳವಾರ, ಊರು ಬಿಟ್ಟು ಹೊರಡಲು ಬಸ್ಸಿಗಾಗಿ ಕಾಯುತ್ತ ಕುಳಿತ ಕುಟುಂಬಗಳು


ಎರಡು ದಶಕಗಳಿಂದ ಇದೆ ಸಮಸ್ಯೆ

ಈ ಭಾಗದಲ್ಲಿ ಹೆಚ್ಚಾಗಿ ಸುಣ್ಣದಕಲ್ಲು ಇರುವ ಕಾರಣ ಪದೇಪದೇ ಭೂಕಂಪನವಾಗುವುದು ಸಹಜ. ಅತಿಯಾದ ಮಳೆ ಹಾಗೂ ಜಲಾಶಯಗಳಲ್ಲಿ ಮಳೆಗಾಲದ ಆರಂಭದಲ್ಲೇ ಹೆಚ್ಚು ನೀರು ಸಂಗ್ರಹವಾದಾಗ ಲಘು ಭೂಕಂಪನಗಳು ಸಂಭವಿಸುತ್ತವೆ. ಸುಮಾರು 20 ವರ್ಷಗಳಿಂದಲೂ ಭೂಕಂಪನ ಹಾಗೂ ಸ್ಫೋಟದ ಶಬ್ದದ ಅನುಭವಗಳು ಆಗುತ್ತಲೇ ಇವೆ. ಅದಕ್ಕಿಂತ ಹಿಂದೆಯೂ ಈ ಅನುಭವ ಪಡೆದವರು ನನಗೆ ಮಾಹಿತಿ ನೀಡಿದ್ದಾರೆ. ಭೂತಳದಲ್ಲಿನ ಬೃಹತ್ ಬಂಡೆಗಳ ಘರ್ಷಣೆಯಿಂದ ಭೂಕಂಪ ಸಂಭವಿಸುತ್ತದೆ ಎಂದು ಸಾಮಾನ್ಯವಾಗಿ ವ್ಯಾಖ್ಯಾನಿಸುತ್ತೇವೆ. ಆದರೆ, ಸುಣ್ಣದ ಕಲ್ಲಿನಂಥ ಮೃದು ಪ್ರದೇಶದಲ್ಲಿ ಭೂತಳ ಒತ್ತಡ ಹೆಚ್ಚಿದಾಗ ಮೇಲಿಂದಮೇಲೆ ನೆಲವು ತೂಗಿದಂತಾಗುತ್ತದೆ.

ಹತ್ತಿರದಲ್ಲಿರುವ ಜಲಾಶಯ, ಹೊಳೆ ಅಥವಾ ಅಣೆಕಟ್ಟೆಗಳಲ್ಲಿ ಜಲರಾಶಿ ವಿಪರೀತವಾದಾಗ ಅದರ ವ್ಯಾಪ್ತಿಯಲ್ಲಿ ಭೂಮಿ ನಡುಗುತ್ತದೆ. ಇದೇ ಕಾರಣಕ್ಕೆ ಕೊಯ್ನಾ ಜಲಾಶಯದ ಸುತ್ತಲಿನ ಪ್ರದೇಶದಲ್ಲೂ ಚಿಂಚೋಳಿ ಮಾದರಿಯಲ್ಲೇ ಭೂಮಿ ಕಂಪಿಸುತ್ತದೆ. ಕೆಲವು ಪ್ರದೇಶಗಳಲ್ಲಿ ಅತಿಯಾದ ಮಳೆಯಾದಾಗಲೂ ಈ ರೀತಿ ಪ್ರತಿಕ್ರಿಯಿಸಿ ತನ್ನ 'ಸ್ಥಿತಿ' ಹೇಳಿಕೊಳ್ಳುತ್ತದೆ. ಕಲಬುರಗಿ ಜಿಲ್ಲೆಯಲ್ಲಿ ಕೂಡ ಅತಿವೃಷ್ಟಿ ಆದ ವರ್ಷ ಭೂಮಿ ನಡುಗುತ್ತದೆ. ಇದು ಕಾಕತಾಳೀಯವಲ್ಲ. ಇದಕ್ಕೆ ನಿಖರ ಸಂಬಂಧವಿದೆ.

ದಶಕದ ಹಿಂದೆ ಚಿಂಚೋಳಿ ತಾಲ್ಲೂಕಿನ ಹಸರಗುಂಡಗಿ, ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ, ಬಳ್ಳಾರಿ ಜಿಲ್ಲೆಯ ಕೆಲವು ಪ್ರದೇಶಗಳಲ್ಲೂ ಭೂಕಂಪನದ ಸಂಶೋಧನೆಗಳು ನಡೆದವು. ರಿಕ್ಟರ್ ಮಾಪಕದಲ್ಲಿ 2.1ರಿಂದ 3.9ರವರೆಗೆ ಕಂಪನಗಳು ದಾಖಲಾದ ಉದಾಹರಣೆಗಳು ಸಾಕಷ್ಟು ಬಾರಿ ಸಿಕ್ಕಿವೆ. ಭೂಗರ್ಭ ಶಾಸ್ತ್ರಜ್ಞರು, ತಂತ್ರಜ್ಞರು, ಜಲತಜ್ಞರನ್ನು ಸೇರಿಸಿಕೊಂಡು ಅಧ್ಯಯನ ಮಾಡಿ ಇದಕ್ಕೆ ಕಾರಣ ಏನು ಎಂಬುದನ್ನು ಜನರಿಗೆ ಮನವರಿಕೆ ಮಾಡಿದ್ದೆವು. ಆಗ ಅವರಲ್ಲಿನ ಭಯ ದೂರಾಯಿತು. ಈಗ ಆ ಪ್ರದೇಶದಲ್ಲಿ ನೆಲ ನಡುಗುವುದು ನಿಂತಿದೆ. ಮಳೆ ಕಡಿಮೆಯಾಗಿದ್ದೇ ಅದಕ್ಕೆ ಕಾರಣ.

–ಡಾ.ವಿ.ಎಸ್. ಪ್ರಕಾಶ, ಸಂಸ್ಥಾಪಕ, ವಿಶೇಷ ನಿರ್ದೇಶಕ (ನಿವೃತ್ತ) ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತುಗಳ ಉಸ್ತುವಾರಿ ಕೇಂದ್ರ



ಯಾವ ದಿನ, ಎಷ್ಟು ಕಂಪನ?

ದಿನಾಂಕ	ಸಮಯ	ತೀವ್ರತೆ (ರಿಕ್ಟರ್)	ವಿಸ್ತರಣೆ (ಕಿ.ಮೀ)
ಅ.8	ರಾತ್ರಿ 12.44	2.6	10
ಅ.9	ನಸುಕಿನ 5.37	3.2	10
ಅ.10	ಬೆಳಿಗ್ಗೆ 6.05	3.0	12
ಅ.11	ಬೆಳಿಗ್ಗೆ 6.31	2.5	8
ಅ.11	ರಾತ್ರಿ 9.55	4.0	5
ಅ.11	ಬೆಳಿಗ್ಗೆ 8.07	3.5	5
ಅ.12	ಬೆಳಿಗ್ಗೆ 8.18	2.8	8



ಚಿಂಚೋಳಿ ತಾಲ್ಲೂಕಿನ ಗಡಿಕೇಶ್ವಾರ ಗ್ರಾಮದಲ್ಲಿ ಕುಟುಂಬದವರಿಲ್ಲದೆ ಬಿಕೋ ಎನ್ನುತ್ತಿರುವ ಎರಡಂತಸ್ತಿನ ಕಲ್ಲಿನಮನೆ

ಕೊಟ್ಟಿಗೆಯಲ್ಲಿ ಬಾಣಂತಿ, ಹಸುಗೂಸು

ಭೂಕಂಪನದಿಂದ ಸಂಕಷ್ಟಕ್ಕೆ ಸಿಲುಕಿರುವ ಗಡಿಕೇಶ್ವಾರದ ಬಾಣಂತಿ ಶರಣಬಸಮ್ಮ ಅವರ ಸ್ಥಿತಿ ಯಾರಿಗೂ ಬೇಡ ಎನ್ನುವಂತಿದೆ.

ಕೇವಲ 10 ದಿನಗಳ ಹಿಂದೆ ಅವರಿಗೆ ಹೆರಿಗೆಯಾಗಿದೆ. ಬಾಣಂತನಕ್ಕೆ ತವರಿಗೆ ಬಂದ ಅವರನ್ನು ಭೂಕಂಪನ ಚಿಂತೆಗೀಡು ಮಾಡಿದೆ. ತವರು ಮನೆಯ ದನದ ಕೊಟ್ಟಿಗೆ ತುಸು ಗಟ್ಟಿಯಾಗಿರುವ ಕಾರಣ ಅಲ್ಲಿಯೇ ಬಾಣಂತಿ ತಮ್ಮ ಹಸುಳೆಯನ್ನು ಎದೆಗವುಚಿಕೊಂಡು ದಿನ ದೂಡುತ್ತಿದ್ದಾರೆ. ಸರಿಯಾದ ಸಮಯಕ್ಕೆ ಪೌಷ್ಟಿಕ ಆಹಾರ, ಬಿಸಿನೀರು, ಮಗುವಿನ ಆರೈಕೆಗೆ ಬೇಕಾದ ಯಾವುದೇ ಸವಲತ್ತುಗಳು ಅವರಿಗೆ ಸಿಗುತ್ತಿಲ್ಲ.

'ಪ್ರಜಾವಾಣಿ' ತಂಡ ಈ ಗ್ರಾಮಕ್ಕೆ ಭೇಟಿ ನೀಡಿದಾಗ, ಶರಣಬಸಮ್ಮ ತಮ್ಮ ಗೋಳು ತೋಡಿಕೊಂಡರು. 'ಭೂಮಿ ನಡುಗಿದಾಗ, ಶಬ್ದ ಬಂದಾಗ ಎಲ್ಲರೂ ಎದ್ದು ಓಡುತ್ತಾರೆ. ನನಗೆ ಅದೂ ಸಾಧ್ಯವಿಲ್ಲ. ನನ್ನ ಆರೈಕೆ ಹೇಗಾದರೂ ಆಗಲಿ; ಆದರೆ, ಮಗುವಿಗೆ ಹಾಲುಣಿಸುವುದಕ್ಕೂ ಹೆದರುವಂತಾಗಿದೆ. ಇನ್ನೂ ಎಷ್ಟು ದಿನ ಹೀಗೇ ಬದುಕಬೇಕೋ ಏನೋ' ಎಂದು ಕಣ್ಣೀರು ಹಾಕಿದರು.

ಶರಣಬಸಮ್ಮ ಅವರಂತೆಯೇ ಇನ್ನೂ ಹಲವರು ಬಾಣಂತಿಯರು, ಗರ್ಭಿಣಿಯರು, ವೃದ್ಧರು, ಮಕ್ಕಳು ಈ ಊರಲ್ಲಿದ್ದಾರೆ. ಹಗಲಿನಲ್ಲಿ ಮನೆಯ ಹೊರಗೆ ಓಡಾಡಿದರೆ, ರಾತ್ರಿ ರಸ್ತೆಯಲ್ಲೇ ಮಲಗಬೇಕು. ಹುಳ-ಹುಪ್ಪಟೆ, ಸೊಳ್ಳೆ, ವಿಷಜಂತುಗಳ ಭಯದಲ್ಲೇ ತೂಕಡಿಸಬೇಕು.

ಭೂಗರ್ಭಶಾಸ್ತ್ರಜ್ಞರ ನೆರವು ಕೋರಿದ ಕರ್ನಾಟಕ

ಕಲಬುರಗಿ, ಬೀದರ್ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಕಳೆದ ಕೆಲ ತಿಂಗಳಿಂದ ಆಗುತ್ತಿರುವ ಭೂಕಂಪನದ ಬಗ್ಗೆ ಸಮರ್ಪಕ ಮಾಹಿತಿ ಹಾಗೂ ಜಿಲ್ಲೆಗಳ ಅಧಿಕಾರಿಗಳಿಗೆ ತರಬೇತಿ ನೀಡಲು ಹೈದರಾಬಾದ್‌ನಲ್ಲಿರುವ ರಾಷ್ಟ್ರೀಯ ಭೂಭೌತ ವಿಜ್ಞಾನ ಸಂಶೋಧನಾ ಸಂಸ್ಥೆಯ (ಎನ್‌ಜಿಆರ್‌ಐ) ವಿಜ್ಞಾನಿಗಳ ನೆರವು ಕೋರಲಾಗಿದೆ.

ಈ ಕುರಿತು ಪತ್ರ ಬರೆದಿರುವ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ನಿರ್ದೇಶಕ ಡಾ. ಮನೋಜ್ ರಾಜನ್ ಅವರು, ಈ ಜಿಲ್ಲೆಗಳಲ್ಲಿ ಆಗಿಂದಾಗ ಭೂಕಂಪನವಾಗುತ್ತಿರುವುದರಿಂದ ಜನರು ಭೀತಿಗೊಳಗಾಗಿದ್ದಾರೆ. ಜಿಲ್ಲೆಯ ಅಧಿಕಾರಿಗಳಿಗೂ ಈ ಸನ್ನಿವೇಶವನ್ನು ಹೇಗೆ ಎದುರಿಸಬೇಕು ಎಂಬ ಬಗ್ಗೆ ಗೊತ್ತಾಗುತ್ತಿಲ್ಲ. ಆದ್ದರಿಂದ ಈ ಸ್ಥಳಗಳಿಗೆ ಭೂಗರ್ಭಶಾಸ್ತ್ರಜ್ಞರ ತಂಡವೊಂದನ್ನು ಕಳುಹಿಸಿಕೊಡಬೇಕು. ಅವರು ಇದಕ್ಕೆ ಸಂಬಂಧಿಸಿದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

ಸಿದ್ದರಾಮಯ್ಯಗೂ ಅನುಭವ

ಸಿದ್ದರಾಮಯ್ಯ ಅವರು ಮಂಗಳವಾರ ರಾತ್ರಿ 8 ಗಂಟೆಯ ಸುಮಾರು ಗಡಿಕೇಶ್ವಾರ ಗ್ರಾಮದಲ್ಲಿ ಸಭೆ ನಡೆಸುತ್ತಿದ್ದ ವೇಳೆಯೇ ಭೂಮಿಯಿಂದ ಶಬ್ದ ಕೇಳಿ ಬಂತು. ಅಲ್ಲಿಂದಲೇ ಕಂದಾಯ ಸಚಿವ ಆರ್.ಅಶೋಕ ಅವರಿಗೆ ಕರೆ ಮಾಡಿದ ಸಿದ್ದರಾಮಯ್ಯ, ಈ ಗ್ರಾಮಸ್ಥರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ಸಲಹೆ ನೀಡಿದರು.

'ಗ್ರಾಮಸ್ಥರಿಗೆ ತಾತ್ಕಾಲಿಕವಾಗಿ ಪುನರ್ವಸತಿ ಕಲ್ಪಿಸುವ ಕೆಲಸವನ್ನು ಜಿಲ್ಲಾಧಿಕಾರಿಯೇ ಮಾಡಬೇಕಿತ್ತು. ಅವರು ಒಂದು ಬಾರಿಯೂ ಈ ಗ್ರಾಮಕ್ಕೆ ಬಂದಿಲ್ಲ. ನಾನು ಬರುತ್ತೇನೆ ಎಂದು ತಿಳಿದ ನಂತರ ಇಲ್ಲಿಗೆ ಭೇಟಿ ನೀಡಿದ್ದಾರೆ' ಎಂದು ಸಿದ್ದರಾಮಯ್ಯ ಹರಿಹಾಯ್ದರು.

ನಾವು ಎಂದೂ ಇಂತಹ ಪರಿಸ್ಥಿತಿ ಎದುರಿಸಿಲ್ಲ. ಆಗಾಗ, ಭೂಕಂಪನವಾಗುತ್ತಿತ್ತು. ಆದರೆ, ಈ ಬಾರಿ ವಿಪರೀತವಾಗಿದೆ. ಊರಿಗೆ ಊರೇ ಖಾಲಿಯಾಗುತ್ತಿದೆ. ಮನೆಯ ಗೋಡೆಗಳು ಯಾವಾಗ ಕುಸಿಯುತ್ತವೆಯೋ ಎಂಬ ಆತಂಕದಲ್ಲೇ ಬದುಕುವಂತಾಗಿದೆ

ಮೆಹಬೂಬಸಾಬ್ ಪಿಂಜಾರ, ಗಡಿಕೇಶ್ವಾರ ಮುಖಂಡ

ನಮ್ಮದು 15 ಜನರು ಇರುವ ಅವಿಭಕ್ತ ಕುಟುಂಬ. ಭೂಕಂಪನದಿಂದ ಮನೆಯ ಗೋಡೆಗಳು ಬಿರುಕು ಬಿಟ್ಟು ಕಲ್ಲುಗಳು ಬೀಳುತ್ತಿವೆ. ಇದರಿಂದ ದನಗಳನ್ನು ಕಪನೂರ ಗ್ರಾಮಕ್ಕೆ ಕಳುಹಿಸಿ ನಾವು ಎಲ್ಲರೂ ಸೇಡಂ ತಾಲ್ಲೂಕಿನ ಊಡಗಿ ಗ್ರಾಮದಲ್ಲಿರುವ ಬಂಧುಗಳ ಮನೆಗೆ ತೆರಳುತ್ತಿದ್ದೇವೆ

ಲಲಿತಾ ದೇಸಾಯಿ, ಗ್ರಾಮ ಪಂಚಾಯಿತಿ ಸದಸ್ಯೆ, ಗಡಿಕೇಶ್ವಾರ

ಗಡಿಕೇಶ್ವಾರ ಹಾಗೂ ಸುತ್ತಲಿನ ಗ್ರಾಮಗಳಲ್ಲಿ ಹಲವು ವರ್ಷಗಳಿಂದಲೂ ಭೂಮಿಯಿಂದ ಸ್ಫೋಟದ ಸದ್ದು ಕೇಳುತ್ತಲೇ ಇದೆ. ಈ ಬಗ್ಗೆ ವೈಜ್ಞಾನಿಕವಾಗಿ ಸಂಶೋಧನೆ ಕೈಗೊಳ್ಳಬೇಕು ಎಂದು ಕೇಳುತ್ತಲೇ ಇದ್ದೇವೆ. ಈಗ ಶಬ್ದದೊಂದಿಗೆ ಭೂಮಿಯೂ ನಡುಗುತ್ತಿದೆ. ಅನಾಹುತ ಸಂಭವಿಸುವ ಮುನ್ನ ಪುನರ್ವಸತಿ ಕಲ್ಪಿಸಬೇಕು

ಪ್ರಕಾಶ ರಂಗನೂರು, ಗ್ರಾಮದ ಸಾಮಾಜಿಕ ಕಾರ್ಯಕರ್ತ

ಮನೆ ಬಿಟ್ಟು ಒಂದು ವಾರದಿಂದ ಗಿಡಮರಗಳ ಕೆಳಗೆ ಮಲಗುತ್ತಿದ್ದೇವೆ. ಸರ್ಕಾರಕ್ಕೆ ನಮ್ಮ ಕೂಗು ಕೇಳಿಸುತ್ತಿಲ್ಲ. ಎಷ್ಟುಬಾರಿ ಇದು ದೊಡ್ಡ ಸುದ್ದಿಯಾದರೂ ಅಧಿಕಾರಿಗಳು ಕಣ್ಣೆತ್ತಿಯೂ ನೋಡಿಲ್ಲ. ನಾವು ಜೀವಂತ ಇರುವಾಗಲೇ ನೆರವಿಗೆ ಬಂದರೆ ಸಾಕು

ಹಸೀನಾಬಿ, ಗೃಹಿಣಿ, ಗಡಿಕೇಶ್ವಾರ

ಬೆರಗಿನ ಬೆಳಕು

ಗುರುರಾಜ ಕರಜಗಿ



ಆತ್ಮೋನ್ನತಿಯ ದಾರಿ

ಗೌರವಿಸು ಜೀವನವ, ಗೌರವಿಸು ಚೇತನವ|
ಆರದೋ ಜಗವೆಂದು ಭೇದವೆಣಿಸದಿರು||
ಹೋರುವುದೆ ಜೀವನ ಸಮೃದ್ಧಿಗೋಸುಗ ನಿನಗೆ|
ದಾರಿಯಾತ್ಮೋನ್ನತಿಗೆ – ಮಂಕುತಿಮ್ಮ ||475||

ಪದ-ಅರ್ಥ: ಹೋರುವುದೆ = ಹೋರಾಡುವುದೆ, ದಾರಿಯಾತ್ಮೋನ್ನತಿಗೆ = ದಾರಿ + ಆತ್ಮೋನ್ನತಿಗೆ.

ವಾಚ್ಯಾರ್ಥ: ಜೀವನವನ್ನು ಗೌರವಿಸು, ಅದರ ಹಿಂದಿನ ಚೈತನ್ಯವನ್ನು ಗೌರವಿಸು. ಇದು ಮತ್ತಾರದೋ ಜಗತ್ತೆಂದು ಭೇದ ಮಾಡದಿರು. ಜೀವನದ ಸಮೃದ್ಧಿಗಾಗಿ ಹೋರಾಡುವುದೇ ಆತ್ಮೋನ್ನತಿಯ ದಾರಿ.

ವಿವರಣೆ: ನಮ್ಮ ಜೀವನವೆನ್ನುವುದು ಸಣ್ಣದಲ್ಲ. ಅದು ಅತ್ಯಂತ ಪವಿತ್ರವಾದದ್ದು. ಗೌರವಕ್ಕೆ ಅರ್ಹವಾದದ್ದು. ಭಗವಂತ ಎಂಭತ್ನಾಲ್ಕು ಲಕ್ಷ ಜೀವರಾಶಿಗಳನ್ನು ನಿರ್ಮಿಸಿದ್ದಾನೆ ಎಂದು ನಂಬುತ್ತೇವೆ. ಅದೆಷ್ಟು ತರಹದ ಕ್ರಿಮಿಕೀಟಗಳು, ಪಕ್ಷಿಗಳು, ಪ್ರಾಣಿಗಳು, ಈ ಪ್ರಪಂಚದಲ್ಲಿ! ಆದರೆ ಮನುಷ್ಯ ಜೀವನ ಭಗವಂತನ ಸೃಷ್ಟಿಯ ಕಿರೀಟ. ಅದರ ಸೃಷ್ಟಿಯಲ್ಲಿ ಅದೆಷ್ಟು ರಸಧಾತುಗಳು ಸೇರಿ ಅದನ್ನು ನಡೆಸುತ್ತಿವೆ! ಇದುವರೆಗೂ ವೈದ್ಯರಿಗೆ, ಸಂಶೋಧಕರಿಗೆ ಅರ್ಥವಾಗದಷ್ಟು ಕ್ಲಿಷ್ಟವಾಗಿದ್ದರೂ ಬಳಸುವುದಕ್ಕೆ ಅತ್ಯಂತ ಸುಲಭವಾದ ಈ ದೇಹದಲ್ಲಿ, ಕಲ್ಪನಾತೀತವಾದ ಚೈತನ್ಯ ಸೇರಿ ಅದನ್ನು ನಡೆಸುತ್ತಿದೆ. ಅದು ಮಾಡಬಹುದಾದ ಕಾರ್ಯ ಅನೂಹ್ಯವಾದದ್ದು. ಅದಕ್ಕೇ ಈ ಜೀವನದ ಬಗ್ಗೆ ನಿರುತ್ಸಾಹವಾಗಲಿ, ಜಿಗುಪ್ಸೆಯಾಗಲಿ ಸಲ್ಲದು. ಅದರ ಬಗ್ಗೆ ಶ್ರದ್ಧೆ ಗೌರವಗಳಿರಬೇಕು. ಬದುಕುವುದು ಪಾಪವಲ್ಲ, ಚೆನ್ನಾಗಿ ಬದುಕಲು ಪ್ರಯತ್ನಿಸುವುದು ನಾಚಿಕೆಯೂ ಅಲ್ಲ. ಇರುವ ಬದುಕನ್ನು ಇನ್ನೂ ಚೆನ್ನಾಗಿಸಿಕೊಂಡು ಅದನ್ನು ಸಾರ್ಥಕವಾಗುವಂತೆ ಬಳಸಿಕೊಳ್ಳುವುದು ನಮಗಿರುವ ಕರ್ತವ್ಯ. ನಾನು ಎನ್ನುವ ಜೀವನಕ್ಕೆ ಇರುವುದು ಇದೊಂದೇ ಜಗತ್ತು. ನಾನು ಏನು ಸಾಧಿಸಿದರೂ ಇಲ್ಲಿಯೇ ಸಾಧಿಸಬೇಕು. ಇದು ನನ್ನದೇ ಜಗತ್ತು. ಆದ್ದರಿಂದ ಈ ಪ್ರಪಂಚದ ಬಗ್ಗೆಯೂ ಗೌರವವಿರಬೇಕು. ಹಿಂದೆ ನಮ್ಮ ಪೂರ್ವಿಕರು ಕಷ್ಟಗಳನ್ನು ಎದುರಿಸಿದರು, ದುಃಖಗಳನ್ನು ಸಹಿಸಿದರು. ಆದರೆ ಅವರಲ್ಲಿ ಸೋಲಿನ ಧ್ವನಿ ಕೇಳಲಿಲ್ಲ.

ಅವರು ಗೆಲು ಮನಸ್ಸಿನಿಂದಲೇ ದೇವತೆಗಳನ್ನು ಪ್ರಾರ್ಥಿಸಿದರು.

ಭದ್ರಂ ಕರ್ಣೇಭಿ: ಶೃಣುಯಾಮ ದೇವಾ:|
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾ||
ಸ್ಥಿರೈರಂಗೈಸ್ತುಷ್ಟುವಾಗಂ ಸಸ್ತನೂಭಿ:|
ವ್ಯಶೇಮ ದೇವ ಹಿತಂ ಯದಾಯು:|

'ದೇವತೆಗಳೇ, ನಾವು ಯಾವಾಗಲೂ ಉತ್ತಮವಾದ ವಿಚಾರಗಳನ್ನು ಕೇಳುವಂತಾಗಲಿ. ಪವಿತ್ರವಾದವುಗಳನ್ನು ಕಾಣುವಂತಾಗಲಿ. ಆರೋಗ್ಯವಂತವಾದ ಶರೀರದಿಂದ ನಿಮ್ಮನ್ನು ಆರಾಧಿಸುತ್ತ, ಪೂರ್ಣಾಯುಷ್ಯವುಳ್ಳವರಾಗಿ ಜೀವಿಸುವಂತಾಗಲಿ'. ಬದುಕಿನಲ್ಲಿ ಉನ್ನತಿಗಾಗಿ ಹೋರಾಡಬೇಕು. ಧರ್ಮಕ್ಕಾಗಿ, ಲೋಕಸ್ನೇಹಕ್ಕಾಗಿ, ಸಮಸ್ತಲೋಕದ ಹಿತವ್ಯವಸ್ಥೆಗಾಗಿ ಹೋರಾಡಬೇಕು. ಈ ಹೋರಾಟದಲ್ಲೇ ಮನುಷ್ಯನ ಆತ್ಮೋನ್ನತಿ ಇದೆ. ರೇಷ್ಮೆಯ ಹುಳು ಹೋರಾಡುತ್ತಲೇ ಚಿಟ್ಟೆಯಾಗುತ್ತದೆ. ಅನಾಮಧೇಯನಾದ ವ್ಯಕ್ತಿ ಲೋಕಕಲ್ಯಾಣಕ್ಕೆ ಹೋರಾಡುತ್ತ, ಉನ್ನತಿಗೇರಿ, ಮಹಾತ್ಮನಾಗುತ್ತಾನೆ, ಲೋಕಮಾನ್ಯನಾಗುತ್ತಾನೆ, ವಿವೇಕಾನಂದನಾಗುತ್ತಾನೆ, ರಾಮನಾಗುತ್ತಾನೆ, ಬುದ್ಧನಾಗುತ್ತಾನೆ, ಸರ್ವಜನಮಾನ್ಯನಾಗುತ್ತಾನೆ. ಜೀವನದ ಸಮೃದ್ಧಿಗೆ ಹೋರಾಡದ ಯಾವ ವ್ಯಕ್ತಿಯೂ ದೊಡ್ಡವನಾಗಲಾರ. ಆದ್ದರಿಂದ ಗೌರವದ ಜೀವನವನ್ನು ಲೋಕಕಲ್ಯಾಣಕ್ಕೆ ತೊಡಗಿಸುವುದೇ ಆತ್ಮೋನ್ನತಿಯ ದಾರಿ. ❖

ಗುಂಡಣ್ಣ



ದಿನ ಭವಿಷ್ಯ

ಬುಧವಾರ ಅಕ್ಟೋಬರ್ 13, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಚಿತ್ತಾ ಅಷ್ಟಮೀ ಗಂ. 43-9 (ರಾ. 11-31) ಬುಧವಾರ ನಿತ್ಯ ನಕ್ಷತ್ರ ಪೂರ್ವಾಷಾಢ ಗಂ. 20-56 (ಹ. 2-38) ಅತಿಗಂಡ ನಾಮ ಯೋಗ ಗಂ. 12-16 ಭದ್ರೆ ಕರಣ ಗಂ. 15-48 ವಿಷ ಗಂ. 39-52 ಅಮೃತ ಗಂ 10-4 ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸೂರ್ಯೋದಯ: 6-13 ಸೂರ್ಯಾಸ್ತ: 6-00 ಅದೃಷ್ಟ ಸಂಖ್ಯೆ 2 8

ಮೇಷ: ಸಂಕಲ್ಪಿತ ಕೆಲಸಗಳಲ್ಲಿ ಯಶಸ್ಸು ಸಾಧ್ಯತೆ. ಹಿರಿಯರ ಮತ್ತು ಸ್ನೇಹಿತರ ಸೂಕ್ತ ಸಲಹೆಯಿಂದ ಕಾರ್ಯಗಳಲ್ಲಿ ಯಶಸ್ಸು. ಉತ್ತಮ ಆರೋಗ್ಯ ಪಡೆಯುವಿರಿ.

ವೃಷಭ: ವ್ಯವಹಾರದಲ್ಲಿ ಒತ್ತಡಗಳು ಅಧಿಕವಾಗಿರುವುದು. ಆದರೂ ಆರ್ಥಿಕವಾಗಿ ಲಾಭಾದಿಗಳು ಕಂಡುಬರುವುದು. ಮನಸ್ಸಿಗೆ ಸಂತೋಷಕರವಾದ ವಾತಾವರಣಗಳು ಇರುವುದು.

ಮಿಥುನ: ರಾಜಕೀಯ ವಿಷಯಗಳ ಬಗ್ಗೆ ಗಂಭೀರ ಚಿಂತನೆ. ಚಿಲ್ಲರೆ ವ್ಯಾಪಾರಿಗಳಿಗೆ ಉತ್ತಮ ಲಾಭ. ಸಾಮಾಜಿಕ ಕೆಲಸಗಳಲ್ಲಿ ಆಸಕ್ತಿ. ಸುಬ್ರಹ್ಮಣ್ಯ ಆರಾಧನೆ ಶ್ರೇಯಸ್ಕರ.

ಕರ್ಕಾಟಕ: ಉತ್ತಮ ಫಲವನ್ನು ನಿರೀಕ್ಷಿಸುವ ದಿನ. ಸಂಸಾರದಲ್ಲಿ ಸಂತೋಷದ ದಿನ. ಕಾರ್ಯದಲ್ಲಿ ಕೀರ್ತಿ, ಯಶಸ್ಸು ಲಾಭ. ಗುರುವಿನ ಆರಾಧನೆ ಮಾಡಿ.

ಸಿಂಹ: ಉದ್ಯೋಗದಲ್ಲಿ ಸಮಾಧಾನಕರ ವಾತಾವರಣ, ಸರ್ಕಾರಿ ಕೆಲಸಗಳಲ್ಲಿ ಯಶಸ್ಸು ಕಾಣುವಿರಿ. ಹಿರಿಯ ಅಧಿಕಾರಿಗಳಿಂದ ಕೆಲಸದ ಒತ್ತಡ. ದೇವಿ ಆರಾಧನೆಯಿಂದ ಕಾರ್ಯಗಳು ಸುಗಮ.

ಕನ್ಯಾ: ಕೋರ್ಟು ಸಂಬಂಧಿ ಕಲಹಗಳಲ್ಲಿ ಜಯ ಕಂಡುಬರುವುದು. ವ್ಯವಹಾರದಲ್ಲಿ ಅಧಿಕ ಲಾಭ. ಆರೋಗ್ಯದಲ್ಲಿ ವ್ಯತ್ಯಯಗಳು ಆಗಬಹುದು. ಶಿವನ ಆರಾಧನೆಯಿಂದ ಯಶಸ್ಸು.

ತುಲಾ: ವಿದ್ಯಾರ್ಥಿಗಳಿಗೆ ಆಲಸ್ಯ ಕಂಡುಬರುವುದು. ಅತಿಯಾದ ಶ್ರಮದಿಂದ ಉತ್ತಮ ಫಲಪ್ರಾಪ್ತಿ. ಗುರುಗಳಿಂದ ಪ್ರಶಂಸೆಗಳುದೊರೆತು ಮನಸ್ಸಿಗೆ ಸಂತೋಷ. ವಿಷ್ಣು ಆರಾಧನೆ ಮಾಡಿ.

ವೃಶ್ಚಿಕ: ವಿನ್ಯಾಸಕಾರರಿಗೆ ಸಮಾಜದಲ್ಲಿ ಮನ್ನಣೆ. ಗೃಹ ನಿರ್ಮಾಣ ಆರಂಭ. ವಿದ್ಯಾರ್ಥಿಗಳಿಗೆ ಉತ್ತಮ ಫಲಗಳು, ಸಂಭ್ರಮದ ದಿನ - ಶಿವನ ಆರಾಧನೆ ಶ್ರೇಯಸ್ಕರ.

ಧನು: ಬಹಳ ಕಾಲದಿಂದ ಯೋಚಿಸಿದ್ದ ಕಾರ್ಯಗಳಲ್ಲಿ ಯಶಸ್ಸು ಕಾಣುವಿರಿ. ಆರೋಗ್ಯದಲ್ಲಿ ವ್ಯತ್ಯಯ ಆಗಬಹುದು. ನಿಮ್ಮ ಉತ್ತಮ ಗುಣಗಳನ್ನು ದುರ್ಬಳಕೆ ಮಾಡಿಕೊಳ್ಳದೇ ಮುನ್ನಡೆಯಿರಿ.

ಮಕರ: ವಾಹನಾದಿಗಳಿಂದ ಸಂತೋಷ ಪಡುವ ದಿನ. ಸಮಾಜದಲ್ಲಿ ಪುರಸ್ಕಾರ. ಆರೋಗ್ಯದಲ್ಲಿ ಉತ್ತಮ ಫಲ. ಕಬ್ಬಿಣ ವಸ್ತುಗಳ ವಿಚಾರದಲ್ಲಿ ಜಾಗೃತೆ ಅಗತ್ಯ. ಗುರುವಿನ ಆರಾಧನೆಯಿಂದ ಉತ್ತಮ ಫಲ.

ಕುಂಭ: ಸಾಂಸಾರಿಕ ಬದುಕು ಸಂತೋಷ ಕೊಡುವ ದಿನ. ಮಕ್ಕಳಿಂದ ಸಂತೋಷ ಪ್ರಾಪ್ತಿ. ತಂದೆ ತಾಯಿಗಳಿಂದ ಮಕ್ಕಳಿಗೆ ಸಂತೋಷ. ದೇವಿ ಆರಾಧನೆಯಿಂದ ಉತ್ತಮ ಫಲ.

ಮೀನ: ಉದ್ಯೋಗದಲ್ಲಿರುವ ಒತ್ತಡಗಳು ಕಮ್ಮಿಯಾಗಿ ಮನಸ್ಸಿಗೆ ಸಂತೋಷ ಪ್ರಾಪ್ತಿ. ಭೂ ವ್ಯವಹಾರಗಳಲ್ಲಿ ಅಪಜಯ ಕಂಡುಬರುವುದು. ಆರೋಗ್ಯದಲ್ಲಿ ಸಮಾಧಾನ. ದೇವಿ ಆರಾಧನೆಯಿಂದ ಉತ್ತಮ ಫಲ.

ನಿಮ್ಮ ಜನ್ಮದಿನ 13-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಉದ್ಯೋಗದಲ್ಲಿ ಮಿಶ್ರಫಲವನ್ನು ಅನುಭವಿಸುವ ಯೋಗ ಫಲಗಳು ಕಂಡುಬರುತ್ತಿವೆ. ಆರೋಗ್ಯದಲ್ಲೂ ಮಿಶ್ರಫಲಗಳು. ವಿವಾಹ ಇಚ್ಛೆ ಹೊಂದಿದವರಿಗೆ ವಧು ಪ್ರಾಪ್ತಿ, ದೊಡ್ಡ ದೊಡ್ಡ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಅಷ್ಟೊಂದು ಸೂಕ್ತ ಕಾಲವಲ್ಲ.

ಪದಬಂಧ 4747


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪುಂಗವರ ಸಮೂಹ! (2)
3.ತರಾತುರಿಯಿಂದ ಓಡುತ್ತಿರುವ ಕುದುರೆ (3)
5.ಕೆಸರಿನಲ್ಲಿ ಅರಳುವ ಹೂ (3)
7.ಕಾಡಿನಲ್ಲಿ ವಾಸಿಸುವಿಕೆ (4)
9. ಜೈನ ದೇವಾಲಯ (3)
10.ಪತಿ ಅನುಸರಿಸಿದ ಸಂಪ್ರದಾಯ (3)
11.ಬಟ್ಟೆಗಳ ಮಡಿಕೆಗಳು ಮುರಿಯದೇ ಇರುವುದು (4)
13.ನೂಲು ತೆಗೆಯುವ ರಾಟೆ (3)
15.ಈತ ಕಬ್ಬಿಣದ ಕೆಲಸಗಾರ (3)
16.ತಟಕ್ಕನೆ ಕಾಣಿಸಿದ ಮೋಸಗಾರ! (2)

ಮೇಲಿಂದ ಕೆಳಕ್ಕೆ

2.ಜಳಕ ಎಂದಿದ್ದಕ್ಕೇ ಈ ರೋಮಾಂಚನ! (3)
3.ಮನಸ್ಸಿನ ಗೊಂದಲ (3)
4.ಗಡಕ್ಕನೆ ಬಂದೆರಗಿದ ಗಂಡು ಕೋತಿ (3)
6.ಮುಸಲ್ಮಾನರ ಪ್ರಾರ್ಥನಾ ಸ್ಥಳ (3)
8.ಮೋಕ್ಷಕ್ಕೊಂದು ಪರ್ಯಾಯ ಪದ (3)
9.ಬಡಗಿ ಕುಳಿತಿರುವ ಉತ್ತರ ದಿಕ್ಕು! (3)
10.ಕೊನೆಗೆ ಬೆಲೆಯಿಟ್ಟಾಗ ಮಡಿಕೆಕಾಣುತ್ತಿದೆಯಲ್ಲಾ?! (3)
12.ಕತ್ತರಿಸುವ ಸಾಧನವಿಲ್ಲಿ ಉಲ್ಟಾ ಆಗಿದೆಯಲ್ಲಾ? (3)
13. ಈತ ಜಾಣ! (3)
14.ನಾಣ್ಯಗಳನ್ನು ಮುದ್ರಿಸುವ ಸ್ಥಳ (3)



4746ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹರಾಹುರಿ 3.ಕಕ್ಕುಲತೆ 5.ಪುಢಾರಿ 7.ಉರ 8.ಪತಿ 11.ರಸ 13.ಸ್ಥಾನ 14.ಜಾತಕ 16.ಕಡಿವಾಣ 17.ರತ್ನಾಕರ

ಮೇಲಿಂದ ಕೆಳಕ್ಕೆ:
1.ಹಸ್ತಕ್ಷೇಪ 2.ಪುರಿ 3.ಕರಿ 4.ತೆಪರ 6.ಢಾಳಿಸು 7.ಉಪಚಾರ 9.ತಿರೋಧಾನ 10.ಪ್ರಪಾತ 11.ಸರೋವರ 13.ಸ್ಥಾಪಕ 14.ಜಾಣ 15.ಕರ

ಸುಡೊಕು 5133

4			9		1		3	2
	9			8			7	4
8			4		5	9		
7								8
	8		1	6	2		9	
		9	7			2		
		8		1				
9		4	8		7		2	5
	1			9			8	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5132 ಸುಡೊಕು

6	2	4	9	1	7	3	5	8
5	1	3	8	4	6	9	2	7
9	7	8	2	5	3	4	1	6
7	4	9	5	3	8	1	6	2
1	8	6	4	2	9	7	3	5
2	3	5	6	7	1	8	4	9
4	9	2	3	8	5	6	7	1
3	6	1	7	9	2	5	8	4
8	5	7	1	6	4	2	9	3


ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,945
ಇಂದಿನ ಅಂತ್ಯ	17,991
▲	46
ದಿನದ ಗರಿಷ್ಠ	18,008

ವಿನಿಮಯ ದರ

$ ಡಾಲರ್	75.52
£ ಪೌಂಡ್	102.7
€ ಯುರೊ	87.28
¥ ಯೆನ್ (100ಕ್ಕೆ)	67

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹430
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹440

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	415
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-50000
ಚಿತ್ರದುರ್ಗ	
ಆಪಿ	44119-44529
ಬೆಟ್ಟೆ	38659-39069
ಕೆಂಪುಗೋಟು	29600-30000
ರಾಶಿ	43639-44000
ಪುತ್ತೂರು	
ಹೊಸತು	35500-50000
ಸಿದ್ದಾಪುರ	
ಬಿಳಿಗೋಟು	33108-39489
ಕೋಕ	21699-31699
ಚಾಲಿ	42099-46509
ಕೆಂಪುಗೋಟು	22699-33089
ರಾಶಿ	39689-45409
ತಟ್ಟಿಬೆಟ್ಟೆ	36699-44099
ಶಿರಸಿ	
ಬೆಟ್ಟೆ	19029-43699
ಬಿಳಿಗೋಟು	30199-41899
ಚಾಲಿ	43508-46898
ರಾಶಿ	36299-45909
ಯಲ್ಲಾಪುರ	
ಬಿಳಿಗೋಟು	36919-37111
ಕೋಕ	21601-25612
ಚಾಲಿ	42111-46589
ರಾಶಿ	43765-47899
ತಟ್ಟಿಬೆಟ್ಟೆ	43099-43099
ಶಿವಮೊಗ್ಗ ಎಪಿಎಂಸಿ	
ಗೊಬರಲು	16100-37000
ನ್ಯೂ ವೆರೈಟಿ	42099-43569
ರಾಶಿ	41009-45699
ಸರಕು	50130-74240
ಸಾಗರ ಎಪಿಎಂಸಿ	
ಚಾಲಿ	39009-42199
ರಾಶಿ	41909-44799
ಸಿಪ್ಪೆಗೋಟು	10590-23415
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	257-446
ದ್ವಿತಳಿ (ಬಿ.ವಿ)	307-555

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13650	13000	13450	204.25 ಸೆಂಟ್ಸ್
ಎಸಿ	6325	4800	5425	
ಆರ್‌ಪಿ	6100	6000	6250	ಲಂಡನ್
ಆರ್‌ಸಿ	3535	3500	3625	2099 ಡಾಲರ್ಸ್

ಭಾರತದಲ್ಲಿ ಹೂಡಿಕೆ ಹೆಚ್ಚಿಸಲು ಉತ್ಸುಕ: ಬೇನ್ ಕ್ಯಾಪಿಟಲ್

ಬಾಸ್ಟನ್ (ಪಿಟಿಐ): ಭಾರತದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆ ಮಾಡಲು ಎದುರು ನೋಡುತ್ತಿರುವುದಾಗಿ ಅಮೆರಿಕದ ಖಾಸಗಿ ಹೂಡಿಕೆ ಸಂಸ್ಥೆ ಬೇನ್ ಕ್ಯಾಪಿಟಲ್‌ನ ಉನ್ನತ ಅಧಿಕಾರಿಗಳು ಹೇಳಿದ್ದಾರೆ. ಸಂಸ್ಥೆಯು, ಭಾರತದ ಕಂಪನಿಗಳಲ್ಲಿ ಈಗಾಗಲೇ ₹ 37,260 ಕೋಟಿ ಬಂಡವಾಳ ಹೂಡಿಕೆ ಮಾಡಿದೆ.

ಹೂಡಿಕೆ ಮತ್ತು ಉದ್ಯಮ ಬೆಳವಣಿಗೆ ದೃಷ್ಟಿಯಿಂದ ಭಾರತ ಮತ್ತು ಅಮೆರಿಕಕ್ಕೆ ಮುಂದಿನ ದಶಕವು ಬಹಳ ಮಹತ್ವದ್ದು ಎಂದು ಸಂಸ್ಥೆಯ ಉನ್ನತ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಸಂಸ್ಥೆಯ ಸಹ ಅಧ್ಯಕ್ಷ ಸ್ಟೀಫನ್ ಪಲ್ಯೂಕ್ ಮತ್ತು ಸಹ ವ್ಯವಸ್ಥಾಪಕ ಪಾಲುದಾರ ಜಾನ್ ಕೊನಾಟನ್ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿದ್ದು, ಗುಜರಾತ್‌ನಲ್ಲಿ ಹಣಕಾಸು ಸೇವೆಗಳ ಕುರಿತು ಮಾತುಕತೆ ನಡೆಸಿದ್ದಾರೆ.

ವಿಶ್ವಬ್ಯಾಂಕ್, ಐಎಂಎಫ್ ಮತ್ತು ಜಿ20 ಸಭೆಗಳಲ್ಲಿ ಭಾಗವಹಿಸುವ ಉದ್ದೇಶದಿಂದ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸದ್ಯ ಅಮೆರಿಕ ಪ್ರವಾಸದಲ್ಲಿದ್ದಾರೆ.

ಭಾರತದಲ್ಲಿ ಸ್ನೇಹಪರ ವ್ಯಾಪಾರ ವಾತಾವರಣವನ್ನು ಕೊನಾಟನ್ ಅವರು ಶ್ಲಾಘಿಸಿದರು. ಭಾರತದಲ್ಲಿ ಹೂಡಿಕೆಯ ಬಗ್ಗೆ ಅವರು ಉತ್ಸುಕರಾಗಿದ್ದಾರೆ ಎಂದು ಹಣಕಾಸು ಸಚಿವಾಲಯವು ತನ್ನ ಟ್ವೀಟ್‌ನಲ್ಲಿ ಹೇಳಿದೆ. ಗುಜರಾತಿನ ಗಿಫ್ಟ್ ಸಿಟಿಯಲ್ಲಿ ಮತ್ತು ಭಾರತದಲ್ಲಿ ಮೂಲಸೌಕರ್ಯ ವಲಯದಲ್ಲಿ ಹೂಡಿಕೆಯ ಅವಕಾಶಗಳ ಕುರಿತು ಸೀತಾರಾಮನ್ ಅವರು ಸಂಸ್ಥೆಯೊಂದಿಗೆ ಮಾತನಾಡಿದ್ದಾರೆ ಎಂದೂ ಟ್ವೀಟ್‌ನಲ್ಲಿ ತಿಳಿಸಿದೆ.

ಮಾರುಕಟ್ಟೆಗಳನ್ನು ಹೆಚ್ಚು ವ್ಯಾಪಾರ-ಸ್ನೇಹಿಯಾಗಿ ಮಾಡುವ ಪ್ರಕ್ರಿಯೆಯು ಭಾರತದಲ್ಲಿ ಈಗ ನಡೆಯುತ್ತಿದೆ ಎಂದು ನಾನು ಭಾವಿಸುತ್ತೇನೆ. ಇದು ವಿದೇಶಿ ನೇರ ಹೂಡಿಕೆ ಆಕರ್ಷಿಸಲು ಉತ್ತಮ ವಾತಾವರಣವನ್ನು ನೀಡಲಿದೆ ಎಂದು ಸ್ಟೀಫನ್ ಹೇಳಿದ್ದಾರೆ.

ಚೀನಾದಲ್ಲಿ ಭಾರಿ ಮಳೆ: 15 ಮಂದಿ ಸಾವು

ಬೀಜಿಂಗ್ (ಪಿಟಿಐ): ಉತ್ತರ ಚೀನಾದ ಶಾಂಕ್ಸಿ ಪ್ರಾಂತ್ಯದಲ್ಲಿ ನಿರಂತರ ಮಳೆ ಮತ್ತು ಬಿರುಗಾಳಿಯಿಂದಾಗಿ ಕನಿಷ್ಠ 15 ಜನರು ಸಾವಿಗೀಡಾಗಿದ್ದು, ಮೂವರು ನಾಪತ್ತೆಯಾಗಿದ್ದಾರೆ. ಇದುವರೆಗೆ ಒಟ್ಟು 1.20 ಲಕ್ಷ ಜನರನ್ನು ಸ್ಥಳಾಂತರ ಮಾಡಲಾಗಿದೆ ಎಂದು ಅಲ್ಲಿನ ಸರ್ಕಾರ ಮಂಗಳವಾರ ಹೇಳಿದೆ.

ಶಾಂಕ್ಸಿ ಪ್ರಾಂತ್ಯದಲ್ಲಿ ಅ. 2ರಿಂದ 7 ರವರೆಗೆ ದಾಖಲೆ ಮಟ್ಟದಲ್ಲಿ ಮಳೆಯಾಗಿದ್ದು, ಭಾರಿ ಪ್ರವಾಹ ಉಂಟಾಗಿದೆ. ನಿರಂತರವಾಗಿ ಬೀಳುತ್ತಿರುವ ಮಳೆಯಿಂದಾಗಿ ಸುಮಾರು ಹತ್ತು ಲಕ್ಷಕ್ಕೂ ಹೆಚ್ಚಿನ ಜನರಿಗೆ ವಸತಿ ಸಮಸ್ಯೆ ಎದುರಾಗಿದೆ. ಇದುವರೆಗೆ ಸುಮಾರು 1.20ಲಕ್ಷ ಜನರನ್ನು ಸ್ಥಳಾಂತರಿಸಲಾಗಿದೆ.

ಮಳೆಯಿಂದಾಗಿ ಸುಮಾರು 2,38,460 ಹೆಕ್ಟೇರ್‌ಗಳಷ್ಟು ಬೆಳೆ ನಾಶಗೊಂಡಿದ್ದು, 37,700 ಮನೆಗಳಿಗೆ ಹಾನಿಯುಂಟಾಗಿದೆ. ಸುಮಾರು ₹ 58 ಶತಕೋಟಿಯಷ್ಟು ಆರ್ಥಿಕ ನಷ್ಟವುಂಟಾಗಿದೆ ಎಂದು ಅಂದಾಜಿಸಲಾಗಿದೆ ಎಂದು ಸ್ಥಳೀಯ ಕ್ಸಿನುವಾ ಸುದ್ದಿಮಾಧ್ಯಮ ವರದಿ ಮಾಡಿದೆ.

ಶಾಂಕ್ಸಿ ಪ್ರಾಂತ್ಯದಲ್ಲಿ ವಾಡಿಕೆಗಿಂತಲೂ ಐದು ಪಟ್ಟು ಹೆಚ್ಚು ಪ್ರಮಾಣದಲ್ಲಿ ಮಳೆಯಾಗಿದ್ದು, ಇದರಿಂದಾಗಿ ಸೇತುವೆಗಳು, ರೈಲು ಮಾರ್ಗಗಳು ಹಾನಿಗೀಡಾಗಿವೆ. ಈ ಪ್ರಾಂತ್ಯವು ಪ್ರಮುಖ ಕಲ್ಲಿದ್ದಲು ಉತ್ಪಾದನಾ ಪ್ರದೇಶವಾಗಿದ್ದು, ಇದುವರೆಗೆ 60 ಕಲ್ಲಿದ್ದಲು ಗಣಿಗಳನ್ನು ಮುಚ್ಚಲಾಗಿದೆ. ಹಾಗಾಗಿ, ಚೀನಾದಲ್ಲಿ ಇಂಧನ ಸಮಸ್ಯೆ ಉಂಟಾಗಿದೆ ಎಂದೂ ವರದಿಯು ತಿಳಿಸಿದೆ.

ಮುಂದುವರಿದ ಸಕಾರಾತ್ಮಕ ವಹಿವಾಟು

ನಾಲ್ಕು ದಿನಗಳಲ್ಲಿ ಸಂಪತ್ತು ₹ 6.09 ಲಕ್ಷ ಕೋಟಿ ವೃದ್ಧಿ



ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ನಾಲ್ಕನೇ ದಿನವೂ ಸಕಾರಾತ್ಮಕ ವಹಿವಾಟು ಮುಂದುವರಿಯಿತು.

ಮುಂಬೈ ಷೇರುಪೇಟೆಯ (ಬಿಎಸ್‌ಇ) ಬಂಡವಾಳ ಮೌಲ್ಯವು ನಾಲ್ಕು ದಿನಗಳ ವಹಿವಾಟಿನಲ್ಲಿ ₹ 6.09 ಲಕ್ಷ ಕೋಟಿಗಳಷ್ಟು ವೃದ್ಧಿಯಾಗಿದೆ. ಇದರಿಂದ ಒಟ್ಟಾರೆ ಬಂಡವಾಳ ಮೌಲ್ಯ ₹ 268.30 ಲಕ್ಷ ಕೋಟಿಗಳಿಗೆ ಏರಿಕೆ ಕಂಡಿದೆ.

ಮಂಗಳವಾರದ ವಹಿವಾಟಿನಲ್ಲಿ ಬಿಎಸ್‌ಇ ಸೆನ್ಸೆಕ್ಸ್ 149 ಅಂಶ ಏರಿಕೆ ಕಂಡು ಹೊಸ ಎತ್ತರವಾದ 60,284 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 46 ಅಂಶ ಹೆಚ್ಚಾಗಿ 17,991 ಅಂಶಗಳ ಹೊಸ ಎತ್ತರವನ್ನು ತಲುಪಿತು.


ಜಾಗತಿಕ ಮಟ್ಟದಲ್ಲಿನ ನಕಾರಾತ್ಮಕ ಬೆಳವಣಿಗೆಯಿಂದಾಗಿ ದೇಶಿ ಷೇರುಪೇಟೆಗಳ ವಹಿವಾಟು ಚಂಚಲವಾಗಿತ್ತು. ಆ ಬಳಿಕ ಖರೀದಿ ವಹಿವಾಟಿಗೆ ಒಳಗಾಗಿ ಗಳಿಕೆಯಿಂದಿಗೆ ವಹಿವಾಟು ಅಂತ್ಯವಾಯಿತು. ಹೀಗಿದ್ದರೂ ಕಚ್ಚಾ ತೈಲ ದರ ಗರಿಷ್ಠ ಮಟ್ಟದಲ್ಲಿ ಇರುವುದು ಹಾಗೂ ರೂಪಾಯಿ ಮೌಲ್ಯ ಇಳಿಕೆ ಕಂಡಿರುವುದು ಸೂಚ್ಯಂಕದ ಏರಿಕೆಗೆ ಕಡಿವಾಣ ಹಾಕಿದವು ಎಂದು ಮೋತಿಲಾಲ್ ಓಸ್ವಾಲ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕಾ ಹೇಳಿದ್ದಾರೆ.

ರೂಪಾಯಿ: 16 ಪೈಸೆ ಇಳಿಕೆ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 16 ಪೈಸೆಗಳಷ್ಟು ಇಳಿಕೆ ಕಂಡು ಒಂದು ಡಾಲರ್‌ಗೆ 4 75.52ರಂತೆ ವಿನಿಮಯಗೊಂಡಿತು.

ಮೂರು ದಿನಗಳ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು 73 ಪೈಸೆಗಳಷ್ಟು ಇಳಿಕೆ ಆಗಿದೆ.

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಲಕ್ಷ್ಮಣ್ ರಾವ್, ಜೆ.ಪಿ.ನಗರ 2ನೇ ಹಂತ, ಬೆಂಗಳೂರು

- **ಪ್ರಶ್ನೆ:** ನೀವು ಓದುಗರಿಗೆ ಮುಖ್ಯವಾಗಿ ಆರ್.ಡಿ. ಹಾಗೂ ನಗದು ಸರ್ಟಿಫಿಕೇಟ್ ಠೇವಣಿಗಳನ್ನು ಮಾಡಲು ಸಲಹೆ ನೀಡುತ್ತಿದ್ದೀರಿ. ಈ ಎರಡೂ ಠೇವಣಿಗಳು ಉತ್ತಮವಾದರೂ ಇವುಗಳ ಅವಧಿ ಮುಗಿಯುತ್ತಲೇ ಬಡ್ಡಿ ದೊರೆಯುವುದರಿಂದ ಠೇವಣಿದಾರರು ಬಡ್ಡಿ ಆದಾಯದ ಮೇಲೆ ಹೆಚ್ಚಿನ ತೆರಿಗೆಯನ್ನು ಕೊಡಬೇಕಾಗಬಹುದು ಎನ್ನುವುದು ನನ್ನ ಅಭಿಪ್ರಾಯ. ಗೊಂದಲ ನಿವಾರಿಸಬೇಕಾಗಿ ವಿನಂತಿ.

ಉತ್ತರ: ಮೇಲ್ನೋಟಕ್ಕೆ ನಿಮ್ಮ ಅಭಿಪ್ರಾಯ ಸರಿ ಎಂದು ಕಂಡರೂ ಠೇವಣಿದಾರರು ಠೇವಣಿ ಮುಗಿಯುವ ವೇಳೆಗೆ ಬಡ್ಡಿ ಪಡೆದರೂ ಅಂತಹ ದೊಡ್ಡ ಮೊತ್ತಕ್ಕೆ ಆದಾಯ ತೆರಿಗೆ ಕೊಡುವ ಅವಶ್ಯಕತೆ ಇಲ್ಲ. ಇಂತಹ ಠೇವಣಿಗಳಿಗೆ ವಾರ್ಷಿಕವಾಗಿ ಬರುವ ಬಡ್ಡಿಗೆ ಆದಾಯ ತೆರಿಗೆ ರಿಟರ್ನ್ಸ್ ತುಂಬಲು ಅರ್ಜಿ ಸಂಖ್ಯೆ 16(ಎ) ಬ್ಯಾಂಕ್‌ಗಳಲ್ಲಿ ಕೊಡುತ್ತಾರೆ. ಗ್ರಾಹಕರು ಪ್ರತಿ ವರ್ಷ ಈ ಆದಾಯವನ್ನು ರಿಟರ್ನ್ಸ್‌ನಲ್ಲಿ ತೋರಿಸಬಹುದು. ಆರ್.ಡಿ. ಹಾಗೂ ನಗದು ಸರ್ಟಿಫಿಕೇಟ್‌ಗಳಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಬಡ್ಡಿಯನ್ನು ಅಸಲಿಗೆ ಸೇರಿಸುವುದರಿಂದ ಠೇವಣಿಯು ಚಕ್ರಬಡ್ಡಿಯಲ್ಲಿ ಬೆಳೆಯುತ್ತದೆ. ತೆರಿಗೆ ಭಯದಿಂದ ಆರ್.ಡಿ. ಅಥವಾ ನಗದು ಸರ್ಟಿಫಿಕೇಟ್ ಮಾಡುವುದನ್ನು ಓದುಗರು ಎಂದಿಗೂ ನಿಲ್ಲಿಸಬೇಡಿ.

ನಾಗಲಕ್ಷ್ಮಿ, ಹೊನ್ನಾವರ

- **ಪ್ರಶ್ನೆ:** ನಾನು ಗೃಹಿಣಿ. ನನ್ನ ಜೀವನಕ್ಕೆ ಆಧಾರ ಕೃಷಿ. ನಮಗೆ ಕೃಷಿಯಿಂದ ದೊಡ್ಡ ಆದಾಯ ಇಲ್ಲ. ಬಿಡುವಿನ ವೇಳೆಯಲ್ಲಿ ಟೈಲರಿಂಗ್ ಮಾಡುತ್ತೇನೆ. ನಾನು ಪ್ಯಾನ್ ಹಾಗೂ ಆಧಾರ್ ಕಾರ್ಡ್ ಮಾಡಿಸಿದ್ದೇನೆ. ನಮ್ಮ ಹಳ್ಳಿಯಲ್ಲಿ ನನ್ನ ಗೆಳೆಯರೊಬ್ಬರು ಪ್ಯಾನ್ ಹಾಗೂ ಆಧಾರ್ ಕಾರ್ಡ್ ಹೊಂದಿದ್ದರೆ ಆದಾಯ ತೆರಿಗೆ ರಿಟರ್ನ್ಸ್ ತುಂಬಬೇಕು ಹಾಗೂ ತುಂಬದಿರುವಲ್ಲಿ ಐ.ಟಿ. ಇಲಾಖೆಯಿಂದ ನೋಟಿಸ್ ಬರುತ್ತದೆ ಎಂದು ಹೇಳಿದರು. ಜನಸಾಮಾನ್ಯರಲ್ಲಿ ಹಾಗೂ ಮುಖ್ಯವಾಗಿ ಮಹಿಳೆಯರಲ್ಲಿ ಈ ಬಗ್ಗೆ ಗೊಂದಲ ಇದೆ. ಸ್ಪಷ್ಟನೆ ನೀಡಿ.

ಉತ್ತರ: ಪ್ರಸ್ತುತ ಇರುವ ಆದಾಯ ತೆರಿಗೆ ಕಾನೂನಿನ ಪ್ರಕಾರ, ಮಹಿಳೆಯರು ಮಕ್ಕಳು ಸೇರಿ ಯಾವ ವ್ಯಕ್ತಿಯೂ ಆತನ ವಾರ್ಷಿಕ ಒಟ್ಟು ಆದಾಯ ₹ 5 ಲಕ್ಷ ದಾಟುವ ತನಕ ಆದಾಯ ತೆರಿಗೆ ಕೊಡುವ ಅವಶ್ಯಕತೆ ಇಲ್ಲ. ಇದೇ ವೇಳೆ, ಕೃಷಿಯಿಂದ ಬರುವ ಆದಾಯಕ್ಕೆ ಯಾವುದೇ ಮಿತಿ ಇಲ್ಲದೇ ಸೆಕ್ಷನ್ 10 (I) ಆಧಾರದ ಮೇಲೆ ಸಂಪೂರ್ಣ ವಿನಾಯಿತಿ ಇದೆ. ನಿಮ್ಮ ಊರಿನಲ್ಲಿ ನೀವು ಬಿಡುವಿನ ವೇಳೆಯಲ್ಲಿ ಮಾಡುವ ಟೈಲರಿಂಗ್‌ನಿಂದ ಬರುವ ಆದಾಯ ವಾರ್ಷಿಕ ₹ 5 ಲಕ್ಷ ದಾಟಲು ಸಾಧ್ಯವೇ ಇಲ್ಲ. ಇನ್ನು ಐ.ಟಿ. ರಿಟರ್ನ್ಸ್ ತುಂಬುವ ವಿಚಾರ. ಓರ್ವ ವ್ಯಕ್ತಿಯ ವಾರ್ಷಿಕ ಆದಾಯ ₹ 2.50 ಲಕ್ಷ ದಾಟಿದಲ್ಲಿ (ಹಿರಿಯ ನಾಗರಿಕರಾದಲ್ಲಿ ₹ 3 ಲಕ್ಷ, 80 ವರ್ಷ ದಾಟಿದ ಅತಿ ಹಿರಿಯ ನಾಗರಿಕರಿಗೆ ₹ 5 ಲಕ್ಷ) ತೆರಿಗೆ ರಿಟರ್ನ್ಸ್ ಸಲ್ಲಿಸಬೇಕಾಗುತ್ತದೆ. ನಿಮ್ಮ ಗೆಳೆಯರು ತಿಳಿಸಿದಂತೆ ಪ್ಯಾನ್ ಹಾಗೂ ಆಧಾರ್ ಹೊಂದಿದವರೆಲ್ಲಾ ಐ.ಟಿ. ರಿಟರ್ನ್ಸ್ ತುಂಬಬೇಕು ಎನ್ನುವ ಮಾತು ಸತ್ಯಕ್ಕೆ ದೂರವಾದುದು. ನೀವು ತೆರಿಗೆ ಸಲ್ಲಿಸುವ ಅಥವಾ ಐ.ಟಿ. ರಿಟರ್ನ್ಸ್ ತುಂಬುವ ಅವಶ್ಯಕತೆ ಇಲ್ಲ.

ಕೃಷ್ಣಕುಮಾರ್, ವೈಟ್‌ಫೀಲ್ಡ್

- **ಪ್ರಶ್ನೆ:** ನನ್ನ ವಯಸ್ಸು 27 ವರ್ಷ. ಐ.ಟಿ. ಕಂಪನಿಯಲ್ಲಿ ಕೆಲಸ. ವಾರ್ಷಿಕ ಪ್ಯಾಕೇಜ್ ₹ 15 ಲಕ್ಷ. ಅವಿವಾಹಿತ. ಕೆಲಸಕ್ಕೆ ಸೇರಿ 4 ವರ್ಷ ಆಗಿದೆ. ನಿಮ್ಮ ಅಂಕಣದಿಂದ ಸ್ಫೂರ್ತಿ ಪಡೆದು ಹಣ ಉಳಿಸುತ್ತಾ ಬಂದಿದ್ದೇನೆ. ನನ್ನ ಉಳಿತಾಯ ಖಾತೆಯಲ್ಲಿ ₹ 13 ಲಕ್ಷ ಇದೆ. ಸ್ವಂತ ಮನೆ ಮಾಡಿಕೊಳ್ಳಬೇಕು. ಜೀವನದ ಸಂಜೆಗೆ ಉತ್ತಮ ಹೂಡಿಕೆ ಬೇಕು. ದಯಮಾಡಿ ಮಾರ್ಗದರ್ಶನ ಮಾಡಿ.

ಉತ್ತರ: ₹ 13 ಲಕ್ಷ ಉಳಿತಾಯ ಖಾತೆಯಲ್ಲಿ ಇರುವುದನ್ನು ಬಿಟ್ಟು ಬೇರಾವ ಉಳಿತಾಯದ ಬಗ್ಗೆ ನೀವು ತಿಳಿಸಿಲ್ಲ. ಜೀವನದ ಭದ್ರತೆಗೆ ಸಂಬಳದ ಕನಿಷ್ಠ ಶೇಕಡ 10ರಷ್ಟು ಜೀವ ವಿಮೆಗೆ ತೆಗೆದಿಡಿ. ಸೆಕ್ಷನ್ 80ಸಿ ಆಧಾರದ ಮೇಲೆ ಪಿಪಿಎಫ್ ಹಾಗೂ ಜೀವ ವಿಮೆಯಲ್ಲಿ ವಾರ್ಷಿಕ ಕನಿಷ್ಠ ₹ 1.50 ಲಕ್ಷ ಹಣ ಹೂಡಿಕೆ ಮಾಡಿ, ಒಟ್ಟು ಆದಾಯದಿಂದ ಕಳೆದು ತೆರಿಗೆ ಸಲ್ಲಿಸಿರಿ. ಇದೇ ವೇಳೆ ಸೆಕ್ಷನ್ 80ಸಿಸಿಡಿ (1ಬಿ) ಆಧಾರದ ಮೇಲೆ ಕನಿಷ್ಠ ₹ 50 ಸಾವಿರ ವಾರ್ಷಿಕವಾಗಿ ಹಣ ಎನ್.ಪಿ.ಎಸ್.ನಲ್ಲಿ ಹೂಡಿಕೆ ಮಾಡಿ. ಒಟ್ಟು ಆದಾಯದಿಂದ ಕಳೆದು ತೆರಿಗೆ ಸಲ್ಲಿಸಿರಿ. ಮದುವೆ ತನಕ ಪ್ರತಿ ವರ್ಷ ಕನಿಷ್ಠ 20 ಗ್ರಾಂ ಬಂಗಾರದ ನಾಣ್ಯ ಕೊಳ್ಳಿರಿ. ನಿಮ್ಮ ಖರ್ಚು, ತೆರಿಗೆ, ಸಂಬಳದಲ್ಲಿ ಕಡಿತ ಇವೆಲ್ಲಾ ಪರಿಗಣಿಸಿ ₹ 30 ಸಾವಿರದ ಆರ್.ಡಿ.ಯನ್ನು 2 ವರ್ಷಗಳ ಅವಧಿಗೆ ಮಾಡಿ. ನೀವು ಗೃಹ ಸಾಲ ಪಡೆದಲ್ಲಿ ಅಸಲು ಬಡ್ಡಿಯಲ್ಲಿ ತೆರಿಗೆ ವಿನಾಯಿತಿ ಇದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ–ಮೇಲ್: businessdesk@prajavani.co.in

‘ಆಕಾಶ್’ ವಿದ್ಯಾರ್ಥಿ ವೇತನಕ್ಕೆ ಡಿ.4ರಿಂದ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ’ಆಕಾಶ್’ ಇನ್‌ಸ್ಟಿಟ್ಯೂಟ್‌ನ ವಾರ್ಷಿಕ ರಾಷ್ಟ್ರೀಯ ವಿದ್ಯಾರ್ಥಿ ವೇತನ ಪರೀಕ್ಷೆ ಡಿಸೆಂಬರ್ 4ರಿಂದ 12ರವರೆಗೆ ನಡೆಯಲಿದೆ.

‘ಆಕಾಶ್ ನ್ಯಾಷನಲ್ ಟ್ಯಾಲೆಂಟ್ ಹಂಟ್ ಎಕ್ಸಾಮ್’ (ಆಂಥೆ) ಅನ್ನು 7ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿದ್ದು, ಶೇಕಡ 100ರವರೆಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ಎಲ್ಲ ತರಗತಿಗಳ ಪೈಕಿ ಉತ್ತಮ ಸಾಧನೆ ಮಾಡುವ ಐವರಿಗೆ ಮತ್ತು ಒಬ್ಬ ಪಾಲಕರಿಗೆ ನಾಸಾಗೆ ಭೇಟಿ ನೀಡಲು ಉಚಿತ ಪ್ರವಾಸದ ಅವಕಾಶವನ್ನು ಪಡೆಯಲಿದ್ದಾರೆ’ ಎಂದು ‘ಆಕಾಶ್’ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕ ಧೀರಜ್ ಕುಮಾರ್ ಮಿಶ್ರಾ ಮಂಗಳವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘2010ರಿಂದ 23 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ವಿದ್ಯಾರ್ಥಿ ವೇತನದ ಜತೆಗೆ ಹೆಚ್ಚು ಅಂಕಗಳಿಸಿದವರಿಗೆ ನಗದು ಪುರಸ್ಕಾರ ಮತ್ತು ಉಚಿತವಾಗಿ ಸ್ಕೂಲ್ ಬೂಸ್ಟರ್ ಕೋರ್ಸ್ ಸಹ ದೊರೆಯಲಿದೆ’ ಎಂದು ತಿಳಿಸಿದ್ದಾರೆ.

‘ಈ ಬಾರಿಯ ಆಂಥೆಯನ್ನು ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ 24 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ನಡೆಸಲಾಗುತ್ತಿದೆ. ದೇಶದಲ್ಲಿನ ಎಲ್ಲ ಆಕಾಶ್ ಇನ್‌ಸ್ಟಿಟ್ಯೂಟ್‌ನ 215ಕ್ಕೂ ಹೆಚ್ಚು ಕೇಂದ್ರಗಳಲ್ಲಿ ಬೆಳಿಗ್ಗೆ 10.30ರಿಂದ 11.30ರವರೆಗೆ ಮತ್ತು ಸಂಜೆ 4ರಿಂದ 5ಗಂಟೆಯವರೆಗೆ ಕೋವಿಡ್–19 ಮಾರ್ಗಸೂಚಿಗೆ ಬದ್ಧವಾಗಿ ಪರೀಕ್ಷೆಗಳು ನಡೆಯಲಿವೆ’ ಎಂದು ಅವರು ವಿವರಿಸಿದರು.

ಮುಂಬೈ ಧಾರಣೆ

ಶೇಂಗಾ

12-10-2021

ಜಾವಾ 70/80(ಹೊಸ)	11500-11550
ಜಾವಾ 80/90(ಹೊಸ)	11200-11250
ದಪ್ಪ ಮಧ್ಯಪ್ರದೇಶ(ಹೊಸ)	10700-10800
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1505 (1530)
ಒಂದು ವಾರದ ಡೆಲಿವರಿ	1500 (1525)
ಸೋಯಾ ಕಚ್ಚಾ	1332 (1337)
ಪಾಮ್ ವಾರದ ಡೆಲಿವರಿ	1240 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1365 (1360)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,200 (46,900)
ಬೆಳ್ಳಿ ಕೆ.ಜಿ 61,650 (61,550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪೌಷ್ಟಿಕ ಆಹಾರ ಸೇವಿಸಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ



ಐಪಿಎಲ್‌ನಲ್ಲಿರುವಷ್ಟು ಕಾಲ ಬೆಂಗಳೂರು ತಂಡದಲ್ಲಿ ಆಡುತ್ತೇನೆ ಎಂದ 'ನಾಯಕ'

ಆರ್‌ಸಿಬಿ ಸಾರಥ್ಯಕ್ಕೆ ವಿರಾಟ್ 'ವಿದಾಯ'

ಶಾರ್ಜಾ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಯುವಪ್ರತಿಭೆಗಳಿಗೆ ಅವಕಾಶ ನೀಡುವ ಸಂಪ್ರದಾಯವನ್ನು ರೂಢಿಸಿದ್ದೇನೆ. ಮುಂಬರುವ ನಾಯಕರೂ ಈ ಪದ್ಧತಿಯನ್ನು ಮುಂದುರಿಸಲಿ ಎಂದು ವಿರಾಟ್ ಕೊಹ್ಲಿ ಹೇಳಿದ್ದಾರೆ.

ಈ ಐಪಿಎಲ್ ಟೂರ್ನಿಯ ನಂತರ ತಂಡದ ನಾಯಕತ್ವ ಬಿಟ್ಟುಕೊಡುವುದಾಗಿ ಕೊಹ್ಲಿ ಹೇಳಿದ್ದರು. ಈ ಕುರಿತು ಭಾನುವಾರ ಅವರು ಕೋಲ್ಕತ್ತ ನೈಟ್ ರೈಡರ್ಸ್ ಎದುರಿನ ಎಲಿಮಿನೇಟರ್ ಪಂದ್ಯದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಒಂಬತ್ತು ವರ್ಷಗಳಿಂದ ವಿರಾಟ್ ತಂಡದ ನಾಯಕರಾಗಿದ್ದರು. 2008ರಿಂದಲೂ ಐಪಿಎಲ್‌ನಲ್ಲಿ ಆಡುತ್ತಿರುವ ಆರ್‌ಸಿಬಿ ಇದುವರೆಗೂ ಟ್ರೋಫಿ ಗೆದ್ದಿಲ್ಲ.


'ತಂಡದಲ್ಲಿ ಉತ್ತಮ ಸಂಸ್ಕೃತಿ ಮತ್ತು ಯುವಪ್ರತಿಭೆಗಳಿಗೆ ಭರಪೂರ ಅವಕಾಶ ನೀಡಲು ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡಿದ್ದೇನೆ. ನನ್ನ ಶ್ರೇಷ್ಠ ಸಾಮರ್ಥ್ಯವನ್ನು ಧಾರೆಯೆರೆದಿದ್ದೇನೆ. ಯುವಕರು ಮುಕ್ತ ಮನಸ್ಸು ಮತ್ತು ಆತ್ಮವಿಶ್ವಾಸದಿಂದ ಆಡುವಂತೆ ಪ್ರೋತ್ಸಾಹಿಸಿದ್ದೇನೆ. ಭಾರತ ತಂಡದಲ್ಲಿ ಪಾಲಿಸಿದ ಸಂಪ್ರದಾಯವನ್ನೇ ಇಲ್ಲಿಯೂ ಅನುಸರಿಸುವ ಪ್ರಯತ್ನ ಮಾಡಿದ್ದೇನೆ' ಎಂದು ಕೊಹ್ಲಿ ಹೇಳಿದ್ದಾರೆ.

'ನಾಯಕತ್ವ ತೊರೆದ ನಂತರವೂ ಆರ್‌ಸಿಬಿಯಲ್ಲಿಯೇ ಆಡುತ್ತೇನೆ. ಬೇರೆ ತಂಡದಲ್ಲಿ ಆಡುವ ಯೋಚನೆ ನನಗಿಲ್ಲ. ನಿಷ್ಠೆ, ಪ್ರಾಮಾಣಿಕತೆ ನನಗೆ ಮಹತ್ವದ್ದು. ಐಪಿಎಲ್‌ನಲ್ಲಿ ಆಡುವಷ್ಟು ಕಾಲವೂ ಆರ್‌ಸಿಬಿಯಲ್ಲಿಯೇ ಇರುತ್ತೇನೆ' ಎಂದು ಸ್ಪಷ್ಟಪಡಿಸಿದರು.

ಎಲಿಮಿನೇಟರ್ ಪಂದ್ಯದ ಸೋಲಿನ ಕುರಿತು ಪ್ರತಿಕ್ರಿಯಿಸಿದ ಅವರು, 'ಪಂದ್ಯದ ಮಧ್ಯದಲ್ಲಿ ಕೆಕೆಆರ್ ಸ್ಪಿನ್ನರ್‌ಗಳು ಪ್ರಾಬಲ್ಯ ಮೆರೆದರು. ಸುನೀಲ್ ನಾರಾಯಣ್ ಆಲ್‌ರೌಂಡ್ ಮತ್ತು ಶಕೀಬ್ ಅಲ್ ಹಸನ್, ವರುಣ್ ಚಕ್ರವರ್ತಿಯವರ ಬಿಗಿದಾಳಿಯು ನಮ್ಮ ಬ್ಯಾಟಿಂಗ್ ಪಡೆ ಮೇಲೆ ಒತ್ತಡ ಹೆಚ್ಚಿಸಿತು' ಎಂದರು.

'ಪಂದ್ಯದಲ್ಲಿ ನಾವು ಸುಲಭವಾಗಿ ಶರಣಾಗಲಿಲ್ಲ. ಕೊನೆಯ ಓವರ್‌ನವರೆಗೂ ಹೋರಾಟ ಮಾಡಿದೆವು. ನಮ್ಮ ಆಟಗಾರರ ಛಲವೇ ಈ ತಂಡದ ಪ್ರಮುಖ ಗುಣ' ಎಂದರು.

ಆರ್‌ಸಿಬಿ ಬ್ರ್ಯಾಂಡ್ ಮೌಲ್ಯ ವರ್ಧಿಸಿದ ಕೊಹ್ಲಿ: ಗಾವಸ್ಕರ್



ದುಬೈ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪ್ರಜ್ವಲಿಸುವ ವರ್ಚಸ್ಸಿಗೆ ವಿರಾಟ್ ಕೊಹ್ಲಿ ನಾಯಕತ್ವ ಕಾರಣ. ತಂಡಕ್ಕೊಂದು ಬ್ರ್ಯಾಂಡ್ ಮೌಲ್ಯ ತಂದುಕೊಟ್ಟ ಶ್ರೇಯ ಅವರಿಗೆ ಸಲ್ಲುತ್ತದೆ ಎಂದು ದಿಗ್ಗಜ ಕ್ರಿಕೆಟಿಗ ಸುನೀಲ್ ಗಾವಸ್ಕರ್ ಹೇಳಿದ್ದಾರೆ.

'ಕೆಲವೇ ಕ್ರಿಕೆಟಿಗರು ಮತ್ತು ನಾಯಕರು ತಮ್ಮ ಫ್ರ್ಯಾಂಚೈಸ್‌ಗೆ ಇಂತಹದೊಂದು ಕಳೆ ತುಂಬಿದ್ದಾರೆ. ಆದರೆ, ಕೊಹ್ಲಿ ಕಾಣಿಕೆಯು ಉನ್ನತಮಟ್ಟದ್ದಾಗಿದೆ. ಇದು ಎಲ್ಲರಿಂದಲೂ ಸಾಧ್ಯವಾಗದು' ಎಂದು ಸ್ಟಾರ್ ಸ್ಪೋರ್ಟ್ಸ್‌ಗೆ ಹೇಳಿಕೆ ನೀಡಿದ್ದಾರೆ.

ವಿರಾಟ್ ನಾಯಕತ್ವದ ಕೊನೆಯ ಪಂದ್ಯವನ್ನು ಗಾವಸ್ಕರ್ ಅವರು, ಡಾನ್ ಬ್ರಾಡ್ಮನ್ ಮತ್ತು ಸಚಿನ್ ತೆಂಡೂಲ್ಕರ್ ಅವರ ವಿದಾಯದ ಪಂದ್ಯಗಳಿಗೆ ಹೋಲಿಕೆ ಮಾಡಿದ್ದಾರೆ.

'ತಮ್ಮ ಕೊನೆಯ ಪಂದ್ಯದಲ್ಲಿ ಅಮೋಘ ಯಶಸ್ಸಿನ ನಗುವಿನೊಂದಿಗೆ ಮರಳುವುದು ಎಲ್ಲ ಕ್ರಿಕೆಟಿಗರ ಆಸೆ. ಆದರೆ ಬಹಳಷ್ಟು ಶ್ರೇಷ್ಠ ಆಟಗಾರರಿಗೆ ಇದು ಸಾಧ್ಯವಾಗಿಲ್ಲ. ಡಾನ್ ಬ್ರಾಡ್ಮನ್ ತಮ್ಮ ಕೊನೆಯ ಇನಿಂಗ್ಸ್‌ನಲ್ಲಿ ಶೂನ್ಯಕ್ಕೆ ಔಟಾಗಿದ್ದರು. ಸಚಿನ್ ತೆಂಡೂಲ್ಕರ್ ಕೊನೆಯ ಇನಿಂಗ್ಸ್‌ನಲ್ಲಿ ಶತಕ ಬಾರಿಸುವ ಆಸೆ ಹೊಂದಿದ್ದರು. ಆದರೆ ಸಚಿನ್ ಅರ್ಧಶತಕ (74 ರನ್) ಗಳಿಸಿ ಔಟಾಗಿದ್ದರು. ವಿರಾಟ್ ನಾಯಕತ್ವದ ಕೊನೆಯ ಐಪಿಎಲ್‌ನಲ್ಲಿ ಪ್ರಶಸ್ತಿ ಜಯಿಸುವ ಕನಸು ಕಂಡಿದ್ದರು. ಆದರೆ, ಎಲಿಮಿನೇಟರ್‌ನಲ್ಲಿಯೇ ತಂಡವು ಹೊರಬಿತ್ತು' ಎಂದರು.

'ಕೊಹ್ಲಿ ತಂಡಕ್ಕೆ ನೀಡಿರುವ ಕಾಣಿಕೆ ಅಮೂಲ್ಯವಾದದ್ದು. ಅದೊಂದು ವರ್ಷ (2016) ವಿರಾಟ್ ಐಪಿಎಲ್‌ನಲ್ಲಿ 973 ರನ್‌ಗಳನ್ನು ಪೇರಿಸಿದ್ದರು. ಸಾವಿರಕ್ಕೆ 27 ರನ್‌ಗಳಷ್ಟೇ ವ್ಯತ್ಯಾಸವಿತ್ತು. ಇದು ಅಸಾಮಾನ್ಯರಿಂದ ಮಾತ್ರ ಸಾಧ್ಯ' ಎಂದು ಗಾವಸ್ಕರ್ ಶ್ಲಾಘಿಸಿದ್ದಾರೆ.

ಗೆಳೆಯನ ಶ್ಲಾಘಿಸಿದ ಎಬಿಡಿ



ಆರ್‌ಸಿಬಿ ತಂಡದ ಮೇಲೆ ತಾವು ರೂಪಿಸಿರುವ ಪ್ರಭಾವಳಿಯನ್ನು ಸ್ವತಃ ವಿರಾಟ್ ಕೊಹ್ಲಿಯವರಿಗೂ ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಕ್ರಿಕೆಟಿಗ ಎಬಿ ಡಿವಿಲಿಯರ್ಸ್ ಹೇಳಿದ್ದಾರೆ.

'ವಿರಾಟ್ ನಾಯಕತ್ವದ ವಹಿಸಿಕೊಂಡಾಗಿನಿಂದಲೂ ನಾನು ಅವರೊಂದಿಗಿದ್ದೇನೆ. ಈ ಕ್ಷಣದಲ್ಲಿ ನನಗೆ ಹೊಳೆಯುವ ಏಕೈಕ ಪದವೆಂದರೆ 'ಅದ್ಭುತ' ಎಂಬುದೊಂದೇ ಆಗಿದೆ. ತಮ್ಮಂತಹ ನಾಯಕನನ್ನು ಪಡೆದಿದ್ದು ನಮ್ಮ ಅದೃಷ್ಟ' ಎಂದು ಎಬಿಡಿ ವಿಡಿಯೊದಲ್ಲಿ ಹೇಳಿದ್ದಾರೆ.

'ವಿರಾಟ್ ನಾಯಕತ್ವದ ಶೈಲಿಯು ನಾನು ಒಬ್ಬ ಉತ್ತಮ ವ್ಯಕ್ತಿಯಾಗಿ, ಆಟಗಾರನಾಗಿ ಬೆಳೆಯಲು ನೆರವಾಗಿದೆ' ಎಂದು ದಕ್ಷಿಣ ಆಫ್ರಿಕಾದ ಎಬಿಡಿ ಹೇಳಿದ್ದಾರೆ.



ವಿರಾಟ್ ಕೊಹ್ಲಿ ಐಪಿಎಲ್ ಸಾಧನೆ

- 207 ಪಂದ್ಯ
- 6283 ಪಂದ್ಯ
- 113 ಶ್ರೇಷ್ಠ
- 129.95 ಸ್ಟ್ರೈಕ್‌ರೇಟ್
- 5 ಶತಕ
- 42 ಅರ್ಧಶತಕ
- 210 ಸಿಕ್ಸರ್
- 546 ಬೌಂಡರಿ

ಆರ್‌ಸಿಬಿ ನಾಯಕರ ಸಾಧನೆ

ನಾಯಕ	ದೇಶ	ಅವಧಿ	ಪಂದ್ಯ	ಜಯ	ಸೋಲು	ಫಲಿತಾಂಶ ಇಲ್ಲ
ರಾಹುಲ್‌ದ್ರಾವಿಡ್	ಭಾರತ	2008	14	4	10	
ಕೆವಿನ್ ಪೀಟರ್ಸನ್	ಇಂಗ್ಲೆಂಡ್	2009	6	2	4	
ಅನಿಲ್‌ಕುಂಬ್ಳೆ	ಭಾರತ	2009-10	35	19	16	
ಡೇನಿಯಲ್ ವೆಟೋರಿ	ನ್ಯೂಜಿಲೆಂಡ್	2011-12	28	15	13	
ವಿರಾಟ್‌ಕೊಹ್ಲಿ	ಭಾರತ	2013-21	140	66	70	4
ಶೇನ್‌ವಾಟ್ಸನ್	ಆಸ್ಟ್ರೇಲಿಯಾ	2017	3	1	2	

ಫೈನಲ್ ಪ್ರವೇಶಕ್ಕೆ ಪಂತ್–ಮಾರ್ಗನ್ ಜಿದ್ದಾಜಿದ್ದಿ

ಎರಡನೇ ಕ್ವಾಲಿಫೈಯರ್: ಡೆಲ್ಲಿ–ಕೋಲ್ಕತ್ತ ಮುಖಾಮುಖಿ

ಶಾರ್ಜಾ (ಪಿಟಿಐ): ಮೊದಲ ಪ್ರಶಸ್ತಿ ಜಯದತ್ತ ಕಣ್ಣಿಟ್ಟಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಅಡ್ಡಗಾಲು ಹಾಕುವ ಛಲದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಬಳಗವಿದೆ.

ಬುಧವಾರ ನಡೆಯಲಿರುವ ಎರಡನೇ ಕ್ವಾಲಿಫೈಯರ್‌ನಲ್ಲಿ ಉಭಯ ತಂಡಗಳು ಮುಖಾಮುಖಿಯಾಗಲಿವೆ.

ಸೋಮವಾರ ನಡೆದ ಎಲಿಮಿನೇಟರ್‌ನಲ್ಲಿ ಸುನೀಲ್ ನಾರಾಯಣ್ ಆಲ್‌ರೌಂಡ್ ಆಟದ ಬಲದಿಂದ ಕೋಲ್ಕತ್ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಜಯಿಸಿದೆ. ಅದರಿಂದಾಗಿ ತಂಡವು ಅಪಾರ ಆತ್ಮವಿಶ್ವಾಸದಲ್ಲಿದೆ. ತಂಡದ ಶುಭಮನ್ ಗಿಲ್, ರಾಹುಲ್ ತ್ರಿಪಾಠಿ, ನಿತೀಶ್ ರಾಣಾ ಉತ್ತಮ ಲಯದಲ್ಲಿದ್ದಾರೆ.

ಸ್ಪಿನ್ನರ್ ವರುಣ್ ಚಕ್ರವರ್ತಿ, ಆಲ್‌ರೌಂಡರ್ ಶಕೀಬ್ ಅಲ್ ಹಸನ್ ಮತ್ತು ಮಧ್ಯಮವೇಗಿ ಲಾಕಿ ಫರ್ಗ್ಯುಸನ್ ತಂಡಕ್ಕೆ ಜಯ ತಂದುಕೊಡುವ ಸಮರ್ಥರು.ಆದರೆ, ಲೀಗ್ ಹಂತದಲ್ಲಿ ಅಗ್ರಸ್ಥಾನ ಗಳಿಸಿ ಪ್ಲೇ ಆಫ್ ಪ್ರವೇಶಿಸಿದ್ದ ರಿಷಭ್ ಪಂತ್ ನಾಯಕತ್ವದ ಡೆಲ್ಲಿ ತಂಡವು ಮೊದಲ ಕ್ವಾಲಿಫೈಯರ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಎದುರು ಸೋತಿತ್ತು.ಟೂರ್ನಿಯಲ್ಲಿ ಅತ್ಯಂತ ಸಮತೋಲಿತ ತಂಡವಾಗಿರುವ ಡೆಲ್ಲಿ ಮಹೇಂದ್ರಸಿಂಗ್ ಧೋನಿಯ ತಂತ್ರಗಾರಿಕೆಯ ಮುಂದೆ ಶರಣಾಗಿತ್ತು. ಅಲ್ಲದೇ ಕೊನೆಯ ಓವರ್‌ನಲ್ಲಿ ಧೋನಿಯನ್ನು ಕಟ್ಟಿಹಾಕುವಲ್ಲಿ ತಂಡದ ಬೌಲರ್ ಟಾಮ್ ಕರನ್ ವಿಫಲರಾಗಿದ್ದರು. ತಂಡದಲ್ಲಿದ್ದ ಅನುಭವಿ ಕಗಿಸೊ ರಬಾಡ ಅವರನ್ನು ಸಮರ್ಥವಾಗಿ ದುಡಿಸಿಕೊಳ್ಳುವಲ್ಲಿ ರಿಷಭ್ ಎಡವಿದ್ದರು.ಆ ಎಲ್ಲ ಲೋಪಗಳನ್ನೂ ತಿದ್ದಿಕೊಂಡರೆ, ಡೆಲ್ಲಿ ತಂಡವು ಎದುರಾಳಿ ಕೋಲ್ಕತ್ತಾಗೆ ಕಠಿಣ ಸವಾಲೊಡ್ಡಬಹುದು. ಈ ಪಂದ್ಯದಲ್ಲಿ ಜಯಿಸಿ ಫೈನಲ್‌ನಲ್ಲಿ ಮತ್ತೆ ಧೋನಿ ಬಳಗವನ್ನು ಎದುರಿಸಬಹುದು!


ರಿಷಭ್ ಪಂತ್

ತಂಡಗಳು: ಡೆಲ್ಲಿ ಕ್ಯಾಪಿಟಲ್ಸ್: ರಿಷಭ್ ಪಂತ್ (ನಾಯಕ), ಪೃಥ್ವಿ ಶಾ, ಶಿಖರ್ ಧವನ್, ಶಿಮ್ರೊನ್ ಹೆಟ್ಮೆಯರ್, ರಿಪಲ್ ಪಟೇಲ್, ಶ್ರೇಯಸ್ ಅಯ್ಯರ್, ಸ್ಟೀವ್ ಸ್ಮಿತ್, ಎನ್ರಿಚ್ ನಾರ್ಕಿಯಾ, ಆವೇಶ್ ಖಾನ್, ಕಗಿಸೊ ರಬಾಡ, ಟಾಮ್ ಕರನ್, ಆರ್. ಅಶ್ವಿನ್, ಮಾರ್ಕಸ್ ಸ್ಟೋಯಿನಿಸ್, ಅಮಿತ್ ಮಿಶ್ರಾ.

ಕೋಲ್ಕತ್ತ ನೈಟ್ ರೈಡರ್ಸ್: ಏಯಾನ್ ಮಾರ್ಗನ್ (ನಾಯಕ), ವೆಂಕಟೇಶ್ ಅಯ್ಯರ್, ದಿನೇಶ್ ಕಾರ್ತಿಕ್, ನಿತೀಶ್ ರಾಣಾ, ಶುಭಮನ್ ಗಿಲ್, ರಾಹುಲ್ ತ್ರಿಪಾಠಿ, ಲಾಕಿ ಫರ್ಗ್ಯುಸನ್, ಶಿವಂ ದುಬೆ, ವರುಣ್ ಚಕ್ರವರ್ತಿ, ಸುನೀಲ್ ನಾರಾಯಣ್, ಆ್ಯಂಡ್ರೆ ರಸೆಲ್, ಶಕೀಬ್ ಅಲ್ ಹಸನ್, ಪ್ರಸಿದ್ಧ ಕೃಷ್ಣ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್ ಪಟೇಲ್	ಆರ್‌ಸಿಬಿ	32
ಆವೇಶ್ ಖಾನ್	ಡೆಲ್ಲಿ	23
ಬೂಮ್ರಾ	ಮುಂಬೈ	21

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಕೆ.ಎಲ್.ರಾಹುಲ್	ಪಂಜಾಬ್	626
ಋತುರಾಜ್	ಚೆನ್ನೈ	603
ಶಿಖರ್ ಧವನ್	ಡೆಲ್ಲಿ	551

ಟಿಟಿ: ರೋಹಿತ್‌ಗೆ ಪ್ರಶಸ್ತಿ ಡಬಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೇಷ್ಠ ಸಾಮರ್ಥ್ಯ ತೋರಿದ ರೋಹಿತ್ ಶಂಕರ್ ಅವರು ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ ಎರಡು ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದುಕೊಂಡರು. ನಾನ್ ಮೆಡಲಿಸ್ಟ್ ಡಬಲ್ಸ್ ವಿಭಾಗದಲ್ಲಿ ದಿವಿತ್ ಯಕ್ಕುಂಡಿ ಮತ್ತು ಗಣೇಶ್ ಹಿರೇಮಠ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಮಲ್ಲೇಶ್ವರಂ ಸಂಸ್ಥೆ ಆಯೋಜಿಸಿರುವ ಟೂರ್ನಿಯಲ್ಲಿ 17 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಹಾಗೂ 19 ವರ್ಷದೊಳಗಿನವರ ವಿಭಾಗದಲ್ಲಿ ರೋಹಿತ್ ಅವರಿಗೆ ಪ್ರಶಸ್ತಿಗಳು ಒಲಿದವು.

17 ವರ್ಷದೊಳಗಿನವರ ವಿಭಾಗದ ಫೈನಲ್‌ನಲ್ಲಿ ರೋಹಿತ್ 11–7, 9–11, 11–6, 9–11, 11–5, 11–5ರಿಂದ ಆಕಾಶ್ ಕೆ.ಜೆ. ಅವರನ್ನು ಮಣಿಸಿದರು.

ನಾಲ್ಕರ ಘಟ್ಟದ ಪಂದ್ಯಗಳಲ್ಲಿ ರೋಹಿತ್ 11–7, 6–11, 11–8, 11–5, 11–9ರಿಂದ ವರುಣ್ ಕಶ್ಯಪ್ ಎದುರು ಜಯಿಸಿದ್ದರೆ, ಆಕಾಶ್ 11–5, 11–1, 11–5, 11–5ರಿಂದ ಪಿ.ವಿ. ಶ್ರೀಕಾಂತ್ ಕಶ್ಯಪ್ ಎದುರು ಗೆದ್ದಿದ್ದರು.

ಬಾಲಕರ 19 ವರ್ಷದೊಳಗಿನವರ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ರೋಹಿತ್ 4–11, 14–12, 11–4, 13–11, 11–8ರಿಂದ ಶ್ರೀಕಾಂತ್ ಕಶ್ಯಪ್ ಅವರನ್ನು ಸೋಲಿಸಿದರು.

ಸೆಮಿಫೈನಲ್ ಸೆಣಸಾಟದಲ್ಲಿ ಶ್ರೀಕಾಂತ್ ಕಶ್ಯಪ್ 15–13, 11–4, 11–4, 11–8ರಿಂದ ಸಮ್ಯಕ್ ಕಶ್ಯಪ್ ಎದುರು, ರೋಹಿತ್ 2–11, 11–8, 11–5, 11–9, 11–7ರಿಂದ ಆಕಾಶ್ ವಿರುದ್ಧ ಗೆಲುವು ಸಾಧಿಸಿದ್ದರು.

ನಾನ್ ಮೆಡಲಿಸ್ಟ್ ಡಬಲ್ಸ್ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ದಿವಿತ್ ಹಾಗೂ ಗಣೇಶ್ 1-8, 9-11,9-11,11-9,11-7ರಿಂದ ಕೌಸ್ತುಭ್ ರಾವ್ ಮತ್ತು ಆಯುಷ್ ಅವರನ್ನು ಸೋಲಿಸಿದರು.


ಪ್ರಶಸ್ತಿಗಳೊಂದಿಗೆ (ಎಡದಿಂದ) ಗಣೇಶ್ ಹಿರೇಮಠ, ರೋಹಿತ್ ಶಂಕರ್ ಮತ್ತು ದಿವಿತ್ ಯಕ್ಕುಂಡಿ

ವಿಶ್ವಕಪ್: ಧೋನಿ ಸಂಭಾವನೆ ಪಡೆಯುತ್ತಿಲ್ಲ

ನವದೆಹಲಿ (ಪಿಟಿಐ): ಇದೇ ತಿಂಗಳು ಆರಂಭವಾಗಲಿರುವ ಟ್ವೆಂಟಿ 20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡದ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಲು ಮಹೇಂದ್ರಸಿಂಗ್ ಧೋನಿ ಯಾವುದೇ ಶುಲ್ಕ ಅಥವಾ ಸಂಭಾವನೆ ಪಡೆಯುತ್ತಿಲ್ಲ ಎಂದು ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ತಿಳಿಸಿದ್ದಾರೆ.

ಹೋದ ವರ್ಷ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಧೋನಿ ವಿದಾಯ ಹೇಳಿದ್ದರು. ಆದರೆ, ಐಪಿಎಲ್ ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕರಾಗಿದ್ದಾರೆ. ಈ ಬಾರಿಯ ಟೂರ್ನಿಯಲ್ಲಿ ಅವರ ತಂಡವು ಫೈನಲ್ ಪ್ರವೇಶಿಸಿದೆ.

ಆದ್ದರಿಂದ ವಿಶ್ವಕಪ್ ಟೂರ್ನಿಯಲ್ಲಿ ಅವರು ಮಾರ್ಗದರ್ಶಕರಾಗುವುದು ಹಿತಾಸಕ್ತಿ ಸಂಘರ್ಷ ನಿಯಮದ ಉಲ್ಲಂಘನೆ ಎಂಬ ದೂರುಗಳು ಕೇಳಿಬಂದಿದ್ದವು.

ಈ ಹಿನ್ನೆಲೆಯಲ್ಲಿ ಗಂಗೂಲಿ ಈ ಕುರಿತು ಸ್ಪಷ್ಟನೆ ನೀಡಿದ್ದಾರೆ.


ಮಹೇಂದ್ರಸಿಂಗ್ ಧೋನಿ

'ಗೆಳತಿಯ ಅವಹೇಳನ ಮಾಡಬೇಡಿ'

ಶಾರ್ಜಾ (ಪಿಟಿಐ): 'ಪಂದ್ಯದಲ್ಲಿ ನಾನು ಚೆನ್ನಾಗಿ ಆಡಲು ಸಾಧ್ಯವಾಗಿಲ್ಲವೆಂಬುದು ನಿಜ. ಇದು ಕ್ರೀಡೆಯಲ್ಲಿ ಸಹಜ. ಅದಕ್ಕೂ ಆಕೆಗೂ ಸಂಬಂಧವಿಲ್ಲ. ನನ್ನ ಗೆಳತಿಯನ್ನು ಅವಹೇಳನ ಮಾಡಬೇಡಿ'–

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರ ಡ್ಯಾನ್ ಕ್ರಿಸ್ಟಿಯನ್ ತಮ್ಮ ಇನ್ಸ್ಟಾಗ್ರಾಮ್‌ನಲ್ಲಿ ಬರೆದಿರುವ ಮನವಿ ಇದು.

ಸೋಮವಾರ ರಾತ್ರಿ ಆರ್‌ಸಿಬಿಯು ಎಲಿಮಿ ನೇಟರ್ ಪಂದ್ಯದಲ್ಲಿ ಸೋತಿತ್ತು. ಪಂದ್ಯದಲ್ಲಿ ಡ್ಯಾನ್ 1.4 ಓವರ್ ಬೌಲಿಂಗ್ ಮಾಡಿ 29 ರನ್‌ಗಳನ್ನು ಕೊಟ್ಟಿದ್ದರು. ವಿಕೆಟ್ ಗಳಿಸಿರಲಿಲ್ಲ. ಬ್ಯಾಟಿಂಗ್‌ನಲ್ಲಿಯೂ ಕೇವಲ ಒಂಬತ್ತು ರನ್ ಗಳಿಸಿದ್ದರು. ಅದಕ್ಕಾಗಿ ಅವರನ್ನು ಸಾಮಾಜಿಕ ಜಾಲತಾಣಗಳಲ್ಲಿ ಅನೇಕರು ಕೆಟ್ಟ ಪದಗಳಿಂದ ನಿಂದಿಸಿದ್ದಾರೆ.

ಅಲ್ಲದೆ ಅವರ ಬಾಳಗೆಳತಿ ಜಾರ್ಜಿಯಾ ಡನ್ (ಗರ್ಭಿಣಿಯಾಗಿದ್ದು ವಿಶ್ರಾಂತಿಯಲ್ಲಿದ್ದಾರೆ) ಅವರನ್ನೂ ಹೀಯಾಳಿಸಿದ್ದಾರೆ.'ಜಾರ್ಜಿಯಾರ ಇನ್ಸ್ಟಾಗ್ರಾಮ್ ಖಾತೆಗೆ ಹೋಗಿ ನೋಡಿ. ಎಂತಹ ಕೆಟ್ಟ ಕಮೆಂಟ್‌ಗಳನ್ನು ಬರೆದಿದ್ದಾರೆ. ಪಂದ್ಯಕ್ಕೂ ಆಕೆಗೂ ಸಂಬಂಧವಿಲ್ಲ. ಅವರನ್ನು ಎಳೆತರಬೇಡಿ' ಎಂದು ಡ್ಯಾನ್ ಬರೆದಿದ್ದಾರೆ.

ಆರ್‌ಸಿಬಿಯ ಯಶಸ್ವಿ ಬ್ಯಾಟ್ಸ್‌ಮನ್ ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಕೂಡ ಅಪಾರ ಟೀಕೆಗೊಳಗಾಗಿದ್ದಾರೆ.

ಇದರಿಂದ ಬೇಸರಗೊಂಡಿರುವ ಆಸ್ಟ್ರೇಲಿಯಾದ ಮ್ಯಾಕ್ಸ್‌ವೆಲ್, 'ಆಟಗಾರರ ಬಗ್ಗೆ ಪ್ರೀತಿ ಮತ್ತು ವಿಶ್ವಾಸದಿಂದ ಹಾರೈಸಿರುವ ಎಲ್ಲ ನಿಜವಾದ ಅಭಿಮಾನಿಗಳಿಗೆ ನಾನು ಕೃತಜ್ಞ. ದುರದೃಷ್ಟವಶಾತ್ ಕೆಲವು ಭಯಾನಕ ಮಂದಿ ಸಾಮಾಜಿಕ ಜಾಲತಾಣಗಳನ್ನು ನರಕಸದೃಶ ತಾಣಗಳನ್ನಾಗಿ ಮಾಡಿದ್ದಾರೆ. ಅಂತಹ ಹೀನಾಯ ಟೀಕೆಗಳನ್ನು ಸ್ವೀಕರಿಸಲು ಸಾಧ್ಯವಿಲ್ಲ' ಎಂದಿದ್ದಾರೆ.

ಗೆಲುವಿನ ಒತ್ತಡದಲ್ಲಿ ಚೆಟ್ರಿ ಬಳಗ

ಮಾಲೆ, ಮಾಲ್ಡೀವ್ಸ್ (ಪಿಟಿಐ): ಗೆಲ್ಲಲೇಬೇಕಾದ ಒತ್ತಡದಲ್ಲಿರುವ ಭಾರತ ತಂಡವು ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಆತಿಥೇಯ ಮಾಲ್ಡೀವ್ಸ್ ತಂಡದ ಸವಾಲು ಎದುರಿಸಲಿದೆ. ರೌಂಡ್ ರಾಬಿನ್ ಲೀಗ್‌ನಲ್ಲಿ ಸುನಿಲ್ ಚೆಟ್ರಿ ಪಡೆಗೆ ಇದು ಕೊನೆಯ ಸುತ್ತಿನ ಪಂದ್ಯವಾಗಿದೆ.

ಆಡಿದ ಮೂರು ಪಂದ್ಯಗಳಲ್ಲಿ ಒಂದು ಗೆಲುವು ಹಾಗೂ ಎರಡೂ ಡ್ರಾ ಸಾಧಿಸಿರುವ ಭಾರತ, ಈ ಪಂದ್ಯದಲ್ಲಿ ಸೋತರೆ ಅಥವಾ ಡ್ರಾ ಸಾಧಿಸಿದರೂ ಟೂರ್ನಿಯಿಂದಲೇ ಹೊರಬೀಳುವ ಅಪಾಯದಲ್ಲಿದೆ.ಡಿಫೆನ್ಸ್ ವಿಭಾಗದಲ್ಲಿ ಭಾರತಕ್ಕೆ ಸಂದೇಶ್ ಜಿಂಗಾನ್ ಅವರ ಅನುಪಸ್ಥಿತಿ ಕಾಡುತ್ತಿದೆ. ನೇಪಾಳ ಎದುರಿನ ಪಂದ್ಯ ದಲ್ಲಿ ಚೆಟ್ರಿ ಗೋಲು ದಾಖಲಿಸುವ ಮೂಲಕ ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ಬ್ರೆಜಿಲ್‌ನ ದಿಗ್ಗಜ ಪೆಲೆ (77) ಸಾಧನೆ ಸರಿಗಟ್ಟಿದ್ದರು. ಆದರೆ 37 ವರ್ಷದ ಈ ಅನುಭವಿಯನ್ನೇ ತಂಡ ಎಷ್ಟು ದಿನ ಅವಲಂಬಿಸಲಿದೆ ಎಂಬುದು ಸದ್ಯದ ಪ್ರಶ್ನೆ.

ಹಾಲಿ ಚಾಂಪಿಯನ್ ಆಗಿರುವ ಮಾಲ್ಡೀವ್ಸ್ ಕೂಡ ಬಲಿಷ್ಠ ತಂಡವಾಗಿದೆ.

ಪಂದ್ಯ ಆರಂಭ: ರಾತ್ರಿ 9.30

ನೇರ ಪ್ರಸಾರ: ಯೂರೊ ಸ್ಪೋರ್ಟ್


ಸುನಿಲ್ ಚೆಟ್ರಿ– ಪಿಟಿಐ ಚಿತ್ರ

ಮಹಿಳಾ ತಂಡಕ್ಕೆ ಚೀನಾ ತೈಪೆ ಸವಾಲು

ಮನಾಮಾದಲ್ಲಿ ನಡೆಯುವ ಸ್ನೇಹಪರ ಪಂದ್ಯದಲ್ಲಿ ಭಾರತ ಮಹಿಳಾ ಫುಟ್‌ಬಾಲ್ ತಂಡವು ಬಲಿಷ್ಠ ಚೀನಾ ತೈಪೆ ತಂಡಕ್ಕೆ ಮುಖಾಮುಖಿಯಾಗಲಿದೆ. ಕಳೆದ ಪಂದ್ಯದಲ್ಲಿ ಬಹರೇನ್ ತಂಡವನ್ನು 5–0 ಅಂತರದಿಂದ ಮಣಿಸಿದ್ದ ಭಾರತವು ಅದೇ ಆತ್ಮವಿಶ್ವಾಸದೊಂದಿಗೆ ಕಣಕ್ಕಿಳಿಯಲಿದೆ.

ಐ ಲೀಗ್: ಡೆಲ್ಲಿ ಎಫ್‌ಸಿ ಜಯಭೇರಿ

ಬೆಂಗಳೂರು: ಉತ್ತಮ ಆಟವಾಡಿದ ಡೆಲ್ಲಿ ಎಫ್‌ಸಿ ತಂಡವು ಐ–ಲೀಗ್ ಫುಟ್‌ಬಾಲ್ ಅರ್ಹತಾ ಟೂರ್ನಿಯಲ್ಲಿ ಕೇರಳ ಯುನೈಟೆಡ್ ಎಫ್‌ಸಿ ಎದುರು 2–1ರಿಂದ ಜಯ ಸಾಧಿಸಿತು.

ಮಂಗಳವಾರ ಇಲ್ಲಿ ನಡೆದ ಪಂದ್ಯದಲ್ಲಿ ವಿಜೇತ ತಂಡದ ಪರ ಅನ್ವರ್ ಅಲಿ (47ನೇ ನಿಮಿಷ) ಹಾಗೂ ಹಿಮಾಂಶು ಜಾಂಗ್ರಾ (60ನೇ ನಿಮಿಷ) ಕಾಲ್ಚಳಕ ತೋರಿದರು.

ಹೃಷಿ ಧಾತ್ (23ನೇ ನಿಮಿಷ) ಕೇರಳ ಪರ ಒಂದು ಗೋಲು ದಾಖಲಿಸಿದರು.

ಆಡಿದ ಮೂರೂ ಪಂದ್ಯಗಳಲ್ಲಿ ಜಯ ಸಾಧಿಸಿದರುವ ಡೆಲ್ಲಿ ತಂಡವು 'ಬಿ' ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ. ಇದೇ ಗುಂಪಿನ ಇನ್ನೊಂದು ಪಂದ್ಯದಲ್ಲಿ ಕೆಂಕ್ರೆ ಎಫ್‌ಸಿ ಕಾರ್ಬೆಟ್ ಎಫ್‌ಸಿಯೊಡನೆ ಗೋಲುರಹಿತ ಡ್ರಾ ಸಾಧಿಸಿತು.

ಚರ್ಚೆಗೆ ನಾಳೆ ದೆಹಲಿಗೆ ಬನ್ನಿ: ಸಿಧುಗೆ ಹೈಕಮಾಂಡ್ ಸೂಚನೆ

ನವದೆಹಲಿ: 'ನಿರ್ದಿಷ್ಟ'ವಾಗಿ ಪಕ್ಷದ ಕೆಲ ಆಂತರಿಕ ವಿಷಯಗಳನ್ನು ಚರ್ಚಿಸಬೇಕಿದ್ದು, ಗುರುವಾರ (ಅ.14) ದೆಹಲಿಗೆ ಬರಬೇಕು ಎಂದು ಕಾಂಗ್ರೆಸ್ ಪಕ್ಷದ ಹೈಕಮಾಂಡ್, ಪಂಜಾಬ್ ಕಾಂಗ್ರೆಸ್ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರಿಗೆ ಸೂಚಿಸಿದೆ.

ಸಿಧು ಅವರ ನಡೆ ಪಕ್ಷದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ ಎಂಬ ಅಭಿಪ್ರಾಯಗಳ ಹಿಂದೆಯೇ ಈ ಕರೆ ಹೋಗಿದೆ. ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಹರೀಶ್ ರಾವತ್, ಕೆ.ಸಿ.ವೇಣುಗೋಪಾಲ್ ಅವರೊಂದಿಗೆ ಚರ್ಚಿಸಬೇಕು ಎಂದು ಸೂಚಿಸಲಾಗಿದೆ.

ಮುಖ್ಯಮಂತ್ರಿ ಚರಣಜಿತ್ ಸಿಂಗ್ ಚನ್ನಿ ಅವರ ಕೆಲವು ನಿರ್ಧಾರಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದ ಸಿಧು ಅವರು ಸೆಪ್ಟೆಂಬರ್ 28ರಂದು ಪಂಜಾಬ್ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಆದರೆ, ರಾಜೀನಾಮೆ ಇನ್ನೂ ಅಂಗೀಕಾರವಾಗಿಲ್ಲ.

ಪಕ್ಷದ ಪಂಜಾಬ್ ಉಸ್ತುವಾರಿಯೂ ಆಗಿರುವ ಹರೀಶ್ ರಾವತ್ ಅವರು ಟ್ವೀಟ್ ಮೂಲಕ ಸಿಧು ಅವರಿಗೆ ಕರೆ ನೀಡಿದ್ದನ್ನು ಪ್ರಕಟಿಸಿದ್ದಾರೆ. ವಿವಿಧ ರಾಜ್ಯಗಳಲ್ಲಿ ಪಕ್ಷದ ಆಂತರಿಕ ಭಿನ್ನಮತ ಕುರಿತು ಚರ್ಚೆಗೆ ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ಸೇರುವ ಎರಡು ದಿನದ ಮೊದಲು ಈ ಸಭೆಯು ನಿಗದಿಯಾಗಿದೆ.

ಪಕ್ಷದ ಸಾಂಸ್ಥಿಕ ಬದಲಾವಣೆಗೆ ಒತ್ತಾಯಿಸಿ ಪತ್ರ ಬರೆದಿದ್ದ 23 ನಾಯಕರ ತಂಡದಲ್ಲಿದ್ದ ಗುಲಾಂ ನಬಿ ಆಜಾದ್ ಸೇರಿದಂತೆ ಹಲವರು ಅಮರಿಂದರ್ ಸಿಂಗ್ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೈಬಿಟ್ಟ ಕ್ರಮ ಕುರಿತಂತೆ ಈಗಾಗಲೇ ಬೇಸರ ವ್ಯಕ್ತಪಡಿಸಿದ್ದಾರೆ. 'ಚುನಾಯಿತ ಅಧ್ಯಕ್ಷರೇ ಇಲ್ಲ. ಪಕ್ಷದಲ್ಲಿ ಯಾರು ತೀರ್ಮಾನ ಕೈಗೊಳ್ಳುತ್ತಾರೆ ಎಂಬುದೇ ತಿಳಿದಿಲ್ಲ' ಎಂದು ಕಪಿಲ್ ಸಿಬಲ್ ಹೇಳಿದ್ದರು.

ಕ್ವಾಡ್ ಸಮರಾಭ್ಯಾಸ ಆರಂಭ

ನವದೆಹಲಿ: ಚೀನಾದೊಂದಿಗೆ ಗಡಿ ಸಂಬಂಧ ಸಂಘರ್ಷ ನಡೆಯುತ್ತಿರುವ ಸಂದರ್ಭದಲ್ಲೇ, ಹಿಂದೂ ಮಹಾಸಾಗರ-ಪೆಸಿಫಿಕ್ ಪ್ರದೇಶದಲ್ಲಿ ಚೀನಾ ಪ್ರಾಬಲ್ಯವನ್ನು ನಿಯಂತ್ರಿಸುವ ಉದ್ದೇಶದ ಕ್ವಾಡ್ ಒಕ್ಕೂಟದ ನೌಕಾಪಡೆಗಳ ಸಮರಾಭ್ಯಾಸ ಮಂಗಳವಾರ ಆರಂಭವಾಗಿದೆ.

ಬಂಗಾಳ ಕೊಲ್ಲಿಯಲ್ಲಿ ನಡೆಯುತ್ತಿರುವ ಈ ಸಮರಾಭ್ಯಾಸದಲ್ಲಿ ಆಸ್ಟ್ರೇಲಿಯಾ, ಜಪಾನ್ ಮತ್ತು ಅಮೆರಿಕದ ನೌಕೆಗಳು ಭಾಗಿಯಾಗಿವೆ. ಭಾರ ತದ ಎರಡು ಯುದ್ಧನೌಕೆಗಳು, ಒಂದು ಕರಾವಳಿ ಗಸ್ತು ವಿಮಾನ ಮತ್ತು ಒಂದು ಜಲಾಂತರ್ಗಾಮಿ ನೌಕೆ ಈ ಮೂರೂ ದೇಶಗಳ ನೌಕೆಗಳಿಗೆ ಜತೆಯಾಗಿವೆ. 'ಹಿಂದೂ ಮಹಾಸಾಗರ--ಪೆಸಿಫಿಕ್ ಸಮುದ್ರ ಪ್ರದೇಶದಲ್ಲಿ ಮುಕ್ತ, ಸ್ವತಂತ್ರ ಮತ್ತು ನಿಯಮಕ್ಕೆ ಬದ್ಧವಾದ ಸಮುದ್ರಯಾನವನ್ನು ರಕ್ಷಿಸಲು ಈ ನಾಲ್ಕೂ ರಾಷ್ಟ್ರಗಳ ಬದ್ಧತೆಯನ್ನು ಈ ಸಮರಾಭ್ಯಾಸ ತೋರಿಸುತ್ತದೆ' ಎಂದು ನೌಕಾಪಡೆ ಅಡ್ಮಿರಲ್ ಕರಂಬೀರ್ ಸಿಂಗ್ ಹೇಳಿದ್ದಾರೆ. ಈಗ ಸಮರಾಭ್ಯಾಸ ನಡೆಯುತ್ತಿರುವ ಪ್ರದೇಶದಿಂದ ಕೆಲವೇ ನೂರು ಕಿ.ಮೀ. ದೂರದಲ್ಲಿರುವ ಚೆನ್ನೈನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 2019ರ ಅಕ್ಟೋಬರ್‌ನಲ್ಲಿ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರನ್ನು ಆದರದಿಂದ ಬರಮಾಡಿಕೊಂಡಿದ್ದರು. ಆದರೆ ಸರಿಯಾಗಿ 2 ವರ್ಷದ ನಂತರ ಚೀನಾದ ಪ್ರಾಬಲ್ಯವನ್ನು ನಿಯಂತ್ರಿಸುವ ಉದ್ದೇಶದ ಸಮರಾಭ್ಯಾಸ ಆರಂಭವಾಗಿದೆ.

ಅಮೆರಿಕ ಕಾರ್ಲ್ ವಿಲ್ಸನ್ ಯುದ್ಧನೌಕೆ ಮತ್ತು ಎರಡು ಇತರ ಯುದ್ಧನೌಕೆಗಳು, ಭಾರತದ ಐಎನ್‌ಎಸ್ ರಣ ವಿಜಯ್, ಐಎನ್‌ಎಸ್ ಸಾತ್ಪುರ ನೌಕೆಗಳು ಇದರಲ್ಲಿ ಭಾಗಿಯಾಗಿವೆ. ಜಪಾನ್‌ನ ಸಮುದ್ರ ಸ್ವಯಂ ರಕ್ಷಣಾ ಪಡೆಯ ಜೆಎಸ್ ಕಾಗಾ ಮತ್ತು ಜೆಎಸ್ ಮುರಾಸೇಮ್, ಆಸ್ಟ್ರೇಲಿಯಾ ನೌಕಾಪಡೆಯ ಬಲ್ಲಾರತ್, ಸಿರಿಯಸ್ ನೌಕೆಗಳು ಈ ಸಮರಾಭ್ಯಾಸದಲ್ಲಿವೆ. ಅ.15ರವರೆಗೆ ಈ ಸಮಾರಾಭ್ಯಾಸ ನಡೆಯಲಿದೆ.

> **ಮುಕ್ತ ಮತ್ತು ಸ್ವತಂತ್ರ ಸಮುದ್ರಯಾನವನ್ನು ರಕ್ಷಿಸುವಲ್ಲಿ ಭಾರತವು ನಮ್ಮ ಮಹತ್ವದ ಮಿತ್ರರಾಷ್ಟ್ರವಾಗಿದೆ. ಇಲ್ಲಿ ಭದ್ರತೆ, ಸ್ಥಿರತೆಯನ್ನು ರಕ್ಷಿಸಲು ನಾವು ಶ್ರಮಿಸುತ್ತೇವೆ. ಮೈಕಲ್ ಗಿಲ್‌ಡೇ**
> ಅಮೆರಿಕ ನೌಕಾಪಡೆ ಮುಖ್ಯ ಅಡ್ಮಿರಲ್

ಊಬರ್ ಕಪ್ ಬ್ಯಾಡ್ಮಿಂಟನ್ ಟೂರ್ನಿ: ಸ್ಕಾಟ್ಲೆಂಡ್ ತಂಡದ ಎದುರು ಜಯಭೇರಿ

ಕ್ವಾರ್ಟರ್‌ಫೈನಲ್‌ಗೆ ಭಾರತದ ಮಹಿಳೆಯರು

ಆಹಸ್, ಡೆನ್ಮಾರ್ಕ್ (ಪಿಟಿಐ): ಅದ್ಭುತ ಸಾಮರ್ಥ್ಯ ಮುಂದುವರಿಸಿದ ಭಾರತದ ಮಹಿಳೆಯರು ಊಬರ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾ-ರ್ಟರ್‌ಫೈನಲ್ ಪ್ರವೇಶಿಸಿದ್ದಾರೆ. ಅದಿತಿ ಭಟ್ ಹಾಗೂ ತಸ್ನಿಮ್ ಮೀರ್ ಸಿಂಗಲ್ಸ್ ವಿಭಾಗಗಳಲ್ಲಿ ಮಿಂಚಿದ ಪಂದ್ಯದಲ್ಲಿ ತಂಡವು 4–1ರಿಂದ ಸ್ಕಾಟ್ಲೆಂಡ್ ಎದುರು ಜಯ ಗಳಿಸಿತು.

ಆಡಿದ ಎರಡೂ ಪಂದ್ಯಗಳಲ್ಲಿ ಜಯಭೇರಿ ಮೊಳಗಿಸಿರುವ ಭಾರತ ತಂಡವು ಸದ್ಯ 'ಬಿ' ಗುಂಪಿನಲ್ಲಿ ಎರಡನೇ ಸ್ಥಾನದಲ್ಲಿದೆ. ತಂಡವು ಭಾನುವಾರ ಸ್ಪೇನ್ ತಂಡವನ್ನು 3–2ರಿಂದ ಪರಾಭ-ವಗೊಳಿಸಿತ್ತು.


ಗಾಯತ್ರಿ ಗೋಪಿಚಂದ್


ತಸ್ನಿಮ್ ಮೀರ್– ಪ್ರಜಾವಾಣಿ ಸಂಗ್ರಹ

ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಭಾರತಕ್ಕೆ ಸೋಲಿನ ಆಘಾತ ಕಾದಿತ್ತು. ಸ್ಕಾಟ್ಲೆಂಡ್‌ನ ಕ್ರಿಸ್ಟಿ ಗಿಲ್ಮರ್ ವಿರುದ್ಧ ಕಣಕ್ಕಿಳಿದಿದ್ದ ಮಾಳವಿಕಾ ಬಾನ್ಸೋದ್ 13–21, 9–21ರಿಂದ ನಿರಾಸೆ ಅನುಭವಿಸಿದರು. ಆದರೆ ಅದಿತಿ ಭಟ್ 21–14, 21–18ರಿಂದ ರಚೆಲ್ ಸುಗ್ದೆನ್ ಎದುರು ಗೆಲ್ಲುವ ಮೂಲಕ ಪಂದ್ಯ 1–1ರಿಂದ ಸಮಬಲಗೊಳ್ಳು-ವಂತೆ ಮಾಡಿದರು.

ಈ ಹಂತದಲ್ಲಿ ಆಟ ರಂಗೇರಿತು. ಡಬಲ್ಸ್ ವಿಭಾಗದ ಸುತ್ತಿನಲ್ಲಿ ಭಾರತದ ತನಿಶಾ ಕ್ರಾಸ್ಟೊ–ಋತುಪರ್ಣಾ ಪಂಡಾ 21-11 21-8ರಿಂದ ಜೂಲಿ ಮಾಚಪರ್ಸನ್ ಮತ್ತು ಸಿಯಾರಾ ಟೊರೆನ್ಸ್ ಅವರನ್ನು ಮಣಿಸುವ ಮೂಲಕ ಮುನ್ನಡೆಯನ್ನು ದೊರಕಿಸಿ-ಕೊಟ್ಟರು.

ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನಲ್ಲಿ ತಸ್ನಿಮ್ 21-15 21-6ರಿಂದ ಲಾರೆನ್ ಮಿಡ್ಲ್‌ಟನ್ ವಿರುದ್ಧ ಗೆಲ್ಲುವು-ದರೊಂದಿಗೆ ಭಾರತದ ಮುನ್ನಡೆ 3–1ಕ್ಕೆ ತಲುಪಿತು.

ರಿವರ್ಸ್ ಡಬಲ್ಸ್‌ನಲ್ಲಿ ಯುವ ಆಟಗಾರ್ತಿಯರಾದ ತ್ರೀಶಾ ಜೋಲಿ ಹಾಗೂ ಗಾಯತ್ರಿ ಗೋಪಿಚಂದ್ 21-8 19-21 21-10ರಿಂದ ಗಿಲ್ಮರ್ ಮತ್ತು ಎಲೆನಾರ್ ಓ'ಡೊನೆಲ್ ಅವರಿಗೆ ಸೋಲುಣಿಸಿ ಭಾರತದ ಭರ್ಜರಿ ಜಯಕ್ಕೆ ಕಾಣಿಕೆ ನೀಡಿದರು.

ಮುಂದಿನ ಪಂದ್ಯದಲ್ಲಿ ಭಾರತಕ್ಕೆ ಬಲಿಷ್ಠ ಥಾಯ್ಲೆಂಡ್ ಸವಾಲು ಎದುರಾಗಿದೆ. ಬುಧವಾರ ಈ ಪಂದ್ಯ ನಿಗದಿಯಾಗಿದೆ.

ಟೂರ್ನಿಯ ಇತಿಹಾಸದಲ್ಲಿ ಭಾರತವು ಇದುವರೆಗೆ ಎರಡು ಬಾರಿ ಸೆಮಿಫೈನಲ್ (2014ರಲ್ಲಿ ನವದೆಹಲಿ ಮತ್ತು 2016ರಲ್ಲಿ ಚೀನಾದ ಕುನ್ಶನ್) ತಲುಪಿದೆ.

ವಿಶ್ವಕಪ್: ಅರ್ಹತೆ ಗಳಿಸಿದ ಜರ್ಮನಿ

ಪ್ಯಾರಿಸ್ (ಎಎಫ್‌ಪಿ): ಟಿಮೊ ವರ್ನರ್ ಗಳಿಸಿದ ಗಳಿಸಿದ ಎರಡು ಗೋಲುಗಳ ನೆರವಿನಿಂದ ಜರ್ಮನಿ ತಂಡವು ವಿಶ್ವಕಪ್ ಅರ್ಹತಾ ಫುಟ್‌ಬಾಲ್ ಟೂರ್ನಿಯಲ್ಲಿ ನಾರ್ತ್ ಮೆಸಿಡೋನಿಯಾ ತಂಡವನ್ನು ಮಣಿಸಿತು. ಇದರೊಂದಿಗೆ 2022ರ ವಿಶ್ವಕಪ್‌ಗೆ ಅರ್ಹತೆ ಗಳಿಸಿದ ಮೊದಲ ತಂಡ ಎನಿಸಿಕೊಂಡಿತು.

ಸೋಮವಾರ ರಾತ್ರಿ ನಡೆದ ಹಣಾಹಣಿಯಲ್ಲಿ ಜರ್ಮನಿ ತಂಡಕ್ಕೆ 4–0ಯಿಂದ ಗೆಲುವು ಒಲಿಯಿತು. ಈ ಮೂಲಕ 'ಜೆ' ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿತು.

ವಿಜೇತ ತಂಡದ ಪರ ವರ್ನರ್ 70 ಮತ್ತು 73ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಹ್ಯಾವೆಜ್ (50ನೇ ನಿಮಿಷ) ಮತ್ತು ಮುಸಿಯಾಲ (83ನೇ ನಿಮಿಷ) ತಲಾ ಒಂದು ಗೋಲು ಹೊಡೆದರು.

ಇನ್ನುಳಿದ ಪಂದ್ಯಗಳಲ್ಲಿ ವೇಲ್ಸ್ 1–0ರಿಂದ ಈಸ್ಟೋನಿಯಾ ಎದುರು, ಜೆಕ್ ಗಣರಾಜ್ಯ 2–0ಯಿಂದ ಬೆಲಾರೂಸ್ ಎದುರು ಜಯ ಗಳಿಸಿದವು.

'ಎಚ್' ಗುಂಪಿನ ಪಂದ್ಯಗಳಲ್ಲಿ ಕ್ರೊವೇಷ್ಯಾ 2–2ರಿಂದ ಸ್ಲೊವೇಕಿಯಾ ಎದುರು ಡ್ರಾ ಸಾಧಿಸಿದರೆ, ರಷ್ಯಾ ಸ್ಲೊವೇನಿಯಾ ವಿರುದ್ಧ 2–1ರಿಂದ ಗೆಲುವು ಸಾಧಿಸಿತು.


ಜರ್ಮನಿಯ ಟಿಮೊ ವರ್ನರ್ (ಎಡ) ಮತ್ತು ನಾರ್ತ್ ಮೆಸಿಡೋನಿಯಾದ ಡಾರ್ಕೊ ವೆಲ್ಕೊವಸ್ಕಿ ನಡುವೆ ಚೆಂಡಿಗಾಗಿ ಪೈಪೋಟಿ– ಎಎಫ್‌ಪಿ ಚಿತ್ರ

ಬೆಂಗಳೂರಿನಲ್ಲಿ ಧೋನಿ ಅಕಾಡೆಮಿ

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹೇಂದ್ರಸಿಂಗ್ ಧೋನಿ ಅವರ ಕ್ರಿಕೆಟ್ ತರಬೇತಿ ಅಕಾಡೆಮಿಯು ಬೆಂಗಳೂರಿನಲ್ಲಿ ಆರಂಭವಾಯಿತು.

ಕ್ರೀಡಾ ನಿರ್ವಹಣೆ ಸಂಸ್ಥೆಗಳಾದ ಗೇಮ್‌ಪ್ಲೇ ಮತ್ತು ಆರ್ಕಾ ಸ್ಪೋರ್ಟ್ಸ್ ಜಂಟಿಯಾಗಿ ಧೋನಿ ಅಕಾಡೆಮಿಯನ್ನು ಆರಂಭಿಸಿವೆ.

'ಕಾಡಾ ಅಗ್ರಹಾರದಲ್ಲಿ ಅಕಾಡೆಮಿ ಆರಂಭವಾಗಿದೆ. ನವೆಂಬರ್ 7ರಿಂದ ಇಲ್ಲಿ ತರಬೇತಿ ನಡೆಯಲಿದೆ. ನಮ್ಮ ಪಾಲಿಗೆ ಇದೊಂದು ಅವಿಸ್ಮರಣೀಯ ಕ್ಷಣ. ಯುವಪ್ರತಿಭೆಗಳು ಈ ಪ್ರಯೋಜನ ಪಡೆಯಬೇಕು' ಎಂದು ಗೇಮ್‌ಪ್ಲೇ ಮಾಲೀಕ ದೀಪಕ್ ಭಟ್ನಾಗರ್ ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

ಹೆಚ್ಚಿನ ಮಾಹಿತಿ ಮತ್ತು ಹೆಸರು ನೋಂದಾಯಿಸಲು ವಿಶ್ವನಾಥ್ ಅಥವಾ ರೋಹಿತ್ 8073584894, 8448183607) ಅವರನ್ನು ಸಂಪರ್ಕಿಸಬೇಕು.


ಡ್ಯಾನಿಯಲ್ ಮೆಡ್ವೆಡೆವ್ ಆಟದ ವೈಖರಿ– ಎಎಫ್‌ಪಿ ಚಿತ್ರ

ಮೂರನೇ ಸುತ್ತಿಗೆ ಮೆಡ್ವೆಡೆವ್

ಇಂಡಿಯನ್ ವೆಲ್ಸ್, ಅಮೆರಿಕ (ಎಎಫ್‌ಪಿ): ಮಳೆ ಕಾಡಿದ ಪಂದ್ಯದಲ್ಲಿ ಮಿನುಗಿದ ರಷ್ಯಾದ ಡ್ಯಾನಿಯಲ್ ಮೆಡ್ವೆಡೆವ್ ಅವರು ಇಲ್ಲಿ ನಡೆಯುತ್ತಿರುವ ಇಂಡಿಯನ್ಸ್ ವೆಲ್ಸ್ ಮಾಸ್ಟರ್ಸ್ ಟೆನಿಸ್ ಟೂರ್ನಿಯ ಮೂರನೇ ಸುತ್ತಿಗೆ ಕಾಲಿಟ್ಟರು.

ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ ಅಮೆರಿಕ ಓಪನ್ ಚಾಂಪಿಯನ್ ಮೆಡ್ವೆಡೆವ್ 6-2, 7-6 (7/1)ರಿಂದ ಸರ್ಬಿಯಾದ ಫಿಲಿಪ್ ಕ್ರಾಜಿನೊವಿಚ್ ಸವಾಲು ಮೀರಿದರು.

25 ವರ್ಷದ ರಷ್ಯಾ ಆಟಗಾರನಿಗೆ ಈ ಋತುವಿನಲ್ಲಿ ದೊರೆತ 50ನೇ ಜಯವಿದು. ಮುಂದಿನ ಪಂದ್ಯದಲ್ಲಿ ಅವರು ಬಲ್ಗೇರಿಯಾದ ಗ್ರಿಗರ್ ಡಿಮಿಟ್ರೊವ್ ಅವರನ್ನು ಎದುರಿಸಲಿ-ದ್ದಾರೆ.

ಮತ್ತೊಂದು ಪಂದ್ಯದಲ್ಲಿ ಡಿಮಿಟ್ರೊವ್ 6-3, 6-4ರಿಂದ ಅಮೆರಿಕದ ರಿಲಿ ಒಪೆಲ್ಕಾ ಅವರನ್ನು ಮಣಿಸಿದರು.

ಅರ್ಜೆಂಟೀನಾದ ಡಿಗೊ ಸ್ವಾಟ್ಜ್‌ಮನ್ ಹಾಗೂ ನಾರ್ವೆಯ ಕಾಸ್ಪರ್ ರುಡ್ ಕೂಡ ಮೂರನೇ ಸುತ್ತು ತಲುಪಿದರು. ಸ್ವಾಟ್ಜ್‌ಮನ್ 5-7, 6-4, 6-0ರಿಂದ ಬ್ರಿಟನ್‌ನ ಡೇನಿಯಲ್ ಇವಾನ್ಸ್ ಎದುರು, ರುಡ್ 6-7 (4/7), 6-4, 6-4ರಿಂದ ದಕ್ಷಿಣ ಆಫ್ರಿಕಾದ ಲಾಯ್ಡ್ ಹ್ಯಾರಿಸ್ ಎದುರು ಗೆದ್ದರು.

ಮಹಿಳೆಯರ ಸಿಂಗಲ್ಸ್ ಮೂರನೇ ಸುತ್ತಿನ ಪಂದ್ಯಗಳಲ್ಲಿ ಜೆಕ್ ಗಣರಾಜ್ಯದ ಕರೋಲಿನಾ ಪ್ಲಿಸ್ಕೊವಾ 3–6, 5–7ರಿಂದ ಬ್ರೆಜಿಲ್‌ನ ಬೀಟ್‌ರಿಜ್ ಹದ್ದಾದ್ ಮೈಯಾ ವಿರುದ್ಧ ಸೋಲು ಅನುಭವಿಸಿದರೆ, ಕೆನಡಾದ ಬಿಯಾಂಕಾ ಆ್ಯಂಡ್ರಿಸ್ಕ್ಯೂ 6–7 (5/7), 3–6ರಿಂದ ಈಸ್ಟೋನಿಯಾದ ಅನೆಟ್ ಕೊಂಟಾವೆಟ್ ಎದುರು ಎಡವಿದರು.

ಇನಿಯನ್‌ಗೆ ಪ್ರಶಸ್ತಿ

ಲಾ ನೂಸಿಯಾ, ಸ್ಪೇನ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಪಿ.ಇನಿಯನ್ ಅವರು ಲಾ ನೂಸಿಯಾ ಓಪನ್ ಚೆಸ್ ಟೂರ್ನಿಯಲ್ಲಿ ಮಂಗಳವಾರ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

19 ವರ್ಷದ ಇನಿಯನ್ (ಇಎಲ್‌ಒ ರೇಟಿಂಗ್ 2529), ಉಕ್ರೇನ್‌ನ ಆ್ಯಂಡ್ರಿ ಸುಮೆಟ್ಸ್ ಮತ್ತು ಚಿಲಿಯ ರೊಡ್ರಿಗೊ ವಾಸ್ಕೆಜ್ ಶ್ರೋಡರ್ ತಲಾ ಏಳು ಪಾಯಿಂಟ್ಸ್ ಕಲೆಹಾಕಿದರು. ಆದರೆ ಉತ್ತಮ ಟೈಬ್ರೇಕ್ ಸ್ಕೋರ್ ಆಧಾರದಲ್ಲಿ ಇನಿಯನ್‌ಗೆ ಪ್ರಶಸ್ತಿ ಒಲಿಯಿತು.

ಒಂಬತ್ತು ಸುತ್ತುಗಳಲ್ಲಿ ಇನಿಯನ್ ಅಜೇಯರಾಗುಳಿದರು.


ಸ್ಮೃತಿ ಮಂದಾನ

ರ‍್ಯಾಂಕಿಂಗ್: 3ನೇ ಸ್ಥಾನದಲ್ಲಿ ಮಂದಾನ ಸ್ಥಿರ

ದುಬೈ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ಆರಂಭಿಕ ಆಟಗಾರ್ತಿ ಶೆಫಾಲಿ ವರ್ಮಾ ಅವರು ಐಸಿಸಿ ಟಿ20 ಬ್ಯಾಟರ್‌ಗಳ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನಕ್ಕೆ ಕುಸಿದಿದ್ದಾರೆ. ಸ್ಮೃತಿ ಮಂದಾನ ಮೂರನೇ ಸ್ಥಾನದಲ್ಲಿ ಮುಂದುವರಿದಿ-ದ್ದಾರೆ.

ಶೆಫಾಲಿ ಅವರ ಬಳಿ ಸದ್ಯ 726 ರೇಟಿಂಗ್ ಪಾಯಿಂಟ್ಸ್ ಇದ್ದರೆ, ಮಂದಾನ 709 ಪಾಯಿಂಟ್ಸ್ ಹೊಂದಿದ್ದಾರೆ. ಆಸ್ಟ್ರೇಲಿಯಾದ ಬೆಥ್ ಮೂನಿ (754) ಅಗ್ರಸ್ಥಾನಕ್ಕೇರಿದ್ದಾರೆ. ಆಸ್ಟ್ರೇಲಿಯಾ ತಂಡ ನಾಯಕಿ ಮೆಗ್ ಲ್ಯಾನಿಂಗ್ (4ನೇ ಸ್ಥಾನ) ಹಾಗೂ ಅಲೀಸಾ ಹೀಲಿ (ಆರನೇ ಸ್ಥಾನ) ಕೂಡ ಅಗ್ರ 10ರ ಪಟ್ಟಿಯಲ್ಲಿದ್ದಾರೆ.